ಸ್ಥಾಪನೆ : ೧೮೭೬

1876

ಸಂಸ್ಥಾಪಕರು.



ಜೀವನ ಶಿಕ್ಷಣ ಪತ್ರಿಕೆಯ

ಶತಮಾನೋತ್ಸವ ಚಿಕ್ಕ ಪುಸ್ತಕ

ಪುಸ್ತಕ ಪ್ರಕಟನ ೧೯೭೬

ಶತಮಾನೋತ್ಸವ [illegible]
([illegible])

ಶ್ರೀ ಚನ್ನಬಸಪ್ಪನವರ
([illegible])

ವರ್ಷ 1876

11-12 [illegible]

ಕನ್ನಡ ಶಾಲಾ ಪತ್ರಿಕೆ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ
ಡೆಪ್ಯುಟಿ ಚೆನ್ನಬಸಪ್ಪ ವೃತ್ತ. [illegible]. ಧಾರವಾಡ

ಕನ್ನಡ ಶಾಲಾಪತ್ರವು
CANARESE
SCHOOL PAPER.

ುಸ್ತಕ ೧೮] [ಸಂಚಿಕೆ ೧೦

ತಾರೀಖು ೨೫ ಮಾಹೆ ಜಾನೇವಾರಿ ೧೮೭೮

ಅನುಕ್ರಮಣಿಕೆಯು.

ಷಯಗಳು...............................ಪುಟ.

ದ್ಯಾ ಸುಧಾರಣಾ ಸಂಬಂಧವಾದ ವೃತ್ತಾಂತಗಳು.......೨೧೨
ನಗೆ ತಾನೇ ನೆರವಾಗುವದು,.......................೨೨೨
ೋಟೀಸುಗಳು.......................................೨೩೫
ತ್ರವ್ಯವಹಾರ.......................................೨೩೭

ಸಿದ್ಧನಾಥ ವಾಚನ ಮಂದಿರ.
ಮೂರಗಿ. ಜಿ. ಧಾರವಾಡ.

ONTENTS.......Pag
lucational Intelligence.......21
lf Help.......
otices.......235
orrespondence,.......237

BELGAUM.

Printed at the "Belgaum Samachar" Press.

ಶಾಲಾಪತ್ರಕವು.

ಪುಸ್ತಕ ೧೧] [ಸಂಚಿಕೆ ೧೦.

ತಾರೀಖು ೨೫ ನೇ ಮಾಹೆ ಜಾನೇವಾರೀ ೧೮೭೬.

EDUCATIONAL INTELLIGENCE.

ವಿದ್ಯಾಸುಧಾರಣಾ ಸಂಬಂಧವಾದ ವೃತ್ತಾಂತಗಳು.

ವಿದ್ಯಾಖಾತೆಯ ಡಾಯರೆಕ್ಟರರಾದ ಕೇ. ಎಮ್ ಚಾಟ್‌ಫೀಲ್ಡ ಸಾಹೇಬ ಬಹಾದ್ದೂರವರು ಸುರತ್ತದ ಕಡಿಗೆ ಹೋಗತಕ್ಕವರಿದ್ದಾರೆಂದು ತಿಳಿದು ಬಂದಿರುತ್ತದೆ.

ಧಾರವಾಡ ಜಿಲ್ಹೆಯ ಅಸಿಸ್ಟಂಟ ಡೆಪ್ಯುಟಿ ಯೆ. ಇನ್ಸಪೆಕ್ಟರರಾದ ರಾ. ರಾ. ರಾವಜಿ ಬಾಳಾಜಿ ಕರಂದೀಕರ ಇವರು ನೋವೆಂಬರ, ದಿಸಂಬರ ಈ ಎರಡು ತಿಂಗಳುಗಳಲ್ಲಿ ಸುಮಾರು ೬೦ ಶಾಲೆಗಳ ಪರೀಕ್ಷೆಯನ್ನು ತೆಗೆದುಕೊಂಡರು. ಇವರು ಈಗ ಗದಗ ತಾಲೂಕದ ಕಡಿಗೆ ಹೋಗಿರುತ್ತಾರೆ.

ಮಾಸ್ತರ ಜನರ ಅಪ್ರಮಾಣಿಕತನ— ಮದ್ರಾಸ ಇಲಾಖೆಯ ಶಾಲಾಖಾತೆಯಲ್ಲಿ ನೇಮಿಸಿದ ಇಯತ್ತೆಯಲ್ಲಿ ವಿದ್ಯಾರ್ಥಿಗಳು ಪಾಸಾದರೆ ಆ ಶಾಲೆಯ ಮಾಸ್ತರರಿಗೆ ಇನಾಮು ಕೊಡುವ ಪದ್ಧತಿ ಯುಂಟು. ಆದರೆ ಹಣ ಹೆಚ್ಚಿಗೆ ದೊರೆಯಬೇಕೆಂಬ ಉದ್ದೇಶದಿಂದ ಎಷ್ಟೋ ಮಂದಿ ಮಾಸ್ತರ ಜನರು ಕಳೆದ ವರ್ಷ ಯಾವ ಇಯತ್ತೆಯಲ್ಲಿ ವಿದ್ಯಾರ್ಥಿಯರು ಪಾಸಾಗಿದ್ದರೋ ಅದೇ ಇಯತ್ತೆಯಲ್ಲಿ ಮರುವರ್ಷದ ಪರೀಕ್ಷೆಕ್ಕೆ ಕೂಡಿಸಹತ್ತಿದರು. ಈ ಸುದ್ದಿಯು ಶಾಲಾಖಾತೆಯ ಮೇಲಧಿಕಾರಿಗಳ ಕಿವಿಗೆ ಬಂದದರಿಂದ ಅವರು ಈಗ ಹೊಸದಾಗಿ ಠರಾವು ಮಾಡಿದ್ದೇನಂದರೆ ಪ್ರತ್ಯೇಕ ಸ್ಕೂಲ ಮಾಸ್ತರನು ಪರೀಕ್ಷಾ ಆಗುವ ಪೂರ್ವದಲ್ಲಿಯೇ ದರ ಒಂದು ಇಯತ್ತೆಯಲ್ಲಿ ಕೂಡತಕ್ಕ ವಿದ್ಯಾರ್ಥಿಯವರದೊಂದು ಯಾದಿ ತಯಾರ ಮಾಡಿ ಆ ಯಾದಿಯ ಕಡೆಯಲ್ಲಿ ಸದರ ವಿದ್ಯಾರ್ಥಿಯು ಕಳೆದ ವರ್ಷ ತನ್ನ ಶಾಲೆಯಲ್ಲಾಗಲಿ, ಬೇರೊಂದು ಶಾಲೆಯಲ್ಲಾಗಲಿ, ಆ ಇಯತ್ತೆಯಲ್ಲಿ ಪಾಸಾಗಿಲ್ಲೆಂದು ದಾಖಲೆ ಕೊಡಬೇಕು. ಮತ್ತು ಪರೀಕ್ಷೆದ ಆರಂಭಕ್ಕೆ ಆ ಯಾದಿಯನ್ನು ಯೆಲ್ಲರಿಗೆ ಕೇಳಿಸುವಂತೆ ಓದಬೇಕು. ತಹಸೀಲದಾರ ಹಾಗು ಊರ ಅಧಿಕಾರಿಗಳು, ದಾಖಲು ಮಾಡಿದಂಥ ಹುಡುಗರ ಹೆಸರುಗಳ ವಿಷಯಕ್ಕೆ ಸಂಶಯ ಬರುವಹಾಗೆ ಕಾರಣವಿದ್ದರೆ, ಶಾಲಾಖಾತೆಯ ಮೇಲಧಿಕಾರಿಗಳಿಗೆ ಬರೆದು ಕಳಿಸಬೇಕು. ಹಾಗೆ ಮಾಡದಿದ್ದರೆ ತಹಸೀಲದಾರನಿಗೂ, ಊರ ಅಧಿಕಾರಿಗಳಿಗೂ ದಂಡ ಆಗುವದು.

ನಮ್ಮ ದಕ್ಷಿಣ ಭಾಗದೊಳಗಿನ ಜಿಲ್ಲೆಗಳಲ್ಲ್ಯಾದರೂ ಈ ರೀತಿಯು (ಅಂದರೆ ಪರೀಕ್ಷಾ ಇಳಿದ ವಿದ್ಯಾರ್ಥಿಯರನ್ನು ಪುನಃ ಮರಿ ವರ್ಷ ಅದೇ ಇಯತ್ತೆಯಲ್ಲಿ ಪರೀಕ್ಷಕ್ಕೆ ಕೂಡಿಸುವದು) ನಡದಿರುತ್ತದೆಂದು ಕೇಳುತ್ತೇವೆ. ಆದರೆ ಇತ್ತಕಡಿಯ ಶಾಲಾಖಾತೆಯ ಮೇಲಧಿಕಾರಿಗಳು ಶಾಲೆಯ ಪರೀಕ್ಷಕ್ಕೆ ಹೋದ ವೇಳೆಯಲ್ಲಿ ಬಹಳ ಲಕ್ಷ ಕೊಡುವರೆಂದು ಕೋರುತ್ತೇವೆ.

ಧ್ರುವದ ಹತ್ತಿರಿರುವ ಥಂಡಿಯು—ಉತ್ತರ ಧ್ರುವದ ಕಡಿಗೆ ಹೊಸದಾಗಿ ಶೋಧ ಮಾಡುವದಕ್ಕಾಗಿ ಆಸ್ಟ್ರಿಯಾದೇಶದಿಂದ ಹೋದ ಜನರಲ್ಲಿ ಲೆಪಿಯರ ಯೆಂಬ ಸಾಹೇಬರು ವಾಯನಾದಲ್ಲಿ ಥಂಡಿಯ ಸಂಬಂಧದಿಂದ ಸಂಭಾಷಣ ಮಾಡಿದರು—ಅದರಲ್ಲಿ ಅವರು ಹೇಳಿದ್ದೇನಂದರೆ ಸನ್ ೧೮೭೪ನೇ ಇಸವಿಯ ಮಾರ್ಚ್ ತಿಂಗಳಲ್ಲಿ ಅವರು ಉತ್ತರ ಧ್ರುವದ ಕೆಳಗಡೆಯ ಪೃಥ್ವೀಯ ಮೇಲೆ ಅಂದರೆ ಆ ಸ್ಥಳದಲ್ಲಿ ಮನುಷ್ಯರು ಯೆಂದೂ ಹೋಗಿದ್ದಿಲ್ಲ, ಇಂಥಾ ಸ್ಥಳಕ್ಕೆ ತಾರೀಖು ೧೪ ದಿವಸ ಬಂದು ಬರ್ಫದ ಗುಡ್ಡಗ ಮೇಲೆ ಶೋಧಾರ್ಥ ಹೋದರು—ಅಲ್ಲಿ ಪಾರಜ ಯಂತ್ರದೊಳಗಿನ ಪಾರಜವು ಪರೆಯುವ ಅಂಶದ ಕೆಳಗೆ ೪೦೦ ಅಂಶ ಇತ್ತು. ಶರೆಯು ಹತ್ತು ಘಟ್ಟಿಯಾಗಿ ಅದರ ಅಮಲು ಇಲ್ಲದ ಹಾಗಾಯಿತು. ತಂಬಾಕವಂತೂ ಬರ್ಫವಾಯಿತು., ಏನು ಪ್ರಯತ್ನ ಮಾಡಿದರು ಶೇದಲನುವಾಗಲಿಲ್ಲ. ತಲೆ ತಿರಗಹತ್ತಿತು ಬಾಯಾರಿಕೆ ಬಹಳಾಗಿ, ಘ್ರಾಣ ಹಾಗು ರಸೇಂದ್ರಿಯಗಳ ಧರ್ಮ ತೀರ ನಷ್ಟವಾಯಿತು.

ಕುಪಿಗೆ ಕೈ ಹಚ್ಚಿದ ಕೂಡಲೆ ಕೈ ಸುಟ್ಟು ಹೋದಷ್ಟು ವೇದನೆಗಳಾಗಹತ್ತಿದವು. ಈ ಸ್ಥಳದಲ್ಲಿ ಪಾರಜವು ಗಳಗೆ ಕಟ್ಟಬಹುದಾದಷ್ಟು ಘಟ್ಟಿಯಾಯಿತು. ಬೆವರಂತು ತೀರ ಬಂದಾಯಿತು ಮತ್ತು ದೂರಿನ ಮಾತುಗಳು ಕೇಳಸಹತ್ತಿದವು. ಅಂಥ ಸ್ಥಳದಲ್ಲಿ ಹೋದವರು ಬಹು ಘಟ್ಟಿಗರೆಂದು ತಿಳಿಯಬಹುದು.

ಸಯಾಮು ದೇಶದ ಜನರಲ್ಲಿ ಜ್ವರದ ಮೇಲೆ ಒಂದು ಚಮತ್ಕಾರವಾದ ಔಷಧವನ್ನು ತಕ್ಕೊಳ್ಳುತ್ತಾರೆ. ಯಾವದಂದರೆ—ಆನಿ, ಹುಲಿ, ಕರಡಿ, ಮುಸಳಿ ಇವುಗಳ ಹಲ್ಲು, ಮತ್ತು ಕಾಗೆ, ಗಿಡಗ, ಹಾಂಗು ಹಂಸಪಕ್ಷಿಗಳ ಮಾಂಸ ಇದಲ್ಲದೆ ಚಿಗರೆಯ ಕೋಡು, ಚಂದನ, ಇವೆಲ್ಲವುಗಳನ್ನು ಒಟ್ಟುಗೂಡಿಸಿ, ಸಣ್ಣಾಗಿ ಪುಡಿಮಾಡಿ ಅದರಲ್ಲಿ ಅರ್ಧಭಾಗ ಹೊಟ್ಟೆಯಲ್ಲಿ ತಕ್ಕೊಳ್ಳುತ್ತಾರೆ. ಉಳಿದ ಅರ್ಧ ಭಾಗವನ್ನು ಸರ್ವಾಂಗಕ್ಕೆ ಲೇಪನ ಮಾಡುತ್ತಾರೆ. ಹೀಗೆ ಮಾಡುವದರಿಂದ ಜ್ವರವು ಇಲ್ಲದಹಾಗಾಗುತ್ತದಂತೆ ಏನ ಸುರೋಪಾಯ ನೋಡಿರಿ!

ಹೊಸ ಶೋಧ.

ಇಷ್ಟು ದಿವಸ ಹೊಗೆಯು ದೀಪ ಹಚ್ಚುವದಕ್ಕಾಗಿ ಕಲ್ಲು ಇದ್ದಲಿ ಬೇಕಾಗುತ್ತಿದ್ದವು. ಆದರೆ ಫ್ರಾನ್ಸದೇಶದೊಳಗಿನ ಬೋರ್ಡೋಯೆಂಬ ಶಹರದೊಳಗೆ ಕಾರ್ಕಯೆಂಬ ಗಿಡದ ಕಟ್ಟಿಗೆಯು ಹೊಗೆಯು ದೀಪಕ್ಕೆ ಒಳ್ಳೇ ರೀತಿಯಿಂದ ಉಪಯೋಗ ಬೀಳುತ್ತದೆಂದು ಸಿದ್ಧವಾಗಿರುತ್ತ

ದೆ. ಈ ಕಟ್ಟಿಗೇ ಹೊಗೆಯ ದೀಪವು ಕಲ್ಲು ಇದ್ದಲಿಯ ಹೊಗೇ ದೀಪಕ್ಕಿಂತ ಹೆಚ್ಚು ಪ್ರಕಾಶಮಾನವಾದದ್ದೆಂದು ತಿಳಿದು ಬರುತ್ತದೆ.

ಹರಿಕಥಾಮೃತಸಾರವೆಂಬ ಪುಸ್ತಕವು ಕಲಾದಗಿ ಹಿತೇಛು ಛಾಪಖಾನೆಯಲ್ಲಿ ಬರುವ ಎಪ್ರಿಲ್ ತಿಂಗಳಲ್ಲಿ ಸಿಕ್ಕುವದು. ಲಿಪಿ ಬಾಲಬೋಧ ಕಿಮ್ಮತ್ತು ರೂಪಾಯಿ ಎರಡು ೨

ಕಾರವಾರ ಜಿಲ್ಲೆಯ ಡಿ. ಎ. ಇನ್ಸಪೆಕ್ಟರರಾದ ರಾವಸಾಹೇಬ ರಾಮಚಂದ್ರ ವಿನಾಯಕ ಭಾನಪ್ಪ ಇವರು ಸಾತಾಳ ಸೂಟಿಯಲ್ಲಿ ಬೆಳಗಾವಿಗೆ ಬಂದಿದ್ದರು. ಸೂಟಿ ಮುಗಿಯುವ ಸುಮಾರಕ್ಕೆ ತಿರಿಗಿ ತಮ್ಮ ಜಿಲ್ಲೆಗೆ ಹೋದರೆಂದು ಕೇಳುತ್ತೇವೆ.

ಕಲಕತ್ತಾ ಯುನಿವರಸಿಟಿಯವರು ದೊಡ್ಡ ಸಮಾರಂಭದಿಂದ ಯುವರಾಜರಾದ ಪ್ರಿನ್ಸ ಆಫ ವೇಲ್ಸ ಇವರಿಗೆ ಸನ್ಮಾನಾರ್ಥವಾದ ಡಾಕ್ತರ್ ಆಫ ಲಾ ಎಂಬ ಪದವಿಯನ್ನು ಕಳೆದ ತಿಂಗಳಲ್ಲಿ ಕೊಟ್ಟರು. ನಮ್ಮ ದೇಶದಲ್ಲಿ ತಕ್ಕ ಪರೀಕ್ಷೆ ಕೊಡದೆ ಯಾವದೂ ಪದವಿ ಕೊಡುವ ರೀತಿ ಇಲ್ಲ. ಆದರೆ ವಿಲಾಯತಿಯಲ್ಲಿ ದೊಡ್ಡ ಮನೆತನದವರಿಗಾಗಲೀ ವಿದ್ವಾಂಸರಿಗಾಗಲೀ ಈ ಪ್ರಕಾರ ಸನ್ಮಾನಾರ್ಥಕ ಪದವಿಗಳನ್ನು ಕೊಡುವ ಪ್ರಚಾರ ಉಂಟು,

ವಿಲಾಯತಿಯಲ್ಲಿ ಆಕ್ಸಫೋರ್ಡ ಎಂಬದೊಂದು ಯುನಿವರಸಿಟಿ ಅದೆ. ಅಲ್ಲಿ ಭಾಷಾ ಶಾಸ್ತ್ರದ ವಿದ್ಯಾಗುರುವಿನ ಕೆಲಸದ ಮೇಲೆ ಡಾಕ್ತರ್ ಮೋಕ್ಷಮುಲ್ಲಿರ್ ಎಂಬ ಘನ ವಿದ್ವಾಂಸರು ಇದ್ದಾರೆ. ಅವರು ಕಳೆದ ೩೫ ವರ್ಷಗಳಿಂದ ಸಂತತ ಪರಿಶ್ರಮ ಮಾಡಿ ಸಂಪೂರ್ಣ ಋಗ್ವೇದವನ್ನು ಅದರ ಮೇಲೆ ವಿದ್ಯಾರಣ್ಯ ಸ್ವಾಮಿಗಳು ಮಾಡಿದ ಭಾಷ್ಯವನ್ನು ಸರಕಾರದವರ ಆಶ್ರಯದಿಂದ ಛಾಪಿಸಿ ಪ್ರಸಿದ್ಧ ಮಾಡಿರುತ್ತಾರೆ. ಯುರೋಪ ಖಂಡದಲ್ಲಿ ಸಂಸ್ಕೃತದ ಸಂಬಂಧದಿಂದ ಬಹಳ ಹೆಸರಾಗಿದ್ದ ಪಂಡಿತರಲ್ಲಿ ಇವರು ಅಗ್ರಗಣ್ಯರು. ಇವರು ತೀವ್ರವೇ ತಮ್ಮ ಕೆಲಸ ಬಿಟ್ಟುಕೊಟ್ಟು ತಮ್ಮ ಮಿಕ್ಕಾದ ಆಯುಷ್ಯವನ್ನೆಲ್ಲ ಸಂಸ್ಕೃತ ಅಭ್ಯಾಸದಲ್ಲಿ ಕಳೆಯಬೇಕೆಂದು ನಿಶ್ಚಯ ಮಾಡಿರುತ್ತಾರೆ; ಇವರ ಮೇಲಿಂದ ನಮ್ಮ ಸಂಸ್ಕೃತ ವಿದ್ಯೆಯ ಬಗ್ಗೆ ಪರದೇಶಸ್ಥರಲ್ಲಿ ಎಷ್ಟು ಯೋಗ್ಯತೆ ಇರುವದು ಎಂಬದು ತಿಳಿದು ಬರುತ್ತದೆ.

ಕಲಕತ್ತೆಯಲ್ಲಿ ಕೆಲವು ರೊಕ್ಕಸ್ಥರಾದ ಜಮೀನದಾರರೂ, ವರ್ತಕರೂ ಕೂಡಿ ನಾಮದಾರ ಸರರಿಚರ್ಡಟೆಂಪಲ್ ಲೆಫ್ಟಿನೆಂಟ ಗವರ್ನರ ಅವರ ಆಶ್ರಯದಿಂದ ಕಲಾಕೌಶಲ್ಯಗಳನ್ನು ಕಲಿಸುವದಕ್ಕಾಗಿ ಒಂದು ವಿದ್ಯಾಲವನ್ನು ಸ್ಥಾಪಿಸತಕ್ಕವರಿದ್ದಾರೆಂಬಸುವಾರ್ತೆವರ್ತಮಾನಪತ್ರದಲ್ಲಿ ಪ್ರಸಿದ್ಧ ಆಗಿರುತ್ತದೆ. ಈ ಪ್ರಕಾರದ್ದೊಂದು ವಿದ್ಯಾಲಯವು ನಮ್ಮ ಇಲಾಖೆಯಲ್ಲಿಯೂ ಅವಶ್ಯವಾಗಿದೆಎಂಬದರ ಕಡೆಗೆ ನಮ್ಮಲ್ಲಿ ಶ್ರೀಮಾನ ಜನರು ಲಕ್ಷಕೊಡಬೇಕು.

SELF HELP.

ತನಗೆ ತಾನೇ ನೆರವಾಗುವದು.

ಗೋವೆಗೆ ತಲಪಿದ ನಂತರ ಕ್ಸೇವಿಯರನು ಅಲ್ಲಿಯವರ ದುರ್ನಡತೆಯನ್ನು ನೋಡಿ ಚಕಿತನಾದನು. ಆ ಪಟ್ಟಣದಲ್ಲಿ ಹೊಸದಾಗಿ ಹೋಗಿ ನಿಂತ ಜನರು ಯೇನು ಪ್ರತಿಬಂಧವಿಲ್ಲದೆ ಬೇಕಾದಂಥ ಕೆಟ್ಟ ನಡತೆಗಳಿಂದ ನಡಿಯುವರು; ಅಲ್ಲಿಯ ಮೂಲನಿವಾಸಿಗಳು ಆ ನಡತೆಗಳನ್ನು ಬಹು ಬೇಗ ಸ್ವೀಕರಿಸುವರು. ಆದದರಿಂದ ಅವನು ಕೈಯೊಳಗೆ ಒಂದು ಗಂಟೆಯನ್ನು ತೆಗೆದುಕೊಂಡು ಅದನ್ನು ಬಾರಿಸುತ್ತ ಪಟ್ಟಣದ ಬೀದಿಗಳಲ್ಲಿ ತಿರುಗಾಡಿ ಜನರಿಗೆ ನಿಮ್ಮ ಮಕ್ಕಳನ್ನು ನನ್ನ ಹತ್ತಿರ ವಿದ್ಯಾಭ್ಯಾಸಕ್ಕೆ ಕಳುಹಿಸಿರೆಂದು ಬೇಡಿಕೊಂಡನು. ಮುಂದೆ ಸ್ವಲ್ಪ ದಿವಸಗಳೊಳಗೆ ಅವನಲ್ಲಿ ಬಹು ಜನರು ವಿದ್ಯಾರ್ಥಿಗಳು ಕೂಡಿದರು. ಅವರಿಗೆ ಪ್ರತಿದಿವಸ ಜಾಗ್ರತೆಯಿಂದ ಕಲಿಸುತ್ತಲೂ, ಬೇನೆಯವರೂ ಮಹಾ ರೋಗವುಳ್ಳವರೂ, ಬೇರೆ ವಿಧದ ಆಪತ್ತುಗಳಲ್ಲಿ ಮುಳುಗಿದವರೂ ಆದ ಎಲ್ಲ ಜಾತಿಯ ಜನರ ಮನೆಗೆ ಹೋಗುತ್ತಲೂ, ಅವನು ಅವರ ಕಷ್ಟಗಳನ್ನು ಕಡಿಮೆ ಮಾಡಿ, ನಿಜವಾದ ಧರ್ಮಕ್ಕೆ ಅವರನ್ನು ಒಲಿಸಿಕೊಳ್ಳಬೇಕೆಂಬ ಹೇತುವಿನಿಂದ ಯತ್ನಿಸಿದನು. ಮನುಷ್ಯ ಜಾತಿಯವರ ಗೋಳಾಟವು ಯಾವ ವಿಧವೇ ಆಗಲಿ ಅವನ ಕಿವಿಗೆ ಬಿದ್ದರೆ, ಅವನು ದುರ್ಲಕ್ಷ್ಯ ಮಾಡುತ್ತಿದ್ದಿಲ್ಲ. ಸಂಸಾರದ ಅಖಾತದಲ್ಲಿ ಮುತ್ತುಗಳನ್ನು ತೆಗೆಯು

ವವರ ನೀಚ ಸ್ಥಿತಿಯನ್ನೂ, ದುಖ್ಖಗಳನ್ನೂ ಕೇಳಿ ಅವನು ಅವರನ್ನು ನೋಡುವದಕ್ಕೋಸ್ಕರವಾಗಿ ಅಲ್ಲಿಗ ಹೊರಟನು; ಅಲ್ಲಿ ಹೋದನಂತರ ಅವರಿಗೆ ದಯಮಾಡುವದಕ್ಕೋಸ್ಕರವಾಗಿ ಪುನಃ ತನ್ನ ಗಂಟೆಯನ್ನು ಬಾರಿಸುತ್ತ ತಿರುಗಾಡಿದನು. ಅವರಲ್ಲಿ ಕೆಲವರನ್ನು ಖ್ರಿಸ್ತೀ ಧರ್ಮದೊಳಗೆ ತೆಗೆದುಕೊಂಡು, ವಿದ್ಯಾ ಕಲಿಸಿದನು. ಕಷ್ಟದಲ್ಲಿ ಬಿದ್ದವರ ದುಖ್ಖವನ್ನೂ, ನ್ಯೂನತೆಗಳನ್ನೂ ಪರಿಹರಿಸುವದೇ ಅತಿ ಸುರಸವಾದ ಅವನ ಶೀಕ್ಷಣವಾಗಿತ್ತು.

ಈ ಮೇರಿಗೆ ಅವನು ತನ್ನ ಗಂಟೆಯನ್ನು ಬಾರಿಸುತ್ತ ಕುಮಾರೀ ಭೂಶಿರ ಥಡದಲ್ಲಿ ದೊಡ್ಡ ಗ್ರಾಮಗಳಲ್ಲಿಯೂ, ಗುಡಿಗಳಲ್ಲಿಯೂ ಬಾಜಾರುಗಳಲ್ಲಿಯೂ ಅಲ್ಲಿಯ ನಿವಾಸಿಗಳನ್ನು ಸದ್ಬೋಧನೆಯಸಲುವಾಗಿ ಕರೆಯುತ್ತ ತಿರುಗಾಡಿದನು. ಅವನು ಕೆಲವು ಧರ್ಮಗ್ರಂಥಗಳ ಭಾಷಾಂತರಗಳನ್ನು ಮಾಡಿಸಿ ಆ ಭಾಷಾಂತರಗಳೊಳಗಿನ ವಾಕ್ಯಗಳನ್ನು ಹುಡುಗರ ಮುಂದೆ ಆಗಾಗ್ಗ ನುಡಿಸು ಅವರ ಕೈಯಿಂದ ಪಾಠ ಮಾಡಿಸಿದನು ಆ ಮೇಲೆ ಅವನು ಆವೇ ವಾಕ್ಯಗಳನ್ನು ತಮ್ಮ ತಾಯಿತಂದೆಗಳಿಗೂ, ನೆರೆಯವರಿಗೂ ಕಲಿಸುವದಕ್ಕೋಸ್ಕರವಾಗಿ ಆ ಹುಡುಗರನ್ನು ಕಳುಹಿಸಿದನು. ಕುಮಾರೀ ಭೂಸಿರ ಥಡವೆಲ್ಲೆಲ್ಲ ಕೂಡಿ ಅವನು ಮೂವತ್ತು ಮಂದಿ ಶಿಕ್ಷಕರನ್ನು ನೇಮಿಸಿ, ಅವರಲ್ಲಿ ಒಬ್ಬೊಬ್ಬರು ತನ್ನ ಕೈಳಗೆ ಒಂದೊಂದು ಖ್ರಿಸ್ತೀ ದೇವಾಲಯದ ಮುಖ್ಯಸ್ಥನಾಗಿ ನಡಿಯುವ ಹಾಗೆ ಮಾಡಿದನು. ಆ ಗುಡಿಗಳಲ್ಲಿ ಒಡತನದ ರೀತಿಯಿಂದಲೇ ಕಟ್ಟಿಸಲ್ಪಟ್ಟಿದ್ದವು. ಆವುಗಳಲ್ಲಿ ಯೆಷ್ಟೋ ಕೇವಲ ಗುಡುಸಲಗಳಾಗಿದ್ದು, ಒಂ

ದೊಂದರ ಮೇಲೆ ಒಂದೊಂದು * ಶಿಲುಬೆಯಿತ್ತು. ಅಲ್ಲಿಂದ ಅವನು ತಿರುವಂಕೋಡಿಗೆ ಹೊರಟನು. ಹೋಗುವಾಗ ಮಾರ್ಗದಲ್ಲಿ ಹಳ್ಳಿಯಿಂದ ಹಳ್ಳಿಗೆ ಗಂಟೆಯನ್ನು ಬಾರಿಸುತ್ತಲೂ, ತನ್ನ ಕೈಗಳು ಸೋತು ಕೆಳಗೆ ಬೀಳುವವರೆಗೂ ಜನರಿಗೆ ಧರ್ಮದೀಕ್ಷೆಯನ್ನು ಕೊಡುತ್ತಲೂ, ತನ್ನ ಧ್ವನಿಯು ಬಿದ್ದು ಬಹುಶಃ ಕೇಳಿಸದ ಹಾಗೆ ಆಗುವವರೆಗೂ ಧರ್ಮಸಂಬಂಧದ ವಚನಗಳನ್ನು ನುಡಿಯುತ್ತಲೂ ನಡೆದನು—ಈ ಬಗೆಯ ಯತ್ನಗಳಿಂದ ತನ್ನ ಕಾರ್ಯವು ತನ್ನ ಕೋರಿಕೆಗಿಂತ ಹೆಚ್ಚು ಸಫಲವಾಯಿತೆಂದು ಅವನೇ ಹೇಳಿದ್ದಾನೆ. ನಿಷ್ಕಲಂಕವೂ, ಆತುರವುಳ್ಳದ್ದೂ ಮನೋಹರವೂ ಆದ ನಡತೆಯಿಂದಲೂ ನಿರ್ಬಾಧವಾದ ಸ್ವಾರಸ್ಯವುಳ್ಳ ಕೃತ್ಯಗಳಿಂದಲೂ ಅವನು ಎಲ್ಲಿ ಹೋದಲ್ಲಿ ಬಹು ಜನರನ್ನು ಖ್ರಿಸ್ತೀ ಧರ್ಮದೊಳಗೆ ಯೆಳದುಕೊಂಡನು. ಕೇವಲ ದಯಾಳುತ್ವದ ಬಲದಿಂದಲೇ ಅವನ ಮಾತುಗಳನ್ನು ಕೇಳಿದವರ ಮನಸ್ಸಿನಲ್ಲಿ ಅವನ ಉಪದೇಶದ ಕೆಲವಂಶವು ತಿಳಿಯದೆ ಸೇರಿಕೊಂಡಿತು.

ಕ್ಸೇವಿಯರನು ಆ ಮೇಲೆ ‘ಸುಗ್ಗಗೆ ಸರಿಯಾಗಿ ಆಳುಗಳಿಲ್ಲ” ಬ ಚಿಂತೆಯಲ್ಲಿ ಮುಳುಗಿದವನಾದಾಗ್ಯೂ ಮಲಕ್ಕಾ, ಜೇಪಾನ ದ್ವೀಪಗಳಿಗೆ ಹೋದನು. ಅಲ್ಲಿಯ ಜನರೂ, ಅವರ ಭಾಷೆಗಳೂ, ಎಲ್ಲ ಅವನಿಗೆ ಹೊಸವೇ, ಅಲ್ಲಿಯ ಜನರ ಸ್ಥಿತಿ ನೋಡಿ, ಕಣ್ಣಗೆ ನೀರು ತಂದು ದೇವರನ್ನು ಪ್ರಾರ್ಥಿಸುತ್ತಾ, ಬೇನೆಯುವರ ಹಾಸಿಗೆಯ ಹತ್ತರ ಕೂತು ಅವರಿಗೆ ಸಹಾಯ ಮಾಡುತ್ತಾ ಇರುವದಿಷ್ಟೇ

---

* ಇದು ಖ್ರಿಸ್ತೀ ದೇವಾಲಯದ ಚಿಹ್ನವು.

ಅವನ ಕೈಯಿಂದ ಮಾಡೋಣವಾಯಿತು. ಒಂದೊಂದು ವೇಳೆ ಅವನು ತನ್ನ ಸಿಲುವಂಗೆಯ ತೋಳನ್ನು ನೀರೊಳಗೆ ಮುಳುಗಿಸಿ ಹಿಂಡಿದ ಹನಿಗಳಿಂದ ಸಾಯುವವರಿಗೆ ಖ್ರಿಸ್ತೀ ಧರ್ಮದೀಕ್ಷೆಯನ್ನು ಕೊಡುತ್ತಿದ್ದನು. ಈ ಪರಾಕ್ರಮಶಾಲಿಯಾದ ಧರ್ಮಭಟನು ಎಲ್ಲ ಬಗೆಯ ಕೋರಿಕೆಯುಳ್ಳವನಾಗಿ, ಯಾತಕ್ಕೂ ಅಂಜದೆ, ಮೊದಲಿನಿಂದ ಕಡೆತನಕ ವಿಶ್ವಾಸದಿಂದಲೂ, ಶಕ್ತಿಯಿಂದಲೂ, ನಡಿಸಿದನು. ಅವನು ಅಂದದ್ದೇನಂದರೆ „ಒಂದೇ ಪ್ರಾಣವನ್ನು ಮುಕ್ತಿಪಡಿಸುವದಕ್ಕೋಸ್ಕರವಾಗಿ ನನಗೆ ಯಾವ ವಿಧದ ಮರಣವು ಅಥವಾ ಯಾತನೆಯು ಒದಗಿದಾಗ್ಯೂ ನಾನು ಅದನ್ನು ಹತ್ತು ಸಾವಿರ ಸಾರಿ ಸಹಿಸುವದಕ್ಕೆ ಸಿದ್ಧನಿದ್ದೇನೆ.” ಅವನು ಹಸವು ನೀರಡಿಕೆಗಳನ್ನೂ, ಕಷ್ಟವನ್ನೂ, ಯಾವ ವಿಧದ ಭಯವನ್ನೂ ಲಕ್ಷಿಸದೆ, ದಣುವನ್ನು ಧಿಕ್ಕರಿಸಿ, ವಿಶ್ರಾಂತಿಯ ಮರತುಬಿಟ್ಟು, ತನ್ನ ಪ್ರೀತಿಯ ಉದ್ಯೋಗವನ್ನು ಏಕಪ್ರಕಾರವಾಗಿ ನಡಿಸಿದನು. ಈ ಮೇರಿಗೆ ಹನ್ನೊಂದು ವರ್ಷಗಳ ವರೆಗೆ ಶ್ರಮ ಮಾಡಿ ಕಡೆಯಲ್ಲಿ ಈ ದೊಡ್ಡ ಸತ್ಪುರುಷನು ಚೀನಾದೇಶದಲ್ಲಿ ಪ್ರವೇಶಿಸುವ ಹವಣಿಕೆಯಲ್ಲಿರಲಾಗಿ, ಸಾಂಚಿಯನೆಂಬ ನಡುಗಡ್ಡೆಯಲ್ಲಿ ಜ್ವರದಿಂದ ಕಾಲವಶನಾದನು. ಇವನಗಿಂತ ಹೆಚ್ಚು ಸನ್ಮಾನಾರ್ಹನೂ, ನಿಷ್ಕಲಂಕನೂ, ಆತ್ಮಸಂಶಯಮನವುಳ್ಳವನೂ, ಧೈರ್ಯಶಾಲಿಯೂ, ಆದ ಶೂರನು ಈ ಭೂಲೋಕದಲ್ಲಿ ಬಹುತರವಾಗಿ ಎಂದೂ ಆಗಲಿಲ್ಲ.

ಬೇರೆ ಯೆಷ್ಟೋ ಜನರು ಧರ್ಮೋಪದೇಶಕರು ಇದೇ ವಿಧದ ಕೃತ್ಯಗಳಲ್ಲಿ ಕ್ಸೇವಿಯರನ ಉದಾಹರಣೆಗ.

ತ್ರಿಗೆಪಡುಕೊಂಡಿದ್ಧಾರೆ. ಅವರು ಯಾರಂದರೆ, ಹಿಂದೂದೇಶದಲ್ಲಿ ಸ್ಕ್ವಾರ್ತ್ಸ, ಕೇರೀ, ಮಾರ್ಶಮಾನ್ ಮುಂತಾದವರು; ಚೀನಾದೇಶದಲ್ಲಿ ಗಸ್ಲ್ಲಾಫ, ಮಾರಿಸನೆಂಬವರು. ದಕ್ಷಿಣ ಸಮುದ್ರದಲ್ಲಿ ಉಯಿಲಿಯಮ್ಸನೆಂಬವನು; ಅಫ್ರಿಕದಲ್ಲಿ ಕ್ಯಾಂಬೆಲ್, ಮೊಫಾತ್, ಲಿವಿಂಗಸ್ಟನೆಂಬವರು-ಜಾನವ್ರುಯಿಲಿಯಮ್ಸನೆಂಬವನು ಇರೋಮಾಂಗಯೆಂಬ ನಡುಗಡ್ಡೆಯೊಳಗೆ ಧರ್ಮ ಬೋಧನೆಯ ಕೆಲಸದಲ್ಲಿ ಮರಣ ಹೊಂದಿದನು. ಅವನು ಮೊದಲು ಚಿಕ್ಕಂದಿನಲ್ಲಿ ಒಬ್ಬ ಕಬ್ಬಿಣದ ಒಡವೆಗಳ ಮಾರಾಟ ಮಾಡುವವನ ಕೈಕೆಳಗೆ ಕೆಲಸ ಕಲಿಯುವದಕ್ಕೆ ನಿಂತನು. ಅವನು ಜಾಢ್ಯವುಳ್ಳ ಹುಡುಗನ ಹಾಗೆ ತೋರುತ್ತಿದ್ದಾಗ್ಯೂ, ತನ್ನ ಕೆಲಸದಲ್ಲಿ ಚುರುಕಾಗಿದ್ದನು. ಅವನ ಕೌಶಲ್ಯನೋಡಿ ಅವನ ಒಡೆಯನು ಹೆಚ್ಚು ಜಾಗ್ರತೆಯಿಂದ ಮಾಡತಕ್ಕ ಕಂಮಾರಿಕೆಯ ಕೆಲಸಗಳನ್ನು ಅವನಿಗೆ ಮಾಡ ಹೇಳುತ್ತಿದ್ದನು. ಅವನು *ಗಂಟೆಗಳನ್ನು ತೂಗಗಟ್ಟುವ ಕೆಲಸದಲ್ಲಿಯೂ, ಅಂಗಡಿಯ ಬಿಟ್ಟು ಹೊರಗೆ ಹೋಗತಕ್ಕ ಬೇರೆ ಕೆಲಸಗಳಲ್ಲಿಯೂ, ಬಹಳ ಮೆಚ್ಚಿಕೆಯುಳ್ಳವನಿದ್ದನು. ಅವನು ಒಂದು ಸಮಯದಲ್ಲಿ ಧರ್ಮ ಸಂಬಂಧದ ವ್ಯಾಖ್ಯಾನವನ್ನು ಕೇಳಲಾಗಿ, ಅದರಲ್ಲಿ ಅವನ ಮನಸ್ಸು ಬಹಳ ಶೇರಿಕೊಂಡದ್ದರಿಂದ, ಅವನು ಪ್ರತಿ ಆದಿತ್ಯವಾರದಿವಸ ನಡಿಯುವ † ಒಂದು ಶಾಲೆಯಲ್ಲಿ ಶಿಕ್ಷಕನಾದನು. ಅವನು ಒಂದು ಸಭೆಗೆ ಹೋದಾಗ ಪರದೇಶಗಳಿಗೆ ಧರ್ಮೋಪದೇಶಕರನ್ನು ಕಳುಹಿಸ

---

* ವಿಲಾಯತಿಯಲ್ಲಿ ಚಾಕರ ಜನರು ಮುಂತಾದವರನ್ನು ಕರೆಯುವದಕ್ಕೋಸ್ಕರವಾಗಿ ಮನೆಯೊಳಗೆ ಗಂಟೆಗಳನ್ನು ಕಟ್ಟುವದುಂಟು.

ಬೇಕಾಗಿದೆ ಯೆಂದು ತಿಳಿದದರಿಂದ ಆ ಕೆಲಸದಲ್ಲಿ ತಾನು ಶೇರಬೇಕೆಂದು ನಿಶ್ಚಯ ಮಾಡಿದನು. ಲಂಡನದ ಧರ್ಮೋಪದೇಶ ಸಂಘದವರು ಅವನನ್ನು ಪರದೇಶಕ್ಕೆ ಧರ್ಮೋಪದೇಶಕ್ಕೋಸ್ಕರವಾಗಿ ಕಳುಹಿಸುತ್ತೇವೆಂದು ಒಡಂಬಡಲಾಗಿ, ಅವನ ಒಡೆಯನು ತನ್ನ ಸಂಗಡ ಅವನು ಮಾಡಿದ ಕರಾರಿನ ಮುದ್ದತು ಇನ್ನೂ ಮುಗಿಯದೆ ಇದ್ದಾಗ್ಯೂ ಅವನಿಗೆ ಅಪ್ಪಣೆಯ ಕೊಟ್ಟನು. ಪಾಸಿಫಿಕ ಸಮುದ್ರದೊಳಗಿನ ದ್ವೀಪಗಳಲ್ಲಿ, ವಿಶೇಷವಾಗಿ, ಏಶಿಯಹಾ, ರಾರೊತೊಂಗ, ತಾಹೀಲೇ ಯೆಂಬ ನಡುಗಡ್ಡೆಗಳಲ್ಲಿ ಆವನು ಕೆಲಸ ನಡಿಸಬೇಕಾಗಿತ್ತು. ಏಸೂಕ್ರಿಸ್ತನ ಶಿಷ್ಯರಂತೆ ಆವನು ಕಂಮಾರಿಕೆ, ತೋಟಗಳನ್ನು ಮಾಡೋಣ ಹಡಗಗಳನ್ನು ರಚಿಸೋಣ ಮುಂತಾದ ಕೆಲಸಗಳನ್ನು ತನ್ನ ಕೈಯಿಂದ ಮಾಡುತ್ತಿದ್ದನು. ಆ ದ್ವೀಪ ನಿವಾಸಿಗಳಿಗೆ ಅವನು ಧರ್ಮೋಪದೇಶವನ್ನು ಮಾಡುತ್ತಿದ್ದದ್ದಲ್ಲದೆ, ಕಲಾಕೌಶಲ್ಯಾದಿಗಳನ್ನು ಸಹ ಕಲಿಸುವ ಯತ್ನ ನಡಿಸಿದನು. ಈ ಮೇರಿಗೆ ಅವನು ವಿಶ್ರಾಂತಿ ಇಲ್ಲದೆ ಶ್ರಮ ಮಾಡುತ್ತಿರಲಾಗಿ, ಇರೋಮಾಂಗ ದ್ವೀಪದ ಕಾಡು ಜನರು ಅವನನ್ನು ಕೊಂದುಹಾಕಿದರು. ಧರ್ಮಾಭಿಮಾನಿಯೆಂಬ ಬಿರುದನ್ನು ಧರಿಸುವದಕ್ಕೆ ಇವನಿಗಿಂತ ಹೆಚ್ಚು ಯೋಗ್ಯರಾದವರು ಇಲ್ಲ.

ಆದರೆ ಯೆಲ್ಲ ಜನರ ಚರಿತ್ರೆಗಳಿಗಿಂತ ಡಾಕ್ತರ ಲಿವಿಂಗಸ್ತನ್ನನೆಂಬವನ ಚರಿತ್ರೆಯು ಹೆಚ್ಚು ಕೌತುಕವಾದ

---

† ಇಂತಾ ಶಾಲೆಗಳಲ್ಲಿ ಧರ್ಮ ಸಂಬಂಧದ ಅಭ್ಯಾಸವು ನಡೆಯುತ್ತದೆ.

ದ್ದ ಅವನು ತನ್ನ ಸ್ವಾಭಾವಿಕ ನಡತೆಯಂತೆ ತನ್ನ ಸ್ವಂತ ಪ್ರಶಸ್ತಿಯನ್ನು ಯೆಷ್ಟು ಮಾತ್ರವೂ ತೋರಿಸದೆ ನಮ್ರವಾದ ರೀತಿಯಿಂದ ತನ್ನ ಕಥೆಯನ್ನು ತಾನೆ ಬರಿದು ಇಟ್ಟಿದ್ದಾನೆ. ಅವನ ಪೂರ್ವಜರು ಬಡವರಾದಾಗ್ಯೂ, ಪ್ರಮಾಣಿಕರೆಂದೆನಿಸಿಕೊಂಡು ಸ್ಕಾಟ್ಲೇಂಡದೊಳಗಿನ ತಪ್ಪಲ ನಾಡೆಂಬ ಶೀಮೆಯಲ್ಲಿ ವಾಸಿಸುತ್ತಿದ್ದರು. ಅವರಲ್ಲಿ ಒಬ್ಬನು ತಾನಿರುವ ಪ್ರಾಂತದಲ್ಲಿ ಬುದ್ಧಿವಂತನೂ, ವಿವೇಕವುಳ್ಳವನೂ ಯೆಂದೆನಿಸಿಕೊಂಡು ಸಾಯುವಕಾಲದಲ್ಲಿ ಮಕ್ಕಳನ್ನು ತನ್ನ ಸುತ್ತು ಮುತ್ತು ಕುಳ್ಳಿಸಿಕೊಂಡು ಈ ಮೇರಿಗೆ ಬೋಧಿಸಿದನೆಂದು ಹೇಳುತ್ತಾರೆ. ,,ಮಕ್ಕಳೇ, ನಾನು ಜೀವದಿಂದಿರುವ ಮಟ್ಟಿಗೂ ನಮ್ಮ ವಂಶದವರ ಚರಿತ್ರಗಳನ್ನು ಶಿಕ್ಕಷ್ಟು ಸಂಪಾದಿಸಿ, ಅವುಗಳಲ್ಲೆಲ್ಲ ಬಹು ಲಕ್ಷ್ಯವಿಟ್ಟು ಹುಡುಕಿದ್ದೇನೆ. ಆದರೆ ಅವರಲ್ಲಿ ಒಬ್ಬನಾದರೂ ಅಪ್ರಮಾಣಿಕನಿದ್ದನೆಂದು ತೋರಿ ಬರುವದಿಲ್ಲ. ಆದದರಿಂದ ನಿಮ್ಮಲ್ಲಿ ಅಥವಾ ನಿಮ್ಮ ಮಕ್ಕಳಲ್ಲಿ ಯಾರಾದರೂ ಅಪ್ರಮಾಣಿಕರಾದರೆ, ಅದರ ದೋಷಕ್ಕೆ ನಾವು ಬಾಧ್ಯರಲ್ಲ,— ಅಪ್ರಮಾಣಿಕತನವು ನಿಮ್ಮ ವಂಶದಲ್ಲಿಯೇ ಇಲ್ಲ— ಆದದರಿಂದ ನೀವು ಪ್ರಮಾಣಿಕರಾಗಿರೆಂದು ನನ್ನ ಬೋಧನೆಯುಂಟು. ಈ ಉಪದೇಶವೆ ಮಾತ್ರ ಅವನು ತನ್ನ ಮಕ್ಕಳಿಗೆ ಕೊಟ್ಟ ಆಸ್ತಿಯಾಗಿತ್ತು. ಲಿವಿಂಗಸ್ಟನ್ನನು ಹತ್ತು ವರ್ಷದವನಾದಾಗ ಗ್ಲಾಸಗೊ ಪಟ್ಟಣದ ಸೆರೆಯಲ್ಲಿ ಒಂದು ಅರಳೆಯ ಕಾರಖಾನೆಯೊಳಗೆ ಕೆಲಸ ಕಲಿಯುವದಕ್ಕೆ ಹೋಗಿ ನಿಂತನು. ಅವನು ತನಗೆ ಮೊದಲಿನ ವಾರದಲ್ಲಿ ಸಿಕ್ಕ ಸಂಬಳದೊಳಗಿಂದ ಒಂದು ಲಾಟ

ನ್ ಭಾಷೆಯ ವ್ಯಾಕರಣವನ್ನು ಕೊಂಡು ಮುಂದೆ ಯಷ್ಟೋ ವರ್ಷಗಳ ವರೆಗೆ ಆ ಭಾಷೆಯ ಅಭ್ಯಾಸ ಮಾಡುತ್ತಿದ್ದನು. ಅವನು ಪ್ರತಿ ದಿವಸ ಬೆಳಗಿನ ಆರು ಘಂಟೆಯಲ್ಲಿ ಯೆದ್ದು ಕೆಲಸಕ್ಕೆ ಹೋಗಬೇಕಾಗುತ್ತಿದ್ದ ಕಾರಣ ಅವನ ತಾಯಿಯು ರಾತ್ರಿಯಲ್ಲಿ ಅವನಿಗೆ ಬೇಗ ಮಲಗ ಹೇಳುವಳು, ಅವಳು ಹೇಳದಿದ್ದರೆ, ಅವನು ಹನ್ನೆರಡು ಘಂಟೆ ರಾತ್ರಿಯಾಗುವ ವರೆಗೂ ಅಥವಾ ಹೆಚ್ಚು ಕಾಲವು ತನ್ನ ಪಾಠವನ್ನು ಕಲಿಯುತ್ತ ಕೂಡ್ರುವನು. ಈ ಬಗೆಯಾಗಿ ಅವನು ಹೋರೇಸ, ವರ್ಜಿಲ್ಲ, ಯೆಂಬ ಪ್ರಸಿದ್ಧ (ಲಾಟಿನ್)ಗ್ರಂಥ ಕರ್ತರ ಪುಸ್ತಕಗಳನ್ನು ಓದಿ ಹಾಕಿದಲ್ಲದೆ, ಕಟ್ಟು ಕಥೆಗಳು ಹೊರ್ತು ತನ್ನ ಕೈಗೆ ಸಿಕ್ಕ ಪುಸ್ತಕಗಳನ್ನು, ವಿಶೇಷವಾಗಿ, ಶಾಸ್ತ್ರೀಯ ಗ್ರಂಥಗಳನ್ನು ಪ್ರವಾಸಿಕರ, ಚರಿತ್ರೆಗಳನ್ನು ಬಹಳ ಓದಿದನು. ಇದು ಹೊರ್ತಾಗಿ ತನಗೆ ಸ್ವಲ್ಪ ಸ್ವಲ್ಪ ಅವಕಾಶ ಸಿಕ್ಕಾಗ ವನಸ್ಪತಿಗಳನ್ನು ಶಾಸ್ತ್ರವನ್ನು ಕಲಿತು, ವನಸ್ಪತಿಗಳನ್ನು ಸಂಪಾದಿಸುವದಕ್ಕೋಸ್ಕರವಾಗಿ ನೆರೆ ಹೊರೆಯಲ್ಲಿ ಅಡ್ಡಾಡುತ್ತಿದ್ದನು. ಕಾರಖಾನೆಯಲ್ಲಿ ಯಂತ್ರಗಳ ಕೂಗಾಟದೊಳಗೆ ಸಹ ಅವನು ತನ್ನ ಓದೋಣವನ್ನು ಸಾಗಿಸುತ್ತಿದ್ದನು. ಈ ವಿಧವಾಗಿ ಆ ದೃಢ ನಿಶ್ಚಯವುಳ್ಳ ಚಿಕ್ಕವನು ಬಹಳ ಪ್ರಯೋಜನಕರವಾದ ಜ್ಞಾನವನ್ನು ಸಂಪಾದಿಸಿಕೊಂಡು, ಹೆಚ್ಚು ಹೆಚ್ಚು ಪ್ರೌಢ ವಯಸ್ಸಿನವನಾದ ಹಾಗೆ ಅವನ ಮನಸ್ಸಿನಲ್ಲಿ ಧರ್ಮ ಹೀನರಿಗೆ ಧರ್ಮೋಪದೇಶ ಮಾಡಬೇಕೆಂಬ ಆಕಾಂಕ್ಷೆಯು ತುಂಬಿಕೊಂಡಿತು. ಈ ಹೇತುವಿನಿಂದ ಅವನು ಆ ಕೆಲಸಕ್ಕೆ ತಾನು ಹೆಚ್ಚಿಗೆ ತಕ್ಕವನಾಗ

ರೇಕೆಂದು ವೈದ್ಯ ಶಾಸ್ತ್ರವನ್ನು ಕಲಿಯ ಹತ್ತಿದ್ದನು. ಅವನು ತನ್ನ ಆದಾಯದೊಳಗಿಂದ ಕೈಲಾದ ಮಟ್ಟಿಗೂ ಹಣವನ್ನು ಉಳಿಸಿಕೊಂಡು, ಗ್ಲಾಸಗೊ ಪಟ್ಟಣದಲ್ಲಿ ಪ್ರತಿ ಛಳಿಗಾಲದಲ್ಲಿ ನಡಿಯುತ್ತಿದ್ದ ವೈದ್ಯ ಶಾಸ್ತ್ರ, ಗ್ರೀಕ ಭಾಷೆಗಳ ಶಾಲೆಗಳಲ್ಲಿ ಹೋಗಿ, ಅಭ್ಯಾಸ ನಡಿಸಿ, ಧರ್ಮ ಸಂಬಂಧದ ವ್ಯಾಖ್ಯಾನಗಳನ್ನು ಕೇಳುತ್ತಿದ್ದನು. ಈ ಮೇರಗೆ ಪ್ರತಿ ವರ್ಷ ಛಳಿಗಾಲದಲ್ಲಿ ವಿದ್ಯಾಭ್ಯಾಸ ಮಾಡುತ್ತಾ, ಉಳಿದ ಯೆರಡು ಋತುಗಳಲ್ಲಿ ಅರಳಯ ಕಾರಖಾನೆಗಳಲ್ಲಿ ಕೆಲಸ ಮಾಡುತ್ತಾ ಅವನು ಕೆಲವು ವರ್ಷಗಳನ್ನು ಕಳದನು. ಈ ವಿಧವಾಗಿ ಅವನು ವಿದ್ಯಾಭ್ಯಾಸ ಕ್ರಮವನ್ನು ನಡಿಸಲಾಗಿ, ತನ್ನ ಸ್ವಂತ ಶ್ರಮದಿಂದಲೇ ಹೊಟ್ಟೆಯ ತುಂಬಿಕೊಳ್ಳುತ್ತಿದ್ದನು. ಅವನು ಮುಂದೆ ಒಂದು ಸಮಯದಲ್ಲಿ ನಿಜಸ್ತಿಕೆಯಿಂದ ನುಡಿದದ್ದೇನಂದರೆ ಆ ಕಾಲದಲ್ಲಿ ನಾನು ಯೆಷ್ಟು ಶ್ರಮ ಪಟ್ಟೆನೆಂದು ಈಗ ವಿಚಾರಿಸಿ ನೋಡಿ, ಆ ಶ್ರಮದಿಂದಲೇ ನನಗೆ ಆರಂಭದಲ್ಲಿ ಆಗತಕ್ಕ ವಿದ್ಯಾಭ್ಯಾಸದ ಮುಖ್ಯ ಭಾಗವು ಒಳಬಿತ್ತೆಂದು ತಿಳಿದು ಬಹಳ ಸಂತೋಷ ಪಡುತ್ತೇನೆ. ಪುನಃ ಸಂಭವಿಸಿದರೆ, ನಾನು ಅದೇ ಮೇರಿಗೆ ಅಪ್ರಸಿದ್ಧನಾಗಿ, ಅದೇ ವಿಧದಕಷ್ಟದ ಅಭ್ಯಾಸಗಳನ್ನು ನಡಿಸಿ, ಆಯುಷ್ಯ ಕ್ರಮವನ್ನು ಇನ್ನೊಮ್ಮೆ ಆರಂಭಿಸಬೇಕೆಂದು ಬಹಳವಾಗಿ ಕೋರುತ್ತೇನೆ, ಕಡೆಯಲ್ಲಿ ಅವನು ವೈದ್ಯ ಶಾಸ್ತ್ರದ ಅಭ್ಯಾಸವನ್ನು ಮುಗಿಸಿ ಪರೀಕ್ಷೆಯ ಕೊಟ್ಟು, ಅದರಲ್ಲಿ ಸಂಪಾದಿಸತಕ್ಕ ಪದವಿಯನ್ನು ಸಂಪಾದಿಸಿದನು. ಮೊದಲಿಗ ಅವನು ಚೀನಾ ದೇಶಕ್ಕೆ ಹೋಗುವ ಆಲೋಚ

ನೆಯು ಮಾಡಿದ್ದನು. ಆದರೆ ಆಗ ಆ ದೇಶದಲ್ಲಿ ಕಾಳಗ ನಡೆದದ್ದರಿಂದ ಆ ಆಲೋಚನೆಯನ್ನು ಬಿಟ್ಟು, ಲಂಡನದ ಧರ್ಮೋಪದೇಶ ಸಂಘದವರಿಗೆ ಕೆಲಸ ಬೇಡಲಾಗಿ ಅವರು ಇವನನ್ನು ಅಫ್ರಿಕಕ್ಕೆ ನೇಮಿಸಿದರು. ಅವನು ಸನ್ ೧೮೪೧ ನೇ ವರ್ಷ ಅಫ್ರಿಕಕ್ಕೆ ಮುಟ್ಟಿದನು. ಅವನು ಮೊದಲು ಚೀನಾದೇಶಕ್ಕೆ ತನ್ನ ಸ್ವಂತ ಪ್ರಯತ್ನದಿಂದ ಹೋಗುವ ಆಲೋಚನೆಯು ಮಾಡಿದ್ದನು. ಲಂಡನದ ಧರ್ಮೋಪದೇಶ ಸಂಘದವರ ವೆಚ್ಚದಿಂದ ತಾನು ಅಫ್ರಿಕಕ್ಕೆ ಹೋದದ್ದು ತನ್ನ ಮನಸ್ಸಿಗೆ ಪ್ರಶಸ್ತವಾಗದೆ ಇದ್ದದ್ದರ ಕಾರಣವು ಅವನು ಹೇಳಿದ್ದು ಹ್ಯಾಗಂದರೆ, „ತನ್ನ ಸ್ವಂತ ಪ್ರಯತ್ನದಿಂದ ನಡೆಯುವವನಿಗೆ ಯಾವ ಬಗೆಯಾಗಿಯೂ, ಪರರ ಆಶ್ರಯದಿಂದ ಬದುಕುವದು” ಅಫ್ರಿಕಕ್ಕೆ ತಲುಪಿದನಂತರ ಅವನು ದೃಢನಿಷ್ಟೆಯಿಂದ ತನ್ನ ಕೆಲಸವನ್ನು ಆರಂಭಿಸಿದನು. ಮೊದಲನೇಯವರು ನಡಿಸಿದ ಕ್ರಮದಲ್ಲಿ ತಾನೂ ಸೇರಬೇಕೆಂಬ ವಿಚಾರವು ಅವನಿಗೆ ಸರಿಯಾಗಿ ತೋರಲಿಲ್ಲ; ಗೋಡಿ ಕಟ್ಟೋಣ, ಕಲಿಸೋಣ ಮುಂತಾದ ಸ್ವಂತ ಉದ್ಯೋಗಗಳಿಂದ ಹೊಸದೊಂದು ಏನಾದರೂ ದೊಡ್ಡ ಕೃತ್ಯವನ್ನುಂಟು ಮಾಡಬೇಕೆಂಬ ಮನಸ್ಸು ಹಿಡಿದನು. ಅಲ್ಲಿ ತಾನು ನಡಿಸಿದ ಶಿಕ್ಷಣದ ಬಗ್ಯೆ ಅವನು ಹೇಳಿದ್ದೇನಂದರೆ, „ಅದರಿಂದ ನಾನು ಹಿಂದಕ್ಕೆ ಅರಳಿಯ ಕಾರಖಾನೆಯಲ್ಲಿ ಕೆಲಸ ಮಾಡುತ್ತಿದ್ದಾಗ ಎಷ್ಟು ದಣಿಯುತ್ತಿದ್ದನೋ ಅಷ್ಟೆ ದಣಿದು ಹೋಗುತ್ತಿದ್ದನು. ಸಾಯಂಕಾಲಕ್ಕೆ ಯೇನೂ ಅಭ್ಯಾಸ ಮಾಡುವದಕ್ಕೆ ಸಾಮರ್ಥ್ಯವುಳಿಯುತ್ತಿದ್ದಿಲ್ಲ.” ಬೆಚುವಾನರನೆಂಬ

ಜನರಲ್ಲಿ ವಾಸಿಸುತ್ತಿದ್ದಾಗ ಅವನು ಕಾವಲಿಗಳನ್ನು ಅಗೆಯುತ್ತಿದ್ದನು, ಮನೆಗಳನ್ನು ಕಟ್ಟುತ್ತಿದ್ದನು, ಭೂಮಿಯ ಹಸನ ಮಾಡುತ್ತಿದ್ದನು, ದನಗಳನ್ನು ಸಾಕುತ್ತಿದ್ದನು. ಇದಲ್ಲದೆ ಅಲ್ಲಿಯ ಜನರಿಗೆ ಕೆಲಸಗಳನ್ನೂ, ಧರ್ಮವನ್ನೂ ಕಲಿಸುತ್ತಿದ್ದನು. ಅವನು ಅಲ್ಲಿಯ ಜನರನ್ನು ಸಂಗಡ ಕರಕೊಂಡು ಮೊದಲಿಗೆ ಒಂದು ದೂರಾದ ಪ್ರವಾಸಕ್ಕೆ ಹೊರಡಲಾಗಿ ತನ್ನ ಸಾಮರ್ಥ್ಯದ ಬಗ್ಗೆ ಅವರು ತಮ್ಮತಮ್ಮೊಳಗೆ ಮಾತಾಡಿದ್ದು ಅವನ ಕಿವಿಗೆ ಬಿದ್ದದ್ದು ಹ್ಯಾಗಂದರೆ „ಇವನಲ್ಲಿ ತ್ರಾಣವಿಲ್ಲ. ತೆಳ್ಳಗಿದ್ದಾನೆ; ಕಾಲಿಗೆ ಜೋಡುಗಳನ್ನು (ಇಜಾರು) ಹಾಕಿಕೊಳ್ಳುತ್ತಾನೆಂದು ದಪ್ಪಾಗಿ ಕಾಣಿಸುತ್ತಾನೆ; ಅವನು ಬೇಗ ದಣಿಯುವನು—" ಈ ಮಾತು ಕೇಳಿ ಅವನ ಜನ್ಮ ಭೂಮಿಯ ಆವೇಶವು* ತಲೆಗೇರಿದರಿಂದ ಅವನು ಯೆಷ್ಟೋ ದಿವಸಗಳ ವರೆಗೆ ದಣಿವನ್ನು ಲಕ್ಷಿಸದೆ, ತನ್ನ ಸಂಗಡ ಆ ಜನರನ್ನು ಅವರ ಕೈಯಿಂದಾದಷ್ಟು ತ್ವರೆಯಿಂದ ನಡೆಯ ಹಚ್ಚಿದನು. ಆಗಲವರು ಅವನ ನಡಿಗೆಯ ಸಾಮರ್ಥ್ಯವನ್ನು ಚೆನ್ನಾಗಿ ತಿಳಿದುಕೊಂಡು ಮಾತಾಡ ಹತ್ತಿದರು. ಆಫ್ರಿಕ ಖಂಡದಲ್ಲಿ ಅವನು ಹ್ಯಾಗೆ ಉದ್ಯೋಗ ನಡಿಸಿದನು, ಯೇನು ಮಾಡಿದನು ಯೆಂಬುದರ ಬಗ್ಗೆ „ ಮಿಶನರಿ ಟ್ರಾವೆಲ್ಸ್"(ಧರ್ಮೋಪದೇಶಕರ ಪ್ರವಾಸಗಳು)ಯೆಂಬ ಪುಸ್ತಕವನ್ನು ಓದಿದರೆ ಚೆನ್ನಾಗಿ ತಿಳಿಯುವದು. ಆ ಪುಸ್ತಕವು ಇದುವರೆಗೂ ಜನರಲ್ಲಿ ಪ್ರಸಿದ್ಧಿಗೆ ಬಂದ ಈ ಜಾತಿಯ ಪುಸ್ತಕಗಳಲ್ಲಿ

---

* ಸ್ಕಾಟಲಂಡದೊಳಗಿನ "ಹಾಯಲಂಡ"ವೆಂಬ ತಪ್ಪಲ ನಾಡಿನ ಜನರು ಬಹು ಛಟ್ಟಿಗರೆಂದು ಪ್ರಸಿದ್ಧಿಯುಂಟು.

ಅತಿ ಮನೋಹರವಾದದ್ದು. ಅವನು ಕಡೆಯಲ್ಲಿ ಮಾಡಿದ್ದೊಂದು ಕೃತ್ಯವು ಅವನ ಯೋಗ್ಯತೆಗೆ ತಕ್ಕದ್ದೆಂಬದಕ್ಕೆ ಸಂದೇಹವಿಲ್ಲ. ಅವನು „ಬಾರ್ನನ ಹಡ್ಡ" ವೆಂಬ ಹೆಸರಿನದೊಂದು ಉಗಿ ಹಡಗವನ್ನು ತನ್ನ ಸಂಗಡ ತೆಗೆದುಕೊಂಡು ಹೋಗಿದ್ದನು. ಆದರೆ ಅದು ಚನ್ನಾಗಿ ನಡಿಯದ ಹಾಗಾದ ಕಾರಣ ಮತ್ತೊಂದು ೨೦೦೦ ಪೌಂಡು ಬೆಲೆಯುಳ್ಳ ಹಡಗವನ್ನು ಇಂಗ್ಲಂಡದಿಂದ ತರಿಸುವದಕ್ಕೋಸ್ಕರ ಪತ್ರ ಬರೆದನು. ತನ್ನ ಪ್ರವಾಸದ ಪುಸ್ತಕಗಳನ್ನು ಪ್ರಸಿದ್ಧ ಮಾಡಿ ಉಂಟಾದ ಲಾಭದಲ್ಲಿ ತನ್ನ ಮಕ್ಕಗಳಗಾಗಿ ತೆಗೆದಿಟ್ಟ ಹಣದೊಳಗಿಂದ ಈ ಹಡಗದ ಬೆಲೆಯನ್ನು ಕೊಡಬೇಕೆಂದು ಹೇಳಿ, „ಆ ಹುಡುಗರು ತಮ್ಮ ಕೊರತೆಯಂನು ತಾವೇ ಪೂರ್ಣ ಮಾಡಿಕೊಳ್ಳಲಿಕ್ಕೆ ಬೇಕೆಂಬ ಅರ್ಥವಂನು ತನ್ನ ಪತ್ರದಲ್ಲಿ ತೋರಿಸಿದ್ದನು.

ಜಾನಹೌವಾರ್ಡನೆಂಬವನ ಚರಿತ್ರೆಯಿಂದ ಸಹ ಮೊದಲಿನಿಂದ ಕಡೆತನಕ ಇವೇ ಮೇರಿಗೆ ತಾಳ್ಮೆಯಿಂದ ಮನೋರಥವನ್ನು ಕಡೆಗಾಣಿಸಿದ ಉದಾಹರಣೆಯೇ ವ್ಯಕ್ತವಾಗುತ್ತದೆ. ಇಂಥಾದೊಂದು ಕೆಲಸವು ನಮಗೆ ಬಿಡದ ಕರ್ಮವೆಂದು ತಿಳಿದು ಪ್ರಯತ್ನ ನಡಿಸಲಾಗಿ ಅಶಕ್ತ ಪ್ರಕೃತಿಯುಳ್ಳವರು ಸಹ ಬೆಟ್ಟಗಳನ್ನು ಕಿತ್ತಿ ಚಲ್ಲುವರೆಂದು ಅವನ ಘನವಾದ ಕೃತ್ಯಗಳಿಂದ ತಿಳಿಯುತ್ತದೆ. ಕೆರೆಯುವರ ಸ್ಥಿತಿಯನ್ನು ಸುಧಾರಿಸ ಬೇಕೆಂಬ ಆಲೋಚನೆಯು ಅವನ ಮನಸ್ಸಿನಲ್ಲಿ ವ್ಯಾಪ್ತವಾಗಿ ಹಗಲು ರಾತ್ರಿ ಅವನಿಗೆ ಅದೇ ಧ್ಯಾನ ಉಂಟಾಯಿತು. ಆದದರಿಂದ ಅವನು ಯಾವ ವಿಧದ ಶ್ರಮವನ್ನು ಭಯವನ್ನು ಅಶಕ್ತತೆ

ಯನ್ನು ಲಕ್ಷಿಸದೆ ತಾನು ಹಿಡಿದ ಉದ್ದೇಶವನ್ನೇ ಹಂಬಾಲಿಸಿದನು. ನೋಡಿದರೆ ಅವನು ಕೌಶಲ್ಯದ ಬುದ್ಧಿಯವನಲ್ಲ, ಸಾಮಾನ್ಯ ತರದ ಬುದ್ಧಿಯುಳ್ಳವನೇ; ಆದಾಗ್ಯೂ ಅವನ ಅಂತಃಕರಣವು ನಿರ್ಮಲವಾದದ್ದು, ಇಚ್ಛೆಯು ಬಲವಾದದ್ದು. ಅವನು ಇರುವದರೊಳಗೇ ಅವನ ಉದ್ಯೋಗದ ಫಲವು ಹೇರಳವಾಗಿ, ದೃಷ್ಟಿಗೋಚರವಾಯಿತು. ಅವನು ತೆಗೆದ ಸುಧಾರಣೆಯ ಕ್ರಮವು ಅವನ ಸಂಗಡಲೇ ನಷ್ಟವಾಗಿ ಹೋಗಲಿಲ್ಲ; ಅದರಿಂದ ಈ ಹೊತ್ತಿನವರೆಗೂ ಇಂಗ್ಲಂಡದ ಕಾಯ್ದೆಗಳಲ್ಲಿಯೂ, ಬೇರೆ ದೇಶಗಳ ಕಾಯ್ದೆಗಳಲ್ಲಿಯೂ ಹೆಚ್ಚು ಕಡಿಮೆಯಾಗುತ್ತ ಬಂದದೆ ಅವನಿಗೆ ಪರೋಪಕಾರಿಯಾದ ಹಾವರ್ಡನೆಂದು ಜನರು ವಾಡಿಕೆಯಾಗಿ ಅನ್ನುತ್ತಿದ್ದರು.

NOTICES.

ನೋಟೀಸುಗಳು.

ಸರಕ್ಯುಲರು.

ಮೆ. ಎಜುಕೇಶನಲ್ ಇನ್ಸಪೆಕ್ಟರ ಸಾ. ಬಹಾದ್ದೂರ ದಕ್ಷಿಣ ಭಾಗ ಇವರ ಕಚೇರಿಯಿಂದ—

ಯಾದಾಸ್ತು:—

ದಕ್ಷಿಣಭಾಗದೊಳಗಿನ ಯಾವತ್ತು ಡಿಪ್ಯುಟಿ ಇನ್ಸಪೆಕ್ಟರವರು ತಮ್ಮಲ್ಲಿದ್ದ (೧) ಟ್ರೇನಿಂಗಕಾಲೇಜಕ್ಕೆ ಹೋಗಲಪೇಕ್ಷೆಯುಳ್ಳವರಾಗಿಯೂ ಯೋಗ್ಯರಾಗಿಯೂ ಇಪ್ಪಂಥ ಅನ್‌ಟ್ರೇನ್‌ಡ ಮಾಸ್ತರ ಜನರನ್ನೂ ಹಾಗೂ, (೨)

ಟ್ಟ ನಡತೆಯ ಬಗ್ಗೆ ಆಗಲೀ, ತಮ್ಮ ಕೆಲಸಕ್ಕೆ ನಾಲಾಯಖ ಇದ್ದದರಿಂದಾಗಲೀ ಶಿಕ್ಷೆಯ ಸಲುವಾಗಿ ಹೊಂದತಕ್ಕ (ಅಂದರೆ ಕಾಲೇಜಕ್ಕೆ ಕಳಸದಿದ್ದರೆ, ಸಂಬಳ ಕಡಿಮೆಯಾಗಲಿಕ್ಕೆ ಅಥವಾ ಕೆಲಸದಿಂದ ತೀರ ಕಡಿಮೆಯಾಗಲಿಕ್ಕೆ ಪಾತ್ರರಾದಂಥ) ಮಾಸ್ತರ ಜನರವೂ ಹೆಸರುಗಳೂ, ಅವರ ಸಂಬಂಧದ ವಿಶೇಷ ಮಾಹಿತಿಯೂ ನಮ್ಮ ಕಡೆಗೆ ಕಳುಹುವ ತಜವೀಜು ಮಾಡಬೇಕು.

೨ ಪ್ರತಿ ಒಬ್ಬನ ನಡತೆಯ ಬಗ್ಗೆಯೂ ಹುಷಾರಿ ಗೈರ ಹುಷಾರಿಯ ಬಗ್ಗೆಯೂ ಪೂರ್ಣ ಮಾಹಿತಿ ಕೊಡಬೇಕು.

೩ ಪ್ರತಿ ವರ್ಷ ಮಳೆಗಾಲದ ಆರಂಭಕ್ಕೆ ಈ ಸರಕ್ಯೂಲರಿಗೆ ಅನುಸರಿಸಿ ಯಾದಿಗಳನ್ನು ತಯಾರ ಮಾಡಿ ಕಳುಹಿಸತಕ್ಕದ್ದು.

ಮು. ಕಲಾದಗಿ
೨೨ ಡಿಜಂಬರ
೧೮೭೫ ಇಸವಿ.

(Signed) W. A. Russell.
ಎ. ಇನ್ಸಪೆಕ್ಟರ ದಕ್ಷಿಣಭಾಗ.

ಸರಕ್ಯುಲರನಂಬರ ೭೫೬

ಕಲಾದಗಿ ಜಿಲ್ಲೆಯೊಳಗಿನ ಯಾವತ್ತು ಸ್ಕೂಲ
ಮಾಸ್ತರರಿಗೆ—

ತಿಳಿಯಪಡಿಸುವದೇನಂದರೆ— ಪೂರ್ವದಲ್ಲಿ ಸರಕ್ಯುಲರ ಹುಕುಂ ಕೊಟ್ಟಿದ್ದಾಗ್ಯೂ ಕೆಲವು ಶಾಲಿಯಲ್ಲಿ ಇನ್ನ ಬರೋಬರಿ ರೀತಿಯಿಂದ ಅಮಲಿನಲ್ಲಿ ತಂದಂತೆ ತೋರಲಿಲ್ಲಾ. ಕಾರಣಾ ಪುನಃ ಈ ಹುಕುಂ ಕೊಟ್ಟಿರುತ್ತದೆ

ಶಾಲೆಯಲ್ಲಿ ಹುಡುಗರು ಸ್ಲೇಟ ಪಾಟಿ ಉಪಯೋಗ ಮಾಡಬೇಕು. ಧೂಳಿನ ಹಲಗಿಯು ಉಪಯೋಗ ಬಿಲಕೂಲ ಮಾಡಬಾರದು ಪುಸ್ತಿ ಬುಕ್ಕ ದರ ಬುಕ್ಕಿನ ಒಳಯಲ್ಲಿ ಇರಬೇಕು ಮತ್ತು ಲಕ್ಷ ಅಂಕಿ ಸಂಖ್ಯಾ ಮುಂತಾದವು ಕನ್ನಡಿಸಲ್ಲಿ ಬರೆಸುತ್ತಿರಬೇಕು ಇದಕ್ಕೆ ತಪ್ಪಿದರೆ ದಂಡ ಮಾಡಲಾದೀತು ತಿಳಿಯುವದು.

ತಾ. ೮ ಜನೇವಾರಿ } Ramchender A. Sawanoor.
ಸನ್ ೧೮೭೯ ಇಸ್ವಿ } ಡಿ. ಎ. ಇ. ಜಿಲ್ಲಾ ಕಲಾದಗಿ.

CORRESPONDENCE.

ಪತ್ರವ್ಯವಹಾರವು.

ರಾ. ರಾ. ಕನ್ನಡ ಶಾಲಾಪತ್ರಿಕೆಯ ಯಡಿಟರರಿಗೆ—

ವಿ. ವಿ. ತಮ್ಮ ಕರಕಮಲದಲ್ಲಿ ಉದ್ಭವಿಸುವ, ಪತ್ರಿಕೆಯಲ್ಲಿ ಈ ನಾಲ್ಕು ಪಂಕ್ತಿಗಳಿಗೆ ಸ್ಥಳ ದೊರಿಯುವದೆಂದು ಕೋರುತ್ತೇನೆ.

ಕವಿತೆಯು.

ಅಖಿಲಸಹರವ ಮಾಡಿಕೊಂಡನ|
ತನಯುಳರಸನ ಚಿತ್ರನತ್ರಂಸೆಂಯು|
ಜನಕನಪ್ಪನ ಪಕ್ಷದನುಜೆಯು| ಮಗಸಪ್ಪೈದುಸನು||
ಜನಕನಣುಗಿಯು ಕಾಯೆಯನುಜನು|
ಘನಪರಾಕ್ರಮದಿಂದ ಕೊಂದನು|
ಜನನಿಸಾದಿನಿಸೋಸಿಯೆಮಾಲಿಸುಲಕ್ಷ್ಮಿಕ್ರನೀಯುಂನಾ||೧||
ಗಿರಿಜೆಯರಸನ ಕಾದಿಮೆಚಿ ಸು|

ಶರವಪಥದನ ಮುಕ್ತಿಯನಿತ್ತ।
ಸರಸಿಯುಯ್ಯನ ಸುತನವೋಂಮಗ ಮಗನಹೆಂಮಗನ॥
ಅರಸಿಯುಳಗಳು ಖದನವಾಘಸಿದ।
ಸರಸಿಜಾಂಬಕ ರಾಮಚಂದ್ರನ।
ಚರಣಸೇವಕ ಹರಿಕುಮಾರಕಹನುಮಸಲಹೆಂನಾ॥೨॥
ಕರಿಮುಖಾನು ಜನರಿಯುಮಕ್ಕಳ।
ಪ್ರರವಕೆಡಹಿದನತ್ರಿಯಾತ್ಮಜ।
ನರಸನ್ನುಗ ಭಾವನವ್ಯಯುಸನುಜನು ಸಿರದೀ॥
ಧರಸಿದಾತನ ರಮಣಿಮಹಿಷಾ।
ಸುರನಮರ್ದಿಸಿಪರಮಕೃಪೆಯಲಿ।
ಕರುಣಿಸೆಂಸನು ಗಿರಿಜೆವೈಷ್ಣವಿ ಪಾರ್ವತಾದೇವಿ ॥೩॥

ಈ ಕವಿತೆಗಳಲ್ಲಿರುವ ಹೆಸರುಗಳು, ನನ್ನ ಅಲ್ಪ ಬುದ್ಧಿಗೆ ಸೂಚಿಸದೆ ಇರುವ ಕಾರಣ ವಿದ್ವಜ್ಜನರು ಇವುಗಳಲ್ಲಿರುವ ಹೆಸರುಗಳಿಗನುಸರಿಸಿ ಕವಿತಾರ್ಥಗಳನ್ನು ಬರೆದು ನನ್ನಲ್ಲಿರುವ ಅಜ್ಞಾನವನ್ನು ಕಿತ್ತುಬಿಡುವರೆಂದು ಬೇಡಿಕೊಳ್ಳುತ್ತೇನೆ.

ತಾರೀಖು ೩೧ನೇ ದಿಶಂಬರ
ಸನ್ ೧೮೭೫ ನೇ ಇಸ್ವಿ.
ಮುಕ್ಕಾಮು ಐರಣಿ ತಾ. ರಾ
ಣೆಬೆದನ್ನೂರಜಿಲ್ಲಾ ಧಾರವಾಡ

ರಾಮಚಂದ್ರ, ಸರಸೋ
ಹೆಡ್ಡಮಾಸ್ತರ ಐರಣಿ.

ಮ. ರಾ. ರಾ. ರಾವಸಾಹೇಬ ಕನ್ನಡ ಮಾಸಪತ್ರಕರ್ತರವರ ಚರಣಸಂನಿಧಿಗೆ—

ವಿನಂತಿ ವಿಜ್ಞಾಪನಂಗಳು ಸನ್ನ ೧೮೭೫ ಇ. ನವಂಬರ ತಾ

ಗಳ ಶಾಲಾಪತ್ರಿಕದ ಸಂಚಿಕೆ (V) ಪುಟ (೧೯೨) ನೇದರಲ್ಲಿ ಇಂಡಿ ತಾಲೂಕ ಪೈಕಿ ಅಂಜೋಟಗಿ ಸಾಲಿಯ ಮಾಸ್ತರ ಬಾಬಾಜಿ ರಾಮಚಂದ್ರ ಕಣ್ಕಾಲ್ ಇವರು ಕೊಟ್ಟ ಕನ್ನಡ ಪದದ ಭಾವವನ್ನು ನನ್ನ ಕೈಲಾದ ಮಟ್ಟಿಗೆ ಶೋಧ ಮಾಡಿ ಪ್ರಸಿದ್ಧಿಸಿದ್ಧೇನೆ. ಇದನ್ನು ದಯಮಾಡಿ ತಮ್ಮ ಸುಂದರ ಪತ್ರಿಕದಲ್ಲಿ ನಾಲ್ಕು ಸಾಲು ತೆಗೆಸುಕೊಂಡು ಅಚ್ಚು ಹಾಕಿ ಪ್ರಸಿದ್ಧ ಮಾಡಬೇಕೆಂದು ಅಪೇಕ್ಷಿಸುತ್ತೇನೆ.

ಪದದ ಪ್ರಶ್ನೋತ್ತರವು.

ಪ್ರಶ್ನೆ—ವೈರಿಸುತನಾದವರ್ಯಾರು?

ಉಂ.—ವೈರಿಯಾದ ವೇನರಾಜನಿಗೆ ಪುತ್ರನಾದ ಪೃಥುರೂಪಿಯಾದ ಹರಿಯು.

ಪ್ರಶ್ನೆ— ವೈರಿಗೆ ಪಿತನಾದವರ್ಯಾರು?

ಉಂ.—ವೈರಿಯಾದ ನರಕಾಸುರನಿಗೆ ಪಿತನಾದ ವರಹಾರೂಪಿಯಾದ ಹರಿಯು.

ಪ್ರಂ—ವೈರಿಸುತಗೆ ತನ್ನ ಮಗಳನ್ನು ಕೊಟ್ಟವರ್ಯಾರು?

ಉಂ.—ವೈರಿ ಸುತನಾದ ಶಂತನು ರಾಜನಿಗೆ ಮಗಳನ್ನು ಕೊಟ್ಟಾ ವಿಷ್ಣುರೂಪಿಯಾದ ಹರಿಯು.

ಪ್ರಂ.- ಮಗನಿಗೆ ಸುತನಾದವರ್ಯಾರು?

ಉಂ— ಮಗನಾದ ಬ್ರಹ್ಮದೇವರಲ್ಲಿ ಅವತಾರ ಮಾಡಿದ ವರಹಾ ರೂಪಿಯಾದ ಹರಿಯು.

ಪ್ರಂ—ಮಗನಿಗೆ ಪಿತನಾದವರ್ಯಾರು?

ಉಂ— ಮಗನಾದ ಬ್ರಹ್ಮದೇವರಿಗೆ ಪಿತನಾದ ಹರಿಯು.

ಪ್ರಂ—ಮಗಳ ಗಂಡಗೆ ಭಾವಮೈದುನನಾದವರ್ಯಾರು?

ಉ:—ಮಗಳಾದ ಭಾಗಿರಥಿಗೆ ಪತಿಯಾದಂಥಾ ಶಿವನಿಗೆ ಭಾವ ಮೈದುನನಾದ ಹರಿಯು.

ಈ ಪ್ರಕಾರವಾಗಿ ನನ್ನ ಅಲ್ಪ ಬುದ್ಧಿಗೆ ತಿಳಿದಷ್ಟು ಶೋಧನೇಯಿಂದ ಪ್ರಸಿದ್ಧಿಸಿದ್ಧೇನೆ. ಇವನ್ನು ಕೊಟ್ಟವರು ನೋಡಿ ಸಮರ್ಪಕ ಆದೇಯೋ ಅಥವಾ ಹ್ಯಾಗದೇ? ಎಂಬುವದರ ಬಗ್ಗೆ ತಿಳಿಸಿ ನನ್ನ ಸಂಶಯವನ್ನು ಇದೇ ಪತ್ರದ್ವಾರದಿಂದ ದೂರ ಮಾಡುವಿರೆಂಬ ಕಾಂಕ್ಷೆಯನ್ನು ಧರಿಸಿದ್ದೇನೆ. ಇಂತಿ ವಿಜ್ಞಾಪನೆಗಳು.

ಮುಕ್ಕಾಂ ಬಂಕಾಪೂರ ತಾರೀಖು ೧೯ । ೧ । ೨೬ । ಇಸ್ವಿ.	ವಿಷ್ಣು ಶಂಕರ ಜೋರೆ ಗೋಕಾವಿ ಸ್ಕೂಲ ಹೆಡ್ಡ ಮಾಸ್ತರ ಶಾಖಾ ಬಂಕಾಪೂರ.

ಪತ್ರ ಕಳಿಸುವವರಿಗೆ ಸೂಚನೆ.

೧ ಹಿರೇ ಹೊನ್ನಿಹಳ್ಳಿ — ನಿಮ್ಮ ಪತ್ರ ಬಂದು ಮುಟ್ಟಿತು. ಆದರೆ ಛಾಪಿಸಲಿಕ್ಕೆ ಯೋಗ್ಯವಿಲ್ಲ.

೨ ಮುಳಗುಂದ ಸಾಲೆಯ ೬ನೇ ಇಯತ್ತೆಯ ವಿದ್ಯಾರ್ಥಿ— ನಿಮ್ಮ ಪತ್ರ ಬಂದು ತಲುಪಿತು ಆದರೆ ಅತಿ ಮಹತ್ವದ್ದಲ್ಲದ ಕಾರಣ ಛಾಪಿಸಲಿಲ್ಲ.

ಶಾಲಾಪತ್ರಕವು.

ಪುಸ್ತಕ ೧೧] [ಸಂಚಿಕೆ ೧೧

ತಾರೀಖು ೨೫ನೇ ಮಾಹೆ ಫೆಬ್ರುವಾರೀ ೧೮೭೬.

EDUCATIONAL INTELLIGENCE.

ವಿದ್ಯಾಸುಧಾರಣಾ ಸಂಬಂಧವಾದ ವೃತ್ತಾಂತಗಳು.

ಟ್ರೇನಿಂಗ ಕಾಲೇಜದಲ್ಲಿ ಸರಟೀಫಿಕೇಟಗಳನ್ನು ಕೊಟ್ಟ ಸಮಾರಂಭವು.

ಈ ತಿಂಗಳ ೨೨ನೇ ತಾರೀಖಿನ ದಿವಸ ಸಂಜೇ ೪ ಘಂಟೆಗೆ ಟ್ರೇನಿಂಗ ಕಾಲೇಜದಲ್ಲಿ ಸರಟೀಫಿಕೇಟ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಸರಟೀಫಿಕೇಟಗಳನ್ನು ಕೊಡುವ ಸಮಾರಂಭವು ನಡೆಯಿತು. ಆಗ್ಗೆ ಮೆಹೆರಬಾನ ಕಾಡೋರ್ಸಾಹೇಬ ಬಹಾದ್ದೂರ ಧಾರವಾಡ ಡಿ. ಜಡಜ ಇವರು ಅಧ್ಯಕ್ಷರಾಗಿದ್ದು ವಿದ್ಯಾ, ನ್ಯಾಯ, ಪೋಲೀಸ, ಮುಲಕೀ ಮೊದಲಾದ ಖಾತೆಗಳೊಳಗಿನ ಹಲವು ದೊಡ್ಡ ಗೃಹಸ್ಥರು ಕೂಡಿದ್ದರು. ರಾ. ರಾ. ಅಣ್ಣಾರಾವ ಸವದಿ, ಹ್ವಾಯಿಸ್ ಪ್ರಿನ್ಸಿಪಾಲ, ಇವರು ಕಾಲೇಜದ ಸಂಬಂಧದಿಂದ ರಿಪೋರ್ಟು ಓದಿದ ನಂತರ ಕೆಲವು ವಿದ್ಯಾರ್ಥಿಗ

ಳ ಕಡೆಯಿಂದ ಸಂಸ್ಕೃತ, ಕನ್ನಡ, ಮರಾಠೀ, ಹಿಂದುಸ್ಥಾನೀ ಮೊದಲಾದ ಕವಿತೆಗಳನ್ನೂ, ನಾಟಕಗಳೊಳಗಿನ ಭಾಷಣಗಳನ್ನೂ ಅನಿಸಿದರು. ಆ ಮೇಲೆ ಮೊಹಬೂಬನ ಅಧ್ಯಕ್ಷರು ಎಲ್ಲ ವಿದ್ಯಾರ್ಥಿಗಳಿಗೆ, ತಕ್ಕ ನಾಲ್ಕು ಉಪದೇಶಪರ ಮಾತುಗಳನ್ನು ಹೇಳಿದ ನಂತರ, ಸರಟೀಫಿಕೇಟುಗಳನ್ನೂ, ಪ್ರಾಕ್ಟಿಂಗ ಸ್ಕೂಲಿನವರಿಗೆ ಪುಸ್ತಕಗಳನ್ನೂ ಕೊಟ್ಟರು. ಸುಮಾರು ೫—೪೫ ಘಂಟೆಗೆ ಈ ಸಮಾರಂಭವು ಮುಗಿಯಿತು.

ಮಿ. ಯೆಜ್ಯುಕೇಶನಲ್ ಇನಸ್ಪೇಕ್ಟರ ಸಾಹೇಬ ಬಹಾದ್ದೂರ ದಕ್ಷಿಣಭಾಗ ಇವರು ಈ ತಿಂಗಳ ಆರಂಭದಲ್ಲಿ ಧಾರವಾಡಕ್ಕೆ ಬಂದು ಇಂಗ್ಲಿಶ ಸ್ಕೂಲ್, ಮಿಶನ್ ಸ್ಕೂಲ್ ಗಳ ಪರೀಕ್ಷೆಗಳನ್ನು ತಕ್ಕೊಂಡು ಹುಬ್ಬಳ್ಳಿಗೆ ಹೋದರು. ಅಲ್ಲಿಯು ಇಂಗ್ಲಿಷ ಸ್ಕೂಲ್, ಮಿಶನ್ ಸ್ಕೂಲಗಳ ಪರೀಕ್ಷೆಯನ್ನು ತಕ್ಕೊಂಡರು. ಅಲ್ಲಿಂದ ಗದಗಿಗೆ ಹೋಗಿ ಅಲ್ಲಿಯು ಇಂಗ್ಲಿಶ್ ಸ್ಕೂಲ ಪರೀಕ್ಷೆಯನ್ನು ತಕ್ಕೊಂಡು ಕಾರವಾಡದ ಕಡಿಗೆ ಹೋಗತಕ್ಕವರಿದ್ಧಾರೆಂದು ಕೇಳುತ್ತೇವೆ.

ನಾವು ಹಿಂದೆ ಬರೆದ ಪ್ರಕಾರ ಕೆಳಗೆ ಬರದಂತೆ ವರ್ಗಾವರ್ಗಿಗಳು ಆಗಿರುತ್ತವೆ. ರಾ. ರಾ. ಪ್ರಭಾಕರ ಸುಭಾನಜೆ ವಿಜ್ಯಾಪೂರ ಅ. ಮಾಸ್ತರ ಟ್ರೇನಿಂಗ ಕಾಲೇಜ ಧಾರವಾಡ ಇವರನ್ನು ಹಾವೇರಿ ಶಾಲೆಯು ಹೆಡ್‌ಮಾಸ್ತರ ಲಸಕ್ಕೆ ನೇಮಿಸಿದಂತೆ ಅವರು ಹೊರಟು ಹೋದರು.

ತರ ಜಾಗಾಕ್ಕೆ ರಾ. ರಾ. ನಾನಾಪದಾತಾರ ಅವರ ನೇಮಣೂಕ ಆದಂತೆ ಅವರು ಬಂದು ಹಜರಾದರು.

ರಶಿಯಾ ದೇಶದ ರಾಜಧಾನಿಯಾದ ಸೆಂಟ ಪೀಟರ್ಸಬರ್ಗ ಪಟ್ಟಣದಲ್ಲಿ ಬೋಥಲಿಂಗ, ರೊಥ ಹೆಸರಿನ ಇಬ್ಬರು ಪಂಡಿತರು ಸಂಸ್ಕೃತ ಭಾಷೆಯದೊಂದು ಪ್ರಚಂಡ ಕೋಶವನ್ನು ಸಂಗ್ರಹಿಸಿರುತ್ತಾರೆ. ಈ ಕೋಶಕ್ಕೆ ಮೂಳ ಪ್ರಾರಂಭ ೧೮೫೫ ರಲ್ಲಿ ಆಗಿ ಅದನ್ನು ಅವರು ಅಖಂಡಪರಿಶ್ರಮದಿಂದ ೧೮೭೫ ರಲ್ಲಿ ಮುಗಿಸಿದರು. ಈ ಕೋಶದಲ್ಲಿ ಏಳು ಭಾಗಗಳನ್ನು ಮಾಡಿ ಛಾಪಿಸಿರುತ್ತಾರೆ. ಈ ಕೋಶದಲ್ಲಿ ಯಾವತ್ತು ಉಪಲಬ್ಧ ಸಂಸ್ಕೃತ ಶಬ್ದಗಳು ಶೇರಿದ್ದು, ಅವುಗಳ ಬೇರೆ ಬೇರೆ ಅರ್ಥಗಳಂನು ಉದಾಹರಣ ಸಹಿತ ಕೊಟ್ಟಿರುತ್ತಾರೆ.

ಮಹಾರಾಣಿ ಸರಕಾರದವರ ಮಾಜೀಮಂತ್ರಿ ಮಂಡಲದಲ್ಲಿ ಹಿಂದುಸ್ಥಾನ ದೇಶದ ಕಾರ್ಯಭಾರದ ದುಯ್ಯಮ ಚಿಟಣೀಸರಾದ ಗ್ರಾಂಟ ಡಫ್ ಸಾಹೇಬರು ಕಳೆದ ವರ್ಷದ ಕೊನೆಕೊನೆಯಲ್ಲಿ ನಮ್ಮ ದೇಶವನ್ನು ನೋಡಲಿಕ್ಕೆಂದು ಬಂದು ಹೋದರು. ಅವರು ಇತ್ತಕಡಿಗೆ ನಮ್ಮ ದೇಶದ ವಿದ್ಯಾ ಸಂಬಂಧದಿಂದ ಇರುವ ಸ್ಥಿತಿಯಬಗ್ಗೆ ಕೊಟ್ಟ ಅಭಿಪ್ರಾಯವನ್ನು ನಮ್ಮ ಪ್ರಿಯವಾಚಕರಸಲುವಾಗಿ ಮುಂದೆ ಕೊಟ್ಟಿರುತ್ತೇವೆ. ,, ಹಿಂದುಸ್ಥಾನದಲ್ಲಿ ಸಾರ್ವಜನಿಕ ವಿದ್ಯಾಭ್ಯಾಸದಸಲುವಾಗಿ ಕೆಲವು ಕ್ರಮ ಪ್ರಾರಂಭವಾಗಿರುತ್ತದೆ. ಆದರೆ ಹಿಂದುಸ್ಥಾನದ ವರ್ತಮಾನ ಸ್ಥಿತಿಯು

ಲ್ಲಿ ಗದ್ಯ ಪದ್ಯ ಕಾವ್ಯ ಅಲಂಕಾರ ಇತಿಹಾಸ ಭೂಗೋಲ ಖಗೋಲ ಮೊದಲಾದ ವಿದ್ಯೆಗಳ ಭಾಗಕ್ಕಿಂತ ಶಾಸ್ತ್ರೀಯ ವಿಷಯಗಳ ಜ್ಞಾನ ಜನರಿಗೆ ಉಂಟು ಮಾಡಿ ಕೊಡುವದರ ಕಡಿಗೆ ವಿಶೇಷ ಲಕ್ಷ ಕೊಡಲಿಕ್ಕೆ ಬೇಕು. ಬರೇ ಸರಕಾರದಲ್ಲಿ ಕೆಲಸ ದೊರಿಯಬೇಕೆಂತಾಗಲೀ ಶಾಲೆಗಳಲ್ಲಿ ಶಿಕ್ಷಕರಾಗಬೇಕೆಂತಾಗಲೀ ವರ್ತಮಾನ ಪತ್ರಗಳಿಗೆ ವಿಷಯ ಬರೆದು ಕೊಟ್ಟು ನಿರ್ವಾಹ ಮಾಡಬೇಕೆಂತಾಗಲೀ ಇಚ್ಛೆಯಿಂದಲೇ ಜನರಿಗೆ ವಿದ್ಯೆ ಕಲಿಸುವದು ಒಳ್ಳೇದಲ್ಲ. ತಮ್ಮ ದೇಶದಲ್ಲಿ ಪರಮೇಶ್ವರನ ದಯೆಯಿಂದ ಉಂಟಾದಂಥ ಅನೇಕ ಉಪಯುಕ್ತ ಪದಾರ್ಥಗಳನ್ನು „ಅಲ್ಲೀ ಶಿಕ್ಷಣಪದ್ಧತಿ ತಿದ್ದಿ” ಜನರ ಉಪಯೋಗಕ್ಕೆ ಬೀಳುವಂತೆ ಮಾಡಿ ದೇಶದ ಸಂಪತ್ತು ಹೆಚ್ಚು ಮಾಡುವ ಪ್ರಕಾರ ಅವರಿಗೆ ತಿಳಿಯಲಿಕ್ಕೆ ಬೇಕು. ಕಾಲೇಜ ಮುಂತಾದ ಸ್ಥಳಗಳಲ್ಲಿ ಶಾಸ್ತ್ರೀಯ ಕಲಾಕೌಶಲ್ಯಾತ್ಮಕ ವಿದ್ಯೆಯು ಪ್ರಘಾತ ವಿಶೇಷ ಕೆಡವಬೇಕು. ಹಾಗು ಜನರಿಗೆ ಸಾಧಾರಣ ಓದು ಬರಹ ಕಲಿಸುವದರ ಪ್ರಸಾರ ಆದಷ್ಟು ಮಾಡಬೇಕು.

ಶುದ್ಧ ಬರೆಯಲಿಕ್ಕೆ ಕಲಿಸುವ ವಿಷಯದಲ್ಲಿ ಇಂಗ್ಲಂಡ ದೇಶದಲ್ಲಿ ಒಬ್ಬ ಪ್ರಖ್ಯಾತ ಶಾಲಾಗುರುವು ಮಾಡಿ [illegible] ಗಳನ್ನು ನಮ್ಮ ದೇಶದಲ್ಲಿಯು ಸ್ಕೂ [illegible] ಕ್ಕಾಗಿಯೂ ಉಪಯೋಗಕ್ಕೆ [illegible] ತ್ತೇವೆ. ಆತನು ಅನ್ನುತ್ತಾನಲ್ಲ „ಹುಡುಗರಿ” ಶುದ್ಧ ಬರಿಯಲಿಕ್ಕೆ ಹೇಳುವದರಲ್ಲಿ ನಮ್ಮ ಮುಖ್ಯ ಉದ್ದೇಶವೇನಂದರೆ ಭಾಷೆಯೊಳಗಣ ಕ

ಬ್ದಗಳ ರೂಪಗಳು ಶುದ್ಧವಾಗಿ ಬರಿಯಲಿಕ್ಕೆ ಅವರಿಗೆ ಬರಬೇಕು. ಸಾಧಾರಣ ಏಳು ಎಂಟು ವರ್ಷದ ವಯಸ್ಸಿನ ಹುಡುಗರಿಗೆ ಶುದ್ಧ ಬರಿಯಲಿಕ್ಕೆ ಹೇಳುವ ಭಾಗದೊಳಗಿನ —೪— ಶಬ್ದಗಳು ಮೇಲೆ ಮೇಲೆ ಬರೆಯುವದರಿಂದ ಚನ್ನಾಗಿ ಗೊತ್ತಿರುತ್ತವೆ. ಆದದರಿಂದ ಅವನ್ನೆ ಹೊತ್ತಿಗೊಮ್ಮೆ ತಿರು ತಿರಿಗಿ ತಿರಿ ತಿರಿಗಿ ಬರೆಯ ಹೇಳುವದರಲ್ಲಿಯೂ, ಬರೆದ ಬಳಿಕ ತಪಾಸ ಮಾಡುವದರಲ್ಲಿಯೂ, ಕಳೆದ ವೇಳೆ ಸುಮ್ಮನೇ ಹೋಯಿತೆಂದು ತಿಳಿಯಲಿಕ್ಕೆ ಬೇಕು. ಹೀಗಿರುವದರಿಂದ ನಾನು ಸ್ವಲ್ಪ ವೇಳೆಯಲ್ಲಿ ಇದಕ್ಕೂ ವಿಶೇಷ ಉಪಯೋಗ ಆಗುವಂಥ ಒಂದು ಪ್ರಕಾರ ಹುಡುಕಿ ತೆಗೆದಿರುತ್ತೇನೆ. ಅದು ಹ್ಯಾಗೆಂದರೆ: ಮಾಸ್ತರನು, ಯಾವ ಪುಸ್ತಕದೊಳಗಿಂದ ಶುದ್ಧ ಬರಿಯಲಿಕ್ಕೆ ಹೇಳಬೇಕೆಂದು ತನ್ನ ಉದ್ದೇಶವಿರುತ್ತದೆಯೋ ಆ ಪುಸ್ತಕವನ್ನು ತಕ್ಕೊಂಡು, ಮೊದಲೊಮ್ಮೆ ಹುಡುಗರಿಗೆ ಓದಿ ತೋರಿಸಬೇಕು. ಒಂದೊಂದು ವಾಕ್ಯ ಮುಗಿದ ಕೂಡಲೆ ಅಲ್ಲಿ ನಿಂತು, ತಾನು ಬರೆದ ವಾಕ್ಯದೊಳಗಿನ ಅಂಥ ಶಬ್ದವನ್ನಾಗಲೀ, ಶಬ್ದಗಳನ್ನಾಗಲೀ, ಶುದ್ಧವಾಗಿ ಬರೆ ಎಂದು ಹೇಳಬೇಕು. ಈ ಪ್ರಕಾರಾ ಅವನು ಆರಿಸಿ ಹೇಳಿದ ಶಬ್ದಗಳನ್ನು ಪಂಕ್ತಿಹಿಡಿದು ಹುಡುಗರಿಂದ ಬರೆಸಿದ ಬಳಿಕ ಅವುಗಳನ್ನು ಅಶುದ್ಧ ಇದ್ದಲ್ಲಿ ತಿದ್ದಬೇಕು. ಅಂದರೆ ಕೆಲಸವು ನೆಟ್ಟಗಾಗುವದು. ಹೊತ್ತು ವಿಶೇಷ ಹೋಗುವದಿಲ್ಲ.

ಸರಕಾರೀ ಠರಾವುಗಳು.

೧ ಇಷ್ಟು ದಿವಸಗಳ ವರಿಗೆ ಸರಕಾರದೊಳಗಿನ ಉ
ಯೋಗವಿಲ್ಲದ ಹಳೇ ಕಾಗದ ಪತ್ರಗಳನ್ನು ಹರಿದು ಚ
ರ ಚೂರ ಮಾಡಿ ತೊಯಿಸಿ ವ್ಯಾಪಾರದವರಿಗೆ ಮಾರು
ದ್ದರು. ಆದರೆ ಕಾಗದ ತೊಯಿಸದೆ ಹರಿದು ಚೂರ ಚ
ರ ಮಾಡಿ ಮಾರಿದ್ದರಿಂದ ಹೆಚ್ಚಿಗೆ ಕ್ರಯ ಬರುತ್ತದೆಂ
ನೋಡಿ, ಇನ್ನು ಮುಂದೆ ಅಂಥ ಕಾಗದಗಳನ್ನು ತೊ
ಸದೆ, ಬರೇ ಚೂರು ಮಾಡಿ ಮಾರಬೇಕು. ಪ್ರತ್ಯೇ
ಕಚೇರಿಯ ಮುಖ್ಯಸ್ಥನು ಆ ಕಾಗದಗಳು ತಿರಿಗಿ ಉ
ಯೋಗಕ್ಕೆ ಬೀಳದಂತೆ ಚೂರ ಮಾಡಿ ಮಾರುವ ಬಗ್ಗೆ
ಬಾಬುದಾರನೆಂದು, ತಿಳಿಯಬಾದೀತೆಂದು ಸರಕಾರದವರು
ರಾವ ಮಾಡಿರುತ್ತಾರೆ.

---

೨ ಮೆ. ರೆವಿನ್ಯು ಕಮಿಶ್ನರ ಸಾಹೇಬ ಬಹಾದ್ದೂರವ
ಮುಂಬಯಿ ಇಲಾಖೆಯೊಳಗಿನ ಯೆಲ್ಲ ಜಿಲ್ಹೆಗಳಲ್ಲಿ ಒ
ದೇ ತಾರೀಖಿಗೆ ಮುಲಕೀ ಪರೀಕ್ಷೆ ಆಗಬೇಕೆಂತಲೂ
ಹಾಗಾದರೆ ಸರಕಾರೀ ಸೆಂಟ್ರಲ ಪ್ರೇಸದವರಿಗೆ ಪರೀಕ್ಷೆ
ಯ ಕಾಗದಗಳನ್ನು ಕಳುಹಿಸುವದಕ್ಕೆ ಬಹಳ ಸೋಯಿ
ಗುತ್ತದೆಂತಲೂ, ಸರಕಾರಕ್ಕೆ ಬರೆದು ತಿಳಿಸಿದ್ದರು.
ದರೆ ಸರಕಾರದವರು ಅದನ್ನು ಪಸಂದ ಮಾಡದೆ ಮೆ. ಡಾ
ಯಿರೆಕ್ಟರ ಆಫ್ ಪಬ್ಲಿಕ್ ಇನ್ಸ್ತ್ರಕ್ಶನ್ ಇವರು ಮಾ
ಡಿದ ಈಗಿನ ವ್ಯವಸ್ಥೆಯು ಸರಿಯಾಗಿರುತ್ತದೆಂತಲೂ, ಸೆಂ
ಟ್ರಲ್ ಪ್ರೇಸಿನವರು ಈಗ ನಡಿಸಿದಂತೆ ಮುಂದಾದರೂ ಪ
ರೀಕ್ಷೆಯ ಕಾಗದಗಳನ್ನು ಕಳಿಸುತ್ತಾ ಹೋಗಬೇಕೆಂತ

ಲೂ ಠರಾವ ಮಾಡಿರುತ್ತಾರೆ.

ಶಿ ಮೆ. ಡಾಯಿರೆಕ್ಟರ ಸಾಹೇಬ ಬಹಾದ್ದೂರವರ ಕಡಿಂದ ಸನ್ ೧೮೭೩—೭೪ ಇಸವಿಯ ರಿಪ್ಪೋರ್ಟು ಸಾಮದಾರ ಗವರನರ ಇನಕೌನ್ಸಿಲ್ಲಿನವರ ಮುಖದಿಂದ ಸ್ಟೇಟಸಾಮದಾರ ಸ್ಟೇಟ ಸೇಕ್ರೇಟರಿ ಇವರ ಕಡಿಗೆ ಹೋಗಿತ್ತು. ಅದನ್ನು ನೋಡಿ ಸಾಮದಾರ ಸಾಹೇಬರು ಬಹಳಸಂತ್ರೋಷ ಪಟ್ಟರು: ದಿನ ದಿನಕ್ಕೆ ಸಣ್ಣ ದೊಡ್ಡ ಶಾಲೆಗಳಲ್ಲಿಯೂ, ಕಾಲೇಜಳಲ್ಲಿಯೂ, ವಿದ್ಯಾವೃದ್ಧಿಯು ಬಹಳ ಚನ್ನಾಗಿ ನಡೆದದ್ದನ್ನೂ ವಿದ್ಯಾವೃಧಿಯ ಬಗ್ಗೆ ಮೆ. ಡಾಯಿರೆಕ್ಟರ ಸಾಹೇಬ ಬಹಾದೂರವರು ಇಟ್ಟ ವ್ಯವಸ್ಥೆಯನ್ನು ನೋಡಿ, ಬಹಳ ಸಮಾಧಾನ ಪಟ್ಟದ್ದರ ಬಗ್ಗೆ ಸರಕಾರ ಠರಾವು ಮಾಡಿ ಜಾಹೀರ ಮಾಡಿರುತ್ತಾರೆ.

DEPARTMENTAL NOTICES.

ಖಾತೇ ಸಂಬಂಧದ ಪ್ರಕಟನೆಗಳು.

* * *

ಸರಕ್ಯೂಲರ.

ಮೆ. ಇನಸ್ಪೆಕ್ಟರ ದಕ್ಷಿಣಭಾಗ ಇವರ ಕಚೇರಿಯಿಂದ ಮುಕ್ಕಾಮ ಬೆಳಗಾವ ೧೮ ಜಾನೇವಾರಿ ಸನ್ ೧೮೭೪ ಇಸವಿ.

ಇನ್ನು ಮುಂದೆ ನಮ್ಮ ಸ್ವಾರೀ ಮುಕ್ಕಾಮಕ್ಕೇ ಪರಭಾರೆ ಕಳಸಬೇಕೆಂದು ನಮ್ಮ ಕಡೆಯಿಂದ ವಿಶೇಷ ಸಾ

ಚನೆ ಆಗದ ಹೊರ್ತು ನಮ್ಮ ಕಡಿಗೆ ಕಳಸತಕ್ಕ ಯಾ
ತ್ತು ಸರಕಾರೀ ಪತ್ರವ್ಯವಹಾರವನ್ನು ಬೆಳಗಾವಿಗೇ ಕಳ
ಸುತ್ತ ಹೋಗಬೇಕು.

(Signed) W. A. Russell.
ಡೆ. ಇನಸ್ಪೆಕ್ಟರ, ದಕ್ಷಿಣಭಾಗ.

---

೧ ಕನ್ನಡ ಶಾಲಾಪತ್ರಿಕೆಯು, ಈಗಿರುವ ವ್ಯವಸ್ಥೆಯಲ್ಲಿ ಓದುವದಕ್ಕೆ ಯೋಗ್ಯವೂ, ಮನೋವೇಧಕವೂ ಆಗ
ವವೆಂಬ ಆಶೆಯಿಂದಲೂ, ಈ ಪ್ರಾಂತದಲ್ಲಿ ಇದೊಂದೇ
ನ್ನಡ ಸಮಾಚಾರ ಪತ್ರವಿರುವವರಿಂದಲೂ, ವಿದ್ಯಾಖಾತೆಯ ಸಂಬಂಧದಿಂದ ವರ್ತಮಾನಗಳನ್ನು ಪ್ರಸಿದ್ಧ ಪಡಿಸುವದಕ್ಕೆ ಇದೊಂದೇ ಸಾಧನವಾಗಿರುವದರಿಂದಲೂ, ಮುಂದೆ ಹಾ
ನಡಿಸತಕ್ಕವರಿದ್ದೇವೆ.

೨ ಈ ಪುಸ್ತಕದ ರಚನೆಯ ಬಗ್ಗೆಯೂ ಕ್ರಯದ
ಗ್ಗೆಯೂ ಮುಂಬಯಿ ಯೆಜ್ಯುಕೇಶನಲ್ ರಿಕಾರ್ಡ ಯೆ
ಬ ಮಾಸಿಕ ಪುಸ್ತಕದಂತೆ ವ್ಯವಸ್ಥೆ ಮಾಡಿರುತ್ತೇವೆ.
ಶಾಲಾಪತ್ರಕದ ಕರ್ತರಾದ ರಾವಸಾಹೇಬ ಪಾಂಡುರಂಗ ವೆ
ಕಟೇಶ ಚಿಂತಾಮಣಿ ಪೇಟಕರ, ವಿದ್ಯಾಖಾತೆಯು ಆಗಟಿ
ಗ ಕನ್ನಡ ತ್ರಾನ್ಸಲೇಟರ, ಇವರು ಇಂಥಿಂಥಾ ವಿಷಯ
ಳ ಮೇಲೆ ಬರಿದು ಕಳುಹಿರೆಂದು ವೇಳೆ ವೇಳೆಕ್ಕೆ ಸಾ
ಲಮಾಸ್ತರ ಜನರಿಗೆ ಸೂಚನೆ ಕೊಡುವರು. ಅದರಂತೆ
ಯಾ ವಿಷಯಗಳ ಮೇಲೆ ಚನ್ನಾಗಿ ಪತ್ರಗಳನ್ನು ಬರಿ
ಕಳುಹುವಂಥ ಮಾಸ್ತರ ಜನರ ವಿಷಯಕ್ಕೆ ನಾವು ಒಳ್ಳೆ
ರೀತಿಯಿಂದ ಲಕ್ಷದಲ್ಲಿ ಇಡುವೆವು.

೩ ಒಂದು ಪ್ರತಿಗೆ ವರ್ಷವೊಂದಕ್ಕೆ ೧—೮ ,, ಒಂದು ರೂಪಾಯಿ ಎಂಟು ಅಣೆ” ಬೀಳುವದು; ಈ ಕಿಮ್ಮತ್ತು ಮುಂಗಡ ಪ್ರತಿವೊಂದು ಶಾಲೆಯು ಸಾದಿಲವಾರ ನೇಮಣೂಕದೊಳಗಿಂದ ಕೊಡಲಿಕ್ಕೇ ಬೇಕು. ಈ ಬಗ್ಗೆ ಡಿ. ಇನಸ್ಪೆಕ್ಟರರು ಕನ್ನಡ ತ್ರಾನ್ಸಲೇಟರರಿಗೆ ಬರೆದು ವ್ಯವಸ್ಥೆ ಮಾಡಬೇಕು. ಮತ್ತು ತ್ರಾನ್ಸಲೇಟರರು ಈ ನೋಟೀಸನ್ನು ಕನ್ನಡ ಶಾಲಾಪತ್ರಕದಲ್ಲಿ ಪ್ರಸಿದ್ಧ ಮಾಡಬೇಕು.

ು. ಧಾರವಾಡ ೨ನೇ } (Signed) W. A. Russell.
ೕಬ್ರುವಾರಿ೧೮೭೬ } ಎ. ಇ. ದಕ್ಷಿಣಭಾಗ.

ಕಲಾದಗಿ ಜಿಲ್ಲೆಯೊಳಗಿನ ಯಾವತ್ತು ಸ್ಕೂಲ ಮಾಸ್ತರರಿಗೆ—ತಿಳಿಪಡಿಸುವದೇನಂದರೆ ಯಾವ ಶಾಲಿಗಳ ಹೊಸ ಇಮಾರತಿ ಕಟ್ಟಿಸುವ ಮಂಜೂರಿದೊರಿದು ಕಟ್ಟಿಸುವ ಕೆಲಸಾ ನಡದಿರುವದು, ಆಯಾ ಶಾಲಿಯ ಮಾಸ್ತರರು ದರ ತಿಂಗಳ ೧ ಮೊದಲನೇ ತಾರೀಖಿಗೆ (ಇಮಾರತ ಪೂರಾ ಆಗುವವರೆಗ) ಅದರ ಕೆಲಸಾ ಎಷ್ಟು ಆಗಿರುತ್ತದೆ ಹಾಗು ಎಷ್ಟು ಆಗುವದು ಉಳದದೆ ಮುಂತಾದ ಮಾಹಿತಿಯ ಪತ್ರ, ದರ ಮಾಹಿ ಪಟ್ಟದ ಕೂಡಾ ಕಳಸುತ್ತಿರಬೇಕು.

೨ ಶಾಲಿ ಮನೆಗಳ ದುರಸ್ತಿಯ ಕೆಲಸಾ, ಮಾಮಲೇದಾರರ ಮಾರ್ಫತ ಅಗರ ಇಂಜಿನಿಯರ ಖಾತೆಯ ಮಾರ್ಫತ, ನಡದಿದ್ದರೆ ಅದರ ಮಾಹಿತಿಯಾದರೂ ಸದರಿ ಪ್ರ॥ ದರ ತಿಂಗಳಗೆ ಬರದು ಕಳಸುತ್ತಿರಬೇಕು.

೩ ಸುಂಕಾ ಜಬ್ಬೀನಾ ಮುಂತಾದ ವಾರ್ಷಿಕ ಕಿರಕೋಳ ರಿಪೇರಿಯ ಹೊರ್ತು ವಿಶೇಷ ಹಣಾ ಖರ್ಚು ಮಾ

ಡಿ ದುರಸ್ತ ಮಾಡಿಸುವದು ಅವಶ್ಯ ಇದ್ದರೆ ಆ ಸಾಲಿಯ ಮಾಸ್ತರರು, ದರ ಫೆಬ್ರುವಾರ ವ ಅಗಸ್ಟ ತಿಂಗಳ ಮೊದಲನೇ ತಾರೀಖಿಗೆ ರಿಪೋರ್ಟ ಮಾಡಬೇಕು. ಮತ್ತು ಅಜಮಾಸ ಬುಕ್ ಯಷ್ಟು ಹಿಡಿಯುವದು ಅದು ಸಹ ತಿಳಿಸುತ್ತಿರಬೇಕು. ಗುಡಿಗಳು ಹಾಗು ಧರ್ಮಸಾಲಿಗಳು ಸಾಲಿಯಗೋಸ್ಕರ ಉಪಯೋಗ ಮಾಡುತ್ತಿದ್ದ ಮಾಸ್ತರರು ಮೇಲೆ ಬರದಂತೆ ರಿಪೋರ್ಟ ಮಾಡುವ ಕಾರಣವಿಲ್ಲ ಆ ಇಮಾರತಿಯಗೋಸ್ಕರ ಸರಕಾರದವರು ವಿಶೇಷ ದುರಸ್ತಿ ಮಾಡಿಸಲಾರರು.

ಮೇಲೆ ಬರದಂತೆ ಯಾವ ಮಾಸ್ತರರು ವಹಿವಾಟ ಮಾಡಲಿಕ್ಕೆ ತಪ್ಪುವರು, ಅವರ ವಿಷಯಕ್ಕೆ ವಿಶೇಷ ತಜವೀಜ ಮಾಡಲಾದೀತು. ತಿಳಿಯುವದು.

ತಾ. ೩೧ ಜಾನೇವಾರಿ } Ramchandra A. Sawanoor.
೧೮೭೬ ಮು. ಅಲಮೇಲ } ಡೆ. ಎ. ಇ. ಜಿಲ್ಲಾ ಕಲಾದಗಿ

ಕಂಪ್ಲಿಶನ ಸರಟೀಫಿಕೇಟ.

ಶಾಳಾ.　　　　ತಾಲೂಕ.　　　　ಜಿಲ್ಹಾ.
ಈ ಸಾಲಿ ಮನೆಯ ದುರಸ್ತಿಯ ಕೆಲಸಾ ತಾ.　　ಮಾಹೆ
ಇಸ್ವಿ ದಿವಸಾ ಚಾಲು ಆಗಿ ತಾ.　　ಮಾಹೆ
ಸನ್ನ ಇಸ್ವಿ ದಿವಸಾ ಮುಗೀತು.

ರು.　　ಅ.　　ಪೈ.

ಮೇಲಿನ ಕೆಲಸದ ಗೋಸ್ಕರ
ಪಟ್ಟಿ ಬುಕ್

ತಪಶೀಲು	ರು.	ಆ.	ಪೈ.
ಶಾಳಗಿ ದುರಸ್ತ ಮಾಡಿಸುವದಕ್ಕೆ			
ಗೋಡೆಗಳನ್ನು ಸಾರಿಸುವದಕ್ಕೆ			
ಸುಂಣಾ ಹಚ್ಚುವದಕ್ಕೆ			
(ಇತರ ಕೆಲಸಾ ಮಾಡಿಸಿದ್ದರೆ ಅವುಗಳು ಬರತಕ್ಕವು.)			
ಅಂತು—			

ಮೇಲೆ ಬರದ ಕೆಲಸಗಳು ಪೂರಾ ಆಗಿರುತ್ತವೆ. ಹಾಗು ಅವು ಖಾತ್ರಿಪ್ರಕಾರಾ ಆಗಿರುತ್ತವೆ. ತಾ. ಮಾಹೆ ಸನ್ನ

ಸ್ಕೂಲ ಮಾಸ್ತರ ಶಾಳಾ
ತಾಲೂಕ.

ಜಾವಕ ನಂಬರು ೮೦೮.

ಕಲಾದಗಿ ಜಿಲ್ಹೆಯೊಳಗಿನ ಯಾವತ್ತು ಸ್ಕೂಲಮಾಸ್ತರರಿಗೆ ತಿಳಪಡಿಸುವದೇನಂದರೆ—ಇನ್ನು ಮೇಲೆ ಸಾಲಿ ಮನೆಗಳ ವಾರ್ಷಿಕ ರಿಪೇರಿ ಆದ ಕೂಡಲೆ ಮೇಲಿನ ನಮೂನೆಯಂತೆ ಕಂಪ್ಲಿಶರ ಸರಟೀಫಿಕೇಟ ಕಳಸದ ಹೊರತು ಹಣಾಪೋರಿಲಿಕ್ಕಿಲ್ಲ—ತಿಳಿಯುವದು.

ತಾ|| ೨೧ ಜಾನೇವಾರಿ } Ramchandra A. Sawanoor.
ಸನ್ನ ೧೮೭೬ ಇಸ್ವಿ. } ಡಿ. ಎ. ಇ. ಜಿಲ್ಹಾ ಕಲಾದಗಿ.

CORRESPONDENCE.

ಪತ್ರವ್ಯವಹಾರವು.

ಅಥಣಿಯಲ್ಲಿರುವ ಶಿದ್ಧೇಶ್ವರ ದೇವರ ಗುಡಿಯ ಸಂಕ್ಷಿಪ್ತ ವರ್ಣನೆಯು.

ಈ ಗ್ರಾಮದ ಪೂರ್ವ ದಿಕ್ಕಿನಲ್ಲಿ ಒಂದು ಪ್ರಾಚೀನ ಗುಡಿಯದೆ. ಇದರ ಹೊರಗಿನ ರಚನೆ ಹಾಗು ಕಟ್ಟುವಿಕೆಯಂನು ನೋಡಲಾಗಿ ಇದು ಹಿಂದು ದೇವಾಲಯ ವಿರದೆ, ಮುಸಲ್ಮಾನ ಜನರಿಂದ ಕಟ್ಟಲ್ಪಟ್ಟ ಮಸೀದಿಯಂತೆ ತೋರುತ್ತದೆ. ಪರಂತು ಒಳಹೊಕ್ಕು ನೋಡಲಾಗಿ ಈ ಇಮಾರತಿಯಲ್ಲಿ ಮೂರು ಫೂಟು ಸಮಚೌಕಾದ ಒಂದು ಕಲ್ಲಿನಿಂದ ಕಟ್ಟಿಸಿದ ಕಟ್ಟೆ ಇದ್ದು, ಅದರ ಮೇಲೆ ಶಿವಸಂಬಂಧಿಯ ದೇವತಾ (ಲಿಂಗ) ಸ್ಥಾಪನ ವಿದ್ದಂತೆ ಕಂಡುಬರುತ್ತದೆ. ಬ್ರಾಹ್ಮಣ (ಸ್ಮಾರ್ಥ ವೈಷ್ಣವ) ಮೊದಲಾದ ಹಿಂದು ಜನರು ಈ ದೇವರನ್ನು ಭಜಿಸುತ್ತಾರೆ ಇಷ್ಟೇ ಅಲ್ಲ, ಮುಸಲ್ಮಾನರಾದರೂ ಭಜಿಸುತ್ತಾರೆ. ಇದು ಬಹು ಆಶ್ಚರ್ಯಕರವಾದ ಸಂಗತಿಯು. ಆದಾಗ್ಯೂ ಹಿಂದೂ ಜನರು (ಹರಹರ ಮಹಾದೇವ ಯೆಂನ್ನುತ್ತ) ಗರ್ಭ ಗುಡಿಯಲ್ಲಿ ಹೋಗುತ್ತಾರೆ. ಪರಂತು ಗರ್ಭಗುಡಿಯ ಹೊರಗೆ ನಿಲ್ಲುವ ಮುಹಂಮದೀ ಜನರು ಅಲ್ಲಿಂದೇ (ದೀನ ಎಂಬ ಶಬ್ದದಿಂದ) ಭಕ್ತಿಪುರಸ್ಕರ ಭಜಿಸುತ್ತಾರೆ.

ಇಂಥಾ ಭಿನ್ನ ಜಾತಿ ಜನರ ಧರ್ಮಸಂಬಂಧಿಯ (ದೇವಭಕ್ತಿಯಲ್ಲಿ) ಕೂಡುವಿಕೆಯನ್ನು ನೋಡಿ, ಪರಸ್ಪರ ಮ

ನಸ್ಸಿನಲ್ಲಿ ಆಶ್ಚರ್ಯ ಉಂಟಾಗುವದಲ್ಲದೇ ಈ ಸಂಬಂಧಿಯ (ತಂಮ ಪೂರ್ವಜರಿಂದ ಹೇಳಲ್ಪಟ್ಟಂಥ) ದಂತಕಥೆಯನ್ನು ಕೇಳೋಣದರಿಂದ, ಈ ಭಿನ್ನ ಜಾತಿಯ ಜನರು ಹೀಗೆ ಭಕ್ತಿಯುಳ್ಳವರಾಗಲಿಕ್ಕೆ ಯೋಗ್ಯರೆಂದು ತರ್ಕಿಸಬಹುದು. ಅದರ ವೃತ್ತಾಂತ ಕೆಳಗೆ ಬರೆದ ಪ್ರಕಾರ.

ಸುಮಾರು ೧೪೬೦ನೇ ಇಸವಿಯಲ್ಲಿ, ಗೋವಳಕೊಂಡದ ಸಾರ್ವಭೌಮನಾದ ಕುತುಬುಶಹನು ರಾಜ್ಯವಾಳುತ್ತಿರುವಾಗ, ಅವನ ರಾಹುತರಲ್ಲಿ ಯವನೊಬ್ಬನು ರಾಜಧಾನಿಯಾದ ಬೀದರ ಪಟ್ಣದಲ್ಲಿ (ದಸ್ತಗೀರನೆಂಬ ಹೆಸರಿನಿಂದ) ಪ್ರಖ್ಯಾತನಾದ ಚಾಕರನಿದ್ದನು. ಆವನು ಮುಸಲ್ಮಾನನಾಗಿದ್ದರೂ ಶಿವಸಂಬಂಧಿಯ ಖಂಡೋಬಾ ದೇವರ ಭಕ್ತನಿದ್ದನು. ಅವನಲ್ಲಿ ದೃಶ್ಯಾದೃಶ್ಯ ಮೊದಲಾದ ಶಕ್ತಿಗಳಾದರೂ ಇದ್ದವು. ಅವು ಯಾವವಂದರೆ.

ಜನರ ಸಮುದಾಯದಲ್ಲಿ ಕುಳಿತವನು ಒಂಮೆ ಅದೃಶ್ಯನಾಗಿ ಏನಿಕೆ ಹೊತ್ತು ಅಥವಾ ದಿಸದ ಮೇಲೆ ಗುಡ್ಡ ಅಥವಾ ಗವಿಯಿಂದ ಹೊರಬಿದ್ದಂತೆ ಕಾಣೋಣ ಮತ್ತು ಬೇರೊಂದು ಸ್ಥಳದಲ್ಲಿ ತನ್ನ ಪಶ್ಚಾತ್ ಆದಂಥ ಮಾತುಗಳಂನು ಕಂಡವರಂತೆ ಹೇಳೋಣ.

ಅದೇ ಬೀದರವೆಂಬ ಶಹರದಲ್ಲಿ ಒಬ್ಬ ಬ್ರಾಹ್ಮಣನು ಈ ದಸ್ತಗೀರನ ಅಸಾಧಾರಣವಾದ ದೇವತಾ ಶಕ್ತಿಯಂನು ನೋಡಿ ಮನಃಪೂರ್ವಕವಾದ ಭಕ್ತಿಯಿಂದ ಅವನ ಕೃಪೆಯಂನು ದೊರಕಿಸಿದ್ದಲ್ಲದೇ ಅಲ್ಲಿಂದ ಹನ್ನೆರಡು ಮೈಲಿನ ಅಂತರವಾದ ಮೈಲಾರವೆಂಬ ಮಾರ್ತಂಡನ ಸ್ಥಾನಕ್ಕೆ ಅವನ ಅಪ್ಪಣೆಯ ಮೇರಿಗೆ ಶಿಷ್ಯನಾಗಿ ಹೋಗಲಾರಂಭಿ

ಸಿದನು. (ಈ ಮೈಲಾರದ ವರ್ಣನೆ ಬ್ರಹ್ಮಾಂಡ ಪುರಾ ಣದಲ್ಲಿ ಬರದದೆ) ಈ ರೀತಿಯಿಂದ ಆ ಬ್ರಾಹ್ಮಣನು ಕ್ತಿಯಲ್ಲಿರುವಾಗ್ಯೆ ಒಂದು ದಿನ ಸ್ವಪ್ನದಲ್ಲಿ ಗುರುವಾ ದಸ್ತಗೀರನು ತನಗೆ ಶಿವಮಂತ್ರೋಪದೇಶವನ್ನು ಮ ಡಿದ್ದಂನು ಕಂಡು ವಿಶೇಷ ಭಕ್ತಿ ಉಂಟಾಗಲಿಕ್ಕೆ ಕಾರ ವಾಯಿತು.

ಒಂದುದಿನ ದಸ್ತಗೀರನ ಮೇಲೆ ಬಾದಶಹನ ಅವಕ ಪೆಯಾಗಿ ಅವನಿಗೆ ದೇಹಾಂತ ಸಂಕಟವು ಬಿದ್ದದ್ದರಿಂದ ವನು ಆ ದರಬಾರ ಬಿಟ್ಟು ಹೋದ ಸುದ್ದಿಯು ಊರಲ್ಲಿ ಪ್ರಸಿದ್ಧವಾಗಿ ಶಿಷ್ಯನಾದ ಬ್ರಾಹ್ಮಣನಿಗೆ ಸಹಾ ತಿಳಿಯಿತು ಮೂರು ದಿವಸದ ಉಪವಾಸವಾಗಿದ್ದ ಗುಪ್ತವಾದ ತನ್ನ ಗುರುವಿಸ ಸಂಬಂಧಿಯ ಶೋಕದಿಂದಿರುವ ಬ್ರಾಹ್ಮಣನಿ ಗುರುದರ್ಶನವಾದ ಕೂಡ್ಲೆ ಉಭಯತ್ರರು ಹೊರಟು ಅ (ಅಥಣಿ) ಊರ ಅಗ್ನಿಯ ದಿಕ್ಕಿನಲ್ಲಿರುವ ಮೊರಡಿಯ ಮೇಲೆ ಬಂದಾಗ್ಯೆ ಗುರುವಾದ ದಸ್ತಗಿರನು ಅಲ್ಲಿರುವ ವಿಯೊಳಗೆ ನಿಂತದ್ದಲ್ಲದೆ ತನ್ನ ಶಿಷ್ಯನಾದ ಬ್ರಾಹ್ಮಣನಿ ಅದರ ಪೂರ್ವ ದಿಕ್ಕಿನಲ್ಲಿರುವ ಮತ್ತೊಂದು ಗವಿಯಲ್ಲಿ ಇರ ಹೇಳಿ ಆ ಗವಿಗಳ ಉತ್ತರಕ್ಕೊಂದು (ಈಗ ಗುಡಿ ಇರುವ ಸ್ಥಳದಲ್ಲಿ) ಸಣ್ಣ ಕಟ್ಟೆಯನ್ನು ಕಟ್ಟಿ ಅದರ ಮೇಲೆ ತಂನ ಔಪಾಸಿಕ ದೇವರಾದ ಮಾರ್ತಂಡನನ್ನು ಸ್ಥಾಪನ ಮಾಡಿ ಪೂಜಿಸಲಪ್ಪಣೆ ಕೊಟ್ಟನು.

ಮುಂದೆ ಕೆಲವು ದಿವಸಗಳವರೆಗೆ ಹೊಸದಾಗಿ ಸ್ಥಾಪಿಸಲ್ಪಟ್ಟ ದೇವರ ಪೂಜೆ ಮಾಡುವ ಬ್ರಾಹ್ಮಣನನ್ನು ಈ ಗ್ರಾಮಸ್ಥರು ಇವನು ಶಿದ್ಧಪುರುಷನೆಂದು ಕಾಣುತ್ತಿದ್ದ

ರು. ಪರಂತು ಗುಹೆಯಲ್ಲಿರುವ ಅವನ ಗುರುವಂನು ಯಾರೂ ನೋಡಿದ್ದಿಲ್ಲ. ಆಗ್ಯೆ ಈ ಊರು ಸಂಣ ಹಳ್ಳಿಯಾಗಿತ್ತು.

ಕ್ರಿಸ್ತ ಶಕದ ೧೪೧೯ ನೇ ಇಸವಿಯಲ್ಲಿ ವಿಜಾಪೂರದ ಬಾದಶಹನು ಗೋವೇಕ್ಕೆ ಹೋಗುವ ಮಾರ್ಗದಲ್ಲಿ ಈ ಊರ ಬ್ರಾಹ್ಮಣಸ್ಥಾಪಿತ ದೇವರ ಕಟ್ಟೆಯ ಸಮೀಪಕ್ಕೆ ವಸ್ತಿಯಾಗಿ ನಿಂತು ಅದರ ಸುತ್ತ ತಂನ ತಂಬು ಹೊಡಿಸಿದನು.

ಗ್ರಾಮಸ್ಥನಾದ ಯಾವನೊಬ್ಬನು ಮಾಡಿದ ಬಿನ್ನಹಕ್ಕೆ ಲಕ್ಷಗೊಡದೆ ಬಾದಶಹನು ಆ ದೇವರ ಕಟ್ಟೆಯಂನು ಮುಟ್ಟಿ ಅದರ ಮೇಲೆ ತಾನು ಮಲಗಬೇಕಾಗ ಮಂಚ ಸಹಾ ಹಾಕಿಸಿದನು. ಮಧ್ಯರಾತ್ರಿಯಲ್ಲಿ ಗುರುವಾದ ದಸ್ತಗಿರನು ಆ ಮಲಗಿದ ಬಾದಶಹನ ಪಲಂಗ ಸಹಿತ ವೈದು ಇಟ್ಟ ಪೂರ್ವ ದಿಕ್ಕಿನ ಸ್ಥಳದಲ್ಲಿ ಬಾದಶಹನು ಕಟ್ಟಿಸಿದ ಮಸೀದಿ ಈಗಲೂ ಇದ್ದು ಅದಕ್ಕೆ ಈಗಲೂ ಕರೀ ಮಸೀದೆ ಎಂಬ ಹೆಸರು ಅದೆ.

ಬೆಳಗಾದ ಮೇಲೆ ಬಾದಶಹನು ತಾನು ಕಳೆದ ರಾತ್ರಿಯಲ್ಲಿ ಮಲಗಿರುವ ಸ್ಥಳದಿಂದ ಯೆರಡು ಮೈಲು ದೂರವಾಗಿರುವ ಎರಡನೇ ಕಡಿಗೆ ಮಂಚ ಸಹಿತ ತಾನು ಇರುವದನ್ನು ಕಂಡು ಎಚ್ಚತ್ತು ಆಶ್ಚರ್ಯಭರಿತನಾಗಿ ತಂನ ದಂಡಿನೊಂದಿಗೆ ಬಂದು ತಂನ ಸರದಾರ ಮೊದಲಾದ ಸೇವಕಜನರಿಗೆ ರಾತ್ರಿಯ ವೃತ್ತವನ್ನು ತಿಳಿಸಿದನು. ಹಾಗು ಆ ದೇವರಲ್ಲಿ ಭಕ್ತಿಯುಳ್ಳವನಾಗಿ ಆ ಕಟ್ಟೆಯನ್ನೂ, ಅದರ ಮೇಲ ಈಗಿರುವ ಗುಡಿಯನ್ನೂ ಕಟ್ಟಿಸಿ ಆ ದೇವರಿಗೆ ಯೋಗ್ಯವಾದ ಮದ್ದತು ಕೊಟ್ಟು ಹೊರಟು ಹೋದನು.

ಅಂದಿನಿಂದ ಈವರೆಗೂ ಸಿದ್ಧ ಪುರುಷನ ಯೋಗದಿಂದ ಸಿದ್ಧೇಶ್ವರ ಈ ಹೆಸರಲ್ಲಿ ಎರಡು ಜಾತಿಯ ಜನರು ಭಜಿಸಲಾರಂಭಿಸಿದರು.

(ಮೇಲಿನ ವರ್ಣನವನ್ನು ಅಥಣೀ ಇಂಗ್ಲಿಶ ಕನ್ನಡ ಸಾಲೆಯ ೧ ನೇ ಮುದತನೀಸರು ಬರೆದು ಇದರ ಇಂಗ್ರಜಿ ಭಾಷಾಂತರದೊಡನೆ ಮ. ಎ. ಇನಸ್ಪೇಕ್ಟರ ಸಾಹೇಬ ಬಹಾದ್ದೂರ ದಕ್ಷಿಣಭಾಗ ಇವರ ಕಡೆ ಕಳುಹಿದರು. ಸಾಹೇಬ ಬಹಾದ್ದೂರವರು ಇದನ್ನು ಓದಿ ನೋಡಿ ಬಹಳ ಸಂತೋಷಬಟ್ಟು ಕನ್ನಡ ಶಾಲಾಪತ್ರಕದಲ್ಲಿ ಛಾಪಿಸುವದಕ್ಕಾಗಿ ಸಮಕ್ಷ ನಮ್ಮ ಕೈಯಲ್ಲಿ ಕೊಟ್ಟರು. ಆಗ ದಕ್ಷಿಣ ಭಾಗದೊಳಗಣ ಸ್ಕೂಲ ಮಾಸ್ತರ ಜನರು ತಮ್ಮಾಗೆ ಕೂಡಿದಾಗ ಓದುವವರ ಮನಸ್ಸಿಗೆ ಸಂತೋಷವಾಗುವಂತೆ ಪ್ರಾಚೀನ ಕಾವ್ಯ, ಇತಿಹಾಸ, ಪ್ರಖ್ಯಾತ ಪುರುಷರ ಚರಿತ್ರ, ಪ್ರಸಿದ್ಧ ಸ್ಥಳಗಳ ಗರ್ಣನ, ಮೊದಲುಗೊಂಡು ಅನೇಕ ಉಪಯುಕ್ತ ವಿಷಯಗಳ ಮೇಲೆ ತಮ್ಮ ಕೈಲಾದ ಮಟ್ಟಿಗೆ ಶ್ರಮತಕ್ಕೊಂಡು ಬರೆದು ಕಂನಡ ಶಾಲಾಪತ್ರಕಕ್ಕೆ ಕಳುಹಿದರೆ ನಾವು ಬಹಳ ಸಂತೋಷ ಪಡುವೆವಂತಲೂ, ಶಾಲಾಪತ್ರಕಕ್ಕೆ ವಿಷಯಗಳನ್ನು ಕಳಸಿ ಚನ್ನಾಗಿ ಸಾಹ್ಯ ಮಾಡಿದ ಬಗ್ಗೆ ಕಂನಡ ಟ್ರಾನಸ್ಲೇಟರವರ ಕಡೆಯಿಂದ ಸಿಫಾರಸು ಪಡೆದ ಮಾಸ್ತರ ಜನರನ್ನು ಲಕ್ಷದಲ್ಲಿ [illegible] [illegible]ಕೊಂಡ ಪ್ರಕಾರ ಅವಶ್ಯವಾಗಿ ಬಢತಿ ಕೊಡು [illegible] [illegible] ಬೇಕಾಗಿ ಹೇಳಿದರು. ಆದವರಿಂದ ಇತ್ತಕಡೆಗೆ ಯಾವತ್ತು ಮಾಸ್ತರರು ಲಕ್ಷಕೊಡಬೇಕು.

ಎ. ಕ. ಶಾ. ಪ.

ಮೈಲಿ ತೆಗೆಸುವ ಬಗ್ಗೆ.

ಈ ಜಗತ್ತಿನಲ್ಲಿ ಯಾವತ್ತು ಜೀವರಾಶಿಗಳಿಗೆ ತಮ್ಮ ಜೀವವೆಂಬುವದೊಂದು ಬಹು [illegible] ಪ್ರೀತಿಯ ಪದಾರ್ಥವಿದ್ದು ಅದು ಸುರಕ್ಷಿತವಾಗಿರಬೇಕೆಂದು ಎಲ್ಲ ಪ್ರಾಣಿಮಾತ್ರಗಳ ಯತ್ನ ನಡೆದಿರುತ್ತದೆ. ಅವುಗಳಲ್ಲಿ ಮನುಷ್ಯರಿಗೆ ದೇವರು ವಿಶೇಷ ಜ್ಞಾನ ಬುದ್ಧಿಗಳನ್ನು ಕೊಟ್ಟ ಮೂಲಕವಾಗಿ, ಒಳ್ಳೇದು ಯಾವದು, ಕೆಡಕು ಯಾವದು, ತಮ್ಮ ಮೇಲೆಯೂ ತಮ್ಮ ಮಕ್ಕಳ ಜೀವದ ಮೇಲೆಯೂ ಬರುವ ಸಂಕಟಗಳನ್ನು ಯಾವ ರೀತಿಯಿಂದ ದೂರ ಮಾಡಬೇಕು, ಎಂಬ ವಿಷಯವಾಗಿ ವಿಚಾರ ಮಾಡುವದಕ್ಕೆ ಬುದ್ಧಿಯು ಸಾಧನವಿದ್ದು, ಆ ಪ್ರಕಾರ ಪ್ರತಿಯೊಬ್ಬ ಮನುಷ್ಯನು ತನ್ನ ಸಂತತಿಯಾದ ಬಾಲಕರ ಜೀವವು ಯಾವ ರೀತಿಯಿಂದ ಸುರಕ್ಷಿತವಾಗಿ ಇರಬಹುದೆಂಬ ವಿಷಯವಾಗಿ ಪ್ರಯತ್ನ ಮಾಡುತ್ತಿರುತ್ತಾನೆ. ಅವುಗಳಲ್ಲಿ ಅನುಭವದಿಂದ ಮನುಷ್ಯರಿಗೆ ತಮ್ಮ ಮಕ್ಕಳ ಮೇಲೆ ಏನೇನು ಸಂಕಟಗಳು ಬರತಕ್ಕವು ಅವೆಯೆಂಬದು ಗೊತ್ತು ಇರುತ್ತದೆ. ಅವುಗಳಲ್ಲಿ, ಹುಡುಗರಿಗೆ ಮೈಲಿ ಬರುವದೊಂದು ಬಹಳ ಭಯಂಕರವಾದದ್ದೆಂದು ಜನಕ್ಕೆ ಗೊತ್ತಿದ್ದು, ಅದರಲ್ಲಿ ಏನಾದರು ಸ್ವಲ್ಪ ಹೆಚ್ಚು ಕಡಿಮೆಯಾದರೆ, ಹುಡುಗರ ಜೀವದ ಮೇಲೆ ಬರುವದು. ಇಲ್ಲವೆ, ಹುಡುಗರ ಒಂದು ಅಥವಾ ಎರಡೂ ಕಣ್ಣು ಹೋಗವವು, ಪಾಪಕ್ಕೆ ಗುರಿಯಾಗುತ್ತಾರೆ; ಅದರಿಂದ ಹುಡುಗರ ಕುಂಟರಾಗುತ್ತಾರೆ, ಅಥವಾ ಹುಡುಗರ ಮೋರೆಯ ಮೇಲೆ ಆಗಲಿ ಮೈ ಮೇಲೆ ಆಗಲಿ ಕಲೆಗಳು ಬಿದ್ದು ಕುರು

ಪರು ಆಗುವರು, ಯೆಂಬದು ಅನುಭವದಿಂದ ಗೊತ್ತಿದ್ದು ಮತ್ತು ಈ ಪ್ರಕಾರ ಅನುಭವ ಇದ್ದದ್ದರಿಂದ ಆ ಪ್ರಸಂಗದಲ್ಲಿ ಬಹಳ ಜಪ್ಪಿಸಬೇಕಾಗುತ್ತದೆಂಬ ಬಗ್ಗೆ, ಎಷ್ಟು ಜಪ್ಪಿಸಿದರೂ ಒಂವರಲ್ಲಿ ಅಪಘಾತ ಆಗದ ಹೊರ್ತು ನಿಂದರವದಿಲ್ಲ. ಅವರಿಗೆ ಈ ಇವುಗಳಲ್ಲಿ ಒಂದು ಪ್ರಕಾರ ಅಪಘಾತ ಉಂಟಾಯಿತಂದರೆ, ಅವರಿಗೆ ಆ ಮರಣಪರಿಯಂತ ರಕ್ಕೂ ದುಃಖ ಸೋಸಬೇಕಾಗುತ್ತದೆ. ಹಾಂಗು ಆ ಹುಡುಗರ ತಾಯಿ ತಂದೆಗಳಿಗೆ ಸಹ ಬಹಳ ಉಪದ್ರವಾಗುತ್ತದೆ. ಯಾಕಂದರೆ ಹುಡುಗನದಾಗಲಿ, ಹುಡಿಗಿಯದಾಗಲಿ ಮದುವೆಯಾಗತಕ್ಕದ್ದಿರುತ್ತದೆ, ಆ ಪ್ರಸಂಗದಲ್ಲಿ ಕುರೂಪತ್ವವೆಂಬುವದೊಂದು ದೊಡ್ಡ ಅಡಚಣೆ ಬರುತ್ತದೆ. ಆದಕಾರಣ ಯಾವತ್ತು ಮನುಷ್ಯರಿಗೆ ದುಃಖ ಆಗಬಾರದೆಂಬುದಾಗಿ ದೊಡ್ಡ ದೊಡ್ಡ ವಿದ್ವಾನ ಡಾಕ್ಟರ ಜನರು ವಿಚಾರ ಮಾಡಿ ವ್ಯಾಲಿ ತೆಗಸಿದರೆ ಈ ಪ್ರಕಾರದ ದುಃಖಗಳುಂಟಾಗಲಾರವೆಂದು ತಿಳಿದು ನೋಡಿ ಅದರ ಅನುಭವ ತಕ್ಕೊಂಡು ಯೇನು ಸಿದ್ಧ ಮಾಡಿದರು, ಅದನ್ನು ತಮ್ಮ ರಾಜ್ಯದಲ್ಲಿ ಸುರೂ ಮಾಡಿ ತಮ್ಮ ಪ್ರಜೆಗಳನ್ನು ಈ ದುಃಖಸಾಗರದೊಳಗಿಂದ ತಗಿಯಬೇಕೆಂದು ನಮ್ಮ ಕನಿಕರವುಳ್ಳ ಈಗಿನ ಸರಕಾರದವರು ಮನಸ್ಸಿನಲ್ಲಿ ತಂದು ಬಹಳ ಖರ್ಚುಮಾಡಿ ಈ ಖಾತೆಯನ್ನು ಇಟ್ಟು, ಈಗ ಹುಡುಗರ ವ್ಯಾಲೀ ತೆಗೆಯುವ ಕೆಲಸವು ಸುರು ಆಗಿರುತ್ತದೆ. ಅದರಿಂದ ಮೇಲೆ ಬರೆದ ದುಃಖಗಳು ಬಹಳ ಮಾಡಿ ದೂರಾಗಿರುತ್ತವೆ. ಇದಂನು ನೀವು ಸಮಕ್ಷಮ ನಿಮ್ಮ ಕಂಣುಗಳಿಂದ ನೋಡುತ್ತೀರಿ, ಹೀಗಿದ್ದು ಇನ್ನುವರೆಗೂ ಹುಡುಗರ ವ್ಯಾ

ತೆಗಿಸುವದಕ್ಕೆ ಅಡ್ಡಿ ಮಾಡುತ್ತೀರಿ. ಇದನ್ನು ನೋಡಿ ಬಹಳ ಆಶ್ಚರ್ಯವಾಗುತ್ತದೆ. ತಾಯಿ ತಂದೆಗಳು ತಮ್ಮ ಮಕ್ಕಳ ಜೀವದಬಗ್ಗೆ ಬಹಳ ಪ್ರೀತಿಯುಳ್ಳವರಾಗಿರುತ್ತಾರೆ. ಆದಕಾರಣ ಹುಡುಗರ ಜೀವಕ್ಕೆ ಏನೇನು ಸಂಕಟ ಬರಬಾರದು, ಅವರು ಕುರೂಪರಾಗಬಾರದು ಎಂದು ನಿಮ್ಮ ಮನಸ್ಸಿನಲ್ಲಿ ಇದ್ದರೆ ಮೈಲಿ ತೆಗಿಸುವದಕ್ಕೆ ಯಾವದೊಂದು ಅಡ್ಡಿಯು ಮಾಡಬೇಡಿರಿ. ಮೈಲಿ ತೆಗಿಸಬಾರದೆಂಬ ಹುಚ್ಚುತನವು ನಿಮ್ಮ ತಲೆಯಲ್ಲಿ ಸೇರಿದ್ದು ತೆಗಿದು ಹಾಕಿರಿ. ಅದರಿಂದ ಹುಡುಗರಿಗೆ ಬಹಳ ಕಲ್ಯಾಣವಾಗುತ್ತದೆ. ಇದರಲ್ಲೇನು ತಿಳಮಾತ್ರ ಸಂಶಯವಿಲ್ಲ. ಆದದರಿಂದ, ಹುಡುಗರಿಗೂ, ಹುಡುಗರ ತಾಯಿ ತಂದೆಗಳಿಗೂ ಮೈಲಿ ತೆಗಿಸುವದಕ್ಕೆ ಅಪ್ಪಣೆ ಮಾಡುವಿರೆಂದು ಬೇಡಿಕೊಳ್ಳುತ್ತೇನೆ.

ಹುಜೂರ ತಾ. ೧೮ ಜಾನೇ- ⎫ ಸಹಿ ಪೀತಾಂಬರ ಬಾಪೂಜಿ
ವಾರಿ ಸನ ೧೮೭೬ ಇಸ್ವಿ. ⎭ ವ್ಯಾಕ್ಸಿನೇಟರ.

ರಾ. ರಾ. ರಾವಸಾಹೇಬ ಕನ್ನಡ ಕಾಲಾಪತ್ರಕರ್ತರಿಗೆ—

ವಿನಂತಿ ವಿಶೇಷ—

„ನಮ್ಮ ದೇಶ ಬಾಂಧವರಾದ ಬಡಮಾಸ್ತರರಿಗೆ
ಸಂಭವಿಸುವ ತೊಡರುಗಳು”.

ಈಗ ದರ ಒಂದು ಸಾಲಿಗೆ ಸಾದೀಲವಾರದ ಹಣಾ ಕಡಿಮೆ ಮಾಡಿ ಒಂದು ರೂಪಾಯಿ ಅಥವಾ ಹನ್ನೆರಡು ಆಣೆ [illegible]ಗೆ ಇಟ್ಟಿದ್ದಾರೆ. ಆದ್ದರಿಂದ ಆ ಹಣದಲ್ಲಿ ಸಾರಿಸೋ

ಣು, ಊಡಗೋಣಕ್ಕೆ ಎಂಟು ಹತ್ತು ಆಣೆ ಖರ್ಚ ಆ
ಕೊನಿಗೆ ನಾಲ್ಕಾರು ಆಣೆಗಳು ಉಳಿದರೆ ಅದರಲ್ಲಿ ಅವರ
ಮಶೀ, ಕಾಗದ, ಲೆಕ್ಕಣಿಕೆ, ಟಿಕೀಟು ಮುಂತಾದವುಗ
ನ್ನು ತಂದು ಕೊಳ್ಳಬೇಕು. ಇದು ಸಾಲುವದಿಲ್ಲಾ. ಇ
ದಂತೂ ಇರಲಿ; ಸರಕಾರೀ ಲಖೋಟಿಗಳಿಗೆ ಸರವೀಸ ಟಿ
ಕೇಟುಗಳಂನೇ ಹಚ್ಚಿ ಕಳುಹಿಸುವ ನಿರ್ಬಂಧನೆಯುಂಟು.
ಪರಂತು ಅವುಗಳು ತಾಲೂಕಿನಲ್ಲಿ ೫ ರೂಪಾಯಿಗಳಕ್ಕ
ತಲು ಕಡಿಮೆ ಹಣ ಕೊಟ್ಟರೆ ದೊರಿಯುವದಿಲ್ಲ—ಈ ಬ
ಡವ ಪಂತೋಜಿಯರು ಒಬ್ಬೊಬ್ಬರು ೫ ರುಪಾಯಿಗಳಂನ
ಕೊಟ್ಟು ಎಲ್ಲಿಂದ ತರಿಸಬೇಕು.? ಅಥವಾ ಎಲ್ಲರು ಕೂ
ಡಿ ತರಸಬೇಕಾದರೆ ಅವರೆಲ್ಲರೂ ಒಂದು ಗೂಡುವ ಬಗ
ಹ್ಯಾಗೆ.? ಒಬ್ಬೊಬ್ಬರು ಮೂರು ನಾಲ್ಕು ಹರದಾರಿಯ
ಮೇಲೆ ಇರುತ್ತಾರೆ. ಅವರೆಲ್ಲರ ಭೇಟಿಗೆ ಹೋಗಲಿಕ್ಕೆ
ಅವರಿಗೆ ರಜಾನೇ ಇಲ್ಲಾ. ಸೂಟಿ ದಿವಸದಲ್ಲಿ ಸಹಾ ಯ
ಲ್ಲಿಯೂ ಹೋಗಗೂಡದೆಂದು ಅಪ್ಪಣೆ ಯುಂಟು. ಇ
ನ ಕಾಗದ ಪತ್ರಗಳ ಮೇಲಿಂದ ಕೆಲಸ ನಡಿಸಬೇಕಾದರ
ಅವರಿಗೆಲ್ಲರಿಗೆ ಗರಜು ಏಕ ಕಾಲಕ್ಕೆ ಇರುವದಿಲ್ಲಾ. ಆದ್ದ
ರಿಂದ ಸರವೀಸ ಟಿಕೀಟುಗಳು ದೊರಿಯಲಿಕ್ಕೆ ಆಸ್ಪದ ವಿ
ಲ್ಲಾ. ಖಾಸಗೀ ಟಿಕೀಟಗಳಂನು ಹಚ್ಚಿ ಕಾಗದಗಳಂನು
ಕಳುಹಿಸಿದರೆ ದಂಡ ಮಾಡುವೆವೆಂದು ಹುಕುಮು ಕೊಡು
ತ್ತಾರೆ. ಈ ಬಡವ ಮಾಸ್ತರರಿಗೆ ದಯಾಳು ಸರಕಾರದ
ವರು ಊದ್ಯೋಗಕ್ಕೆ ಹಚ್ಚಿ ಅವರ ನಿರ್ವಾಹ ಸಾಗಿಸುತ್ತಾ
ರೆ. ಈ ಪುಣ್ಯದ ಕೀರ್ತಿಗಂತೂ ಪಾರವೇ ಇಲ್ಲ. ಅ
ವರಿಗೆ ದೊರೆಯುವ ಸಂಬಳದಲ್ಲಿ ತಮ್ಮ ತಮ್ಮ ಕುಟುಂ

ವ ಚರಿತ್ರಾರ್ಥ ಸಾಗಿಸುವದೇ ಬಹು ಪರಾಕಷ್ಟವಾಗುತ್ತ
ದೆ ಅದರಲ್ಲಿ ಐದು ರೂಪಾಯಿನ ಟಿಕೀಟುಗಳನ್ನು ಕೊ
ಳ್ಳಲಿಕ್ಕೆ ಎಲ್ಲಿಂದ ಹಣ ಬರುವದು.? ಈ ಭವಣೆಯಂನು
ಬಿಡಿಸುವದಕ್ಕಾಗಿಯೂ, ನಮ್ಮ ಭಾಂದವರ ಸ್ನೇಹಕ್ಕಾಗಿ
ನೂ ದೊಡ್ಡ ತಲಬಿನ ತಾಲೂಕಿನ ಮಾಸ್ತರರು ತಾವು ಹ
ಣವನ್ನು ಕೊಟ್ಟು ತರಸಿಟ್ಟು ಯಾರಿಗೆ ಹತ್ತಿದಷ್ಟು ಕೊ
ಡೋಣದರಿಂದ ಅವರಿಗೆ ಬಹಳ ಸಂತೋಷವಾಗಿ ಈ ಮಾ
ಸ್ತರರಂನು ಕೊಂಡಾಡುವರು. ಪರಂತು ಆ ದೊಡ್ಡ ಸಂಬ
ಳದವರು ಈ ಬಾಂಧವರ ಸ್ನೇಹದ ಕಡಿಗೆ ದುರ್ಲಕ್ಷ ಮಾ
ಡಿ ತಮ್ಮ ಮೂರ್ತಕ್ಕೆ ತಾವು ಕೆಲಸ ಸಾಗಿಸುತ್ತಾರೆ ಆದ್ದ
ರಿಂದ ನಾವು ಈ ಪರಮೇಶ್ವರ ಸ್ವರೂಪಿಗಳಾದ ಮೆಹ
ರ್ಬಾನ ದಯಾಳು ರಸಲ್ ಧೊರೆಗಳಿಗೆ ಹಾಗು ಮೇ. ಡಿ.
ಇ. ಸಾಹೇಬರಿಗೆ ಬೇಡಿಕೊಳ್ಳುವದೇನಂದರೆ ಈ ತೊಂದ
ರೆ ಪಡುವ ಬಡವ ಮಾಸ್ತರರಂನು ಇದರಿಂದ ಪಾರ ಮಾಡಿ
ತಮಗೆ ಕೀರ್ತಿಯಂನು ಪಡಕೊಳ್ಳಬೇಕು. ಇವರಲ್ಲಿ
ಧೊರೆಗಳು ಸ್ವಲ್ಪ ಲಕ್ಷ ವಿಶೇಷ ಕೊಟ್ಟರೆ ಸರಕಾರದವ
ರ ನುಕಸಾನಿ ಏನೂ ಆಗದೇ ಬಡವರ ಎಡರುಗಳು ಪರಿಹರಿ
ಸುವವು. ೫ ರೂಪಾಯಿದಕ್ಕಿಂತಲೂ ಕಡಿಮೆ ಹಣಕ್ಕೆ,
ಸರವೀಸ ಟಿಕೀಟುಗಳಂನು ಕೊಡಬಾರದೆಂದು ನೇಮ ಮಾ
ಡಿದರೆ ನೆಟ್ಟಗಾಗುವದು ಅಥವಾ ತಾಲೂಕಿನ ಮಾಸ್ತರರು
ತೆಗೆದುಕೊಂಡು ಎಲ್ಲರಿಗೆ ಹತ್ತಿದಷ್ಟು ಕೊಡಬೇಕೆಂದು ಕ
ಟ್ಟಳೆ ಮಾಡಿದರೂ ಚಿಂತೆ ಇಲ್ಲಾ. ಶಾಸನ ಕರ್ತರಾದ
ದೊರೆಗಳು ಇವನ್ನು ಕಿವಿಯ ಮೇಲೆ ಹಾಕಿಕೊಳ್ಳದೇ ಅ
ವರು ಏನಾದರೂ ಯಾಕೆ ಮಾಡಿಕೊಳ್ಳವಲ್ಲರೆಂದು ದುರ್ಲ

ಕ್ಷಿಸಿದರೆ ಬಡವರು ಬಹು ಶ್ರಮ ಪಡುವರು.

ಈ ಕಾರಣದ ಕಡೆಗೆ ನಮ್ಮ ದಯಾಳು ಧೊರೆಗಳು ತೀವ್ರ ಚಿತ್ತ ಕೊಡುವರೆಂದು ಕೋರುತ್ತೇವೆ.

„ಒಬ್ಬ ಪರೋಪಕಾರಿಯಾ
ಮಾಸ್ತರನ ಸ್ನೇಹಿತನು.”

ರಾಜಮಾನ್ಯ ರಾಜಶ್ರೀ ಕಂನಡ ಪಾಠಪತ್ರ ಕರ್ತರಾ
ಎಡಿಟರ ಮಹಾರಾಯರ ಚರಣಾರವಿಂದಗಳಿಗೆ—

ಸೇವಕನು ಭಯಭಕ್ತಿಯಿಂದ ಬೇಡಿಕೊಂಡ ಬಿನ್ನ ಸಾನು ಕೆಳಗೆ ಬರೆದ ನಾಲ್ಕು ಪಂಕ್ತಿಗಳಿಗೆ ತಮ್ಮ ಪಂ ಜಾಕರದಿಂದ ವೃದ್ಧಿಸುವ ಅಂದವಾದ ಶಾಲಾಪತ್ರಿಕೆಯಲ್ಲಿ ಸ್ಥಳ ಕೊಟ್ಟು ಛಾಪಿಸಿ ಪ್ರಸಿದ್ಧ ಮಾಡುವಿರೆಂದು ದ್ವಯ ರಗಳಂನು ಮುಗಿದು ಬೇಡಿಕೊಳ್ಳುತ್ತೇನೆ.

ಲೆಖ್ಕವು

(೧) ನೇದು ಒಂದು ಗ್ರಾಮದಲ್ಲಿ ೩ ಮೂರು ದೇವಾಲಯಗಳಿದ್ದವು. ಒಬ್ಬ ಪೂಜಾರಿಯು ಕೆಲವು ಹೂವುಗಳಂನು ತೆಗೆದುಕೊಂಡು ೧ ಮೊದಲನೇ ದೇವಾಲಯಕ್ಕೆ ಬಂದು ಅಲ್ಲಿ ಪ್ರಾರ್ಥನೆ ಮಾಡಿದನಲ್ಲಾ ನನ್ನ ಹತ್ತರ ಇರುವ ಹೂವುಗಳು ಒಂದಕ್ಕೆರಡಾಗಲೆಂದನು ಅದರಂತೆ ಯಾಗಲು ಅಲ್ಲಿ ಕೆಲವು ಹೂವುಗಳಂನು ಏರಿಸಿ, ೨ ಎರಡನೇ ದೇವಾಲಯಕ್ಕೆ ಹೋಗಿ ಅಲ್ಲಿ ನಂನ ಹತ್ತರಿರುವ ಹೂವುಗಳು, ಕೂಡಿ ಬಂದ ಲಬ್ಧ (ಅವನ ಹತ್ತರ ನಾಲ್ಕು ಪುಷ್ಪಗಳು ಉಳಿದವೆಂದು ತಿಳಿಯುವಾ ಆದರೆ ೧+೨+೩+೪ ಇವುಗಳ ಬೇರೀಜು ೧೦ ಹತ್ತು ಆಯಿತು). ಇದರಂತೆ

ಯೋ ಅವನ ಹತ್ತರ ಎಷ್ಟು ಪುಷ್ಪಗಳು ಉಳಿದವೆಯೋ ಅದರ, ಕೂಡ ಬಂದ ಲಬ್ಧ ಆಗಲಿ ಎಂದನು. ಅದರಂತೇ ಆಗಲು ಅಲ್ಲಿ ಮೊದಲಿನ ದೇವಾಲಯದಲ್ಲಿ ಏರಿಸಿದ ಪುಷ್ಪಗಳಷ್ಟೇ ಏರಿಸಿದನು ಆ ಮೇಲೆ ಅವನು ಮೂರನೇ ದೇವಾಲಯಕ್ಕೆ ಹೋಗಿ ಅಲ್ಲಿ ಪ್ರಾರ್ಥಿಸಿದನಲ್ಲಾ ನಂನ ಹತ್ತರ ಉಳಿವ ಹೂವುಗಳು ಎಕೋತ್ರಿಯಾಗಲೆಂದನು. ಅದರಂತೆ ಯಾಗಲು ಅಲ್ಲಿ ಮೊದಲಿನ ದೇವಾಲಯದಲ್ಲಿ ಏರಿಸಿದಷ್ಟೇ ಹೂವುಗಳಂನು ಏರಿಸಿದನು ಅವನ ಹತ್ತರ ಬಾಕೀ ಪುಷ್ಪಗಳು ಉಳಿಯಲಿಲ್ಲವು ಆದರೆ ಅವನು ಮುನಿಯಿಂದ ಮೈದ ಪುಷ್ಪಗಳೆಷ್ಟು ಮತ್ತು ಏರಿಸಿವ ಹೂವುಗಳೆಷ್ಟು? ಈ ಲೆಕ್ಕವಂನು ನಮ್ಮ ಭಾಂಧವರಾದ ಯಾವತ್ತು ಮಾಸ್ತರರಾಗಲಿ ಮತ್ತೆ ವಿದ್ವಜ್ಜನರಾಗಲಿ ರೀತಿವಾರ ಮಾಡಿ ತಿಳಿಸುವರೆಂದು ಬೇಡಿಕೊಳ್ಳುತ್ತೇನೆ ಪತ್ರವಿಸ್ತಾರಕ್ಕೆ ಕ್ಷಮೆ ಇರಬೇಕು.

ತಾ. ೨೫ ಮಾಹೆ } ಮುಹಮ್ಮದ ಮುದಾರಖಾನ ಅಸಿಸ್ಟಂ
ಜಾನೇವಾರೀ ಸನ್ } ಟ ಮಾಸ್ತರ ಶಾಳಾ ಹಂಚಿನಾಳ ತಾ.
೧೮೭೬ ಇಸ್ವಿ. } ಪರಸಗಡ ಜಿಲ್ಲಾ ಬೆಳಗಾಂವ.

ಪತ್ರ ಕಳಿಸುವವರಿಗೆ ಸೂಚನೆ.

ಶಿಗ್ಗಲಿ, ತಬಕದ ಹೊಂನಿಹಳ್ಳಿ ನಿಮ್ಮ ಪತ್ರಗಳು ಬಂದು ಮುಟ್ಟಿದವು. ಒಂದೇ ತರದ ಪತ್ರಗಳು ೨।೪ ಬಂದದರಿಂದ ಅವುಗಳಲ್ಲಿ ಒಂದಂನು ಛಾಪಿಸಿರುತ್ತೇವೆ.

ಸ್ಕೂಲ ಮಾಸ್ತರ ಬಿಣಗೆ—ನಿಮ್ಮ ಪತ್ರಬಂದು ಮುಟ್ಟಿತು. ಅದರಲ್ಲಿ ಚಿತ್ತು ಕಾಟ ಬಹಳ ಇದ್ದದ್ದರಿಂದಲೂ ಕೆ

ಲವು ಅಂಕೆ, ಅಕ್ಷರಗಳು ಸಂಶಯ ಯುಕ್ತವಾಗಿರುವದರಿಂದಲೂ ಛಾಪಿಸಲಿಲ್ಲ.

ಆಮರಗೊಳ್ಳ—ನಿಮ್ಮ ಪತ್ರ ಬಂದು ತಲಪಿತು. ಮುದ್ರಿಸುವದಕ್ಕೆ ಲಾಯಿಖ ಇಲ್ಲ.

ದತ್ತೋ ನಾರಾಯಣ ಡೆ. ಪೋ. ಮಾಘಾಪೂರ— ನಿಮ್ಮ ಪತ್ರದಲ್ಲಿ ಶಾಲಾಪತ್ರಕಕ್ಕೆ ತಕ್ಕ ಮಜಕೂರು ಇಲ್ಲ. ಆದದರಿಂದ ಅದನ್ನು ಛಾಪಿಸಲಿಲ್ಲ. ಯೋಗ್ಯ ವಿಷಯ ಕಳುಹಿದರೆ ಅವಶ್ಯ ಸ್ಥಳ ಸಿಕ್ಕುವದು.

ಪಾಟೀಲ ಕುಲಕರ್ಣಿ ಕರಡಗೀ ತಾ. ಬಂಕಾಪೂರ—ಮಾಸ್ತರಜನರ ಒಣ ಸಿಫಾರಸಗಳನ್ನು ಛಾಪಿಸುವದಕ್ಕೆ ನಮ್ಮ ಪತ್ರದಲ್ಲಿ ಸ್ಥಳ ದೊರಿಯಲಾರದು.

ಗಣೇಶ. ಬಿ. ಅಠವಲೇ ಡೆ. ಪೋ. ಗುಳೇದಗುಡ್ಡ—ಡಿಪೂಟಿಯವರಾಗಲೀ ಎರಡನೇ ಜನರಾಗಲೀ ಸಾಲೀ ಪರೀಕ್ಷೆ ತಕ್ಕೊಂಡು ಶೆರಾ ಬರೆದು ಹೋದದ್ದು ಶಾಲಾಪತ್ರಕದಲ್ಲಿ ಪ್ರಸಿದ್ಧ ಮಾಡಲಿಕ್ಕೆ ಮಜಕೂರು ಅಲ್ಲ. ವಿದ್ಯಾಸುಧಾರಣೇ ಸಂಬಂಧ ವಿಷಯಗಳಿಗೆ ನಮ್ಮಲ್ಲಿ ಅವಕಾಶಾನುಸಾರ ಸ್ಥಳ ದೊರೆಯುವದು.

ಸಿದ್ಧನಾಥ

ಮೋರಬ. ಜಿ. ಧಾರವಾಡ.

ಶಾಲಾಪತ್ರಕವು.

ಪುಸ್ತಕ ೧೧] [ಸಂಚಿಕೆ ೧೨.

ತಾರೀಖು ೨೫ನೇ ಮಾಹೆ ಮಾರ್ಚ, ೧೮೭೬.

EDUCATIONAL INTELLIGENCE.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮ. ಎಜ್ಯುಕೇಶನಲ್ ಇನಸ್ಪೇಕ್ಟರ ದ. ಭಾ. ಧೊ
ಗಳು ಈಗ ಕರ್ಜಗೀ ತಾಲೂಕಿನಲ್ಲಿ ಇದ್ಧಾರೆ. ಮುಂ
ರಾಣೇಬಿದನೂರಿಗೆ ಹೋಗಿ ಅಲ್ಲಿಂದ ಹಾನಗಲ್ಲ ಮೇ
ಹಾಯ್ದು, ಕಾರವಾಡದ ಕಡಿಗೆ ಹೋಗತಕ್ಕವರಿದ್ಧಾ
ಂದು ಕೇಳುತ್ತೇವೆ.

ಮರಾಠಿ ತ್ರಾನ್ಸಲೇಟರರಾದ ಕ್ಯಾಂಡಿ ಧೊರೆಗಳು ಆ
ತಿಂಗಳ ರಜೆ ತಕ್ಕೊಂಡು ವಿಲಾಯತಿಗೆ ಹೋದ ಪ್ರ
ಯುಕ್ತ, ಅವರು ತಿರುಗಿ ಬರುವ ವರಿಗಾಗಲೀ ಮುಂದೆ
ರಡನೇ ಹುಕುಮು ಆಗುವ ವರೇಗಾಗಲೀ, ಅವರ ಕೆಲ
ಕ್ಕೆ ಅಹಮ್ಮದನಗರ ಜಿಲ್ಹೆಯ ಡಿ. ಎ. ಇ. ರಾದ ರಾ.
. ಶ್ರೀಕೃಷ್ಣ ರಘುನಾಥ ಶಾಸ್ತ್ರಿ ತಳೇಕರ ಇವರನ್ನು
ಮಿಸಿರುತ್ತಾರೆ.

ಮುಂಬಯಿ 'ಎಜ್ಯುಕೇಶನಲ್ ರಿಕಾರ್ಡ' ಎಂಬ
ಸ್ತಕದ ಕಳೆದ ಫೇಬ್ರುವಾರಿ ತಿಂಗಳ ಸಂಚಿಕೆಯಲ್ಲಿ
ತ್ತರ ಭಾಗದ ಎ. ಇನಸ್ಪೇಕ್ಟರರಾದ ಗಾಯಿಲ್ಸ ಧೊರೆ
ಳು ಒಂದು ಮಹತ್ವವುಳ್ಳ ನೋಟೀಸು ಕೊಟ್ಟಿರುತ್ತಾ
ಅದರಕಡೆ ಯಾವತ್ತು ಮಾಸ್ತರ ಜನರೂ ವಿದ್ಯಾರ್ಥಿಗಳ
ಲಕ್ಷ ಕೊಡಬೇಕು. ಅದು ಏನಂದರೆ:-

ಕಳ್ಳ ಸರಟೀಫಿಕೇಟು,

೧ ಛೋಟಾಲಾಲ್‌ನರೋತ್ತಮ ಎಂಬ ಒಬ್ಬನು, ಕೆ
ವು ದಿವಸಗಳ ಹಿಂದೆ ಖೇಡಾ ಅಂಗ್ಲೋಹ್ವರನ್ಯಾಕ್ಯುಲ್ಲ
ಶಾಲೆಯಲ್ಲಿ ವಿದ್ಯಾರ್ಥಿಯಾಗಿದ್ದನು. ಇವನು ಒಂದ
ಕಳ್ಳ ಸರಟಿಫಿಕೇಟು ಹುಟ್ಟಿಸಿ, ಆದರ ಮೇಲೆ ಖೇಡ
ಅಂಗ್ಲೋಹ್ವರನ್ಯಾಕ್ಯುಲ್ಲರ ಶಾಲೆಯ ಹೆಡ್‌ಮಾಸ್ತರನ
ಹಿ ಯೆಂತೆಯೇ ಸಹಿ ಮಾಡಿ, ಸರಕಾರದಲ್ಲಿ ನೌಕರಿ
ದೊರಕಿಸುವದಕ್ಕಾಗಿ ಅಲ್ಲಿಯ ಪೋಲೀಸ ಸುಪರಿಂಟೆ
ಡರಾದ ಮೇಜರ ಲಾಟೌಚ ಯೆಂಬವರ ಕಡಿಗೆ ಕಳು
ಕೊಟ್ಟನು. ಮುಂಷೆ ಆ ಸರಟೀಫಿಕೆಟಿನ ಬಗ್ಗೆ ಸಂಶಯ
ಬಂದು ವಿಚಾರ ನಡಿಸಲಾಗಿ, ಅದು ಹುಟ್ಟಿಸಿದ್ದೆಂದು ಅವ
ಮೇಲೆ ಶಾಬೀತಾಗಿ, ಖೇಡಾ ಮತ್ತು ಅಮದಾಬಾದದ
ಸಿಷ್ಟಂಟ ಜಜ್ಜರು ಸದರೀ ವಿದ್ಯಾರ್ಥಿಗೆ ೨ ತಿಂಗಳ
ಕ್ತ ಮಜೂರಿಯ ಕೈದಿನ ಶಿಕ್ಷೆ ಕೊಟ್ಟರು.

೨ ಸರಿಯಾದ ಶಾಲೆಯೊಳಗಿನವನೊಬ್ಬ ಗಿರಜಾಶಂಕ
ರ ಜಿಹ್ವರಾಮ ಯೆಂಬ ವಿದ್ಯಾರ್ಥಿಯು, ಛೋಟಾಲಾಲ
ಯೆಂಬವನಿಗೆ ಕಳ್ಳ, ಸರಟೀಫಿಕೇಟು ಹುಟ್ಟಿಸುವದರಲ್ಲಿ

ಸಹಾಯು ಕೂಡಿರುತ್ತಾನೆಂದು ಅಮದಾಬಾದಗ ಅ. ಜಜ್ಜರು ತಮ್ಮ ಫಾಯಿಂಡಿಂಗದಲ್ಲಿ ಬರದದ್ದನ್ನು ಕಂಡು ಆ ಶಾಲೆಯ ಹೆಡ್ಮಾಸ್ತರನು ಆ ಹುಡುಗನನ್ನು ಶಾಲೆಯಿಂದ ಕಿತ್ತು ಹಾಕಿ ಬಿಟ್ಟನು.

ವಿಲಾಯತಿಯಲ್ಲಿ, ಪಾರ್ಲಮೆಂಟ ಸಭೆಯವರು ಇತ್ತ ಕಡಿಗೆ ಛಾಪಿಸಿರುವ ಕೆಲವು "ಬ್ಲೂ ಬುಕ್ಸ" ಯೆಂಬ ಪುಸ್ತಕಗಳ ಮೇಲಿಂದ ತಿಳಿದು ಬರುವದೇನಂದರೆ, — ಇಂಗ್ಲಿಶ ಜನರ ವಶದಲ್ಲಿದ್ದಂಥ ಹಿಂದುಸ್ಥಾನದ ಭಾಗದಲ್ಲಿ ೯೦೭೦೮೬ ಚೌಕು ಮೈಲು, ೫೦ ವಿಭಾಗಗಳು, ೨೩೫ ಜಿಲ್ಲೆಗಳು, ೩೭೦೪೧೨೫೯ ವಸ್ತಿ ಮನೆಗಳು, ಇರುತ್ತವೆ. ಜನಸಂಖ್ಯೆ ೧೯೦೫೬೩೦೪೮ ಜನರು ಇರುತ್ತಾರೆ. ಈ ಜನವಸ್ತಿಯಲ್ಲಿ ೧೩೯೨೪೮೫೬೮ ಹಿಂದು, ೧೧೭೪೪೩೬ ಸೀಬರು, ೪೦೮೮೭, ೫೩೭ ಮುಸಲಮಾನರು, ೨೮೩೭೮೪೧ ಬುದ್ಧರು, ಜೈನರೂ ೮೯೬೬೫೮ ಕ್ರಿಸ್ತರೂ, ೫೧೦೨೮೨೩ ಇತರ ಧರ್ಮದವರೂ, ೪೩೫೧೭೫ ಯಾವ ಧರ್ಮಕ್ಕೂ ಹೊಂದದಂಥವರು ಇದ್ಧಾರೆಂದು ತಿಳಿಯುತ್ತದೆ.

ಆಶ್ರಿತ ಸಂಸ್ಥಾನಗಳಲ್ಲಿ ೫೪೬೬೯೫ ಚೌಕು ಮೈಲುಗಳು, ಇದ್ದು ೪೮೨೬೭೯೧೦ ಜನರು ಇರುತ್ತಾರೆ. ಒಟ್ಟು ೧೪೫೩೭೮೧ ಚೌಕು ಮೈಲು, ೨೩೮೮೫೦೯೫೮ ಜನ ಸಂಖ್ಯೆಯೂ, ಇರುತ್ತದೆ.

ವೈದ್ಯಕೀ ಖಾತೇದ ಮಾಜಿ ಆನೇ ಹಾಸ್ಪಿಟಲ ಮದ ಕನೀಸರಾದ ಮಿಸ್ತರ ವಿಹಮಹ ಇದೂ,ಸ ಎಂಬವರು ಕ

ರ್ಪವಂಶದ ಮೇಲೆ ಒಂದು ವನಸ್ಪತಿ ಕ್ರಡುಕಿ ತೆಗಿದಿರುತ್ತಾರೆ. ಆವರು ಅದರ ಪ್ರಯೋಗದಿಂದ ಬೇಕಾದಂಥ ಪ್ರಬಲ ದಂಶವನ್ನು ನೆಟ್ಟಗೆ ಮಾಡುತ್ತಾರೆ. ಆವರು ಈಗ್ಗೆ ಮುಂಬಯಿಯಲ್ಲಿ ಕ್ರಾಫರ್ಡಮಾರ್ಕೇಟ ಎಂಬ ಸ್ಥಳದಲ್ಲಿ ಇರುತ್ತಾರೆ.

---

೫೦ ರೂಪಾಯಿ ಸಂಬಳವುಳ್ಳಂಥಾ ಯಾವನಾದರೊಬ್ಬ ಸರಕಾರೀ ನೌಕರನು ತಿರುಗುವಾಗ್ಗೆ ದಾರಿಯಲ್ಲಿ ಹೊಗೇಬಂಡಿ ಇದ್ದರೆ, ಅವನಿಗೆ ಆ ದಿವಸದ ಬಗ್ಗೆ ಹೊಗೆಬಂಡಿಯ ಎರಡನೇ ವರ್ಗದ ಬಾಡಿಗೆ ಸಿಕ್ಕುವದು, ಇಲ್ಲವೆ ಆ ದಿವಸದ ನಿಯಮಿತ ಭತ್ತೆ ಶಿಕ್ಕುವದು. ಆದರೆ ಒಂದೇ ದಿವಸದಪೆಶೆಯಿಂದ ಯೆರಡೂ ಪ್ರಕಾರದ ಭತ್ತೆಗಳು ಶಿಗಲಾರವೆಂದು ಸರಕಾರದವರು ಠರಾವು ಮಾಡುತ್ತಾರೆ.

ಮುಂಬಯಿ ಇಲಾಖೆಯಲ್ಲಿ ೧೮೭೪_೭೫ ಇಸವಿಯಲ್ಲಿ ವಿದ್ಯೆಯ ದೆಶೆಯಿಂದ ೧೦೬೬೨೬೯ ರೂಪಾಯಿ ಪ್ರಾವ್ಹಿನ್ಸಿಯಲ್ ಫಂಡಿನಿಂದ, ೧೧೯೧೦೨೮ ರೂಪಾಯಿ ಲೋಕಲ್ ಫಂಡಿನಿಂದ, ಈ ಮೇರಿಗೆ ಒಟ್ಟು ೨೨೫೭೨೯೭ ರೂಪಾಯಿ ವೆಚ್ಚಾಗಿರುತ್ತವೆ. ಅದೇವರ್ಷ ಬಂಗಾಲ ಇಲಾಖೆಯಲ್ಲಿ ವಿದ್ಯಾ ಸಂಬಂಧವಾಗಿ ಒಟ್ಟು ೩೯೨೭೦೦೦ ರೂಪಾಯಿ ವೆಚ್ಚವಾಗಿರುತ್ತವೆ. ಅದರಲ್ಲಿ ೨೨೫೯೦೦೦ ರೂಪಾಯಿ ಸರಕಾರದವರು ಕೊಟ್ಟರು. ೧೬೬೮೦೦೦ ರೂಪಾಯಿ ಅಲ್ಲಿಯ ಜನರು ಕೊಟ್ಟರು.

ಉಮೇದವಾರರಿಗೆ ಯುನಿವ್ಹರ್ಸಿಟೀ ಪದವಿ ಸಿಗದ ಹೊರ್ತು ಅವರು ನೇಟೀವ್ಹ ಸಿವ್ಹಿಲ ಸರವೀಸದ ಮೇಲಾದ ವರ್ಗದಲ್ಲಿ ಶೇರಲಾಗದೆಂತಲೂ, ಎಫ್. ಇ. ಯೆ. ಪರೀಕ್ಷಾ ಕೊಡದ ಹೊರ್ತು ಕೆಳಗಿನ ವರ್ಗದ ನೌಕರೀಯಲ್ಲಿ ಶೇರಲಾಗದೆಂತಲೂ, ಬಂಗಾಲದ ಲೆಫ್ಟಿನೆಂಟ ಗವ್ಹರ್ನರರಾದ ಸರ್ ರಿಚಾರ್ಡಟೆಂಪಲ್ ಎಂಬವರು ಠರಾವು ಮಾಡಿರುತ್ತಾರೆ.

ಕಲಕತ್ತಾ ಯುನಿವ್ಹರ್ಸಿಟಿಯವರು ಹೋದ ತಿಂಗಳಲ್ಲಿ, ರೆವ್ಹ. ಕೆ. ಎಮ್ ಮಾನರಜೀ ಇವರಿಗೂ ಬಾಬುರಾಜೇಂದ್ರಲಾಲ್ ಮಿತ್ರ ಇವರಿಗೂ, ಅವರ ದೊಡ್ಡ ವಿದ್ವತ್ತೆಯ ಬಗ್ಗೆ ‘ಡಾಕ್ತರ ಆಫಲಾ’ ಎಂಬ ಬಹುಮಾನದ ಪದವಿ ಕೊಟ್ಟರು. ಇದಕ್ಕೂ ಪೂರ್ವದಲ್ಲಿ ಸದರೀ ಯುನಿವ್ಹರ್ಸಿಟಿಯವರು, ಯುವರಾಜರಾದ ಪ್ರಿನ್ಸ ಆಫ್ ವೇಲ್ಸ ಎಂಬವರಿಗೂ ಈ ಪದವಿಯನ್ನು ಕೊಟ್ಟಿದ್ದರು.

ಬಾಬುರಾಜೇಂದ್ರಲಾಲ್ ಮಿತ್ರ ಇವರು ‘ಅಂಟಿಕ್ವಿಟೀಸ ಆಫ್ ಓರಿಸಾ’ (ಓಡಿಶಾ ಪ್ರಾಂತದೊಳಗಿನ ಪ್ರಾಚೀನ ಕೃತ್ಯಗಳು) ಯೆಂಬ ಹೆಸರಿನದೊಂದು ಪುಸ್ತಕ ಮಾಡಿದ್ದಾರೆ. ಅದರ ೨೫ ಪ್ರತಿಗಳು ಹಿಂದುಸ್ಥಾನ ಸರಕಾರದವರ ಮಾರಿಫತು ವಿಲಾಯತಿಯೊಳಗಿನ ದೊಡ್ಡ ದೊಡ್ಡ ಗೃಹಸ್ಥರ ಕಡಿಗೆ ಹೋಗಿದ್ದವು. ಅದರಲ್ಲಿ ಒಂದು ಪ್ರತಿ ಸ್ಟೇಟ ಸೆಕ್ರೆಟರೀಯವರ ಮಾರಫತು ಡಾಕ್ತರ ಮಾಕ್ಸಮುಲ್ಲರ ಸಾಹೇಬರ ಕಡಿಗೆ ಹೋಗಿತ್ತು. ಅವರು

ಸದರೀ ಪುಸ್ತಕವನ್ನು ಬಹಳ ತಾರೀಫ ಮಾಡಿದರು. ಅವರ ಅಭಿಪ್ರಾಯವೇನಂದರೆ, "ಇದೇ ಪ್ರಕಾರದ್ದೊಂದು ಪುಸ್ತಕವನ್ನು ಯುರೋಪಿಯನ ಪಂಡಿತನು ಯಾವನಾದರು ಮಾಡಿದ್ದರೆ, ಅವನದು ಬಹಳ ಶಿಫಾರಸು ಆಗುತ್ತಿತ್ತು. ಈ ಪುಸ್ತಕವನ್ನು ಒಬ್ಬ ಹಿಂದು ಪಂಡಿತನು ಮಾಡಿದ್ದಾನೆ. ಇದರಲ್ಲಿ ನಿಜವಾದ ವಿದ್ಯೆಯೂ, ಸ್ವದೇಶದ ಪ್ರಾಚೀನ ಇತಿಹಾಸದ ಯೋಗ್ಯತೆಯೂ, ಇವರ ಕಿಮ್ಮತ್ತೂ ನೋಡಲಾಗಿ ಹಿಂದು ಜನರಿಗೆ ಪುನಃ ಉಚ್ಚತೆಯು ಬರುವ ಸುಚಿನ್ಹಗಳು ಕಂಡು ಬರುತ್ತವೆಂದು ತಿಳಿಯಬೇಕು." ಸ್ಟೇಟ ಸೆಕ್ರೆಟರಿಯವರು ಈ ಅಭಿಪ್ರಾಯ ಪತ್ರದ ನಕಲು ಹಿಂದುಸ್ಥಾನ ಸರಕಾರದವರ ಕಡೆಗೆ ಕಳುಹಿ, ಬಾಬು ರಾಜೇಂದ್ರ ಇವರು ತಕ್ಕೊಂಡ ಶ್ರಮದ ಬಗ್ಗೆ ಬಹಳ ಸಂತೋಷವನ್ನು ತೋರಿಸಿ, ಇನ್ನೂ ಕೆಲವರು ಇದೇ ಪ್ರಕಾರ, ಇತಿಹಾಸದ ಬಗ್ಗೆಯೂ, ಇತರ ಶಾಸ್ತ್ರಗಳ ಬಗ್ಗೆಯೂ ಶೋಧ ಮಾಡಿದರೆ, ಅದರಿಂದ ತಮಗೆ ಬಹಳ ಸಮಾಧಾನವಾಗುವದೆಂದು ಬರೆದಿರುತ್ತಾರೆ.

NOTICES AND CIRCULARS.

ನೋಟಿಸುಗಳೂ, ಸರಕ್ಯುಲರಗಳೂ.

ಸರಕ್ಯುಲ್ಲರ ನಂಬರು ೨೯೨೦

ದ. ವಿ. ಇನಸ್ಪೆಕ್ಟರ ಸಾಹೇಬರವರ ಕಚೇರಿಯಿಂದ ಯಾದಾಸ್ತಃ—

ಸರಕಾರಿ ವ್ಹರ್ನ್ಯಾಕ್ಯುಲ್ಲರ ಶಾಲೆಗಳಲ್ಲಿ ಮಾಸ್ತ
ರರ ಯಾವತ್ತು ವೇಳೆ ಸ್ಟ್ಯಾಂಡರ್ಡನಲ್ಲಿಯ ಇತರ
ಯಗಳನ್ನು ಕಲಿಸುವದರಲ್ಲಿಯೇ ಹೋಗಿ ಅವರು ಕೈ
ರಹದ ಕಾಗದಗಳನ್ನು ಓದಿಸುವದರ ಕಡೆಯೂ ಬಾಯಿ
ಕ್ಖಗಳ ಮಾಡಿಸುವದರ ಕಡೆಯೂ ದುರ್ಲಕ್ಷ ಮಾಡು
ರೆಂದು ಹಲವರು ಕುಂಬು ಇಡುತ್ತಾರೆ.

ಈ ವಿಷಯಗಳನ್ನು ಗಾವಠಿ (ಊರ) ಶಾಲೆಗಳಲ್ಲಿ
ಳ ಒಳ್ಳೇ ರೀತಿಯಿಂದ ಕಲಿಸುವದರಿಂದ ಆ ಶಾಲೆಗ
ಜನರಿಗೆ ವಿಶೇಷ ಬೇಕಾಗಿರುತ್ತವೆಂದು ಹೆಳುತ್ತಾರೆ.

ಇನ್ನು, ಈ ವಿಷಯಗಳು ನಮ್ಮ ಸರಕಾರಿ ಇಯ
ಳಲ್ಲಿ ಹಾಕಿರುತ್ತವೆ. ಹಾಂಗು ಅವುಗಳನ್ನು ದು
ಕ್ಷಿಸ ಬಾರದೆಂದು ಹುಕುಮುಗಳೂ ಕೊಟ್ಟಿರುತ್ತವೆ
ರ್ನ್ಯಾಕ್ಯುಲ್ಲರ ಇಯತ್ತೆಗಳಲ್ಲಿಯ ಯಾವತ್ತು ವಿಷ
ಗಳನ್ನು ಕಲಿಸುವದಕ್ಕೆ ಬೇಕಾದಷ್ಟು ವೇಳೆ ಇದ್ದು
ವಿಷಯಗಳ ಕಡೆ ದುರ್ಲಕ್ಷ ಮಾಡುವದಕ್ಕೆ ಮಾಸ್ತ
ಜನರಿಗೆ ಏನು ಕಾರಣವಿಲ್ಲ.

ಬಾಯಿಲೆಕ್ಖಗಳಲ್ಲಿಯೂ, ಕೈ ಬರಹದ ಕಾಗದ ಓ
ಣದರಲ್ಲಿಯೂ, ಅಕ್ಷರ ಬರಿಯುವದರಲ್ಲಿಯೂ, ಸ
ರಿ ಶಾಲೆಗಳಗಿಂತಾ ಗಾವಠಿ ಶಾಲೆಗಳು ಮೇಲಾಗಿದ್ದ

ಈ ಸಂಬಂಧದ ದೋಷವು ನಮ್ಮ ಮಾಸ್ತರ ಜನರ
, ಹೊರ್ತು ಎರಡನೇಯವರದಲ್ಲ.

ಆದದರಿಂದ ಡಿಪೂಟಿ ಇನಸ್ಪೆಕ್ಟರರೂ, ವ್ಹರರ್ನ್ಯಾ
ಲ್ಲರ ಶಾಲೆಯ ಮಾಸ್ತರರೂ, ತಿರಿಗೊಮ್ಮೆ ಇತ್ತ
ಗ ಲಕ್ಷ ಕೊಡಬೇಕು. ಎಲ್ಲೆಲ್ಲಿ ಈ ವಿಷಯಗಳ ಕಡೆ

ಗ ದುರ್ಲಕ್ಷ ಮಾಡಿದ್ದು ಕಂಡು ಬರುತ್ತದೆಯೋ ಅ ಲ್ಲಿಯ ಮಾಸ್ತರರಿಗೆ, ಬಡತಿಯಾಗಲೀ, ಅಲಾವನ್ಸವಾ ಲೀ, ದೊರೆಯಲಿಕ್ಕಿಲ್ಲ. ಇಷ್ಟೇ ಅಲ್ಲ, ಆ ಮಾಸ್ತರ ನರಿಗೆ ಕಡಿಮೆ ಸಂಬಳಕ್ಕೆ ಸಹ ಹಾಕಲಾದೀತು, ಇಲ್ಲ ದಂಡ ಮಾಡಲಾದೀತು.

೩. ಇನಸ್ಪೆಕ್ಟರರು ತಾವು ವಾರ್ಷಿಕ ಪರೀಕ್ಷೆ ಹೋದಾಗ ಈ ವಿಷಯಗಳನ್ನು ಚನ್ನಾಗಿ ಲಕ್ಷ ಕೊಟ್ಟ ನೋಡತಕ್ಕದ್ದು. ಹುಡುಗರು, ಕೈ ಬರಹದ ಕಾಗದಗ ನ್ನು ಓದುವದರಲ್ಲಿಯೂ, ಬಾಯಿಲೆಕ್ಕಗಳಲ್ಲಿಯೂ ನ ಪಾಸ ಆಗಿ, ಪುಸ್ತಕಗಳನ್ನು ಓದುವದರಲ್ಲಿಯೂ, ಹ ಗಗಳ ಮೇಲೆ ಗಣಿತ ಮಾಡುವದರಲ್ಲಿ ಯೆಷ್ಟು ಚಲೋ ಪಾಸಾಗಿದ್ದರೂ, ಓದುವ ಸದರಿನಲ್ಲಿಂದಲೂ, ಗಣಿತ ಸದ ನಲ್ಲಿಂದಲೂ ಆ ಹುಡುಗರನ್ನು ತೆಗಿದು ಹಾಕಬೇಕು. ದರಿಂದ ಉಂಟಾಗುವ ಪರಿಣಾಮವನ್ನು ಮಾಸ್ತರ ಜನ ಅನಭೋಗಿಸುವರು.

ನಂಬರು ೩೩೩೪

ಮೆ. ಎಜ್ಯುಕೇಶನಲ್ಲ ಇನಸ್ಪೆಕ್ಟರ ಸಾಹೇಬರವ
ಕಡೆಯಿಂದ,—

ಧಾರವಾಡ ಡಿ. ಎ. ಇನಸ್ಪೆಕ್ಟರವರಿಗೆ,—

ಯಾದಾಸ್ತ—

ಈಗ್ಯೆ ಟ್ರೇನಿಂಗಕಾಲೇಜ ಪ್ರವೇಶ ಪರೀಕ್ಷೆಯ ಪಾಸಾದ ವಿದ್ಯಾರ್ಥಿಗಳು ಬೇಕಾದಷ್ಟು ಜನರು ಶಿಕ್ಕ ಬುವವರಿಂದ, ಈ ಪ್ರಕಾರದ ವಿದ್ಯಾರ್ಥಿಗಳು ಪಾಸಾದ

ಗ್ಯ ಬಕ್ಷೀಸು ಕೊಡುವದನ್ನು ಇನ್ನು ಮುಂದೆ ನಿಲ್ಲಿಸ ಬೇಕೆಂದು, ಮೆಹರ್ಬಾನ ಡಾಯರೆಕ್ಟರ ಸಾಹೇಬ ಬಾಹದ್ದರವರರು ಕಟ್ಟಳೆ ಮಾಡಿರುತ್ತಾರೆ. ಅದೇ ಮೇರಿಗೆ ನ್ಯೂಪಿಲ್ಲ ಟೀಚರ ಸ್ಥಳಗಳನ್ನಾದರೂ ಕಡಿಮೆ ಮಾಡಿರುತ್ತಾರೆ.

ಮು. ರಾಣೆಬಿನ್ನೂರ,
ತಾ. ೨೧ ಮಾರ್ಚ,
ಸ. ೧೮೭೬ ಇಸವಿ.

(Signep.)W. A. RUSS ELL.
ಎ. ಇನಸ್ಪೆಕ್ಟರದಕ್ಷಣ ಭಾಗ.

ಮೆ. ಎ. ಇನಸ್ಪೆಕ್ಟರವರ ಕಡೆಯಿಂದ

ಧಾರವಾಡ ಟ್ರೇನಿಂಗಕಾಲೇಜದ ಪ್ರಿನಸಿಪಾಲರಿಗೆ—

ರೂದಾಸ್ತಃ—

ಇನ್ನು ಮುಂದೆ ಟ್ರೇನಿಂಗ ಕಾಲೇಜ ವಿದ್ಯಾರ್ಥಿಗಳ ಡೆಯಿಂದ ಮುಂದೆ ಮಾಸ್ತರ ಕೆಲಸ ಮಾಡುವೆವೆಂಬ ಬ ಮುಚ್ಚಳಿಕೆಗಳನ್ನು ಬರಸಿಕೊಳ್ಳಲಿಕ್ಕಿಲ್ಲ; ಹಾಂಗೂ ಾಸ್ತರ ಜನರಿಗೆ ಕೆಲಸ ಕೊಡತಕ್ಕ ವಿಷಯದಲ್ಲಿ ಈ ದ್ಯಾ ಖಾತೆಯು ಜಾಮೀನ ಆಗಲಿಕ್ಕಿಲ್ಲ. ಆದರೆ ಜಾಗಗ ನ್ನು ತುಂಬುವಾಗ್ಯೆ ಸರಟಿಫಿಕೇಟ ಪಡೆದಂಥ ಜನರನ್ನು ಚ್ಛೆಗೆ ಪಸಂದು ಮಾಡಲಾದೀತು. ಈಗ ಕಾಲೇಜದಲ್ಲಿ ುವ ವಿದ್ಯಾರ್ಥಿಗಳಿಗೂ ಹೊಸದಾಗಿ ಬರುವವಂಥ ಉಮೇ ವಾರರಿಗೂ ಈ ಸಂಗತಿಯನ್ನು ತಿಳಸತಕ್ಕದ್ದು.

ು. ಕ್ಕಾಮರಾಣೆಬಿನ್ನೂರ,
. ೨೪ ಮಾರ್ಚ,೧೮೭೬

(Sd.) W. A. Russell.
ಎ. ಇ. ದಕ್ಷಿಣ ಭಾಗ.

ಮೆ. ಎ. ಇನಸ್ಪೆಕ್ಟರ ಕಚೇರಿಯಿಂದ.

ಅನ್‌ಟ್ರೈನ್‌ಡ್ ಮಾಸ್ತರರಾದ ನಾರಾಯಣ ರಂಗ
ಇವರಿಗೂ ಟ್ರೇನಿಂಗಕಾಲೇಜದ ಯಾವತ್ತು ವಿದ್ಯಾಥ
ಳಿಗೂ, (ಟ್ರೇನಿಂಗಕಾಲೇಜ ಪ್ರಿನ್ಸಿಪಾಲರ ಮಾರಫತ
ನೋಟೀಸು.

ಗ್ರೇಸ ಮಾರ್ಕಗಳನ್ನು ಕೊಡಲಾಗದು. ೫ ವರ
ಗಳ ವರೆಗೆ ಹೆಡ್ಡ ಮಾಸ್ತರ ಕೆಲಸವನ್ನು ಮಾಡಿದಂ
ಅನ್‌ಟ್ರೇನ್‌ಡ್ ಮಾಸ್ತರರಿಗೆ, ಟ್ರೇನಿಂಗಕಾಲೇಜದ
ನ್ಸಿಪಾಲರಾಗಲೀ, ಡೆ. ಇನಸ್ಪೆಕ್ಟರರಾಗಲೀ, ಅವರು
ಯಖರಿರುತ್ತಾರೆಂದು ರಿಪೋರ್ಟ ಮಾಡಿದರೆ, ಟ್ರೇ
ಗಕಾಲೇಜಕ್ಕೆ ಹೋಗಲಿಕ್ಕೇ ಬೇಕೆಂದು ಅವಶ್ಯ ಇರ
ದಿಲ್ಲ. ಅವರು ಬೇಕಾದರೆ ಕಾಲೇಜದಲ್ಲಿ ನಿಂತುಕ
ಳ್ಳಬೇಕು, ಬೇಕಾದರೆ ತಮ್ಮ ಮೊದಲಿನ ಕೆಲಸಕ್ಕೆ
ರಿಗಿ ಹೋಗಬೇಕು. ಡೆ. ಇನಸ್ಪೆಕ್ಟರರಾಗಲೀ, ಇ
ವೇ ಟ್ರೇನಿಂಗಕಾಲೇಜದ ಪ್ರಿನ್ಸಿಪಾಲರಾಗಲೀ, ಯಾ
ಅನ್‌ಟ್ರೇನ್‌ಡ್ ಮಾಸ್ತರ ಬಗ್ಗೆ ನಾಲಾಯಖರೆಂದು
ಪೋರ್ಟ ಮಾಡುತ್ತಾರೋ ಅವರ ವ್ಯವಸ್ಥೆಯನ್ನು
ವು, ಸದರೀಯವರ ಸಂಮತಿಯಿಂದ, ಮಾಡುವೆವು.

ಮು. ಧಾರವಾಡ,
ತಾ. ೮ ಫೆಬ್ರುವಾರಿ
೧೮೭೩ ಇಸವಿ.

(Signed.) W. A. Russell.
ಎ. ಇನಸ್ಪೆಕ್ಟರ ದಕ್ಷಣ ಭಾಗ.

ಸರಕ್ಯುಲರ ನಂಬರ ೮೮೫

ಕಲಾದಗಿ ಜಿಲ್ಲೆಯೊಳಗಿನ ಯಾವತ್ತು ಸ್ಕೂ

ಮಾಸ್ತರರಿಗೆ—

ತಿಳಿಯ ಪಡಿಸುವದೇನಂದರೆ— ಸರಕಾರೀ ಸೋಯಿ ಯಗೋಸ್ಕರವಾಗಿ ಮಾಸ್ತರ ಮುಂತಾದವರ ಬದಲಿ ಮ ಡಿದರೆ, ಅವರಿಗೆ ಹಾದಿಯ ಭತ್ತೆ ದೊರೆಯುವ ಠರಾವಿದ್ದು ರಕ್ಯುಲ್ಲರ ಹುಕುಮು ಕೊಟ್ಟದೆ. ಅದರಿಂದ ಮಾ ಸ್ತರ ಜನರು ಬದಲಿ ಆದ ಕೂಡಲೆ ಭತ್ತೇದ ಗೋಸ್ಕ ರ್ಜ ಮಾಡುತ್ತಾರೆ ಕಾರಣ ಪುನಃ ಹುಕುಮು ಕೊಡ ದೇನಂದರೆ,—ಕೆಳಗೆ ಬರೆದಂತೆ ಬದಲಿ ಆಗಿದ್ದರೆ ಅವ ಗೆ ಭತ್ತೆ ದೊರಿಯಲಿಕ್ಕಿಲ್ಲ. ಸುಮ್ಮನೇ ಅರ್ಜ ಮಾಡ ಬಾರದು.

೧ ಮಾಸ್ತರರ ಕಬೂಲಿಯಿಂದ ಬದಲಿ ಆಗಿದ್ದರೆ—

೨ ಕೆಲಸ ಬರೋಬರಿ ಮಾಡದೆ ಸರಕಾರದಿಂದ ಟಪಕಾ ದೊರದು ಬದಲಿ ಆದರೆ—

೩ ಬಡತೀ ಜಾಗಾಕ್ಕೆ ಬದಲಿ ಆದರೆ—

ಈ ಪ್ರಕಾರ ಬದಲೀ ಆದಲ್ಲಿ ಭತ್ತೆ ದೊರಿಯಲಿಕ್ಕಿ . ಫಕ್ತ ಸರಕಾರದವರು ಸೋಯಿಯ ಗೋಸ್ಕರ ಇ ಷ್ಟ ಸಂಬಳಕ್ಕೆ ಬದಲಿ ಮಾಡಿದಲ್ಲಿ ಭತ್ತೆ ದೊರಿ ಯುವದು. ಆ ಬಗ್ಗೆ ಬಿಲ್ಲು ಕಳಿಸುತ್ತಿರಬೇಕು. ಬಿ ನಲ್ಲಿ ತನ್ನ ಸಂಬಳ ಯೆಷ್ಟು, ವ ಯಾವ ಗ್ರಾಮದಿಂ ಯಾವ ಗ್ರಾಮಕ್ಕೆ ಬದಲಿ ಆಯಿತು, ವ ಅಂತರ ಯೆ ಷ್ಟ ಮೈಲು, ಹಾದಿಯಲ್ಲಿ ಯೆಷ್ಟು ದಿವಸ ಹಿಡಿದವು, ದು ಬರಿದು ಸಹಿ ಮಾಡಿ ಬಿಲ್ಲು ಕಳಿಸಬೇಕು. ಅಂದರೆ ತ್ತೆ ಕೊಡಿಸುವ ವಿಚಾರ ಮಾಡಲಾದೀತು. ತಿಳಿಯುವದು

ತಾ. ೧೨ ಫೇಬ್ರುವಾರ, } (Sd.) R. A. SAVNOOR.
ಸನ್ನ ೧೮೭೬ ಇಸವಿ. } ಡಿ. ಎ. ಇ. ಜಿಲ್ಲಾ ಕಲಾದಗಿ

ಧಾರವಾಡ ಟ್ರೇನಿಂಗಕಾಲೇಜದಲ್ಲಿ ೧೮೭೫ ನೇ ಇಸವಿ ಅಗಟಂಬರ ೧೨ ನೇ ತಾರೀಖಿನ ದಿವಸಾ ವಾರ್ಷಿಕ ಪರೀಕ್ಷೆಯಲ್ಲಿ ಪಾಸಾದ ಜನರ ವಿವರ—

ನಂಬರು.	ಹೆಸರುಗಳು.	ವಿದ್ಯಾರ್ಥಿ ಮತ್ತು ಅ. ಮಾಸ್ತರ.	೧೦೦ಕ್ಕೆ ಪಡದ ಗುಣಗಳು.	ಎ.ರು.ಸರಟಿಫಿಕೇಟು
೧	ಅಡಿವೆಪ್ಪಾ ಸಂಗನಬಸಪ್ಪಾ ಧಾರವಾಡ.	ವಿದ್ಯಾರ್ಥಿಗಳು.	೭೭ ೧೬/೨೯	೨೫
೨	ರಾಯಪ್ಪಾ ಸತ್ಯಪ್ಪಾ ಚಿಕ್ಕೋಡಿ.	,,	೭೩ ೨೫/೨೯	,,
೩	ತುಕ್ಕೊ ಗೋವಿಂದ ಕುಲಕರ್ಣಿ.	,,	೭೩ ೮/೨೯	,,
೪	ರಾಯಪ್ಪಾ ಸೋಮಪ್ಪಾ ವಂಟಮೂರಿ.	,,	೭೦ ೫/೨೯	,,
೫	ರಾಮಚಂದ್ರ ಶಾಮರಾವ ರಾಯಬಾಗ.	,,	೬೬ ೬/೨೯	೨೦
೬	ಚನಬಸಪ್ಪಾ ತಮ್ಮಪ್ಪಾ ಅವಟಗಿ.	,,	೬೬ ೨/೨೯	,,
೭	ಧೋಂಡೋ ಗಂಗಾಧರ ಲಿಮಯೆ.	,,	೬೫ ೪೭/೮೭	,,

೮	ಬಾಜೀ ನಾರಾಯಣ ಸೋಹನಿ.	,,	೬೩ ೨೩/೨೯	೨೦
೯	ಕೃಷ್ಣಾಜಿ ನಾಗೋ ನ್ಯಾಸರಗಿ.	,,	೫೪ ೯/೨೯	,,
	ಅಂಟ್ರೇಂಡ ಮಾಸ್ತರರು.			
೧	ಹರಿ ಅಣ್ಣಾಜಿ ಸಾಬಡೆ.	ಅ. ಮಾ.	೬೭ ೩೬/೬೩	,,
೨	ಲಿಂಗಣಗವಡಾ ಬಸನಗವಡಾ.	,,	೬೧ ೩/೨೯	,,
೩	ವಿಷ್ಣು ರಾಮಚಂದ್ರ ಜೋಶಿ.	,,	೫೮	,,
	ಹೊರಗಿಂದ ಬಂದವರು.			
೧	ಗಣೇಶ ಅಚ್ಯುತ ಗೋಕರ್ಣ.	ಸ್ಕೂ. ಮಾ. ಚಂದಾವರ	೬೩	,,
೨	ಶ್ರೀನಿವಾಸ ಮಹಾದೇವ ನಾಡಿಗೇರ.	ಸ್ಕೂ. ಮಾ. ಶಿಳ್ಳವಳ್ಳ	೬೭ ೧೩/೨೬	,,
	ಮೊದಲನೇ ವರುಷದಲ್ಲಿ ಪಾಸಾದವರು.			
೧	ಆನಂದ ಬಾಳಕೃಷ್ಣ ದೇಶಪಾಂಡೆ.	ವಿದ್ಯಾರ್ಥಿ	೮೭ ೨೬/೨೯	೧೫
೨	ರುದ್ರಪ್ಪ ಬಂಡೆಪ್ಪ ರೇವಡಿ	,,	೮೦	,,
೩	ಶಂಕರಾ ಪಕೀರಪ್ಪ ಸಾಲಿ.	,,	೭೭ ೬/೨೯	,,
೪	ವೆಂಕಣಭಟ್ಟ ನಾರಾಯಣ ಭಟ್ಟ ಕಡಕಿ.	,,	೭೬ ೬/೨೯	,,
೫	ಯಾದವ ಜೀವಾಜಿ ಕಾರ್ತಕೋಟ.	,,	೭೩ ೨೪/೨೯	“
೬	ದಾಜಿ ನಾರಾಯಣ ಸೋಹನೆ.	,,	೭೩ ೧೫/೨೯	,,

೭	ಗ್ಯಾನು ಮಹಾರುದ್ರಪ್ಪಾ ಲೋಕಾಪೂರ.	,,	೭೧ ೩/೨೯	,,
೮	ಗೋವಿಂದ ಗುರುಮೂರ್ತಿ ಮಂಗಸೂಳಿ.	,,	೭೦ ೨೫/೨೯	,,
೯	ಗೋಪಾಳ ರಾಮಚಂದ್ರ ಬಸ್ತವಾಡ.	,,	೭೦ ೧/೨೯	,,
೧೦	ಮಹಮ್ಮದ ಖತ್ರಾಲ ಅಸುಮಿಯಾ.	,,	೬೮ ೨೫/೨೯	೧
೧೧	ಗಣೇಶ ವಿಷ್ಣು ಅಪಟೆ.	,,	೬೮ ೧೯/೨೯	,,
೧೨	ಬುರಾನೋದ್ದೀನ ಅಹಮ್ಮದ ಸಾಬ.	,,	೬೬ ೮/೨೯	,,
೧೩	ಬಾಳಾಜಿ ಕೃಷ್ಣ ಅಭ್ಯಂಕರ.	,,	೬೫ ೨೨/೨೯	,,
೧೪	ಶ್ರೀನಿವಾಸ ನರಸಿಂಹ ಯೆಳಪತ್ರಿ	,,	೬೦ ೨೪/೨೯	,,
೧೫	ಕೇಶವ ನರಸಿಂಹ ಧಾರವಾಡ	,,	೫೮ ೬/೨೯	,,
೧೬	ಹಣಮಂತ ವೆಂಕಟೇಶ ಕಾರಕೂನ	,,	೫೮ ೬/೨೯	,,
೧೭	ದತ್ತೋ ಗೋವಿಂದ ಪತಕಿ	,,	೫೫ ೧೮/೨೯	,,
	ಅಂಟ್ರೇಂಚ ಮಾಸ್ತರರು			
೧	ಕೃಷ್ಣಾಜಿ ಗುರುನಾಥ ಸಂಗಮ	ಮಾಸ್ತರ	೮೧ ೧೦/೨೯	೧
೨	ಸಂಬಾಜಿ ಬಾಪೂಜಿ ದಾನೆ	,,	೭೯ ೨೩/೨೯	,,
೩	ಸಖಾರಾಮ ವೆಂಕಾಜಿ ರಾಯಬಾಗ	,,	೭೬ ೨೫/೨೯	,,

೪	ಮೋಹದಿನ ಮಲಂಗಸಾಬ	„	೭೩ ೧೬/೨೯	„
೫	ಬಸವಂತ ದಾನೇಶ್ವರ ವೆಂಕಟಾಪೂರ	„ „	೭೩ ೨/೨೯	„
೬	ವೀರಭದ್ರಪ್ಪಾ ವೀರಬಸಪ್ಪಾ ಶ್ರಿಂಗಾರಿ	„	೭೨ ೧೪/೨೯	„
೭	ಗೋವಿಂದ ರಾಮಚಂದ್ರ ಸಾಮಂತ	„	೭೧ ೮/೨೯	„
೮	ಮ್ಹಾಣಕೊ ಚಿಂತಾಮಣಿ ಸೊಲ್ಲಾಪೂರ	„	೭೦ ೨೧/೨೯	೧೨
೯	ವೆಂಕಾಜಿ ಕಾಶಿನಾಥ ಯಮಕನಮರ್ಡಿ	„	೬೭ ೨೨/೨೯	„
೧೦	ಗುರುನಾಥ ಕೃಷ್ಣಾಜಿ ವ್ಯಂದಲಗಿ	„	೬೨ ೯/೨೯	„
೧೧	ಬಸವಂತ ರಾಮಾಜಿ ಮೋಹಶಿ	„	೬೫ ೨೨/೨೯	„
೧೨	ದಿವಾಕರ ರಾಮಚಂದ್ರ ಜೋಸಿ	„	೬೫ ೧೬/೨೯	„
೧೩	ಪರಪ್ಪಾ ಸಿದ್ಧಪ್ಪಾ ಬೊಮ್ಮನಹಾಳ	„	೬೪ ೧/೨೯	„
೧೪	ರಾಮಕೃಷ್ಣ ಕಾಶೀನಾಥ ಧಾರವಾಡ	„	೬೪ ೧/೨೯	„
೧೫	ನರಸಿಂಗ ರಾಣೋಜಿ ಜಾಗನಿಕರ	„	೬೬ ೨೧/೨೯	„
೧೬	ಮಹಾದೇವ ಗಣೇಶ ಸಾಸ			

	ವಾಡ	,,	೬೭ ೩/೨೯	,,
೧೭	ಸುಬಾನ ನರಸಿಂಗ ಗಾಯಕ ವಾಡ	,,	೬೦ ೨೨/೨೯	,,
೧೮	ಕೇಶವ ರಾಮಚಂದ್ರ ಮನವಳ್ಳಿ	“	೫೬ ೧/೨೯	,,
	ಹೊರಗಿನ ಜನರು			
೧	ಅನಂತ ಗೋಪಾಳ ಜಾಂಭೇಕರ	,,	೨೮ ೬/೨ —	೧೫
೨	ಶಿದರಾಮಯ್ಯಾ ಸಿದಬಸಯ್ಯಾ ಹುಬ್ಬಳ್ಳಿ	,,	೨೪ ೧೯/೨೮	,,
೩	ನಾರಾಯಣ ಮಂಜನಾಥ ಚಂದಾವರ	,,	೬೧ ೧/೪	೧೭
೪	ಮಹಾದೇವ ತ್ರಿಯಂಬಕ ದೇಶಪಾಂಡೆ	,,	೫೪ ೩/೨೮	,,

Bhoojungrao K. Hoolgaol.

ಪ್ರನಸಿಪಾಲ.

CORRESPONDENCE.

ಪತ್ರವ್ಯವಹಾರವು.

ಮಹಾರಾಜ ರಾ. ರಾ. ದಕ್ಷಿಣ ಭಾಗದ ಕನ್ನಡ
ಶಾಲಾ ಪತ್ರಕದ ಎಡಿಟರರಿಗೆ–

ಸೇವಕನು ವಿಜ್ಞಾಪನೆ ಮಾಡಿ ಬೇಡಿಕೊಳ್ಳುವದೇನಂದರೆ ಕೆಳಗೆ ಬರೆದ ನಾಲ್ಕು ಪಂಗ್ತಿಗಳನ್ನು ತಮ್ಮ ಸುಂದರವಾದ ಮಾಸಪತ್ರಿಕೆಯಲ್ಲಿ ಛಾಪಿಸುವಿರೆಂಬ ಆಶೆಯುಳ್ಳವನಾಗಿದ್ದೇನೆ.

ಬೆಳಗಾವ ಜಿಲ್ಲಾ ಸಂಪಗಾವ ತಾಲೂಕ ಪೈಕಿ ಮೋಜೆ ದೇವಲಾಪೂರ ಗ್ರಾಮದಲ್ಲಿ, ಊರ ಹೊರಗೆ ಶ್ರೀಮಲ್ಕಾರ್ಜುನ ಗುಡಿ ಹತ್ತರ ಶೀನೀರಿನ ಭಾವಿ ಅದೆ. ಆ ನೀರು ಯಾವತ್ತು ಜನರು ಕುಡಿಯುತ್ತಾರೆ. ಅದರ ಹೊರ್ತು ಊರಲ್ಲಿ ಶೀನೀರಿನ ಭಾವಿ ಇಲ್ಲಾ. ಮತ್ತು ತಮ್ಮ ತಮ್ಮ ಮನೆಗಳಲ್ಲಿ ಸವಳ ನೀರಿನ ಭಾವಿ ಇರುತ್ತವೆ. ಆ ನೀರು ಕುಡಿಯಲಿಕ್ಕೆ ಬರುವದಿಲ್ಲಾ. ಉಳಿಕೀ ಕೆಲಸಕ್ಕೆ ಬರುತ್ತವೆ.

ತಾ. ೨೫।೨೬।೨೭।೨೮ ಮಾಹೆ ಫೇಬರವಾರಿ ಸನ ೧೮೭೬ ಇಸವಿ ದಿವಸಾ ಶೀನೀರಿನ ಭಾವಿಯಲ್ಲಿ ಹಾಲಿನಂತೆ ನೀರು ಬೆಳ್ಳಗೆ ಆದವು. ಹೀಗೆ ನಾಲ್ಕು ಐದು ದಿವಸಾ ಮುಂಜ್ಯಾನೆ ಅಂದರೆ ಹನ್ನೆರಡು ತಾಸಿನ ಹಿಡಿದು ಪೂರ್ಣ ದಿವಸಾ ಸೂರ್ಯನ ಪ್ರಕಾಶ ನೀರಿನ ಮೇಲೆ ಬಿದ್ದಾಕ್ಷಣಕ್ಕೆ, ಹಾಲಿನಂತೆ ನೀರು ಆಗಿದ್ದು, ಅವೇ ನೀರು

ವಸಃ ಪೂರ್ವದಲ್ಲಿ ಇದ್ದ ಹಾಗೆ ಕಲ್ಲುಗ ಆದವು. ಹೀಗೆ ನೀರಿನ ವರ್ಣವು ದಿನಕ್ಕೆ ಎರಡು ತರದ್ದು ಆಗೋಣಾ, ಇಲ್ಲೀ ಜನರು ೫೦।೬೦ ವರ್ಷದ ಮುದುಕರು ಅನ್ನುತ್ತಾರಲ್ಲಾ ಹೀಗೆ ನೀರು ಭೇದು ದಿನದಲ್ಲಿ ಎರಡು ಸಾರಿ ಎಂದು ಆಗಿಲ್ಲಾ. ಈಗ ನೀರಿನ ಭೇದು ಹಾಲಿನಂತೆ ಆಗಿರುತ್ತದೆ. ಅದಕ್ಕೆ ನಮ್ಮ ಊರ ಬಾವಿಯಲ್ಲಿ ಸಾಕ್ಷಾತ ಶ್ರೀ ಭಾಗಿರಥಿ ಬಂದಿರುತ್ತಾಳೆ. ಅಂತಾ ಸಿಕ್ಷ(ರು) ಮಾಡಿ ಊರ ಜನರು ಭಾಗಿರಥೀ ಸ್ನಾನ ಮಾಡಿ ದಾನ ಧರ್ಮ ಮಾಡಿ ನೈವೇದ್ಯ ವಗೈರೆ ಮಾಡಿದರು. ಮತ್ತು ನಾಲ್ಕು ಕಡೆ ಭಾಗೀರಥಿ ಬೇವಲಾಪೂರ ಗ್ರಾಮದಲ್ಲಿ ಬಾವಿಯಲ್ಲಿ ಉತ್ಪನ್ನ ಆಗಿರುತ್ತಾಳೆ ಅಂತಾ ವರ್ತಮಾನ ಆಗಿ ಈ ತಾಲೂಕ ಸುತ್ತಲೆ ಊರವರು, ದರ ದಿವಸಾ ಜನರು ೨೫।೫೦ ಬಂದು ತಮ್ಮ ಕೈಲಾದಷ್ಟು ಬಾವಿಯಲ್ಲಿ ಭಾಗೀರಥಿ ಸ್ನಾನ ಮಾಡಿ, ನೈವೇದ್ಯ ಮತ್ತು ದಾನ ಧರ್ಮ ಮಾಡಿ ಪಾಪ ಹೋಗಿ ಪುಣ್ಯ ಬರಬೇಕು ಅಂತಾ ತಿಳಿದು ಬರುತ್ತಾರೆ ಶ್ರೀಕಾಶಿಗೆ ಹೋಗಿ ೫೦೦।೬೦೦ ರೂಪಾಯಿ ಖರ್ಚು ಮಾಡಿ ಭಾಗೀರಥಿ ಸ್ನಾನ ಮಾಡಿ ಬರುತ್ತಾರೆ, ಹಾದಿಯಲ್ಲಿ ಬಹಳ ತ್ರಾಸು ಪಡುತ್ತಾರೆ, ಇಷ್ಟು ಖರ್ಚು ಮಾಡುವದಕ್ಕಿಂತಾ ಸಾಕ್ಷಾತ ಇಲ್ಲೇ ಭಾಗೀರಥಿ ಬಂದಿರುತ್ತಾಳೆ. ಅದಕ್ಕೆ ಯಾವತ್ತು ಸಮೀಪ ಆಸಪಾಸ ೭।೧೦ ಹರದಾರಿಯಲ್ಲಿ ಜನರು ಇಲ್ಲೆ ಸ್ನಾನ ಮಾಡಿ ತಮ್ಮ ಕೈಲಾದಷ್ಟು ದಾನ ಧರ್ಮ ಮಾಡುವರು. ಬಂಗರೆ ಅವರ ಪಾಪ ಪರಿಹಾರ ಆದೀತು. ಅದಕ್ಕೆ ಯಾರು ಬರದೆ ಇದ್ದವರು ತಮ್ಮ ನಶಿಬವಲ್ಲಿ ಭಾಗೀರಥೀ ಸ್ನಾನ ಮಾಡುವದು ಇಲ್ಲಾ ಅಂತಾ

ಶಾಲಾಪತ್ರಕ

ಇನಾಮಿನ ಬಗ್ಗೆ ತಾ॥ ೨೯, ಮಾರ್ಚ, ದಿವಸ ಧಾರವಾಡದ ಟ್ರೇನಿಂ ಕಾಲೇಜದಲ್ಲಿ ಆಗುವದು. ಈ ಪರೀಕ್ಷೆಗೆ ಬರಲಿಚ್ಛಿಸುವವರೆಲ್ಲರು ತಮ್ಮ ಹೆಸರಿನ ಅರ್ಜುಗಳನ್ನು ಮೊ. ಎ. ಇನಸ್ಪೇಕ್ಟರ ಧೊರೆಗಳ ಕಡೆಗೆ ಈ ನೋಟೀಸು ಮುಟ್ಟಿದಂದಿನಿಂದ ಆದಷ್ಟು ತೀವ್ರ ಕಳಸಬೇಕು.

P. V. Chintaman petkar.

ಆಕ್ಟಿಂಗ ಕನ್ನಡ ತ್ರಾನಸ್ಲೇಟರ.

ರಾ॥ ರಾ॥ ರಾವಸಾಹೇಬ ಕನ್ನಡ ಶಾಲಾಪತ್ರಕ ಕರ್ತರಿಗೆ—

ವಿ. ವಿ. ಕೆಳಗೆ ಬರೆದ ಶ್ಲೋಕದ ಅರ್ಥವನ್ನು ಇನ್ನುವರಿಗೂ ಯಾರು ಹೇಳಿ ನನ್ನ ಸಂಶಯ ದೂರ ಮಾಡಲಿಲ್ಲಾದ ಕಾರಣ ತಮ್ಮ ಜಗವಿಖ್ಯಾತವಾದ ಮಾಸಪತ್ರಿಕೆಯಲ್ಲ್ಯಾದರೂ ಛಾಪಿಸಿ ಪ್ರಶಿದ್ಧ ಪಡಿಸಿದರೆ ಯಾರಾದರೂ ವಿದ್ವಜ್ಜನರೂ ನಮ್ಮ ಬಂಧುಗಳಾದ ಮಾಸ್ತರರೂ ಅರ್ಥ ಬರೆದು ನಂನ ಸಂಶಯ ದೂರ ಮಾಡ್ಯಾರೆಂದು ತುಂಬಾ ನೆಂಬಿಕೆಯುಳ್ಳವನಾಗಿ ಬರೆದು ಕಳುಹಿಸಿದ್ದೇನೆ ಆದರೆ ಬರುವ ತಿಂಗಳ ತಮ್ಮ ಮಾಸಪತ್ರಿಕೆಯಲ್ಲಿ ನಿಶ್ಚಯವಾಗಿ ಸ್ಥಳದೊರಯೀತೆಂದು ಆಶಿಸುತ್ತೇನೆ.

ಚಕ್ರೇತಚ್ಛತ್ರ ಖತ್ರೇಪ್ರುಲ ಬ.
ತತ್ವದಾಂಕ ದ್ವ್ಯತ್ರೇಲೀ ಕಾಂಬುಜಿ ಷ್ಟೇ ಶರಧರಃ
ಗೌಸ್ತದ್ಧಿ ಜಾತಾಧಿನಾಥಃ ॥ ಕಾಂಡಾಸ್ತ ಜ್ಜಾ ತಜಾತ
ನಕುಹರಚರಾಜ್ಯಾ ಚತಸ್ರ ಸ್ತಚಕ್ರೇಯುಸ್ಯಾ ಭಾಗಿ
ಲಕಂಠಸ್ತದಧವಜನಕ ಸ್ತ್ವಮಮಾಯಾತ್ನಮಾಯಾ
॥ ೧ ॥

ಈ ಶ್ಲೋಕದ ಅರ್ಥವು ಚಮತ್ಕಾರವಾಗಿ ತೋ
ರಿಂದ ಬರೆದು ಕಳುಹಿಸಿದ್ಧೇನೆ. ಆದರೆ ಶಬ್ದಾರ್ಥ
ವಾರ್ಥ ಬರೆದು ತಿಳುಹಿಸುವಿರೆಂದು ಆಶೆಗೈಯುತ್ತೇನ

ತಾರೀಖು ೧೫
ಮಾಹೆ ಎಪ್ರೀಲ್
೧೮೨೬ ಇಸ್ವಿ.

ಸಂಣೋ ಸುಬಣ್ಣಾಚಾರ್ಯ
ತೋಜಿ ಧಮ್ಮಣಗಿ ತಾಲ
ವ ಜಿಲ್ಲಾ ಬೆಳಗಾಂವ.

ಶಾಲಾಪತ್ರಕವು.

ಸ್ತಕ ೧೨]   [ಸಂಚಿಕೆ ೧.

ರೀಖು, ೨೫ನೇ ಮಾಹೆ ಏಪ್ರೀಲ, ೧೮೭೬.

EDUCATIONAL INTELLIGENCE.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮ. ಎಜ್ಯುಕೇಶನಲ್ ಇನಸ್ಪೇಕ್ಟರ ಸಾಹೇಬ ಬಹಾದೂ
ದಕ್ಷಿಣ ಭಾಗ. ಇವರು ಈಗ ಕಾರವಾಡದಲ್ಲಿ ಇದ್ದಾರೆ.
ತಿಂಗಳ ಕೊನೆಗಾಗಲೀ ಮೇ ತಿಂಗಳ ಪ್ರಾರಂಭಕ್ಕಾಗಲೀ
ಳಗಾವಿಗೆ ಬರತಕ್ಕವರಿದ್ದಾರೆಂದು ತಿಳಿದು ಬರುತ್ತದೆ.

ಹೋದ ಡಿಸೆಂಬರ ತಿಂಗಳಲ್ಲಿ, ಮುಂಬಯಿಯಲ್ಲಿ ಪ್ರಖ್ಯಾ
ದ ರೆಂ ಡಾಕ್ಟರ ವಿಲ್ಸನ್ ಎಂಬ ಪಾದ್ರಿಗಳು ಪರಲೋಕ
ವಾಸಿಗಳಾದರೆಂಬ ಸಂಗತಿ ನಮ್ಮ ವಾಚಕರಿಗೆ ಗೊತ್ತದೆ.
ಗ ಅವರು, ಎಷ್ಟೋ ವರ್ಷಗಳ ತನಕ ಶ್ರಮಪಟ್ಟು, ಸಹಸ್ರಾ
ಧಿ ರೂಪಾಯಿಗಳನ್ನು ವೆಚ್ಚ ಮಾಡಿಯೂ, ಕೂಡಿಹಾಕಿದ ಪು
ಕಗಳನ್ನು ಜಾಹೀರ ಲಿಲಾವಿನಿಂದ ಮಾರತಕ್ಕವರಿದ್ದಾರೆ.
ದರೆ ಈ ಪುಸ್ತಕಗಳಿಗೆ ತಕ್ಕ ಗ್ರಾಹಕರು ಈ ದೇಶದಲ್ಲಿ
ಕ್ಕಲಿಕಿಲ್ಲೆಂದು. ಇದನು, ಶಾಲಾಯತಿಗೆ ಒಯ್ದು ಮಾರಿದರೆ

ಬೇಕಾದ ಹಾಗ ಮಾರಾಟವಾಗಿ ನಷ್ಟ ಬರಲಿಕ್ಕಿಲ್ಲೆಂದು ಕ
ರುಸೂಚನೆ ಮಾಡಿರುತ್ತಾರೆ. ಮುಂಬಯಿ ಸರಕಾರದವರು
ಕಾರಿ ಹಣದಿಂದ ಈ ಗ್ರಂಥವನ್ನು ತಕ್ಕೊಂಡು, ಮುಂಬಾ
ಯುನಿವರ್ಸಿಟಿಗೆ ನಜರು ಕೊಟ್ಟಲ್ಲಿ ಬಹಳವೇ ಉಪಯೋ
ವಾಗುವದು.

ಬಂಗಾಲ ದೇಶದೊಳಗಿನ ಪ್ರಸಿದ್ಧ ವಿದ್ವಾಂಸರಾದ ರೆವ
ಡ ಕೆಂ ಎನ್ ಬಾನರ್ಜಿ ಎಂಬವರು "ಆರ್ಯನವಿಟನೇಸ
ಎಂಬದೊಂದು ಹೊಸ ಗ್ರಂಥವನ್ನು ಇಂಗ್ರಜಿಯಲ್ಲಿ ರಚಿಸಿ
ತ್ತಾರೆ. ಅದರಲ್ಲಿ ಅವರು ಕ್ರೈಸ್ತಮತದ ಮೂಲತತ್ವಗಳೇ
ಹಿಂದು ಜನರ ವೇದಗಳಲ್ಲಿಯೂ ಶಾಸ್ತ್ರಗಳಲ್ಲಿಯೂ ಕಂಡ
ಬರುತ್ತವೆಂದು ಸಿದ್ಧ ಮಾಡಿರುತ್ತಾರೆ.

ನಡೆದ ತಿಂಗಳ (ಅಪ್ರೀಲ) ೧೦ ನೇ ತಾರೀಖಿಗೆ ಮುಂಬ
ಯಿ ಯುನಿವರ್ಸಿಟಿಯು ಎಫ. ಈ. ಏ. ಇಲ್ಲವೆ ಲಿಟಲಗೋ
ಎಂಬ ಪರೀಕ್ಷೆಗೆ ಪ್ರಾರಂಭವಾಗಿ, ೧೩ ನೇ ತಾರೀಖಿಗೆ ಮುಗಿಯಿ
ತು. ಅದರ ತೀರ್ಪು ಇದೇ ತಿಂಗಳ ೨೫ನೇ ತಾರೀಖಿಗೆ ತ
ಳಿಯತಕ್ಕದ್ದಿತ್ತು.

ನಮ್ಮ ದೇಶದಲ್ಲಿ ವರ್ತಮಾನ ಪತ್ರಗಳಾಗಲೀ ಮಾಸಿಕ
ಪುಸ್ತಕಗಳಾಗಲೀ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕ
ಳಿಸಬೇಕಾದರೆ, ಅರ್ಧ ಆಣೆ ಅಂಚೇ ವೆಚ್ಚ ಬೀಳುವದು. ಆ
ದರೆ ಜಪಾನ ದೇಶದ ಚಕ್ರವರ್ತಿಯು ತನ್ನ ಪ್ರಜೆಗಳೆಲ್ಲ ಮೇ
ಲಾದ ತಿದ್ದುಪಾಟುವುಳ್ಳವರಾಗಬೇಕೆಂದು, ತನ್ನ ದೇಶದಲ್ಲಿ ಬ
ರಹೋಗತಕ ಯಾವತು ವರ್ತಮಾನ ಪತ್ರಗಳ

ಅಂಚೇ ವೆಚ್ಚವನ್ನು ಮಾಫು ಮಾಡಿದ್ದಾನಂತೆ.

ಗ್ರೇಟಬ್ರಿಟನ ಮತ್ತು ಆಯರ್ಲಂಡ ಈ ಸಂಯುಕ್ತ ರಾಷ್ಟ್ರದಲ್ಲಿ ಒಟ್ಟಿಗೆ ೧೬೪೩, ವರ್ತಮಾನ ಪತ್ರಗಳು ಹೊರಡುತ್ತವೆ. ಅವುಗಳಲ್ಲಿ ೧೨೩೬ ಪತ್ರಗಳು ಇಂಗ್ಲಂಡದಲ್ಲಿ, ೫೩ ಪತ್ರಗಳು ವೇಲ್ಸದಲ್ಲಿ, ೧೫೨ ಪತ್ರಗಳು ಸ್ಕಾಟ್ಲಂಡದಲ್ಲಿ, ೧೩೮ ಪತ್ರಗಳು ಅಯರ್ಲಂಡದಲ್ಲಿ, ಹಾಗು ೧೯ ಪತ್ರಗಳು ಸುತ್ತಮುತ್ತಲಿರುವ ಚಿಲ್ಲರ ನಡುಗಡ್ಡೆಗಳಲ್ಲಿ ಹೊರಡುತ್ತವೆ. ಇವುಗಳ ಹೊರ್ತು ೬೫೩ ಮಾಸಿಕ ಪುಸ್ತಕಗಳು ಹೊರಡುತ್ತವೆ.

ಅಮೇರಿಕ ಖಂಡದೊಳಗೆ ಸ್ವತಂತ್ರ ಸಂಸ್ಥಾನಗಳಲ್ಲಿ ಗುಂಡು ಸೂಜಿಗಳನ್ನು ಮಾಡುವ ಕಾರಖಾನಗಳಲ್ಲಿ, ದಿನಾಲು ೪೩,೦೦೦,೦೦೦ ಗುಂಡು ಸೂಜಿಗಳು ತಯಾರು ಆಗುತ್ತವೆ. ಇದರ ಹೊರ್ತು ದಿನಾಲು ಹೊರಗಿನಿಂದ ೨೫,೦೦೦,೦೦೦ ಗುಂಡು ಸೂಜಿಗಳು ಬರುತ್ತವೆ. ಈ ಮೇರಿಗೆ ಆ ದೇಶದ ಜನರಿಗೆ ದಿನವೊಂದಕ್ಕೆ ೩೨೦೦೦೦೦೦ ಗುಂಡು ಸೂಜಿಗಳು ಬೇಕಾಗುತ್ತವೆ!

ಮುಂಬಯಿ ಇಂದುಪ್ರಕಾಶ ಛಾಪಖಾನೆಯ ಮಾಲಿಕರಾದ ವೆಂ ಸಂ ರಾಂ ರಾಂ ವಿಷ್ಣು ಪರಶುರಾಮ ಶಾಸ್ತ್ರಿಪಂಡಿತ ಇವರು 'ವೇದಾರ್ಥಯತ್ನ, ಎಂಬ ಮಾಸಿಕ ಪುಸ್ತಕವನ್ನು ತೆಗೆಯ ಹತ್ತಿದ್ದಾರೆ. ಈ ಪುಸ್ತಕದಲ್ಲಿ ಮೊದಲು ಋಗ್ವೇದದ ಋಚೆಯನ್ನೂ, ಮುಂದೆ ಅದರ ಪದಗಳನ್ನೂ, ಮುಂದೆ ಅರ್ವಾಚೀನ ಸಂಸ್ಕೃತ ಭಾಷೆಯಿಂದ ಅದರ ಅರ್ಥವನ್ನೂ ಕಡೆಗೆ ಇಂಗ್ರಜಿಯಿಂದಲೂ ಮರಾಠಿಯಿಂದಲೂ ಅವರ ಅರ್ಥವನ್ನೂ ಕೊ

ಟ್ಟಿರುತ್ತಾರೆ. ಬೇಕೆಂದು ಕಂಡುಬಂದಲ್ಲಿ ಮಾರಾರಿಯಿಂ
ನೋಟುಗಳನ್ನೂ ಕೊಟ್ಟಿರುತ್ತಾರೆ. ವರ್ಷಕ್ಕೆ ಮುಂಗಡ ರು
೬ - ೧೨ ಕೊಟ್ಟಲ್ಲಿ ಗ್ರಾಹಕರಿಗೆ ಈ ಪುಸ್ತಕವು ದೊರೆಯ
ವದು. ಪುಸ್ತಕ ಮಟ್ಟಿಗೆ ಎಲ್ಲರ ಆಶ್ರಯಕ್ಕೆ ತಕ್ಕದ್ದಾಗಿದೆ.

ನೇಕ ನಾಮದಾರ ಗವರ್ನರ ಸಾಹೇಬ ಬಾಹಾದ್ದೂರ ಇ
ರು ನಾಮದಾರ ಗಿಬ್ಸ ದೊರೆಗಳನ್ನು ಮುಂಬಾಯಿ ಯುನಿ
ರ್ಸಿಟಿಯ ವೈಸಚಾನಸೇಲರ(ಉಪಾಧ್ಯಕ್ಷ) ಕೆಲಸಕ್ಕೆ ತಿರಿಗೆ
ಮ್ಮೆ ನೇಮಕ ಮಾಡಿರುತ್ತಾರೆ.

ದಕ್ಷಿಣ ಭಾಗದೊಳಗಣ ನಾಲ್ಕೂ ಜಿಲ್ಲೆಗಳಲ್ಲಿಯೂ ಈ
ಹ್ವರ್ನಾಕ್ಯುಲರರ್ ಸಾಲಿಗಳಿಗೆ ಆಗುವಂಥ ಖರ್ಚಿನಲ್ಲಿಯೇ
ನಿಕೆ ವ್ಯವಸ್ಥೆ ಮಾಡಿ, ಹಲವು ಹೊಸ ಸಾಲೆಗಳನ್ನು ತೀವ್ರ
ಮಾಡತಕ್ಕವರಿದ್ಧಾರೆಂದು ಕೇಳುತ್ತೇವೆ.

ಇಂಗ್ಲಂಡ ದೇಶದಲ್ಲಿ ಒಬ್ಬ ಮಾಸ್ತರನು ತನ್ನ ವರ್ಗದೊ
ಳಗಣ ಒಬ್ಬ ಹುಡುಗನಿಗೆ ಏನಿಕೆ ಅಪರಾಧದದೆಸೆಯಿಂದ ಸಿ
ಟ್ಟಿನಿಂದೆಚ್ಚರ ತಪ್ಪಿ ಹೊಡೆಯಲು, ಎಲ್ಲೋ ಹಣೇ ಮರ್ಮಕ್ಕೆ
ಪೆಟ್ಟು ತಾಕಿ; ಆ ಹುಡುಗನದೊಂದು ಕಣ್ಣು ಹೋಯಿತು. ಈ
ಅಪರಾಧಕ್ಕಾಗಿ ಅಲ್ಲಿಯ ನ್ಯಾಯಾಧೀಶರು ಆ ಮಾಸ್ತರನಿಗ
ಐದು ವರುಷದ ಸಕ್ತಮಜೂರೀ ಶಿಕ್ಷೆ ಕೊಟ್ಟರು. ಇಂಥ
ಪ್ರಮಾದಗಳು ನಮ್ಮಲ್ಲ್ಯಾದರೂ ಎಷ್ಟೋ ಆಗುತ್ತಿರಬಹುದು.
ಆದದರಿಂದ ಮಾಸ್ತರರೆಲ್ಲರೂ ಈ ಸಂಗತಿಯನ್ನು ಲಕ್ಷದಲ್ಲಿ
ಟ್ಟುಕೊಂಡು ನಡೆಯತಕ್ಕದ್ದು. ಹುಡುಗರಿಗೆ ಶಿಕ್ಷೆ ಕೊಡುವ
ಪ್ರಸಂಗ ಬಂದಾಗ ಮಾಸ್ತರನ ಮನಸ್ಸಿನಲ್ಲಿ ದ್ವೇಷ, ಅಸೂಯಾ.

ರ್ಷ್ಯೆ ಕೋಪ, ಮೊದಲಾದ ಮನೋವಿಕಾರಗಳಿರಬಾರದು.

ಗ್ರಂಥ ರಚನೆ.

ಗ್ರಂಥರಚನೆಯೆಂಬೀ ವಿಷಯವು, ಎಷ್ಟು ಮಹತ್ವವುಳ್ಳದ್ದೂ ಅವಶ್ಯಕವೂ ಆಗಿಧೆಯೋ, ಅಷ್ಟೇ ಕಠಿಣವಾಗಿಧೆ. ಇದನ್ನು ಕಲಿಸುವದಕ್ಕಾಗಿ ಗಣಿತ ಶಾಸ್ತ್ರದ ಹಾಗೆ ನಿಯಮಗಳನ್ನು ಹಾಕಿ ಕೊಡಲಿಕ್ಕೆ ಬರುವದಿಲ್ಲ. ಶಿಲ್ಪಶಾಸ್ತ್ರದ ಹಾಗೆ ಜಡ ದ್ರವ್ಯ ಕೊಟ್ಟು ಸಾಗುವದಿಲ್ಲ. ಇದಕ್ಕೆ ಒಂದು ಪ್ರಕಾರದ ಜನ್ಮಸಿದ್ಧ ಶಕ್ತಿಯೇ ಇರಲಿಕ್ಕೆಬೇಕು. ವಿದ್ಯಾಭ್ಯಾಸದಿಂದಲೂ ದೇಶ ಪರ್ಯಟಣವಿಂದಲೂ, ಜಾಣರ ಸಹವಾಸದಿಂದಲೂ, ಪ್ರಪಂಚದಲ್ಲಿ ಹಗಲೂ ಇರಳೂ ನಡೆಯುವ ಅನೇಕ ಸಂಗತಿಗಳನ್ನೂ ಮನಸುಗೊಟ್ಟು ವಿಚಾರಿಸುವದರಿಂದಲೂ, ಈ ಶಕ್ತಿಗೆ ವಿಸ್ತಾರವೂ ದೃಢತ್ವವೂ ಉಂಟಾಗುವವು.

ಗ್ರಂಥರಚನೆಯಲ್ಲಿ ಪ್ರವೀಣನಾಗಬಯಸುವವನು ಮೊದಲು ತನ್ನ ಭಾಷೆಯಲ್ಲಿದ್ದ ಇತಿಹಾಸ, ಕಾವ್ಯ, ವಕ್ತೃತ್ವ, ತತ್ವಜ್ಞಾನ, ಮೊದಲಾದ ವಿಷಯಗಳ ಮೇಲಿನ ಪ್ರಸಿದ್ಧ ಗ್ರಂಥಕಾರರ ಗ್ರಂಥಗಳನ್ನು ಓದಿ ಹಾಕಬೇಕು. ರಾಜಕೀಯ ಹಾಗೂ ಧರ್ಮ ಸಂಬಂಧದ ವಿಷಯಗಳ ಮೇಲಿನ ವಾದವಿವಾದ ಗ್ರಂಥಗಳನ್ನೂ ಓದತಕ್ಕದ್ದು. ಅವನ್ನು ಓದುವದರಿಂದ ಯಾವ ಪ್ರಸಂಗದಲ್ಲಿ ಯಾವ ಪ್ರಕಾರದ ಕೋಟಿ ಉಪಯೋಗಿಸಬೇಕೆಂಬ ಬಗ್ಗೆ ಒಳ್ಳೆ ಜಾಣತನ ಬರುವದು.

ಯಾವದಾದರೊಂದು ವಿಷಯದ ಮೇಲೆ ಬರೆಯಲಿಕ್ಕೆ ಹತ್ತುವದಕ್ಕಿಂತ ಮುಂಚಿತವಾಗಿ, ಆ ವಿಷಯದ ಬಗ್ಗೆ ಸ್ವಾಂತ ತನಗೆ ಗೊತ್ತಿದ್ದ ಮಾತುಗಳನ್ನೆಲ್ಲ ಬರೆದು ಒಂದು ಟಿಪ್ಪಣೆ ಮಾಡಬೇಕು. ಹೀಗೆ ಮಾಡಿಟ್ಟ ಬಳಿಕ, ಆ ವಿಷಯದ ಮೇ

ತೆ ಎರಡನೇಯವರು ತಂವ ಗ್ರಂಥದಲ್ಲಿ ಬರೆದದ್ದನ್ನು ಓಕೊಂಡು ಅದರಂತೆ ಬೇಕಾಗಿದ್ದಲ್ಲಿ ಹೆಚ್ಚು ಕಡಿಮೆ ಮಾಡಬೇಕು. ಇಲ್ಲದೆ ಹೋದರೆ ಯಾವದಾದರೊಂದು ವಿಷಯ ಕೊಟ್ಟರೆ, ಅದರ ಬಗ್ಗೆ ತನ್ನ ಸ್ವಂತ ವಿಚಾರಗಳು ಹ್ಯಾಗಿರುತ್ತವೆ, ಎರಡನೇಯವರ ವಿಚಾರಗಳು ಹ್ಯಾಗಿರುತ್ತವೆ. ತಂನ ವಿಚಾರದ ಸರಣಿಯೂ. ಎರಡನೆಯವರ ವಿಚಾರಸರಣಿಯೂ, ಎಲ್ಲಿ ಕೂಡುತ್ತದೆ, ಎಲ್ಲಿ ಬಿಡುತ್ತದೆ, ಅವೆರಡರಲ್ಲಿಯೂ ತಕ್ಕೊಳ್ಳತಕ್ಕ ವಿಚಾರಗಳು ಯಾವವು, ಬಿಡತಕ್ಕವು ಯಾವವು. ಅವುಗಳ ಪರಸ್ಪರ ಸಂಬಂಧ ಹ್ಯಾಗದೆ, ಅದು ಹ್ಯಾಗಿರಬೇಕು, ಇದೆಲ್ಲ ಅವಾಂತರ ಯಾತರಿಂದ ಗೊತ್ತಾಗಬೇಕು?

ಯಾವ ವಿಷಯದ ಮೇಲೆ ವಿವರಿಸಿ ಬರಿತಕ್ಕದ್ದದೆಯೋ ಅದರ ಬಗ್ಗೆ ತಂನ ಕೈಲೆ ಆದಷ್ಟು ಮಾಹಿತಿ ಮಾಡಿಕೊಳ್ಳಬೇಕು. ಆ ವಿಷಯದ ಸಂಬಂಧದಿಂದ ಬೇರೆ ಬೇರೆ ಪ್ರಕಾರದ ಪ್ರಶ್ನೆಗಳನ್ನು ತಾನೇ ತನ್ನ ಮನಸ್ಸಿಗೆ ಮಾಡಿ, ಅವುಗಳ ಉತ್ತರಗಳನ್ನು ತಾನೇ ಆಲೋಚಿಸಿ ಕೊಡಬೇಕು. ಹೀಗೆ ಮಾಡುತ್ತ ಹೋಗುವದರಿಂದ ಆ ವಿಷಯದ ಬೇರೆ ಬೇರೆ ಭಾಗಗಳೂ, ಅವುಗಳ ಪರಸ್ಪರ ಸಂಬಂಧವೂ ಮನಸ್ಸಿನಲ್ಲಿ ಘಟ್ಟಿಯಾಗಿ ಹೋಗುವವು. ಮುಂದೆ ಬೇಕಾದಾಗ ಅದರ ಹೊಂದಿಕೆ ಮಾಡಿ ಗ್ರಂಥ ಮಾಡಲಿಕ್ಕೆ ವಿಶೇಷ ಕಷ್ಟ ಬೀಳಲಿಕ್ಕಿಲ್ಲ. ಅದೇ ಆ ವಿಷಯದ ಬಗ್ಗೆ ಮೊದಲೇ ನಾಲ್ಕು ಪ್ರಕಾರದಿಂದ ವಿಚಾರ ಮಾಡದೆ ಹೋದರೇ, ಹೊತ್ತಿಗೆ ಅದರ ಪ್ರಾರಂಭ ಹ್ಯಾಗೆ ಮಾಡಬೇಕು, ಅದರಲ್ಲಿಯ ಬೇರೆ ಬೇರೆ ಭಾಗಗಳ ಸಂಬಂಧ ಹ್ಯಾಗೆ ತೋರಿಸಿ ಕೊಡಬೇಕು, ಅದರ ಮೇಲೆ ಆಕ್ಷೇಪಗಳು ಏನಾದರೂ ಇದ್ದರೆ ಅವನ್ನು ಹ್ಯಾಗೆ ಮುರಿದು ಕೆಲಬೇಕು; ಅದರಿಂದಾಗತಕ್ಕ ಒಳಿತಾಗಲೀ ಕೇಡಾಗಲೀ

ಾವದು, ಇದನ್ನೆಲ್ಲ ಓದುವವರಿಗೆ ತಿಳಿಯುವಂತೆ ಬಹಳ
ಾಡಿ ಎಂದಿಗೂ ಬರೆಯಲಿಕ್ಕೆ ಬರಲಿಕ್ಕಿಲ್ಲ.

ಶುದ್ಧ ವಿಷಯವೆಂತಲೂ, ಸಂಕೀರ್ಣ ವಿಷಯವೆಂತಲೂ, ವಿ
ಯಗಳು ಎರಡು ತರದವಿರುತ್ತವೆ. ಶುದ್ಧ ವಿಷಯದಲ್ಲಿ
ಂದೇ ಮೂಲ ಸಂಗತಿ ಇದ್ದು ಅದರ ವಿಷಯಕ್ಕೇ ಹೇಳುತ
ದ್ದು ಇರುತ್ತದೆ. ಸಂಕೀರ್ಣ ವಿಷಯದಲ್ಲಿ ಮೂಲ ಸಂಗತಿ ಒಂ
ಇದ್ದು ಅದಕ್ಕೆ ಅಂಗ ಭೂತ ಕೆಲವು ಸಂಗತಿಗಳಿರುತ್ತವೆ.
ಂಕೀರ್ಣ ವಿಷಯದ ಮೇಲೆ ಬರೆಯುವಾಗ ಮೂಲ ಸಂಗತಿಗೂ,
ಂಗ ಭೂತಗಳಾದ ಸಂಗತಿಗಳಿಗೂ, ಹ್ಯಾಗೆ ಸಂಬಂಧ ಹೊಂ
ತ್ತದೆಂಬದು ತೋರಿಸಲಿಕ್ಕೆ ಬೇಕು. ಶುದ್ಧ ವಿಷಯದಲ್ಲಿ
ೀಗೆ ಮಾಡುವ ಪ್ರಯೋಜನವಿಲ್ಲ.

ಶುದ್ಧ ವಿಷಯಗಳ ಮೇಲೆ ಬರೆಯುವಾಗ ಮುಂದೆ ತೋ
ಿದ ಪದ್ಧತಿ ಹಿಡಿದು ಹೋದರೆ ಸುಲಭ ಬೀಳುವದು. ಮೊ
ಲು ಬರೆಯ ಹೇಳಿದ ವಿಷಯ ನಮ್ಮ ಇಂದ್ರಿಯಗಳಿಗಾಗಲೀ
ನಸಿನ ವ್ಯಾಪಾರಗಳಿಗಾಗಲೀ, ತಿಳುವಳಿಕೆಗಳಿಗಾಗಲೀ,
ಪಂಚಿಕ ಲಾಭಕ್ಕಾಗಲೀ, ಸಂಬಂಧಿಸಿದ್ದದೆಯೋ ಹ್ಯಾಗೆ
ದರ ಬಗ್ಗೆ ವಿಚಾರ ಮಾಡಬೇಕು. ಬಳಿಕ ಅದರ ಕಾರ
ಗಳೂ, ಭೇದಗಳೂ, ಅವುಗಳ ಚಿನ್ಹಗಳೂ, ಆ ಭೇದಗಳಿಂ
ಆಗುವ ಒಳಿತು ಕೇಡುಗಳೂ ಲಕ್ಷದಲ್ಲಿ ತರಬೇಕು. ಕಡೆಗೆ
ದರ ಸಂಬಂಧ ಯಾವ ಕಾಲಕ್ಕೆ ಮತ್ತು ಯಾವ ಸ್ಥಳಕ್ಕೆ ಇ
ತದೆಯೋ ಅದರ ಬಗ್ಗೆ ಬರೆಯಬೇಕು.

ಉದಾಹರಣಕ್ಕಾಗಿ 'ಯುದ್ಧ, ಎಂಬೇ ವಿಷಯವನ್ನು ಕು
ಬರೆಯ ಹೇಳಿದರೆ ಪ್ರಾರಂಭ ಮಾಡತಕ್ಕ ರೀತಿ ಹ್ಯಾ
ದರೆ:-ಇಬ್ಬರು ಇಲ್ಲವೆ ಇಬ್ಬರಿಗಿಂತ ಹೆಚ್ಚಿಗೆ ಜನರಲ್ಲಾ
ೀ, ಎರಡು ಇಲ್ಲವೆ ಎರಡಕ್ಕಿಂತ ಹೆಚ್ಚಿಗೆ ರಾಷ್ಟ್ರಗಳಲ್ಲಾ

ಲೀ, ಹಲವು ಕಾರಣಗಳಿಂದ ವೈಮನಸ್ಯ ಹುಟ್ಟಿದರಿಂದ ಯು
ದ್ಧಗಳು ಆಗುತ್ತವೆ. ಪ್ರತಿಯೊಂದು ಜನಾಂಗದವರು ತಂವ
ಲ್ಲಿಯ ಹರೆಯುದವರಿಗೆಲ್ಲ ಆದ ಮಟ್ಟಿಗೆ ಯುದ್ಧಕಲೆಯಲ್ಲಿ
ಣರನ್ನು ಮಾಡಿ ಸಿದ್ಧ ಇಡಬೇಕು. ಕಾರಣವೇನಂದರೆ
ಯುದ್ಧ ಮಾಡತಕ್ಕ ಪ್ರಸಂಗ ಹೇಳಿ ಕೇಳಿ ಬರುವದಿಲ್ಲ. ಯು
ದ್ಧದಲ್ಲಿ ಅನೇಕ ತರಗಳುಂಟು. ಕೆಲವು ಪ್ರಸಂಗದಲ್ಲಿ ತಂ
ಮ ಸಂರಕ್ಷಣಕ್ಕಾಗಿ ಯುದ್ಧ ಮಾಡುವದು ಬೀಳುತ್ತದೆ.
ಲವು ಹೊತ್ತು, ತಾವೇ ಜಗಳತೆಗೆದು ಎರಡನೇಯವರೊಡ
ಯುದ್ಧಕ್ಕೆ ಹೋಗಬೇಕಾಗುತ್ತದೆ. ಕೆಲವು ಯುದ್ಧಗಳು
ಲದ ಮೇಲೆಯಾಗುತ್ತವೆ. ಕೆಲವು ನೀರಿನಲ್ಲಿ ಆಗುತ್ತವೆ.
ಲವು ಪ್ರಸಂಗದಲ್ಲಿ ಒಂದು ದೇಶದ ಜನರು ತಮ್ಮ ತಮ್ಮೊ
ಗೆ ಬಡದಾಡಹತ್ತಿ ಯುದ್ಧ ನಡಿಸುತ್ತಾರೆ. ಆದರೆ ಈ ಪ್ರ
ಕಾರದ ಯುದ್ಧಗಳಿಂದ ದೇಶಕ್ಕೆ ಬಹಳ ಕೇಡು ಉಂಟಾ
ವದು. ಜನರು ತಮ್ಮತಮ್ಮೊಳಗೆಯೇ ಯಾವವಿ ಮಾಡಿ
ಕ್ತಿಹೀನರಾಗುತ್ತಾರೆ. ಪರಸ್ಥರು ಬಂದು ಅವರನ್ನು ಗೆಲ್ಲುವದ
ಏನೇನು ಕಷ್ಟಬೀಳುವದಿಲ್ಲ. ರಾಜ್ಯದ ಮೇರೆಗಳ ಬಗ್ಗೆ
ಗಳಗಳೂ, ಜನರ ಮೇಲೆ ಬಲಾತ್ಕಾರವೂ, ದಂಡಿನಲ್ಲಿ ತಾ
ಜಯಶಾಲಿಗಳಾಗಬೇಕೆಂಬ ಹವಣಿಕೆಯೂ; ಅವಿಚಾರದಿಂ
ಒಪ್ಪಂದಗಳನ್ನು ಮಾಡುವದೂ, ಮುರಿಯುವದೂ, ಇವೇ
ದಲಾದ ಎಷ್ಟೋ ಕಾರಣಗಳಿಂದ ಯುದ್ಧಗಳು ಹುಟ್ಟುತ್ತ
ಯುದ್ಧದಿಂದ ಬಹಳ ಮಾಡಿ ಕೇಡು ಉಂಟಾಗುತ್ತದೆ.
ದ್ಧ ತೀವ್ರ ಮುಗಿಯದೇ ಹೋದದರಿಂದ ಜನರ ಜೀವಗಳ
ದುಡ್ಡೂ ಹಾಳಾಗಿ ಹೋಗಿ, ಎಷ್ಟೋ ರಾಜ್ಯಗಳು ಮಂಣಿಗೆ
ಹೋಗುವವು.

(ಮುಂದಕ್ಕೆ ಸಾಗುವದು.)

NOTICES AND CIRCULARS.

ನೋಟಿಸಗಳೂ, ಸರಕ್ಯೂಲರಗಳೂ.

ಜಾವಕ ನಂಬರ ೬೦.

ಬೆಳಗಾಂವ ಜಿಲ್ಹಾ, ಬೀಡಿ ತಾಲೂಕ, ಕಸಬಾ ನಂದಗಡ ್ಕೂಲ ಮಾಸ್ತರ, ಕೃಷ್ಣಾಜಿ ಹರಿ ಮಾವಳಂಗೆ, ಚಂದಗಡ ಸಾಯಲ್ಲಿ ಹೆಡ್ಡ ಮಾಸ್ತರಿದ್ದಾಗ್ಯೆ, ಸಾಲಿಯ ಕೆಲಸ ಬರೋಬರ ಾಡದೆಯಿದ್ದ ಕಾರಣ, ಸುಮಾರು ಎರಡು ಎರಡೂವರಿ ವರುದೊಳಗೆ ಹುಡುಗರ ಅಭ್ಯಾಸವು ವೃದ್ಧಿಯಾಗಿಲ್ಲ. ಇದು ಅವ ಪೂರ್ಣ ತಪ್ಪಿದ್ದು ತಪ್ಪ ಅಲ್ಲಂತ ಸ್ಥಾಪಿಸುವದಕ್ಕೆ ಡಿಪೂಟಿ . ಇನಸ್ಪೇಕ್ಟರರ ಕಡಿಗೆ ಯೋಗ್ಯತೆ ಮೀರಿ ಅಧಿಕಪ್ರಸಂಗನದ ರಿಪೋರ್ಟ ಕಳುಹಿಸಿದ್ದರ ಮೇಲಿಂದ ಸದರಿಯವರಿಗೆ . ಎ. ಇ. ಸಾಹೇಬ ಬಾಹದ್ದೂರವರು ಐದ ರೂಪಾಯಿ ಂಡ ಮಾಡಿರುತ್ತಾರೆ. ಒಳಗಡೆ ಇದೇ ಪ್ರಕಾರದ ಅಧಿಕಪ್ರಂಗಿತನದದಶಿಂದ ಇವರಿಗೆ ಒಮ್ಮೆ ದಂಡ ಆಗಿರುತ್ತದೆ. ಇಂಮೇಲಾದರೂ ಸದರಿಯವರು ತಂಮ ನಡಾವಳಿ ಸುಧಾರಿಸಬೇು. ತಿಳಿಯೋದು ತಾರೀಖು ೧೮ ಎಪ್ರೇಲ ಸನ್ ೧೮೭೬ ಸವಿ.

(Sd.) Appajee B Divekur.
ಆ. ಡಿ. ಎ. ಇ. ಬೆಳಗಾಂವ.

ಸರಕ್ಯೂಲರ ನಂಬರ ೭.

ಕಲಾದಗಿ ಜಿಲ್ಹೆಯೊಳಗಿನ ಯಾವತ್ತು ತಾಲೂಕ ಸ್ಕೂಲ
ಮಾಸ್ತರರಿಗೆ-

ಳಿಪಡಿಸುವದೇನಂದರೆ - ತಾಲೂಕ ಸಾಲಿ ಶಿಪಾಯಿ ಮಾಸ್ತರ

ಮುಂತಾದವರ ಸಂಬಳಾ ವೇಳೆ ವೇಳೆಕ್ಕೆ ಮುಟ್ಟಿಸುವದಿಲ
ಹೀಗೆ ತಿಳಿಯುತ್ತದೆ. ಆದರೆ ಇನ್ನು ಹೀಗೆ ಸುಸ್ತಿ ಯಾವ
ಪಾಯಿ ಕಡಿಂದ ಆಘೀತು, ಅವನ ವಿಷಯಕ್ಕೆ ಸಖ್ತಿ ವಿಚ
ಮಾಡಲಾಘೀತು. ತಾಲೂಕಕ್ಕೆ ಪಗಾರ ಮುಟ್ಟಿ ಎಂಟದಿವಸ
ಳಲ್ಲಿ, ತಾಲೂಕದೊಳಗಿನ ಯಾವತ್ತು ಮಾಸ್ತರ ಮುಂತಾದ
ಸಂಬಳಾ ಮುಟ್ಟಿಸಲಿಕ್ಕೇ ಬೇಕು. ಕಾರಣಾ ತಾಲೂಕ
ಸ್ತರರು ದರ ತಿಂಗಳ ಸಂಬಳಾ ಬಠವಡಾ ಮಾಡುವ ಕೆಲ
ತೀರಿದ ಕೂಡ್ಲೆ, ಹಣಾ ಖಜ್ಯಾನೆಯಿಂದ ಎಂದ ,ದೊರೀತು
ಶಿಪಾಯಿ ಇವನ ಕೈಯಲ್ಲಿ ಎಂದ ಕೊಟ್ಟಿರುತ್ತದೆ ವ ಬಠ
ದ ಕೆಲಸಾ ಎಂದ ಮುಗೀತು, ವಟ್ಟ ದಿವಸಳು ಎಷ್ಟು ಹಿ
ವು; ಈ ಬಗ್ಗೆ ರಿಪೋರ್ಟ ನಮ್ಮ ಕಡಿಗೆ ಕಳುಹಿಸುತ್ತಿರ
ಕು. ಅಂದರೆ ಸುಸ್ತಿ ಅಯಿತೋ ಇಲ್ಲವೋ ತಿಳಿಯುವ
ತಾ. ೧ ನೇ ಮಾಹೆ ಅಪ್ರೀಲ ೧೮೭೬ ಇಸ್ವಿ.

(Sd.) R. A. Savanur.
ಡಿ. ಎ. ಇನಸ್ಪೆಕ್ಟರ ಜಿಲ್ಹಾ ಕಲಾದಗಿ.

ಕಲಾದಗಿ ಜಿಲ್ಹೆಯೊಳಗಿನ ಸಾಲಿಯ ಮಾಸ್ತರ ಜನರ
ಗಾರ್ವಗಿರ್ ನೇಮಣೂಕಗಳು, ಮಾರ್ಚ ತಿಂಗಳಲ್ಲಿ ಆದ ಬ

೧ ಗೋಪಾಳ ರಾಮಚಂದ್ರ ಬೇಡೇಕರ, ಟ್ರೇನಿಂಗಕಾಲೇ
ಇವರನ್ನು ತೊರ್ವಿಯ ಮಾಸ್ತರ ಕೆಲಸಕ್ಕೆ ನೇಮಿಸಿರು
ದೆ. ಸಂಬಳ ರು. ೧೫.

೨ ಘೋಳಪ್ಪಾ ಹೂವಪ್ಪಾ ಮಾಸ್ತರ, ತೊರ್ವಿ, ಇವರನ್ನು
ಮೀನಗಡದ ಮಾಸ್ತರ ಕೆಲಸಕ್ಕೆ ನೇಮಿಸಿರುತ್ತದೆ.

೩ ಗುರುನಾಥ ಭೀಮರಾವ, ಮಾಸ್ತರ, ಅಮೀನಗಡ, ಇವರ
ಬೇಲೂರ ಸಾಲಿ ಮಾಸ್ತರ ನೇಮಿಸಿಧೆ. ಸಂಬಳ ರು.

ಗುರುನಾಥ ಅಪ್ಪಾಜಿ, ಮಾಸ್ತರ, ಶಿರಶಾಡ, ಇವರನ್ನು ಪ್ರೊತ್ರೀ ಸ್ಕೂಲಿಯ ಮಾಸ್ತರ ಕೆಲಸಕ್ಕೆ ನೇಮಿಸಿಧೆ. ಸಂಬಳ ರು. ೧೧.

ವೀರಪ್ಪಾ ಹಣಮಪ್ಪಾ, ಮಾಸ್ತರ, ಪ್ರೊತ್ರೀ, ಇವರನ್ನು ಇಲಕಲ್ಲ ನಂಬರ ೨ ನೇ ಸಾಲಿಯ ಮಾಸ್ತರ ಕೆಲಸಕ್ಕೆ ನೇಮಿಸಿಧೆ. ಸಂಬಳ ರು. ೧೦.

ಲಕ್ಷ್ಮಣ ಧೋಂಡದೇವ, ಹೆಂಣ ಹುಡುಗರ ಸಾಲಿಯಯ ಮಾಸ್ತರ ಮುದ್ದೇಬಿಹಾಳ, ಇವರನ್ನು ಅದೇ ಗ್ರಾಮದಲ್ಲಿ ಗಂಡ ಹುಡುಗರ ಸಾಲಿಯ ಅಶಿಷ್ಟಂಟ ಮಾಸ್ತರ ನೇಮಿಸಿಧೆ. ಸಂಬಳ ರು. ೧೧.

ಸ್ವಾಮಿರಾವ ಅಪ್ಪಾಜಿ, ಅ. ಮಾಸ್ತರ, ಮುದ್ದೇಬಿಹಾಳ, ಇವರನ್ನು ಅದೇ ಗ್ರಾಮದಲ್ಲಿ ಹೆಂಣ ಹುಡುಗರ ಸಾಲಿಯ ಮಾಸ್ತರ ನೇಮಿಸಿಧೆ. ಸಂಬಳ ರು.

ಪ್ರಭಾಕರ ಬಾಪೂಜಿ, ಅಶಿಷ್ಟಾಂಟ, ಮಾಸ್ತರ, ಇಂಡಿ, ಇವರಿಗೆ ಸಂಬಳ ರು. ೧೯ ಇದ್ದದ್ದು ೨೦ ರೂಪಾಯಿ ಮಾಡಿರುತ್ತದೆ.

ಕೃಷ್ಣಾಜಿ ಗುರುನಾಥ, ಟ್ರೇನಿಗ ಕಾಲೇಜ, ಇವರನ್ನು ಬಾಗಲಕೋಟ ಸಾಲಿಯ ಅಶಿಷ್ಟಾಂಟ ಮಾಸ್ತರ ಕೆಲಸಕ್ಕೆ ನೇಮಿಸಿಧೆ. ಸಂಬಳ ರೂ. ೧೨. ತಾರೀಖ ೧೨ ಅಪ್ರೇಲ ೧೮೭೬ ಸನ್ನೆ.

(Sd.) R. A. Savanur
ಡೆ. ಎ. ಇ. ಜಿಲ್ಹಾ ಕಲಾದಗಿ

CORRESPONDENCE.

ಪತ್ರವ್ಯವಹಾರವು.

ರಾಜಮಾನ್ಯ ರಾಜಶ್ರೀ ಕನ್ನಡ ಶಾಲಾಪತ್ರಕದ ಪ
ಟರರ ಸಂನಿಧಾನಕ್ಕೆ.

ವಿ. ವಿ. ಸನ್ನ ೧೮೭೬ ಇ. ಜಾನೇವಾರಿ ತಿಂಗಳ ಶಾಲಾಪ
ಕದ ಸಂಚಿಕೆ (೧೨), ಪುಟ (೨೩೭) ನೇದರಲ್ಲಿ, ರಾಣೆಬೆ
ನೂರ ತಾಲೂಕ ಪೈಕಿ ಐರಣಿ ಸಾಲಿಯ ಮಾಸ್ತರರಾದ ರಾ
ರಾಮಚಂದ್ರ ನರಸೋ ಇವರು ಕೊಟ್ಟಿರುವ ಕನ್ನಡ ಪದ
ಳಿಗೆ ಅರ್ಥವನ್ನು ನನ್ನ ಬುದ್ಧಿಗೆ ತಿಳಿದಷ್ಟು ಬರೆದಿದ್ದೇ
ಇದನ್ನು ದಯಮಾಡಿ ತಂಮ ಸರಸವಾದ ಶಾಲಾಪತ್ರಿಕೆಯ
ಳ್ ಮುದ್ರಿಸಿ ಪ್ರಸಿದ್ಧ ಮಾಡಬೇಕೆಂದು ಕೋರುತ್ತೇನೆ.

ವಂಶಾವಳಿಗಳು.

ಅರ್ಥ-ಅನಿಲನ=ಗಾಳಿಯು,ಅಹರವಮಾಡಿಕೊಂಡನ=ಆ
ವ ಮಾಡಿಕೊಂಡ ಕಣ್ವಋಷಿಯ, ತನಯಳ=ಪುತ್ರಿಯಾದ
ಕುಂತಲೆಯು। ಅರಸನ=ಪತಿಯಾದ ದುಶಂತ ಮಹಾರಾಜನ,
ತನ=ತಂದೆಯಾದ ಪುರೋರವನ, ತಂದೆಯ=ಪಿತನಾದ ದವು
ಋಷಿಯ, ಜನಕನ=ಅಯ್ಯನಾದ ಕಶ್ಯಪನ, ಅಪ್ಪನ=ಜನಕ
ದ ಬ್ರಹ್ಮನ, ಪಡದನ=ಹಡದಂಥ ಶ್ರೀಕೃಷ್ಣನ, ಅನುಜೆಯ
ತಂಗಿಯಾದ ಸುಭದ್ರೆಯ, ಮಗನ=ಪುತ್ರನಾದ ಅಭಿಮನ್ಯು
ನ, ಮೈದುನನ=ಬೀಗನಾದ ಉತ್ರನ, ಜನಕನ=ತಂದೆಯ
ವಿರಾಟರಾಯನ, ಅಣುಗಿಯು= ಮಗಳಾದ ಉತ್ರಿಯು, ತಾ
ಯು=ಮಾತೆಯಾದ ಸುದಿಷ್ಣೆಯ, ಅನುಜನ=ತಂಮನಾದ ಕೀ
ಕನ, ಘನಪರಾಕ್ರಮದಿಂದ ಕೊಂದನ=ಬಹು ಸಾಮರ್ಥ್ಯದಿ
ಕೊಂದ ಭೀಮಸೇನನ, ಜನನಿ=ತಾಯಿಯಾದ ಕುಂತಿಯ,

ದಿನಿ=ನಾದನಿಯಾದ ದೇವಕಿಯು, ಗೋಪಿಯು=ಗೋಪಿಯಾದ ಲಕ್ಷ್ಮಿಯು ಪಾಲಿಸು=ರಕ್ಷಿಸು ||೧||

ಗಿರಜೆಯರಸನ=ಶಂಕರನ ಕಾದಿಮೆಚ್ಚಿಸಿ=ಯುದ್ಧ ಮಾಡಿ ಒಲಿಸಿ, ಶರವಪಡೆದನ=ಪಾಶುಪತಾಸ್ತ್ರವನ್ನು ಪಡೆದ ಅರ್ಜುನನ ಮುತ್ತನ=ಅಜ್ಜನಾದ ಭೀಷ್ಮನ ಪಿತನ=ತಂದೆಯಾದ ಶಾಂತನು ರಾಜನ ಅರಸಿಯ=ಹೆಂಡತಿಯಾದ ಭಾಗೀರಥಿಯು ಅಯ್ಯನ=ಅಪ್ಪನಾದ ನಾರಾಯಣನ ಸುತನ=ತನಯನೆನಿಪ ಬ್ರಹ್ಮನ, ಮೊಂಮಗನ=ಮಗನಿಗೆ ಮಗನಾದ ರಘುರಾಯನ ಮಗನ=ಸುತನಾದ ದಶರಥರಾಯನ ಹೆಂಮಗನ=ಹಿರಿಯ ಮಗನಾದ ರಾಮನ ಅರಸಿಯಳಿಗೆ=ಪಟ್ಟದರಸಿಯಾದ ಜಾನಕಿಗೆ ಆಳುಪಿದನ=ಆಶೆ ಬಟ್ಟ ರಾವಣನ ಮಥಿಸಿದ=ಸಂಹಾರ ಮಾಡಿದಂಥ ಸರಸಿಜಾಂಬಕ=ಕಮಲಾಕ್ಷನಾದ ರಾಮಚಂದ್ರನ=ಶ್ರೀರಾಮಚಂದ್ರನ, ಚರಣಸೇವಕ=ಪಾದಸೇವೆಯನ್ನುಳ್ಳ, ಹರಿಕುಮಾರಕ=ವಾಯು ಪುತ್ರನೆನಿಸುವ ಹನುಮನು: ಹಂನಾ=ಮಾರುತಿಯೇ ನಂನನು ರಕ್ಷಿಸು ||೨||

ಕರಿಮುಖ=ವಿನಾಯಕನ ಅನುಜನ=ತಂಮನಾದ ಷಾಣ್ಮಾತುರ, ಅರಿಯ=ಶತ್ರುವಾದ ತಾರಕಾಸುರನ, ಮಕ್ಕಳ=ಪುತ್ರರಾದ ತಾರಕಾಕ್ಷ ಕಮಲ್ಕ್ಷ ವಿದ್ಯುನ್ಮಾಲಿಗಳ, ಪುರವ=ತ್ರಿಪುರಗಳನ್ನು, ಕೆಡಹಿದನ=ಬಾಣರೂಪಿನಿಂದ ಕೆಡಸಿದ ಕೃಷ್ಣನ, ಅತ್ತೆಯು=ಅತ್ತೆಯಾದ ಕುಂತಿಯ, ಆತ್ಮಜನ=ತನಯನಾದ ಭೀಮರ, ಅರಸನ=ಧರ್ಮರಾಜನ ಅಣುಗನ=ಮಗನಾದ ಅಭಿಮನ್ಯುವಿನ ಭಾವನ=ಬೀಗನಾದ ಮನ್ಮಥನ ಅವ್ವೆಯ=ತಾಯಿಯಾದ ಲಕ್ಷ್ಮಿಯ, ಅನುಜನನು=ತಂಮನಾದ ಚಂದ್ರನನು ಶಿರದಿಧರಿಸಿದಾತನ=ತಲೆಯಲ್ಲಿ ಧರಿಸಿಕೊಂಡ ಮಹಾದೇವನ ರಮಣಿ=ಪತ್ನಿಯಾದಂಥ, ಮ್ಹೈಷಾಸುರನಮರ್ದಿನಿ=ಮ್ಹೈಷಾಸುರ ರಾಕ್ಷಸನ

ನ್ನು ಕೊಂಡಂಥ, ವೈಷ್ಣವಿ=ವಿಷ್ಣುರೂಪಿಯಾದಂಥ ಗಿರಿಜ
ಪಾರ್ವತಿಯೇ, ಪರಮಕೃಪೆಯಲಿ=ಶ್ರೇಷ್ಠವಾದ ಕೃಪೆಯಲಿ
ನಂನು ಕರುಣಿಸು=ನಂನಂನು ಕರುಣದಿಂದ ರಕ್ಷಿಸು ||೪||

ಈ ಪ್ರಕಾರ ಅರ್ಥವಾಗುವದುಂಟು. ಇತಿ ವಿಜ್ಞಾಪನಃ.

ಮುಕ್ಕಾಮ ಕಾಜಗೇರಿ,
ತಾ|| ೪ ನೇ ಮಾಹೆ ಏ
ಪ್ರೀಲ ಸನ್ ೧೮೭೬
ಇಸ್ವಿ.

ಮಲ್ಲಯ್ಯಾ, ವೆದ್ದಯ್ಯಾ ಜಗಾಪ
ರ ಸ್ಕೂಲ ಮಾಸ್ತರ, ಕ ಜಗೇ
ತಾಲೂಕ ರೋಣ, ಜಿಲ್ಲಾ ಧಾ
ವಾಡ.

ಮ|| ರಾ|| ರಾ|| ಕಂನಡ ಶಾಲಾಪತ್ರಕಕರ್ತರವ
ಚರಣಸಂನಿಧಿಗೆ,

ವಿನಂತಿ ವಿಜ್ಞಾಪನಂಗಳು. ಸಂನ ೧೮೭೫ ನೇ ಇ|| ಡಿಶೆಂ
ರ ತಿಂಗಳ ಶಾಲಾಪತ್ರಿಕದ ಸಂಚಿಕೆ (೯), ಪೃಷ್ಠ (೨೧೫)ನೆ
ದರಲ್ಲಿ, ರಾ. ರಾ. ರಂಗೋ ವೆಂಕಟೇಶ ಪಡ್ಡಿ, ಮಾಸ್ತರ, ಕುರ್ತ
ಕೋಟಿ, ತಾಲೂಕ ಗದಗ, ಜಿಲ್ಲಾ ಧಾರವಾಡ, ಇವರು ಕೊಟ್ಟ
ಸಂಸ್ಕೃತ ಎರಡು ಶ್ಲೋಕಗಳಲ್ಲಿ ಒಂದರ ಶಬ್ದಾರ್ಥ ಭಾವ
ರ್ಥವನ್ನು ಬರೆದು, ನನ್ನ ಕೈಲಾದ ಮಟ್ಟಿಗೆ ಶೋಧ ಮಾಡಿ
ಕಳುಹಿಸಿದ್ದೇನೆ. ಇದಂನು ದಯಮಾಡಿ ತಂಮ ಸುಂದರವಾದ
ಪತ್ರಕದಲ್ಲಿ ನಾಲ್ಕು ಸಾಲು ತೆಗೆದುಕೊಂಡು ಅಚ್ಚು ಹಾಕಿ, ಪ್ರ
ಸಿದ್ಧ ಮಾಡಬೇಕೆಂದು ಅಪೇಕ್ಷಿಸುತ್ತೇನೆ.

ಕಾ ಚಾರುಪ್ರತಿಮಾ ಕರೋತಿ ವಹತಿ ಕಿಂ ಕಂ ಯಾ
ಪಾಪಿಷ್ಠಜಾ | ಕಾ ದಗ್ಧಾ ಪವನಾತ್ಮಜೇನ ಬಲಿನಾ ಕಿ
ಕಾಮಸಂಬೋಧನಂ || ಕಾ ವಿಷ್ಣುಪ್ರಮದಾ ಮಹೇಶಪ್ರ
ರತಃ ಕಂ ಸಂತ್ಯಜಂತಿ ಸ್ತ್ರಿಯಃ | ಆರೋಹಾದವರೋ
ಹಣಾಚ ನಿಪುಣೈರೇಕಂ ದ್ವಯೋರುತರಂ || ೧ ||

ಅರ್ಥ—ಈ ಶ್ಲೋಕ ಪಾದವ ಶ್ಲೋಕಸ್ಥಾತ್=ಶಬ್ದ ಇದ್ದಂತೆ ಪ್ರೋ ವದರಿಂದ ಒಂದು ಅರ್ಥ ಆಗಬೇಕು, ಅದೇ ಶಬ್ದ ತಿರುವು ರುವು ಮಾಡಿ ಓದುವದರಿಂದ ಮತ್ತೊಂದು ಅರ್ಥ ಆ ಗಲೀ.

(ಮೇಲಿನ ಕವಿತೆಯ ಶಬ್ದಾರ್ಥಗಳು.)

ಚಾರುಪ್ರತಿಮಾ, ಕಾ	ಸುಂದರವಾದ ಮೂರ್ತಿ ಯಾವದು?	ರಂಭಾ
ಖರಃ ಕಿಂ ವಹತಿ.	ಕತ್ತಿಯು ಏನು ಹೊರುತದೆ?	ಭಾರಂ
ಪಾಪಿಷ್ಠಜಾ ಕಂ ಯಾಂತಿ	ಪಾಪಿಷ್ಟ ಜನರು ಎಲ್ಲಿ ಹೋಗುತ್ತಾರೆ? ಯಮನ ಹತ್ತರ.	ಕಾಲಂ
ಬಲಿನಾ ಬವನಾತ್ಮಜೇನ ಕಾ ದಗ್ಧಾ.	ಬಲಿಷ್ಟನಾದ ಹನುಮಂತನಿಂದ ಏನು ಸುಡಲ್ಪಟ್ಟಿತು? ಲಂಕಾ.	ಲಂಕಾ
ಕಾಮಸಂಭೋಗ ಧನಂ ಕಿಂ	ಕಾಮ=ಮಾರ ಇದರ ಸಂಭೋಗ ಧನಹೆ	ಮಾರ
ವಿಷ್ಣುಪ್ರಮದಾ ಕಾ	ವಿಷ್ಣುಗ ಪ್ರೀತಿ ಉಳ್ಳಾಕೆಯಾರು?	ರಮಾ
ಮಹೇಶರಪ್ರತ್ಯಃ ಸ್ತ್ರೀಯಃ ಕಂ ಸಂತ್ಯಜಂತಿ.	ಮಹಾದೇವರ ಹತ್ತರ ಸ್ತ್ರೀಯರು ಹೋಗುವಾಗ್ಯೆ ಏನು ಬಿಡುತ್ತಾರೆ.	ನಾಗಂ

ಮುಕ್ಕಾಮ ಹಿರೇಕೊಪ್ಪ
ತಾರೀಖು ೨೦ | ೪ | ೨೬
ಇಸ್ವಿ.

ಸ್ವಾಮಿ ಶೇಷಾಚಾರ್ಯ ಕಾಲಗಿ, ಸ್ಕೂಲಮಾಸ್ತರ ಶಾಲಾ ಹಿರೇಕೊಪ್ಪ, ತಾ|| ನರಸಗಡ.

ರಾ· ರಾ· ಕನ್ನಡ ಶಾಲಾಪತ್ರಕದ ಎಡಿಟರರಿಗೆ—

ವಿ· ವಿ· ತಮ್ಮ ಸುಂದರವಾದ ಪತ್ರಿಕೆಯಲ್ಲಿ ಕೆಳಗೆ ಬರೆದಿರ
ವ ನಾಲ್ಕು ಪಂಗ್ತಿಗಳಿಗೆ ಸ್ಥಳದೊರೆಯುವದೆಂಬ ಕಾಂಕ್ಷೆಯಿಂ
ದ ಬರೆದು ಕಳುಹಿಸಿರುತ್ತೇನೆ·

ಈ ತಾಲೂಕಿನ ರಾವಸಾಹೇಬ ಮಾಮಲೇದಾ
ರಾಮಚಂದ್ರರಾವ ಕೋಂಣೂರ ಇವರು ತಾ॥ ೨೫ ಮಾರ್ಚ ಸ
ನ ೧೮೭೭ ಇಸವಿ ದಿವಸ್ಸ, ಈ ಸಾಲಿಗೆ ಬಂದು ಹುಡುಗ
ಪರೀಕ್ಷೆ ತೆಗೆದುಕೊಂಡು ಮಾಸ್ತರರು ಹುಷಾರ ಹಾಗೂ ಮೆ
ಹನತಿ ಇದ್ದಾರೆಂಬ ಬಗ್ಗೆ ಶರಾಬರೆದಿರುತ್ತಾರೆ· ಮತ್ತು ಇ
ರ ಊರೊಳಗಿನ ಜನರನ್ನು ಕರೆಕಳುಹಿಸಿ ಅವರಿಗೆ ತಮ್ಮ
ಮ್ಮ ಹುಡುಗರನ್ನು ವೇಳೆ ವೇಳೆಕ್ಕೆ ಸಾಲಿಗೆ ಕಳುಹಿಸಬೇಕ
ಅದರಿಂದ ನಿಮ್ಮ ಲಾಭವದೆಂಬ ಬಗ್ಗೆ ಅವರಿಗೆ ಸಮಜೂ
ಕೊಟ್ಟರು· ರಾವಸಾ॥ ರವರ ಲಕ್ಷ ವಿದ್ಯವೃದ್ಧಿಯ ಕಡೆಗೆ ಬ
ಳೇ ಇರುತ್ತದೆ· ಇದರಂತೆ ಎಲ್ಲಾ ತಾಲೂಕಿನ ಮಾಮಲೇದಾ
ರು ಮಾಡಿದರ ವಿದ್ಯವೃದ್ಧಿಗೆ ಬಹಳೇ ಉತ್ತೆಜನ ಬರುವದು

ತಾ॥ ೩೦ ಮಾಹೆ ಮಾರ್ಚ ಸಂನ ೧೮೭೭ ಇಸ್ವಿ·

ಮು· ದೇವಲಾಪೂರ ತಾ· ಸಂಪಗಾವ
ಲ್ಲಾ ಬೆಳಗಾಂವ ಅನಂತ ರಾಮಚಂದ್ರ
ಕಲಘಟಗಿ ಬ್ರಾಂಚಸ್ಕೂಲ ಮಾಸ್ತರ

ರಾ· ರಾ· ಕನ್ನಡ ಶಾಲಾಪತ್ರಿಕೆಯ ಎಡಿಟರರಿಗೆ—

ವಿ· ವಿ· ತಂಮ ಕರದೊಳುದ್ಭವಿಸುವ ಪತ್ರಿಕೆಯಲ್ಲಿ ಕೆಳಗೆ
ರೆದ ನಾಲ್ಕು ಪಂಗ್ತಿಗಳಿಗೆ ಸ್ಥಳ ದೊರಿಯುವದೆಂದು ಆಸೆ ಗ
ಯುತ್ತೇನೆ·

ಲೆಖ್ಖವು·

ಒಂದು ಶಹರದಲ್ಲಿ ಐದು ಕೋಟೆಗಳಿದ್ದವು· ಒಂದೊಂದ

ಕೋಟೆಯಲ್ಲಿ ಯೆಷ್ಟೆಷ್ಟೋ ಜನರಿದ್ದರು. ಆವಾಗ್ಯೆ ವೈರಿಗಳು ಮೊದಲನೇ ಕೋಟೆಗೆ ಮುತ್ತಿಗೆ ಹಾಕಲು, ಅದರ ಯಜಮಾನನು ತನ್ನಲ್ಲಿ ಇದ್ದ ದಂಡಿನಷ್ಟೇ ದಂಡನ್ನು ನಿಮ್ಮ ನಿಮ್ಮ ಸೈನ್ಯದಲ್ಲಿ ನನಗೆ ಕೊಡಿರಿ. ಅಂತಾ ಭಾಕಿ ಕೋಟೆಯುವರಿಗೆ ಕೇಳಿದ್ದಕ್ಕೆ ಅವರು ಅದರಂತೆ ಕೊಟ್ಟರು. ಶತ್ರುಗಳು ಆ ಕೋಟೇ ಬಿಟ್ಟು ಯರಡನೇ ಕೋಟೆಗೆ ಮುತ್ತಲು, ಅದರ ಧನಿಯೂ ಬಾಕೀ ಕೋಟೆಯುವರಿಗೆ ನಮ್ಮಲ್ಲಿ ಇದ್ದಷ್ಟೇ ಜನರನ್ನು ನೀವು ಕೊಡಿರಿ ಅಂತಾ ಕೇಳಲು ಅವರು ಅದರಂತೆ ಕೊಟ್ಟರು. ವೈರಿಗಳು ಆ ಕೋಟೆಯನ್ನು ಬಿಟ್ಟು ಹೋದರು. ಇದೇ ರೀತಿಯಿಂದ ಶತ್ರುಗಳು ಕಡೇ (ಐದನೇ) ಕೋಟೆಗೆ ಮುತ್ತಿದರು. ಅದರ ಧನಿಯೂ ಬಾಕೀ ಕೋಟೇಯುವರಿಗೆ ನನ್ನಲ್ಲಿದ್ದಷ್ಟು ಜನರನ್ನು ಕೊಡಿರಿ ಅಂತಾ ಕೇಳಲು ಅವರು ಅದರಂತೆಯೇ ಕೊಟ್ಟರು. ಶತ್ರುಗಳು ಈ ಪ್ರಕಾರವಾದದ್ದನ್ನು ಕಂಡು ಹಿಮ್ಮೆಟ್ಟಿದರು. ಕಡೆಗೆ ನೋಡಲಾಗಿ ಆ ಕೋಟೆಗಳೊಂದೊಂದರಲ್ಲಿ ಮೊದಲಿನಷ್ಟೇ ಜನರಿದ್ದರು. ಆದರೆ ಆ ಕೋಟೆಗಳೊಂದೊಂದರಲ್ಲಿ ಮೊದಲು ಯೆಷ್ಟೆಷ್ಟು ಜನರಿದ್ದರು?

ಈ ಲೆಖ್ಖವು ನಂನ ಅಲ್ಪ ಬುದ್ಧಿಗೆ ತಿಳಿಯುವ ಕಾರಣ, ನಮ್ಮ ಬಂಧು ಜನರಾದವರು ಇವರ ರೀತಿನಾರ ಸಹಿತ ಮಾಡಿ, ಇದೇ ಪತ್ರದ್ವಾರದಿಂದಲೇ ನನಗೆ ಬಂದ ಈ ಲೆಖ್ಖದ ತೊಂದರೆಯನ್ನು ದೂರ ಮಾಡಬೇಕೆಂದು ಅಪೇಕ್ಷಿಸುತ್ತೇನೆ.

ತಾ॥ ೩೧ ನೇ
ಮಾರ್ಚ ಸನ್ನ
೧ ೩೭ ಇಸ್ವಿ.

ಬಸಯ್ಯಾ ಚನಬಸಯ್ಯಾ ಜವಳಿ
ಮಠ ವಿದ್ಯಾರ್ಥೀ, ಶಾಳಾ ಆಲೂರ,
ತಾ. ಹಾ. ಜಿ. ಧಾ.

ರಾ॰ ಕನ್ನಡ ಶಾಲಾಪತ್ರಕದ ಪ್ರಕಟಕರ ಸಂನಿಧಾನಕ್ಕೆ.

ವಿ॰ ವಿ॰ ನಾನು ತಂಮ ಕಡಿಗೆ ಒಳಗಡೆ ಎರಡು ಪತ್ರಗಳನ ಕಳುಹಿಸಿದ್ದೇನು. ಪ್ರತಿ (೧) ಕ್ಕೆ ಸ್ಥಳ ಶಿಕ್ಕು ಎರಡನೇಕ್ಕೂ ಸಹ ಶಿಗುವದೆಂಬ ನಂಬಿಕೆ ಉಂಟು.

೧ ಶಾಲಾಪತ್ರಕ ಪಾನು (೨೮೬) ನೇದರಲ್ಲಿ ಕ್ರೋನವಾಕರರು ಕಿಲ್ಲೇಕರರೂಪ ಹಾಕಿದ ಲೆಕ್ಕದ ಉತ್ತರವನ್ನು ಬಾವಾಡಿಯ ಶಿಕ್ಷಕರು, ಪ್ರಸಕ ( ) ಪಾನು (೩೦೯) ನೇದಲ್ಲಿ ಏನೇನು ಆಧಾರವಿಲ್ಲದ ಕೋಷ್ಟಕಕ್ಕೆ ಇಂಡಿಯ ಶೀಲ್‌ಟೀಚರರು, ಗಣೋತ್ತಶ್ರೇಢಿಯ ಸಾರಣೀ ಪ್ರಕಾರ ಪ್ರ॥(೧ ಪಾ॥ (೨೦೯) ನೇದರಲ್ಲಿ ಛಾಪಿಸಿ ಅದೆ. ಆವರ ಈ ರಣೀ ಸಮೀಕರಣ ಕಲಿತವರ ಸ್ವಂತ. ಅನ್ಯರಿಗೆ ಸಮಜೂತಿ ಬದ್ದಂತೂ ಸಹಜವಲ್ಲ; ಆದ್ದರಿಂದ ಇದನ್ನು ನಾನು ಬಹು ಸುಲಭವಾದ ಟೂಕಿಯ ರೀತಿಯಿಂದ ಕೆಳಗೆ ವಿವರಿಸುತ್ತೇನೆ.

೧ ನೇ ಕೋಷ್ಟಕ

೮	೧	೧೫	೧೦
೧೧	೧೪	೪	೫
೨	೭	೯	೧೬
೧೩	೧೨	೬	೩

೩೪

೨ ನೇ ಕೋಷ್ಟಕ

೨೪೭	೨೦೫	೨೮೯	೨೫೯
೨೬೫	೨೮೩	೨೨೩	೨೨೯
೨೧೧	೨೪೧	೨೫೩	೨೪೭
೨೭೭	೨೭೧	೨೩೫	೨೧೭

೧೦೦೦

ರೀತಿ— (೧) ನೇ ಕೋಷ್ಟಕದ ಒಂದು ಮನೆಯ ಒಟ್ಟು ಸಂಖ್ಯೆ (೬) ಇದ್ದು ಕಷ್ಟದ ಕಾರಣ (೬) ರಿಂದ ಗುಣಿಸಬೇಕು. ಒಟ್ಟು ಸಾವಿರಾಗಬೇಕಾದ್ದರಿಂದ, (೨೦೪) ದಲ್ಲಿ ವಜಾ ಮಾಡಿ, ಉಳಿದ ಸಂಖ್ಯಾ (೪) ಮನೆಗಳಿಗೆ ಹಚ್ಚುವದಕ್ಕಾಗಿ (೪) ರಿಂದ ಭಾಗಿಸಿ ಬಂದ ಭಾಗಾಕಾರಕ್ಕೆ, (೬) ಹೆಚ್ಚು ವ

ಪ (೧) ನೇ ಕೋಷ್ಟಕದ ಅಂಕೆಗಳ ಅನುಕ್ರಮವಂತೆ (೨) ನೇ ಕೋಷ್ಟಕದಲ್ಲಿ (೬) ಹೆಚ್ಚು ಮಾಡಿ ಕಟ್ಟು, (೩೪+೬=೨೦೪−೧೦೮=೨೯೬÷೪=೧೯೯+೬=೨೫) ೧ ನೇ ಮನೆಯ ಸಂಖ್ಯೆ ಉತ್ತರ.

೧ ಒಬ್ಬ ಸಾಹುಕಾರನಲ್ಲಿ (೧) ಕುದುರೆಗಳಿದ್ದವು. (೧) ನೇದ್ದು (೧) ವರಹ ಕಿಂಮತ್ತಿನದು. (೨) ನೇದ್ದು (೨) ವರಹ ಈ ಪ್ರಕಾರ, (. ೧) ನೇ ಕುದುರೆ (೧) ವರಹವಿತ್ತು ಆ ಸಾಹುಕಾರನಿಗೆ (೯) ಮಕ್ಕಳಿದ್ದರು ಆ ಸಾಹುಕಾರನು ಕಾಲವಶ್ಯವಾದ ಬಳಿಕ ಆ ಹುಡುಗರು ಕುದುರೆಗಳನ್ನು ಸಮವಾಗಿ ಹಂಚಿಕೊಂಡರು. ಅವರಲ್ಲಿ ಒಬ್ಬೊಬ್ಬನಿಗೆ ಯಾವ ಯಾವ ಕುದುರೆಗಳು ಎಷ್ಟೆಷ್ಟು ವರಹ ಕಿಂಮತ್ತಿನವು ಬಂದವು ಹೇಳು: ರೀತಿ ಕೆಳಗೆ ಬರೆದ (೨) ನೇ ಕೋಷ್ಟಕದಲ್ಲಿ ಸಂಣ ಕೋಷ್ಟಕದ ಮೇಲಿಂದ ದೊಡ್ಡ ಕೋಷ್ಟಕದಲ್ಲಿ ಅಂಕೆಗಳಂನು ಕ್ರಮವಾಗಿ ತುಂಬುವದಕ್ಕೆ ಬರುತ್ತವೆ. ಒಬ್ಬೊಬ್ಬನಿಗೆ (೯) ಕುದುರೆಗಳು (೩೬೯) ವರಹಗಳು ಬರುತ್ತವೆ.

೮	೧	೬	೭೦	೬೪	೬೯	೮	೧	೬	೫೩	೪೬	೫೧
೩	೫	೭	೬೬	೬೮	೭೦	೩	೫	೭	೪೮	೫೦	೫೮
೪	೯	೨	೬೭	೭೨	೬೫	೪	೯	೨	೪೯	೫೪	೪೭
			೨೬	೧೯	೨೪	೪೪	೩೭	೪೨	೬೨	೫೫	೫೦
			೨೧	೨೩	೨೫	೩೯	೪೧	೪೩	೫೭	೫೯	೬೧
			೨೨	೨೭	೨೦	೪೦	೪೫	೩೮	೫೮	೬೩	೫೬
			೩೫	೨೮	೩೩	೮೦	೭೩	೭೮	೧೭	೧೦	೧೫
			೩೦	೩೨	೩೪	೭೫	೭೭	೭೯	೧೨	೧೪	೧೬
			೩೧	೩೬	೨೯	೭೬	೮೧	೭೪	೧೩	೧೮	೧೧

ಉತ್ತರವು.

ಮು. ಬಂಮನಹಳ್ಳಿ
ತಾ. ಹಾನಗಲ್ಲ, ಜಿ.
ಧಾ. ತಾ. ೧೫ ಎ
ಪ್ರೇಲ ೧, ೭೫ ಇ.

ಸಹಿ ಜಗಂನಾಥ ಶ್ರೀಧರ ಗೋ
ಕಲೆ, ಹೆಡ್ಡ ಮಾಸ್ತರ, ಬಂಮ
ಹಳ್ಳಿ.

N. B. ನೀವು ಒಂದೇ ಪತ್ರದಲ್ಲಿ ಒಗಟ, ಕೂಟಪ್ರಶ್ನ, ಶಿರನಾಮೆ
ಬರೆಯುವ ರೀತಿ, ಹೊಸ ಉದಾಹರಣೆಗಳು ಮೊದಲಾದ ವಿಷಯಗ
ನ್ನು ಬರೆಯುತ್ತೀರಿ. ಇದು ಸರಿಯಲ್ಲ. ಪ್ರತಿಯೊಂದು ಬೇರೆ ವಿಷಯ
ವನ್ನು ಕುರಿತು ಬೇರೆ ವಿಚಾರವಿದ್ದರೆ ಛಾಪಿಸುವವರಿಗೂ ಓದುವವ
ಗೂ ಕೇಳುವವರಿಗೂ ನೆಟ್ಟಗೆ.

ಎ. ಕ. ಶಾ. ಪತ್ರಿಕೆ.

ರಾ. ರಾ. ರಾವಸಾಹೇಬ ಕನ್ನಡ ಮಠಪತ್ರಿಕೆ ಕತ
ಗಳ ಸನ್ನಿಧಾನಕ್ಕೆ-

ಕೆಳಗೆ ಸಹಿ ಮಾಡುವವನು ಅತಿ ವಿನಯ ಪೂರ್ವಕ
ಜ್ಞಾಪನೆ ಏನಂದರೆ ಕೆಳಗೆ ಬರೆದ ನಾಲ್ಕು ಪಂಕ್ತಿಗಳು
ದ್ಯ ಸುಧಾರಣಾ ಸಂಬಂಧವಿದ್ದರಿಂದ ಅವುಗಳನ್ನು ತಮ
ಸುಂದರವಾದ ಮಠಪತ್ರಿಕೆಯಲ್ಲಿ ಮುದ್ರಿಸುವದು ತಿರಸ್ಕರಿ
ಲಾಗದು.

ಈ ಇಂಗ್ರಜೀ ಧರ್ಮ ಸರಕಾರದವರು ಬುದ್ಧಿಪೂರ್ವ
ವಾಗಿ ಜನರಲ್ಲಿದ್ದ ಅಜ್ಞಾನಂಧಃಕಾರವನ್ನು ದೂರ ಮಾಡುವ
ಕ್ಕಾಗಿ ಹಳ್ಳಿ ಹಳ್ಳಿಗೆ ಮಠಗಳನ್ನು ಸ್ಥಾಪನೆ ಮಾಡಲಾರಂ
ಸಿದ್ಧಾರೆ. ಪರಂತು ಜನರ ಅಜ್ಞಾನಂಧಃಕಾರವು ಹಾಗೇ ಉ
ದದೆ. ಅದು ಹ್ಯಾಗಂದರೆ ಕೆಲ ಮೂಢ ಒಕ್ಕಲಿಗರು ತಮ
ಬಾಲಕರನ್ನು ತೀರ ಸಾಲಿಗೆ ಕಳುಹಿಸುವದೇ ಇಲ್ಲ. ಗ್ರಾ
ಸ್ಥರು (ಗೌಡ ಕುಲಕರ್ಣೀರು) ತಮ್ಮ ಸ್ವಸ್ಥಕ್ಕೆ ಸಾಲಿ ಅಗತ್ಯ
ದ್ದವರಿಂದ ಬೇಗಿರ ಇಸರತಿ ಎಂಬ ಕೆಲವರಿಗೆ ಹುಡುಗರನ

ಳುಹಬೇಕೆಂದಾಗ್ಯೂ, ಇಯತ್ತೆಗಳ ಪ್ರಕಾರ ಪುಸ್ತಕಗಳ
ನ್ನು ಕೊಡಿಸದೆ ಕಳುಹಿದ ಕೆಲ ಹುಡುಗರನ್ನು ಮುಂದುಮಾ
ದನಾ ತರಬುವದಕ್ಕೆ ಒಂದು ತಾಸ ಹಿಂದನಿಂದ ಸಾಲಿಗೆ
ಂದರೆ ಎರಡುವರೆ ತಾಸಿನಲ್ಲಿ ಬುತ್ತಿಯನ್ನು ವೈಯ್ಯುವದ
ಕರದೊಯ್ಯುತ್ತಾರೆ. ಸುಗ್ಗಿ ದಿವಸಗಳಲ್ಲಂತು ಹುಡುಗರ
ನ್ನು ಸಾಲೀ ಕಡೆಗೆ ಹಣಿಕಿ ನೋಡಗೊಡುವದಿಲ್ಲ. (ಅಂತೂ
ಂತೂ ಕೊಂತೀ ಮಕ್ಕಳಿಗೆ ರಾಜ್ಯವಿಲ್ಲೆಂಬಂತೆ)ಸಾಲಿಗೆ ಹು
ಗರನ್ನು ಕಳಿಸುವದೇ ಇಲ್ಲ. ಇತ್ಯಾದಿ ದೋಷಗಳು ಗ್ರಾ
ನಿವಾಸಿಯವರ ಕಡೆಗೆ ಬಹುತರವಾಗಿವೆ.

ಸದರೀ ಅನ್ಯಾಯಾ ಸಾಲಿ ಅವ್ಯವಸ್ಥೆ ಆದಲ್ಲಿ, ಮಾಸ್ತರನು
ನ್ನು ಬಡತೀ ಮಾರ್ಗ ತಪ್ಪಿ ಒಂದು ವೇಳೆ ಹಿಂಬಡಕಿ ಬ
ತೀ ಆದೀತೆಂಬ ಮಹದ್ಭಯದಿಂದ ಊರವರಿಗೆ ಹುಡುಗರ
ನ್ನು ಸಾಲಿಗೆ ಕಳುಹುವ ಬಗ್ಗೆ ಬಹಳ ಸಮಜೂತಿ ಹೇಳಿದ್ದು,
ಬಾಲತ್ವವು ಬೆಲೆಯುಳ್ಳದ್ದನ್ನು ವ್ಯರ್ಥ ಕಳಿಯಗೊಡಿಸಬೇ
ರೆಂಬುವದು) ನಿಷ್ಫಲವಾದಲ್ಲಿ ಸಾಲಿ ಅವ್ಯವಸ್ಥೆ ರಿಪೋರ್ಟ
ಜೂರಿಗೆ ಕಳುಹಲಾಗಿ ಗ್ರಾಮಸ್ಥರು ಮಾಸ್ತರನ ಮೇಲಿ
ೋಷಾ ರೋಪಣಾ ಮಾಡದ ವಿನ್ನ ಸಾಲಿ ಇರಲಿ[illegible]
ಸ ನೀವು (ರೈತರು) ನಿಮ್ಮ ಹುಡುಗರನ್ನು ಹೊಲ ಮನೆ ಕೆಲ
ಸಕ್ಕೆ ಕರದೊಯ್ಯುದರೂ, ಅಡ್ಡಿ ಇಲ್ಲ. ಸಾಲಿ ಬೇಕೆಂದೂ ಅ
ರ್ಜ ಮೇಲೀರೆ ರುಜು ಹಾಕಿರೆಂದು ಕುಬೋಧ ಮಾಡಿ ಕೆಲ
ದಸ್ತೂರಿ ಕೆಲವು ಸ್ವತಃ ರುಜು ಮಾಡಿ ಮಾಸ್ತರನ ವಿರುದ್ಧ
ಸರಕಾರಕ್ಕೆ ಸಂಗಾತಲೇ ಅರ್ಜ ಮಾಡುವರು.

ಹೀಗಾದಲ್ಲಿ (ಸರ್ವರ ಅಂಬೋಣ ಒಂದೇ ಆದಲ್ಲಿ), ಮಾಸ್ತ
ರನ ರಿಪೋರ್ಟು ಸರಕಾರಕ್ಕೆ ಸತ್ಯವೆಂಬುವದಕ್ಕೆ ಕಾಯ್ದೇಶೀ
ರ ಆಧಾರ ತೋರದೆ ಮಾಸ್ತರನ ಬಡತೀ ಆಗೋದಕ್ಕೆ ಹಾ

ದ ಕೊರತೆ ಮುಂತಾದ ಪ್ರಬಲ ಅಡ್ಡಿ ಸರಕಾರವು ತೆಗೆದುಕೊಳ್ಳುತ್ತಿದ್ದ ಪ್ರಕಾರ ಮಾಸ್ತರನ ಉತ್ಥಾನಕ್ಕೆ ತೆಗೆದುಕೊಳ್ಳುವರಿಂದ, ಒಂದೊಂದು ವೇಳೆ ವಿನಾ ಕಾರಣ ಬಡ ಮಾಸ್ತರರು ಉತ್ಥಾನ ಹೊಂದಿ, ಸದರೀ ಅವ್ಯವಸ್ಥೆಯಿಂದ ಒಂದೊಂದು ತಪ್ಪಾದರೂ (ಅಪರಾಧವಾದರೂ) ಇದ್ದ ಸಂಬಳ ಕಾಯಂ ಇರುವದೋ ಪರಮ ಪ್ರಯಾಸವಾಗಿ, ಹಳ್ಳೀಸಾಲಿ ಅಭ್ಯಾಸ ಪ್ರಚಾರಕ್ಕೆ ಬರುವದೇ ಇಲ್ಲ.

ಮಾಸ್ತರನು ಸ್ವಗ್ರಾಮ ಬಿಟ್ಟು, ಚರಿತಾರ್ಥ ಸುಖವಾಗಿ ನವಕರಿಯನ್ನು ಪತಕರಿಸಿದ್ದರ ಮೇಲೆ ದೋಷವನ್ನುಂಟು ಮಾಡಿಕೊಳ್ಳುವನೋ, ಅವನಿಗೆ ಉತ್ಥಾನ ಬೇಕಾಗಿರುವದೋ? ಬೇಕಾಗಿಲ್ಲದ ಕಾರಣ ತನ್ನ ಕೆಲಸದಲ್ಲಿ ನಿಃಸಂದೇಹವಾಗಿ ಬಡ ಮಾಸ್ತರನು ದೋಷ ಹೊಂದಲರಿಯನು.

ಈ ಉಭಯ ಪಕ್ಷಕ್ಕೂ ನ್ಯಾಯ ದೊರೆದು ಲಾಭಾಲಾಭಗಳಾಗಬೇಕಾದರೆ ದಾವ ಊರವರಿಗೆ ಸರಕಾರದವರು ಈಗ ಶಾಲೆಯನ್ನು ದಯ ಪಾಲಿಸಿರುವರೋ, ಮತ್ತು ಮುಂದೆ ಹೊಸದಾಗಿ ದಯ ಪಾಲಿಸಿರುವರೋ ಆ ಊರವರ ಕಡಿಯಿಂದ ಸಾಲಿಗೆ ದಿನಾಲು(೩)ಹುಡುಗರನ್ನು ಕನಿಷ್ಠ ಪ್ರಕಾರ ಕಳುಹಬೇಕೆಂದೂ, ಹುಡುಗರಿಗೆ ಬೇಕಾದ ಪುಸ್ತಕಗಳನ್ನು ಕೊಡಿಸಬೇಕೆಂದೂ; ಸಾಲಿಗೆ ಮದ್ದತು ಮಾಡಬೇಕೆಂದೂ ಈ ಪ್ರಕಾರ ವರ್ತಿಸದಿದ್ದರೆ ಶಾಲೆಯನ್ನು ಬಂದು ಮಾಡುವದಲ್ಲದೆ ಮಾಸ್ತರನ ಸಂಬಳ ವೆಚ್ಚಾದದ್ದು ಕೊಡಬೇಕೆಂದೂ, ತಸ್ಸೀ ಕಾಗದ ಮೇಲೆ ಕರಾರ ನಾಮೆ ಸರಕಾರವು ಬರಸಿಕೊಂಡಲ್ಲಿ, ಕರ್ನಾಟಕದಲ್ಲಿದ್ದ ವಿದ್ಯಹೀನತ್ವವು ಬಹು ವೇಗದಿಂದ ದಿಕ್ಕನ್ನು ಕಾಣದೆ ಪಲಾಯನ ಹೊಂದಿ ಸರಕಾರಕ್ಕೆ ಕೀರ್ತಿಯೂ ನವಕರರಿಗೆ ಲಾಭಾಲಾಭಗಳೂ, ನ್ಯಾಯದಿಂದ

ಜೋರಿಯುತಕ್ಕ ಮಾರ್ಗವು ಸುಲಭವಾಗಿ ದೊರೆಯ ಬಹುದು.

ಹೀಗೆ ಮಾಡಿದರೆ ಶಾಲೆ ಸ್ಥಿತಿ ಪರಿಣಾಮ ಹೊಂದುವದು. ಅದು ತ್ವರಿತಕ್ಕೆ ನನ್ನ ಅನುಭವಕ್ಕೆ ಬಂದ ಉದಾಹರಣೆ ತ್ರಾಂ ನಂ ಹ್ಯೆಕಿ ತಂಗಡಗಿ ಶಾಲೆ ಅವ್ಯವಸ್ಥೆಯುಂಟಾಗಿ ಗ್ರಾಮಸ್ಥರು ಮೇಲಿನ ೩ನೇ ಕಲ್ಮಿನ ಪ್ರಕಾರ ನನ್ನ ಕೂಡ ವರ್ತಿಸಿದಕ್ಕೆ ಅದು ಹುಸಿ ಎಂಬುವವರ ಬದಲು ಕೆಲ ಪ್ರತ್ಯಂತರ ಆಧಾರ ಭೂತ ಕೊಟ್ಟೆ. ಇದಲಿ ಕೊನೆಗೆ ರಾವಸಾಹೇಬ ಮುದ್ದೇಬಿಹಾಳ ೧ನೇ ವರ್ಗದ ಮಾಜಿಸ್ಟ್ರೇಟ ಸಾಹೇಬರವರು ಮೇಲಿನ ಕೆಲ ಸಾಮುಕ್ತಿಕ ಕರಾರ ನಾಮೆ ಬರಸಿಕೊಂಡು ಸಾರಿ ಸ್ಥಿರ ಇರತಕ್ಕದ್ದೆಂದು ಅಭಿಪ್ರಾಯ ನಮ್ಮ ವರಿಷ್ಠರಿಗೆ ಬರೆದ ಮೇರಿಗೆ, ಈಗ ಆ ಸಾಲಿ ಕೆಲಸ ಕಟ್ಟಳೆಯಂತೆ ಸಾಗಲಾರಂಭಿಸಿದೆಂದು ವರ್ತಮಾನ ಕೇಳುತ್ತೇನೆ.

ವಿದ್ಯಮಾನಕ್ಕೆ ಶಾಲೆ ಸಂಬಂಧ ಗ್ರಾಮನಿವಾಸಿಯುವರಿಗೆ ವಿಮು ಕಟ್ಟಳೆ ಇಲ್ಲದರಿಂದ ಸದರಿ (೫ನೇ ಕಲ್ಮಿನಂತೆ) ಕಟ್ಟಳೆ ಮಾಡುವದುಚಿತವಾಗಲಾರದೆಂಬದಕ್ಕೆ ಸಬಲ ಕಾರಣ ಉದ್ಭವಿಸಲಾರದು. ಒಕ್ಕಲಿ ಜನರು ವಿದ್ಯೆ ಕಲಿಯುವದರಿಂದ ಬಹು ಲಾಭಗಳುಂಟೆಂಬುವದು ಅರಿಯದೆ, ಮೂರ್ಖತ್ವದಿಂದ ಮೋಸಹೊಂದುತ್ತಾರೆಂಬ ಕಾರಣದಿಂದಲೇ, ಅಮೇರಿಕದ ನ್ಯೂಯಾರ್ಕ ಪಟ್ಟಣದ ಸಂಸ್ಥಾನದವರು ಹುಡುಗರನ್ನು ವಿದ್ಯಾಭ್ಯಾಸ ಮಾಡಿಸುವ ಬಗ್ಗೆ ಹೊಸ ಕಾಯ್ದೆಯೂ ಜಪಾನದವರು ಹುಡುಗರನ್ನು ಸರಕಾರಿ ಶಾಲೆಗೆ ಕಳುಹಬೇಕೆಂಬುವ ಬಲತ್ಕಾರ ಉಂಟು ಮಾಡಿದರೇ ಹೊರ್ತು ಜನರಿಗೆ ಅನ್ಯಾಯ ಮಾಡಲಿಲ್ಲೆಂಬುವದು ತಾವು ನೆನಿಸ ಬಹುದೆಂದು ಆಶಿಸುತ್ತೇನೆ.

ಈ ಯಾವತ್ತು ವಿವರವನ್ನು ಮಠಾಧೀಶರೇ ಖುದಾಯವಂದ ಪಿ. ಇ. ಇ. ಸಾಹೇಬ ಬಹದ್ದೂರರವರ ವಿದ್ಯ ಚಿತ್ತಕ್ಕೆ

ಪ್ರತಗೊಳಿಸಿದಲ್ಲಿ ತಮ್ಮ ಈ ಸತ್ಕೃತ್ಯವನ್ನು ನಮ್ಮ
ಬಾಂಧವರಾದ ಹಳ್ಳಿ ಗ್ರಾಮದ ಮಾಸ್ತರರು ಬಹು ಕೊಂಡ
ಹಾಡಿ ಹರಸುವರು.

ಪತ್ರ ವಿಸ್ತಾರ ಬಹಳಾದ್ದಕ್ಕೆ ಕ್ಷಮೆ ದೊರೆಯು ಪತ
ಚಿಸದೆ ಇರಬಾರದೆಂದು ಅಂಗಲಾಚಿ ಬಿನ್ನಂಗೈಯುತ್ತಿದ್ದ
ನೆರವೇರಿಸುವದು ಚಿತ್ತಾಧೀನವು, ಇಂತಿ ದೀರ್ಘ ವಿಜ್ಞಾಪನಃ

ತಾ. ೨ ಮಾ. ೧೭೮ ಮು. ಕೊ | ಸಹಿ ಭೀಮಾಜಿ ಗಣೇಶ ಕ
ಳೂರ ತಾ. ಮು. ಜಿ. ಕ. | ಕಣ್ವಿ, ಸ್ಕೂ. ಮಾ. ಕೋಳು

ಸೂಚನೆ.

ಕನ್ನಡ ಶಾಲಾ ಪತ್ರಿಕದಲ್ಲಿ ಛಾಪಿಸುವದಕ್ಕಾಗಿ ಬರ
ಪತ್ರಗಳಲ್ಲಿ ಕೆಟ್ಟ ಮಸಿಯಿಂದ ತೆಳ್ಳನ ಕಾಗದದ ಮೇಲೆ
ಪೃಷ್ಠ ತುಂಬಾ ಬರೆದಿರುವವೂ, ವಿರಾಮ ಚಿನ್ಹಗಳ ಕಡ
ಲಕ್ಷ ಕೊಡದೇ ಬರೆದಿರುವವೂ, ಶಬ್ದ ಬಿಡಿಸದೆ ಬರೆದಿರು
ವೂ, ಶಬ್ದರೂಪಗಳ ಶುದ್ಧರೂಪಗಳ ಕಡೆಗೆ ಲಕ್ಷ ಕೊಡ
ಬರೆದಿರುವವೂ, ಇಂಥವೇ ಬಹಳ. ಆದದರಿಂದ ನಾವು ಸೂ
ನೆ ಮಾಡುವದೇನಂದರೆ ನಮ್ಮ ಕಡೆ ಪತ್ರ ಕಳುಹಿಸತಕ್ಕ
ರೆಲ್ಲರು ಕಾಗದ ತೆಳ್ಳಗಿದ್ದರೆ ಅದರ ಒಂದೇ ಪೃಷ್ಠ ಮೇಲೆ,
ಲೇ ಮಸಿಯಿಂದ, ಶಬ್ದಗಳನ್ನು ಪ್ರತ್ಯೇಕವಾಗಿ ಬಿಡಿಸಿ,
ದ್ಧವಾಗಿ ಬರೆದು ಕಳಿಸಬೇಕು. ಅಂದರೆ ಓದಿಕೊಂಡು ಛಾ
ಸುವದಕ್ಕೂ ಸುಲಭವಾಗುವದು ಪತ್ರ ಕಳುಹಿಸಿದವರಿಗೆ ತ
ಮ ಪತ್ರ ಛಾಪಿಸಿ ಪ್ರಸಿದ್ಧಿಗೆ ಬಂದದರಿಂದ ಮಾಡಿದ ಶ
ವು ಸಾರ್ಥಕವಾಗಿ ಮುಂದೆ ಎರಡನೇ ಪತ್ರಗಳನ್ನು ಕಳುಹ
ವದಕ್ಕೆ ಉತ್ತೇಜನವೂ ಹುಟ್ಟುವದು.

ಧಾ. ತಾ. ೨೦ ಏಪ್ರಿಲ ೧ ೭೮ ಎ. ಕನ್ನಡ ಶಾ

ಶಾಲಾಪತ್ರಿಕವು.

ಪುಸ್ತಕ ೧೨] [ಸಂಚಿಕೆ ೨.

ತಾರೀಖು, ೨೫ನೇ ಮಾಹೆ ಮೇ, ೧೮೭೬.

EDUCATIONAL INTELLIGENCE.

ವಿದ್ಯಾಸುಧಾರಣಾ ಸಂಬಂಧವ ವೃತ್ತಾಂತಗಳು.

ಮೆಹೆರಬಾನ ಎಜ್ಯುಕೇಶನಲ್ ಇನಸ್ಪೇಕ್ಟರ ದೊರೆಗಳು ರಡೆದ ತಿಂಗಳ ೧೫ನೇ ತಾರೀಖಿಗೆ ವಾರ್ಷಿಕ ಸ್ವಾರೀ ತಿರುಗುವದನ್ನು ತೀರಿಸಿ ಬೆಳಗಾವಿಗೆ ತಿರಿಗಿ ಬಂದರು.

* * *

ಬರುವ ತಿಂಗಳಲ್ಲಿ ಮೆಂ ಎಜ್ಯುಕೇಶನಲ್ ಇನಸ್ಪೇಕ್ಟರ ದೊರೆಗಳ ಅಪ್ಪಣೆಯಿಂದ ಧಾರವಾಡ. ಕಾರವಾಡ, ಕಲಾದಗಿ, ಬೆಳಗಾವ, ಈ ನಾಲ್ಕು ಜಿಲ್ಲೆಗಳ ಡಿ. ಎಜ್ಯುಕೇಶನಲ್ಲ ಇನಸ್ಪೇಕ್ಟರರು ಬೆಳಗಾವಿಯಲ್ಲಿ ಒತ್ತಟ್ಟು ಕೂಡಿ ದಕ್ಷಿಣ ಭಾಗದೊಳಗಣ ಸ್ಕೂಲ ಮಾಸ್ತರರ ಸಂಬಳದ ಸಂಬಂಧದಿಂದ ಎಷ್ಟೇ ಹೆಚ್ಚು ಕಡಿಮೆ ಮಾಡತಕ್ಕವರಿರುತ್ತಾರೆಂದು ಕೇಳುತ್ತೇವೆ.

* * *

ಮಿಸ್ಟರ ತೈತಸ ಕಾಸ್ಟ್ರೊ ಇವರಿಗೆ ಕಾರವಾಡದಲ್ಲಿ ಹೊಸ

ದಾಗಿ ಆಗತಕ್ಕ ಹೈಸ್ಕೂಲಿನ ಹೆ. ಮಾ. ಕೆಲಸಕ್ಕೆ ನೇಮಿಸ
ಕ್ಕವರಿರುತ್ತಾರೆಂದು ಕೇಳುತ್ತೇವೆ.

ಉತ್ತರ ಕಾನಡಾ ಜಿಲ್ಲೆಯ ಡೆಪ್ಯೂಟಿ ಎ. ಇನಸ್ಪೇಕ್ಟ
ರಾದ ರಾ. ಸಾ. ರಾಮಚಂದ್ರ, ವಿನಾಯಕ ಭಾನಪ ಇವ
ಮೂರು ತಿಂಗಳ ಹಕ್ಕಿನ ರಜೆ ತಕ್ಕೊಂಡಿರುವ ಕಾರಣ, ಕ
ಮಠಾ ಇಂಗ್ರಜೀ ಸಾಲೀ ಹೆಡ್ಡಮಾಸ್ತರರಾದ ರಾ. ರಾ. ಶ್ರಿ
ಪತರಾವ ಭಾತಖಂಡೆ ಇವರು ಆ ಕೆಸವನ್ನು ಅಕ್ಟಂಗ ತರೀ
ನೋಡುತ್ತಾರೆ.

ಧಾರವಾಡ ಜಿಲ್ಲೆಯ ಡಿ. ಎಜ್ಯುಕೇಶನಲ್ ಇನಸ್ಪೇಕ್ಟ
ರಾದ ರಾ. ಸಾ. ಚನ್ನಬಸಪ್ಪಾ ಬಸಲಿಂಗಪ್ಪಾ ಇವರು ಮ
ರು ತಿಂಗಳ ಹಕ್ಕಿನ ರಜೆ ತಕ್ಕೊಂಡಿರುವ ಕಾರಣ ಅವರ
ಫೀಸಿನ ಕೆಲಸದ ಚಾರ್ಜ ರಾ. ಸಾ. ಪಾಂಡುರಂಗ ವೆಂ
ಟೇಶ ಚಿಂತಾಮಣಿಪೇಠಕರ ಇವರ ಕಡಿಗೆ ಇರುತ್ತದೆ.

ಧಾರವಾಡ ಹಾಯಿಸ್ಕೂಲಿನ ೧ ನೇ ಮದ್ದತನೀಸರಾ
ರಾ. ರಾ. ವಿಠ್ಠಲ ರಾಮಕೃಷ್ಣ ಮಹಿಸಾಳಕರ ಬಿ. ಎ. ಇ
ರು ತ್ರಿದೋಷ ಜ್ವರದಿಂದ ನಡೆದ ತಿಂಗಳ ೪ ನೇ ತಾರೀಖಿ
ತಮ್ಮ ಊರಲ್ಲಿ ತೀರಿಕೊಂಡರು. ಇವರು ಚಿಕ್ಕ ಪ್ರಾಯ
ವರಾದಾಗ್ಯೂ ಬಹಳ ಸುಜನರೂ, ಸುಸ್ವಭಾವಿಗಳೂ,
ದ್ವಾಂಸರೂ ಇದ್ದರು.

ವಿಲಾಯತಿಯಲ್ಲಿ ಪ್ರಸಿದ್ಧ ಸಂಸ್ಕೃತಜ್ಞರಾದ ಮೋಕ್ಷಮ
ಲ್ಲರ ಸಾಹೇಬರು ಪೃಥ್ವಿಯ ಮೇಲೆ ನಡೆಯುತ್ತಿರುವ ಬಾಹ

ಬೌದ್ಧ, ಜೈನ, ಮುಸಲ್ಮಾನ, ಕನಫ್ಯೂಸಿ, ಲವ್ರೋಸಿ ಎಂ ಆರು ಮುಖ್ಯ ಧರ್ಮಗಳ ಮೂಲ ಪುಸ್ತಕಗಳನ್ನು ಛಾಪಿ ಪ್ರಸಿದ್ಧ ಮಾಡತಕ್ಕವರಿದ್ದಾರೆ. ಯೂರೋಪಖಂಡದೊಳಗ ಹೆಸರಾದ ಎಷ್ಟೋ ಪಂಡಿತಜನರು ಈ ಕೆಲಸದಲ್ಲಿ ಅವ ಸಹಾಯ ಮಾಡುವರಿದ್ದಾರೆ.

ವಿಲಾಯತಿಯಲ್ಲಿ ಹೋದ ಹತ್ತು ವರುಷದಲ್ಲಿ ಪಾರ್ಲಿಮೆಂ ಸಭೆಯವರ ಮಂಜೂರಿಯಿಂದ ಮೂಲ ಶಿಕ್ಷಣಕ್ಕಾಗಿ ,೧೮೨,೭೭೦ ರೂಪಾಯಿ ವೆಚ್ಚಾಗಿರುತ್ತವೆ.

ಇಂಗ್ಲಂಡದಲ್ಲಿಯೂ ವೇಲ್ಸದಲ್ಲಿಯೂ ಕೂಡಿ ಸಾಲಿಗೆ ಗತಕ್ಕಂಥ ಅಂದರೆ, ಮೂರರಿಂದ ಹದಿಮೂರು ವರ್ಷ ವ ಸ್ಸಿನ, ಹುಡುಗರ ಸಂಖ್ಯೆ ೫,೩೭೪,೩೦೧ ಅದೆ.

ಬಂಗಾಲ ಸಿವಿಲ ಸರವಿಸದೊಳಗಿನ ಬೋರೂವ ಎಂಬುವ ಒಂದು ಹೊಸ ಇಂಗ್ರಜೀಸಂಸ್ಕೃತಕೋಶವನ್ನು ಮಾಡಹ ತ್ತಾರೆ. ಮುಂಗಡ ಕ್ರಯ ೨೦ ರೂಪಾಯಿ ಇಟ್ಟಿರು ರೆ.

ಗೋವಾಂತಕದಿಂದ ಹೆಚ್ಚು ಕಡಿಮೆ ೧೮ ಮೈಲುಗಳ ಮೇ ಕಾತೆಂದಮ ಎಂಬ ಊರ ಹತ್ತರ ಒಂದು ದೊಡ್ಡ ಘನ ಣ್ಯವಿದ್ದು, ಅದರಲ್ಲಿ ಗಿಡಗಂಟಿಗಳೆಲ್ಲ ಕಲ್ಲಿನವಾಗಿವೆ ದು, ಡಾಕ್ಟರ ಸಾರಜೆಸ್ಸಿ ಎಂಬ ವಿದ್ವಾಂಸನು ಗೊತ್ತು ರುತ್ತಾನೆ. ಜ್ವಾಲಾಮುಖಿಯಿಂದ ನೆಲವಡರಿ ಬಿರಕುಬಿ ಗಿಡಗಳು ಕಿತ್ತುಬಿದ್ದು, ಮುಂದೆ ಎಷ್ಟೋದಿವಸ ಒಳಗೆ

ಹೊಳಿದ್ದದರಿಂದ ಈ ಪ್ರಕಾರವಾಗಿರಬಹುದೆಂದು ಆತನ ರ್ಕವುಂಟು.

ನಮ್ಮ ಇಲಾಖೆಯಲ್ಲಿಗಾಂತ ಬಂಗಾಲದಲ್ಲಿ ಸ್ತ್ರೀ ಶಿಕ್ಷಣ ಪ್ರಸಾರವು ವಿಶೇಷವಾಗಿದೆ. ಆದದರಿಂದ ಸ್ವಲ್ಪ ದಿವಸದ ಳಗೆ ಡಾಕ್ಟರ ಬಾನರಜಿ ಎಂಬ ಬಂಗಾಲೀ ಪಂಡಿತನ ಮ ಳಾದ ಮಿಸ್ ಬಾನರಜಿ ಇವಳಿಗೆ ಚೊವಿಸ ಪರಗಣೀ ಜಿ ಯಲ್ಲಿರುವ ಹೆಣ್ಣುಹುಡುಗೆಯರ ಸಾಲೆಗಳ ಇನಸ್ಪೇಕ್ಟ ಕೆಲಸಕ್ಕೆ ನೇಮಿಸಿದರು. ಹೆಣ್ಣುಮಕ್ಕಳ ಸಾಲೆಗಳಲ್ಲಿ ಕ ಸುವವರೂ ಅವರ ಪರೀಕ್ಷಕರೂ ಆದಮಟ್ಟಿಗೆ ಹೆಂಗಸರ ಇದ್ದರೆ ಸ್ತ್ರೀ ಶಿಕ್ಷಣಕ್ಕೆ ದೊಡ್ಡ ಸಾಹ್ಯವಾಗುವದು.

ಹುಡುಗರು ಉಡಾಳರಾಗಬೇಕಾಗಿದ್ದರೆ ಮುಂದೆ ಹೇ ವ ಉಪಾಯ ಮಾಡಬೇಕು:-ಒಳ್ಳೆ ಘಷ್ಟಪುಷ್ಟ, ಕಸವುಳ್ಳ ಡುಗನನ್ನು ಒಯ್ದು ಹುಡುಗರು ದಟ್ಟಣೆಯಾಗಿ ಕ ರುವಂಥ ಒಂದು ಕೋಣೆಯಲ್ಲಿ ಕುಳ್ಳಿಸಬೇಕು. ಅವನು ತಲೆಯತ್ತಿ ಅತ್ತಿತ್ತ ನೋಡಿದ ಕೂಡ್ಲೆ ಒಳ್ಳೇ ಡೆಯಬೇಕು, ಕೂತಲ್ಲಿ ಅತ್ತಿತ್ತ ತುಸು ಸರಿದಾಡಿದ ಕ ಹೊಡೆಯಬೇಕು. ಸಾಲಿಗೆ ಬರಲಿಕ್ಕೆ ತುಸು ತಡಮಾ ಕೂಡ್ಲೆ ಹೊಡೆಯಬೇಕು. ಕೇಳಿದ ಪ್ರಶ್ನೆಕ್ಕೆ ಅವನು ಉ ರ ಕೊಡದೇಹೋದರೆ ,,ನೀನು ತೀರ ಮೂರ್ಖನಿದ್ದೀ ತಿಳಿ ಡಿ, ಇದ್ದಿ.. ಎಂದು ಅನ್ನಬೇಕು; ಅವನು ಮಾಡಿದಕ್ಕೆಲ್ಲ ವು ಹಚ್ಚಬೇಕು. ಅವನು ಏನಾದರು ಒಳ್ಳೇ ಕೆಲಸಮಾ ರೆ ಆಶ್ಚರ್ಯಪಟ್ಟಂತೆ ತೋರಿಸಬೇಕು; ಹೀಗೆ ಮಾಡು ಹೋದರೆ ಅವನು ನಿಶ್ಚಯವಾಗಿ ಉಡಾಳನಾಗುವನು.

—ooo—

ಕಳೆದ ಎಪ್ರಿಲ ತಿಂಗಳ “ಎಜ್ಯುಕೇಶನಲ್ ರೆಕಾರ್ಡ ತ್ರ ಕದೊಡನೆ, ಹೋದ ನೋವೆಂಬರ ೧ನೇ ತಾರೀಖಿನ ದಿವ ಮುಂಬಯಿ ಇಲಾಖೆಯೊಳಗೂ ವಿದ್ಯಾ ಖಾತೆಯಲ್ಲಿದ್ದ ೩೦ ಪಾಯಿಗಿಂತ ಹೆಚ್ಚಿನ ಸಂಬಳುಳ್ಳ ಯಾವತ್ತು ಕಾಮದಾರ “ಡೈರೇಕ್ಟರಿ„ ಛಾಪಿಸಿರುತ್ತಾರೆ. ಆದರ ಮೇಲಿಂದ ತಿಳಿ ಯುವದೇನಂದರೆ, ಆ ತಾರೀಖಿಗೆ ವಿದ್ಯಾ ಖಾತೆಯಲ್ಲಿ ಒಟ್ಟಿಗೆ ೮೧ ಕಾಮದಾರರು ೩೦ ರೂಪಾಯಿಗಿಂತ ಹೆಚ್ಚಿಗೆ ಸಂಬಳ ಕೊಳ್ಳುವರಿದ್ದರು, ಇವರಲ್ಲಿ ೬೫ ಜನರು ವರಿಷ್ಟಪ್ರತೀ ಾಮದಾರರೆಂತಲೂ ಉಳಿದ ೭೧೬ ಜನರು ಕನಿಷ್ಟಪ್ರತೀ ಾಮದಾರರೆಂತಲೂ ಭೇದ ಉಂಟು. ಡೈರೆಕ್ಟರ, ಇನಸ್ಪೇಕ್ಟ ರೂ ಪ್ರೊಫೆಸರರೂ, ೧ನೇ ೨ನೇ ಪ್ರತಿ ಹಾಯಸ್ಕೂಲಗಳ ಡ್ಡ ಮಾಸ್ತರರೂ, ಕೆಲವು ಟ್ರೇನಿಂಗಕಾಲೇಜಗಳ ಪ್ರಿನಸಿಪಾ ರೂ ವರಿಷ್ಟಪ್ರತಿ ಕಾಮಕಾರರೆನಿಸುವರು. ಈ ಪ್ರತಿಯಲ್ಲಿ ಗಳೊಂದಕ್ಕೆ ೨೦೦೦ ರೂಪಾಯಿಂದ ೨೦೦ ರೂಪಾಯಿ ನಕ ಸಂಬಳುಳ್ಳ ಕಾಮದಾರರಿರುವರು. ಉಳಿದವರೆಲ್ಲ ಕನಿ ಪ್ರತಿ ಕಾಮದಾರರು. ಕನಿಷ್ಟಪ್ರತಿಯಲ್ಲಿ ೩೦೦ ರೂಪಾ ಯಿಂದ ೩೦ ರೂಪಾಯಿತನಕ ಸಂಬಳದವರು ಇರುವರು.

NOTICES AND CIRCULARS.

ನೋಟಿಸಗಳೂ, ಸರಕ್ಯೂಲರಗಳೂ.

ಚಿಂನಮುಳಗುಂದ ಶಾಲೆಯ ಮಾಸ್ತರರಾದ ರಾಮಚಂದ್ರ ಂಡೋ ಮುಂಡಗದ್ದಿ ಇವರು. ತಂಮ ಕೆಲಸವನ್ನು ಚಂನಾ ಮಾಡದೆ ಸೀಕ ಸಬಬಿನಿಂದ ರಜಾ ತೆಗೆದುಕೊಂಡು ಪ್ರೋ ಮತ್ತು ಆ ಸಾಲೀ ಪರೀಕ್ಷೆಗೆ ನಾವು ಹೋದಸಮಯದ

ಲ್ಲಿ, ಆ ಊರ ಜನರನ್ನೂ, ವಿದ್ಯಾರ್ಥಿಗಳನ್ನೂ, ಈ ಮ ರರು ಸೀಕ ಇರುವದು ನಿಜವೆಂಬ ಬಗ್ಗೆ ವಿಚಾರಿಸಲಾಗಿ ಮಗೆ ಖಾತ್ರಿಯಾಗಲಿಲ್ಲ. ಶೀಕರಜಾ ತೆಗೆದುಕೊಂಡು, ತಃ ಬೆಂನವುಳಗುಂದದ ಹವಾ ತಡಿಯುವದಿಲ್ಲ. ಆದಕಾರಣ ಮ್ಮ ಬೆಳಗಾಂವಿ ಜಿಲ್ಲೀಗಾಗಲೀ. ಕಲಾದಗಿ ಜಿಲ್ಲೀಗಾಗ ವರ್ಗಮಾಡಬೇಕೆಂದು, ಮೇಹರ್ಬಾನ ಎ. ಇನಸ್ಪೇಕ್ಟರ ಹೇಬರವರ ಕಡಿಗೆ ಅರ್ಜಿಯನ್ನು ಮಾಡಿಕೊಂಡರು. ಆ ರ್ಜಿಯ ವಿಷಯದಲ್ಲಿ ನಾವು ರಿಪೋರ್ಟ ಮಾಡುವಾಗ್ಗೆ ರ ಮಾಸ್ತರರು, ಚಂನಾಗಿ ಕೆಲಸ ಮಾಡದಕಾರಣ, ಅವರ ಬಳವನ್ನು ೩ ರೂಪಾಯಿ ಕಡಿಮೆ ಮಾಡಬೇಕೆಂದು; ಹರ್ಬಾನರವರಿಗೆ ಶಿಫಾರಸ ಮಾಡಲಾಗಿ, ಅವರು ನಂಮ ಬ ವನ್ನು ಮಂಜೂರಮಾಡಿ. ನಡೆದ ಸಂಗತಿಯಂನೆಲ್ಲ, ಶಾ ತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಅಪ್ಪಣೆ ಕೊಟ್ಟಿದ್ಧಾರೆ. ದ್ದರಿಂದ ಎಲ್ಲ ಮಾಸ್ತರರು ತಂಮ ಕೆಲಸವನ್ನು ಲಕ್ಷವಿ ಮಾಡತಕ್ಕದ್ದು.

ತಾರೀಖು ೩
ನೇಮೇ ಸಂನ
೧೮೭೬ ಇಸ್ವಿ

Shriniwas K. Savadi
ಡಿ. ಎ. ಇನಸ್ಪೇಕ್ಟರ ಜಿಲ್ಲಾ ಧಾರವಾ

ಕಲಾದಗಿ ಜಿಲ್ಲೆಯೊಳಗಿನ ವರ್ಗಾವರ್ಗಿಗಳು.

ಮಾಹೆ ಎಪ್ರೇಲ ೧೮೭೬ ಇಸ್ವಿ ತಿಂಗಳಲ್ಲಿ ಆದದ್ದು.

೧ ರಾಮಚಂದ್ರ. ಶ್ರೀನಿವಾಸ ವಾಡೆ ಆಶಿಷ್ಟಣ್ಟ ಮಾಸ್ತರ ಕೇದಗುಡ್ಡ ನಂಬರ ೨ ಇವರಿಗೆ ಅಷ್ಟೆ ಸಂಬಳದ ಲೆ ಇಂಡಿ ತಾಲೂಕ ಪೈಕಿ ಅಗರಖೇಡ ಹೊಸಾ ಸಾ

ಮಾಸ್ತರ ಕೆಲಸಕ್ಕೆ ನೇಮಿಸಿಧೆ· ಸಂಬಳ ೧೨ ರೂ.
ಗೋವಿಂದ ಕೇಶವ ಟೆಂಡಮಾಸ್ತರ ಇವರನ್ನು ಬಾದಾಮಿ ತಾಲೂಕ ಪೈಕಿ ಮುದಕವಿ ಸಾಲಿಯ ಹೆಡ್ಡಮಾಸ್ತರ ಕೆಲಸಕ್ಕೆ ನೇಮಿಸಿಧೆ· ಸಂಬಳ ರೂ. ೧೪.
ಗೋಪಾಳ ವೆಂಕಟೇಶ ಸ್ಕೂಲಮಾಸ್ತರ ಮುದಕವಿ ಇವರು ಸಾಲಿಯ ಕೆಲಸಾ ಚಂನಾಗಿ ಮಾಡದೆ ಇರುವಕಾರಣಾ ಇವರಿಗೆ ೧೪ ರೂ. ಸಂಬಳದಿಂದ ೧೨ ರೂ. ಸಂಬಳ ಮಾಡಿ, ಗುಳೇದಗುಡ್ಡ ನಂಬರ ೧ ನೇ ಸಾಲಿಯಲ್ಲಿ ಆಸಿಷ್ಟಣ ಮಾಸ್ತರ ನೇಮಿಸಿಧೆ.

ತಾ॥ ೧೭ ಮಾಹೆ
ಮೇ ೧೮೭೬ ಇ.

R A· Savnur
ಡಿ· ಎ· ಇ. ಜಿಲ್ಲಾ ಕಲಾದಗಿ·

ನಂಬರ ೧೪೧·

ಕಲಾದಗಿ ಜಿಲ್ಲೆಯೊಳಗಿನ ಯಾವತ್ತೂ ಸ್ಕೂಲಮಾಸ್ತರರಿಗೆ ತಿಳಿಪಡಿಸುವದೇನಂದರೆ, ಮುದ್ದೇಬಿಹಾಳ ತಾಲೂಕ ಪೈಕಿ ಬಸರಕೋಡ ಸಾಲಿಯ ತಪಾಸಣೆಗೆ ತಾ. ೧[illegible] ಮೇ ೧೮೭೬ ದಿವಸಾ ನಾವು ಹೋಗಿದ್ದವಿ ಆಗ್ಯೆ ಅಲ್ಲಿಯ ಅಂಣಾಜಿ ಬಾಳಕೃಷ್ಣ ಮಾಸ್ತರನು ಪರವೂರಿಗೆ ಹೋಗಿದ್ದನು· ತಾನು ತಾರೀಖ ೫ನೇ ಮೇ ದಿವಸಾ ಹೋಗಿದ್ದು ಆ ತಾರೀಖು ಹಾಕದೆ ಮುಂದಿನ ತಾರೀಖು ಹಾಕಿ ಕೊಡುವ ಇರಾದೆಯಿಂದ ಬಿನ್ನ ತಾರೀಖಿನ ರಿಪೋರ್ಟ ಒಬ್ಬ ವಿದ್ಯಾರ್ಥಿಯ ಕೈಯಲ್ಲಿ ಕೊಟ್ಟು ಹೋಗಿದ್ದನು. ಇದೇ ಪ್ರಕಾರ ಬಾರನೀಸಿಯಲ್ಲಿ ಸಹ ತಾರೀಖು ಹಾಕಿದ್ದಿಲ್ಲ. ಇದು ಮ. ಎ. ಇನಸ್ಪೇಕ್ಟರ ಸಾಹೇಬ

ಬಹಾದ್ದೂರರವರ ನಜರಿಗೆ ತಂದು ಅವರು ಗೈರಹಾಜರಾದ ದಿವಸದ ಸಂಬಳಾ ಕೊಯಿದದ್ದಲ್ಲದೆ ಅವನಿಗೆ ಒಂದು ತಿಂಗಳ ಸಂಬಳಾ ದಂಡಮಾಡಿರುತ್ತದೆ.

ಮೇಲಿನ ಮಜಕೂರ ಯಾವತ್ತೂ ಮಾಸ್ತರರು ನೋಡಿ ಜಾಗ್ರತೆಯಿಂದ ವಹಿವಾಟ ಇಡಬೇಕು.

ತಿಳಿಯುವದು ತಾ. ೨೪ } R. A. Savnur
ನೇ ೧೮೭೬ ಇಸ್ವಿ. } ಡಿ. ಎ. ಇ. ಜಿಲ್ಲಾ ಕಲಾದಗಿ.

CORRESPONDENCE.

ಪತ್ರವ್ಯವಹಾರವು.

* * *

ವಸಂತಋತುವರ್ಣನಂ

ಆರ್ಯಾವೃತ್ತಂ

आर्यावृत्तम.

श्रीरामानंदरसा—लारामवराभिरामसुवसंतः
गोराजावनशीलोमारमणो ऽवतुनुवंतियंसंतः ॥१॥

।ಶಾರ್ದೂಲ॥ ಪ್ರಾಗೋಳ್ ಬಿಲ್ಲದಸ್ತ್ರದೆ ದಿಗ್ವಿಜಯಯಾತ್ರಾ
ರಂಭವಂ ಮಾಡನೇ।
ಈಗಳ್ ಮಂತ್ರಿ ವಸಂತನಂ ಕರೆದುಕೊಂಡೈತರ್ಪುದೊ
ಡೆಂದನಲ್॥

ಕಾಗುಬ್ಬಿಂ ಮಲಯಾದ್ರಿಯಂ ನೆಡವಿ ಬರ್ಪಪ್ರೇಶನೋ
ಲ್ ಬಂದುವೈ।
ಡಾಗಲ್ ಮಂದಸುಗಂಧವಾಯು ವಡನೈತಂ ತಾವಸಂತಾ
ಗವಂ ॥೧॥
ಇದ್ದಿಡ್ಧಾ ಮಲಯಾದ್ರಿಯಲ್ಲಿ ಪವನಂ ಬೇಸತ್ತು ತೀರ್ಥಾ
ಟನ।
ಕ್ಕೈದ್ವಲ್ಲಲ್ಲಿಹ ಪುಣ್ಯತೀರ್ಥಗಳೊಳುಮೀಯುತ್ತಿಂತದ್ಯೋ
ಗದಿಂ॥
ಶುದ್ಧಂ ವೀತರಜಸ್ಕನಾಗಿ ನಡೆಯುತ್ತೊಯ್ಯೊಯ್ಯನಧ್ವ
ಶ್ರಮಂ
ಬೋದ್ಧಾಮೋದಸುಕ್ಷೇತ್ರನಿರ್ಮಲತೆಯಂ ತಾಳ್ದತ್ತಣಂದ್ಯ
ದಿದಂ॥೨॥

॥**ಕಂದಂ**॥ ಜ್ವಲನಸ್ನೇಹದೆ ತಾಪಂಗೊಳಲಾರದೆ ತೆಂಕಗ
ಡಲ ಶಾರ್ದವನಸಖಂ॥
ತುಳುಗಿ ಮಲಯಾದ್ರಿವಾಸಂ ದಳೆದಾಂತಂ ಶೀತಸುರಭಿ
ಯಂ ಬಹನಲ್ಲಿಂ॥೩॥

॥**ಮತ್ತೇಭ**॥ ಮೊದಲಂಗಾಂಗಳ ಸೊಂಕಿ ಶೀಳಿರುವದೀಗಾ
ಹ್ಲಾದವಂ ನೀವೃದಾ।
ಗೆ ಧರಿತ್ರೀಜದಳಾಳಿಯಂನುದರಿಸಿತ್ತೀಗಂಕುರಂ ದೋ
ರಿಸು।
ತ್ತಡೆ; ಪುಷ್ಪಾಂತಕವಾದುದಾಗೆ ಕುಸುಮಾಮೋದಂಗಳಂ
ನೀವೃದೀ।
ಗಿದಪೂರ್ವಸ್ಥಿತಿಯಾಯ್ತು ವಾಯು ಬಗೆಯಲ್ಕೀವಾತ
ಚೈತ್ರಾಸ್ಪದಂ॥೪॥

॥**ಮಾಲಿನೀ**॥ ಸೆಳೆಯೆ ಮಲಯವಾತಂ ಸೌರಭಶ್ರೀಸಮೇತಂ।

ಪ್ರೊಳೆಯೆ ರಸರಸಾಲಂ ಪಲ್ಲವಾಂಕೂರಜಾಲಂ||
ಮೊಳೆಯೆ ಕಳಿಯಲಾಗಲ್ ಮಾಗಿಪುಷ್ಪಂಗಳಾಗಲ್|
ಸುಳಿಯಲಳಿ ಲಸಂತಂ ಸಾರಿದಂ ಶ್ರೀವಸಂತಂ||೫||

||**ಮತ್ತೇಭ**|| ಸುವನಸ್ತ್ರಾಜಲತಾಳಿ ಭೋಗಿಚಯಕಿತ್ತು
ಸ್ಪರ್ಶನಾಮೋದಮಂ|
ಭುವನಾಹ್ಲಾದಕನಾದೊಡೇಂ ತೆಗೆ! ವಿಯೋಗಿವ್ರಾತದೊ
ಳ್ ವೈರಿಯಾ||
ಧವಜಾತಾಶುಗಭಾವವಂ ಪ್ರಕಟಿಸಲ್; ನೊಂದಾಜನಂ ಬೆ
ದರೀ-
ಪವಮಾನಂ ಗತಿಗೆಟ್ಟು ತಾಳ್ದನದರಿಂ ಮಂದಾನಿಲಾಹ್ವಾ
ಗಮಂ||೬||

||**ವಾಕ್ಯಂ**|| ಹಾಗೆಲ್ಲಿಂದೊಡೆ|

||**ಮತ್ತೇಭ**|| ಗೆಳೆಯಂ ತಾಪವನೀವನಲ್ಲಿರದೆ ಪೋಗಲ್ಕೆಲ್ಲಿ
ಯುಂ ಪಂನಗಂ|
ಗಳು ನಂನಂಗಡನುಂಗಿಬಿಟ್ಟಪವು; ಭುಕ್ತೋಜ್ಝಿತನಾಗಿ
ರ್ಪೆನಾ||
ಗಳುಮಯ್ಯೋ! ಬರಿದೇ ವಿಯೋಗಿ ನಿಕರಂ ಬೈದಪ್ಪು
ದೇನೇವೆನಂ|
ಬಳಲಿಂ ಕೇರ್ಮರಗಲ್ಗಳಂ ಬರುತೆ ಪಾಯ್ವಾಸತ್ತು ಮಾಂ
ದ್ಯಾಸ್ಥಿತಂ ||೭||

||**ಗದ್ಯಂ**|| ಇಂತು ಮಲ್ಲಿಂದೊಡೆ:

||**ಶಿಖರಿಣೀ**|| ವಸಂತಂ ಸಿಂಸೋಪಂ ಸ್ತ್ರರಸಚಿನತುವಕ್ಕೈದಿ
ವಿಯೋ|
ಗಿಸಂದೋಹಕ್ಕಾದಂ ಪಗೆ ಮದನ ತುಷ್ಟ್ಯರ್ಥಮಿನನಿಂ||
ಗೆ ಸಾಹಿತ್ಯಂ ಗೈಯೆಂದದುಪ್ರವ ರಹಃಕಾಮುಚರನಂ|

ತೆಸಲ್ಗಂ ಮಾಂದ್ಯಂಬಾಳ್ದು ಸುಳಿವೆಲರುದ್ಯಾನರಮೆಯೊಳ್ ॥ ೮ ॥

॥ವಚನಂ॥ ಇದೆನಲ್ಲಿನೆ:

।ಮತ್ತೇಭ॥ ಮದನೋರ್ವೀಶ್ವರ ದರ್ಶನಾರ್ಥಕೆ ವಸಂತಾಮಾತ್ಯಸ್ಥಿತರ್ಪಮಾ,
ರ್ಗದಿ ತಂದಾ ಮಲಯಾದ್ರಿಯೊಳ್ ಬಹುಸುಗಂಧದ್ರವ್ಯಮಂ ಕೊಂಡು ಪೇ,
ರಿದನಾವಾತಚರೋತ್ತಮಾಂಗದೊಳನಂಗೋಪಾಯನಕ್ಕೊಯ್ಯಲೆಂ,
ದದರಿಂ ಗಂಧವಹಾಖ್ಯನಾಂತನವನಾದಂ ಮಂದಸಾಭೂರದಿಂ ॥ ೯ ॥

॥ನುಡಿ॥ ಇಂತು ನಿಷ್ಕಾರಣದೋಷಾವಿಷ್ಕರಣಂ ಯೋಗ್ಯಮತ್ತೀಕೆನೆ:

।ಶಾರ್ದೂಲಂ॥ ಕಾಣ್ಕೆ ತಾನೆ ಜಗದ್ಧಿತಾರ್ಥಯೊಲಿದಿತ್ತುಂ ಪ್ರಾಣಸಂದಾನವಂ।
ನೇಣಾಕ್ಷಂ ತ್ರಿಜಗಚ್ಚರಾಚರಕೆ ತನ್ನಂ ಪ್ರಾಜ್ಞರಿಂದಂ ಜಗತ್॥
ಪ್ರಾಣಂ, ಸ್ಪರ್ಶನನೆಂಬ ನಾಮಗಳ ನಾಂತಿರ್ಬೀಗತ ಸ್ವಾರ್ಥಗಂ।
ಜ್ಞಾಣಮರ್ಗಂದ ಸಮೀರನೆಂಬರದಸೂಯಾರೋಪಮೇನಲ್ಲನೇ ? ॥ ೧೦ ॥

॥ವಾಕ್ಯಂ॥ ಅಲ್ತು ಅದೆಂತೆಂದೊಡೆ:

ಮತ್ತೇಭ ॥ ಅತಿಸರ್ವತ್ರ ವಿವರ್ಜಯೋಕ್ತಿಯನಸೀತ್ಯೌದ್ಧತ್ಯದಿಂ ಮೀರಿದಾ।
ದಿತಿಪುತ್ರಂ ಬಲಿಯುಂಡು ದಿಲ್ಲವೆ ಘಟಂ ? ಪ್ರಾಣಪ್ರದಾ

ನಂ ಗುಡಲ್ ||

ಸ್ಥಿತಿಗಾಘಾತಮುದಾಗದೇ?ಸಕಲಭೂತಾಭುಕ್ತ ಶೇಷಂಸುವ
ದತೆಯಂ ತಾಳನೆ ಮಂದನೆನ್ನರೆ ಬುಧರ್ ? ಸ್ವಾತ್ಮ್ರ
ಗಂ ವಾಯುಗಂ ||೧೧||

||**ವಿಬುಧಪ್ರಿ**|| ಛೀ ಕುಯುಕ್ತಿ ವಿಯುಕ್ತನಿಂದೆಯಿದು
ಮಲ್ತುಸಮೀರಣಂ
ಗೀಕುಕಲ್ಮಷನಾಶಕಂ ಗಖಿಳಾಸು ಧಾರಣಾ ಕಾರಣಂ
ಗೇಕೆ ? ವಿಷ್ಣುವರಾತ್ಮಜಂ; ಜಗದೇಕಜೀವನದಾನಿಂ
ಸ್ತೋಕೆಸದ್ಗತಿಯುಕ್ತಿನಿಂಗೆನೆ ಮಂದನೆಂದದ ಸೂಯೆಯೆ
||೧೨||

|**ಮಹಾಸ್ರಗ್ಧರಾ**|| ಮಲಯಪ್ರಾಲೇಯಶೈಲಾಗ್ರದೊಳು
ಸಿ, ನಭಃಪಾತ್ರಮಂತೀವಿ, ದಿಕ್ಕೈ-
ದಿ, ಲಸತ್ಕ್ಷ್ಮಾಪತೀಗಂಗಳೊಡೆಯೆ; ತಳಿದಾವೋದ ಡ
ಡೀರವಂ, ಬಂ-
ದೊಲವಿಂ ದಾರಾಮಕಾಶೀಸ್ಥಳದೊಳ್, ಮಧುವಿಶ್ವೇಶ್ವರಸ್ಥಾ
ಪನಂ ಗೈ-
ಸಿಲೆಯೊಳ್ ಶೀತಾನಿಲಸ್ವರ್ಣದಿ ಪರಿದುದು ಸೋಂಕಲ್ಃ
ನಂ ಸೌಖ್ಯವೀವಾ||೧೩||

ವಸಂತತಿ|| ತಂಗಾಳಿ ಸೋಂಕಿ ಮೃದುಶೀತತೆಯಿಂದೆಮ್ಮೈಗೆ
ತಂಗೆಳ್ಗೆಯುಂ, ನವಸುಗಂಧದಿನಾಸೆಗಂ, ಕ||
ರ್ಣಂಗಳ್ಗಮಾಸಹಚರಾಳಿಸುಗಾನದಿಂಸೌ|
ಖ್ಯಂಗೊಟ್ಟು ಮೂಜಗವಮೋಹಿಸಿಪರ್ವಿತಾಗಳ್ ||೧೪||

ಮತ್ತೇಭ || ವನಶೋಭಾರಮೆಯೆನ್ನಗಲ್ಕೆಗೊಣಗಿಪ್ಪಳ್
ಪೋಗವಳ್ಗೀಗೆ ಬ-
ರ್ಪ ನುನಾನೆಂಬಸುವಾರ್ತೆಯನ್ನರುಪೆನಲ್ ಶ್ರೀಮಾಧವಂ

ಸುಂದುಪೇ।
ಘ್ವಾನವಾಶಿತಸುಗಂಧವಾಯು ಸುಳಿಯಲ್ ರೋಮಾಂಚ
ನಂ ಹಾಳ್ದಳಿಂ-
ದೆನಲೊಪ್ಪಾಳ್ದುದು. ಪಲ್ಲವಾಂಕುರಚಯಂ ತದ್ವಾತದಾ
ಮೋದದಿಂ॥ ೧೫॥

। ವಾರ್ಧಕಪದಿ ॥ ಜಡರಾಜನಾಜ್ಞೆಯಿಂ ಪಿಂತೆಗಂಧವಹನಂ
ನೊಡನೆನಿಷ್ಕಾರಣಂ ಪ್ರೊಯ್ದಾಡಿಪಾಳ್ಕಾಡಿ।
ಕೆಡಿಸಿವಂ ವಿದ್ರುಮಸುವರ್ಣಪತ್ರಂಗಳಂ ನಕಟ ನಂಸ್ಕೈ
ಯನು।
ತೊಡಿಸಿದು ಮಧುಮಹಿಶಂಗೆ ವನದೇವಿಮೊರೆ।
ಮಿಡಿ ಪಿಕಾರ್ತಸ್ವರದಿಬೆಚ್ಚುತೆಜವಂಗುಂದಿ।
ಕೊಡಲೊಡರ್ಚಿದನೆನಸಲ್ಕೊಡಿದವ್ರ ತಂಗಾಳಿಯಿಂ ಪ್ರನಾ
ಘ್ರಾಂತುರಗಳು॥ ೧೬॥

(ಮುಂದೆ ಸಾಗುವದು.)

ರಾ. ರಾ. ಕನ್ನಡ ಶಾಲಾಪತ್ರಿಕಾ ಕರ್ತರಿಗೆ-

ವಿ. ವಿ. ಸನ್ನ ೧೮೭೬ನೇ ಇಸವಿ ಮಾರ್ಚ ತಿಂಗಳದ ಕನ್ನಡ ಶಾಲಾ ಪತ್ರಿಕೆಯ ಪಾನು ೨೮೮ ರಲ್ಲಿ, ಸಂಣೋ ಸುಬ್ಬಣಾಚಾರ್ಯ, ಪಂತೋಜಿ ಧಮ್ಮಣಗಿ ಇವರು ಕೊಟ್ಟ ಶ್ಲೋಕದ ಅರ್ಥವನ್ನು ಕೆಳಗೆ ಬರೆದಿದ್ದೇನೆ. ಅದನ್ನು ಛಾಪಿಸಿ ಪ್ರಸಿದ್ಧ ಮಾಡುವಿರೆಂದು ಬಯಸುತ್ತೇನೆ.

ಶ್ಲೋಕವು.

ಚಕ್ರೇ ತಚ್ಛತ್ರು ಮಿತ್ರೇ ಪ್ರರಜಯಸಮರೇ ಸ್ಯಂದನಂ
ತತ್ವಬಾಂಕದ್ವೇತೇ ಯೇಕಾಂಬುಜಾಕ್ಷೇ ಶರಧಿ ರಪಿಚ ಗಾಸ್ತ
ತ್ರಜಾತಾಧಿನಾಥಃ ॥ ಕಾಂಡಾಸ್ತ್ರಜ್ಞಾತಜಾತಾನನಕುಹರಚರಾ

ಜ್ಯಾ ಚ ತಸ್ಯ ಸ ಚಕ್ರಿ ಯಸ್ಯಾಭೂನ್ನೀಲಕಂಠಸ್ತದಧಿಪಜ ಸ್ತ್ವಾಂ ಪಾಯಾತ್ ಸಪಾಯಾತ್ ॥ ೧ ॥ ಅವರು ಬರ ಶ್ಲೋಕದಲ್ಲಿ „ಸಮುಕಿ” “ತದ್ಧಿ” ಇವೆರಡು ಶಬ್ದಗಳು ಅಶು ವಿದ್ದ ಕಾರಣ „ಸಮರೆ” „ತತ್ರ” ಇವೆರಡು ಶಬ್ದಗಳ ಯೋಗವುಮಾಡಲ್ಪಟ್ಟದೆ.

ಶಬ್ದಾರ್ಥವು,

ಚಕ್ರೇ=ಚಕ್ರವಾಕ ಪಕ್ಷಿಗಳು(ಗಾಲಿಗಳು) ತಚ್ಛತ್ರು ತ್ರೇ= ಆ ಚಕ್ರವಾಕ ಪಕ್ಷಿಗಳಿಗೆ ಶತ್ರುಮಿತ್ರರಾದಂಥ ಸ ರ್ಯಚಂದ್ರರು। ಪುರಜಯಸಮರೇ=ತ್ರಿಪುರಾಸುರನನ್ನು ಯಿಸುವಂಥ ಯುದ್ಧದಲ್ಲಿ । ಸ್ಯಂದನಂ=ರಥವು । ತತ್ಪದಾಂ ದ್ವೈತೀಯಿಕಾ=ಆ ರಥದ ಗಾಲಿಯೇ ಚಿಹ್ನವಾಗಿಯುಳ್ಳ ಷ್ಣುವಿನ ಎರಡನೇ ಹೆಂಡತಿಯಾದ । ಅಂಬುಜಾಕ್ಷೀ=ಸ್ತ್ರೀಯು (ಪೃಥ್ವಿಯು)ಶರಧಿಃ=ಸಮುದ್ರವು (ಬತ್ತಳಿಕೆಯು) ಗೌಃ=ಬಾ ವು। ತತ್ರ=ಆ ಸಮುದ್ರದಲ್ಲಿ ಜಾತಾ=ಹುಟ್ಟಿದ ಲಕ್ಷ್ಮಿಯು। ಅಧಿ ನಾಥಃ=ಗಂಡನಾದಂಥ ವಿಷ್ಣುವು । ಕಾಂಡಾಃ=ಅಶ್ವಗಳು (ನೀ ರು)ತಜ್ಜಾತಜಾತಾನನಕುಹರಚರಾಃ॥ತಜ್ಜಾತ=ಕಮಲದಲ್ಲಿ । ಜಾ ತಾ=ಹುಟ್ಟಿದಂಥ ಬ್ರಹ್ಮನ। ಆನನ=ಮುಖದ। ಕುಹರಹೋದ ರು। ಚರಾಃ=ಸಂಚರಿಸುವಂಥ ವೇದಗಳು ।ಜ್ಯಾ=ಹಗ್ಗವು(ಪೃ ಥ್ವಿ ತಸ್ಯ ಸ ಚಕ್ರಿ=ಆ ಪೃಥ್ವಿಯೇ ಮಸ್ತಕ ಪ್ರದೇಶವಲ್ಲಿ ಉ ಳ್ಳಂಥ ಶೇಷನು। ಯಸ್ಯ=ಯಾವಾತನಿಗೆ। ಅಭೂತ್=ಆಯಿತು ನೀಲಕಂಠಃ=ಮಹಾದೇವನು(ಮಯೂರವು) ತತಧಿಪಜನಕಃ=ಆ ಮಯೂರಕ್ಕೆ ಸ್ವಾಮಿಯಾದ ಷಣ್ಮುಖನ ತಂದೆಯಾದಂಥ ಮಹಾದೇವನು। ತ್ವಾಂ=ನಿನ್ನನ್ನು । ಅಪಾಯಾತ್=ಕೇಡಿನದಸಿಂದ। ಸಃ=ಅವನು ಪಾಯಾತ್=ಸಂರಕ್ಷಣೆ ಮಾಡಲಿ॥ ೧॥

ಭಾವಾರ್ಥವು.

ತ್ರಿಪುರಾಸುರನನ್ನು ಜಯಿಸುವ ಯುದ್ಧದಲ್ಲಿ ಸೂರ್ಯಚಂದ್ರರು ಯಾವಾತನ ರಥದ ಗಾಲಿಗಳಾಗಿದ್ದರೋ, ಆ ಚಕ್ರವೇ ಚಿಹ್ನವಾಗಿ ಉಳ್ಳ ವಿಷ್ಣುವಿನ ಎರಡನೇ ಹೆಂಡತಿಯಾದ ಪೃಥ್ವಿಯು ಯಾವಾತನಿಗೆ ರಥವಾಗಿದ್ದಳೋ, ಸಮುದ್ರವು ಯಾವನಿಗೆ ಬತ್ತಳಿಕೆಯಾಗಿತ್ತೋ, ಆ ಸಮುದ್ರದಲ್ಲಿ ಹುಟ್ಟಿದ ಲಕ್ಷ್ಮಿಯ ಗಂಡನಾದ ನಾರಾಯಣನು ಯಾವನಿಗ ಬಾಣವಾಗಿದ್ದನೋ, ಕಮಲದಲ್ಲಿ ಹುಟ್ಟಿದ ಬ್ರಹ್ಮನ ಮುಖ ಕುಹರದಲ್ಲಿ ಸಂಚರಿಸುವ ವೇದಗಳು ಯಾವಸಿಗೆ ಕುದುರೆಗಳಾಗಿದ್ದವೋ, ಶೇಷನು ಯಾವನಿಗೆ ಸಿಂಜಿನಿಯಾಗಿದ್ದನೋ? ಮಯೂರಸ್ವಾಮಿಯಾದ ಷಣ್ಮುಖನಿಗೆ ಯಾವನು ತಂದೆಯೋ, ಆ ಮಹಾದೇವನು ನಿನ್ನನ್ನು ಕೇಡಿನಿಂದ ದೂರ ಮಾಡಲಿ.

ತಾ. ೧೫। } ತಿಮಣಾಚಾರ್ಯ ಅವಧಾನಿ ಅ. ಮಾಸ್ತರ,
೫।೭೬ } ಧಾ. ೨ನೇ ಕ. ಸಾಲಿ.

ಮಹಾರಾಜ ರಾ. ರಾ. ಕನ್ನಡ ಶಾಲಾ ಪತ್ರ ಕರ್ತರಿಗೆ–

ಸೇವಕನ ವಿನಂತಿಗೆ ಚಿತ್ತ ಕೊಟ್ಟು ಈ ಕೆಳಗೆ ಬರೆದಿರುವ ಲೆಕ್ಕವನ್ನು ತಮ್ಮಲ್ಲಿ ಹುಟ್ಟುವ ಶಾಲಾಪತ್ರಿಕೆಯಲ್ಲಿ ಅಚ್ಚು ಹಾಕಿ ಪ್ರಸಿದ್ಧಿ ಪಡಿಸುವಿರೆಂದು ನಂಬಿಕೊಂಡು ಬರೆದು ಕಳುಹಿಸಿರುತ್ತೇನೆ. ನಾನೆಂದೂ ತಮಗೆ ಪತ್ರ ಬರೆದವನಲ್ಲ ಇದೇ ನೂತನವಾಗಿರುವದರಿಂದ ಏನಾದರೂ ನ್ಯೂನತೆ ಇದ್ದಾಗ್ಯೂ ಕ್ಷಮಿಸುವಿರೆಂದು ನಂಬಿದ್ದೇನೆ.

ಲೆಕ್ಕವು.

ಒಬ್ಬ ಸಾವುಕಾರನಿಗೆ ೨ ಮಕ್ಕಳಿದ್ದರು. ಆ ಸಾವುಕಾರನಿಗೆ ಅವಸಾನ ಕಾಲ ಬಂದದ್ದರಿಂದ ತನ್ನ ಹತ್ತರಿರುವ ೪ ವರಾದ ಚೀಲಗಳು೪, ೬ವರಾದ ಚೀಲಗಳು ೪ ೯ಒಂಭತ್ತು ವರಾ

ದ ಚೀಲಗಳು೩ ೧೫ ಹದಿನೈದು ವರಾದ ಚೀಲಗಳು ೩, ಒ
ದು ವರಾದ ಚೀಲ ೧. ಅಂತೂ ಚೀಲಗಳು ೧೩ ವರಗಳು ೧೦
ಈ ಪ್ರಕಾರಿರುವ ಚೀಲಗಳನ್ನು ನೀವಿಬ್ಬರು ಈ ಚೀಲಗ
ನ್ನು ಒಡಿಯದಲೇ ಒಬ್ಬೊಬ್ಬರು ೫೦ ಐವತ್ತು ಐವತ
ವರಾ ಹಂಚಿಕೊಳ್ಳಿರೆಂದು ಹೇಳಿ ಮೃತನಾದನು. ಆದರೆ ಸ
ರ ಚೀಲಗಳನ್ನು ವಡಿಯದೆ ಅವರು ೫ । ೫೦ ವರಾ ಬರು
ಹಾಗೆ ದಾವ ಪ್ರಕಾರವಾಗಿ ಹಂಚಿಕೋಬೇಕು. ಇದನ
ನಂಮ ಗುರ್ತುಗಳಾದ ಹೆಡ್ ಮಾಸ್ತರರು ದಾರಾದರೂ ರೀ
ವಾರ ಮಾಡಿ ನನ್ನ ಸಂಶಯವನ್ನು ದೂರ ಮಾಡಬೇಕು. ಇ
ತಿ ವಿನಂತಿ.

ಮು. ಕ್ಕಾಮ ರಾಣೇಬಿನ್ನೂರ ಹಣಮಂತ ವೆಂಕಟೇಶ ಖಾ
ತಾ. ೧೮ ಮೇ ಸ. ೧೮೭೬ ನೀಸ್ವಿ. ಶಾ. ರಾಣೇಬಿನ್ನೂ

ಮಹಾರಾಜ ರಾ. ರಾ. ದಕ್ಷಿಣಭಾಗದ ಕನ್ನಡ ವ
ಪತ್ರಕದ ಎಡಿಟರರಿಗೆ—

ಸೇವಕನು ವಿನಂತಿ ಮಾಡಿಕೊಳ್ಳುವದೇನಂದರೆ ಕೆಳ
ಬರೆದ ನಾಲ್ಕು ಪಂಗ್ತಿಗಳನ್ನು ತಂಮ ಸುಂದರವಾದ ಮ
ತ್ರಿಕೆಯಲ್ಲಿ ಸ್ಥಳ ಕೊಟ್ಟು, ಛಾಪಿಸಿ ಪ್ರಸಿದ್ಧ ಮಾಡುವಿರೆಂ
ಕಾಂಕ್ಷೆಯುಳ್ಳವನಾಗಿದ್ದೇನೆ.

೧ ಒಬ್ಬ ಅರಸನ ಅರಮನೆಗೆ ಐದು ಅಗಸಿಗಳಿದ್ದು,
ದು ಅಗಸಿಗಳಲ್ಲಿ ದ್ವಾರಪಾಲಕರಿದ್ದರು. ಆಗ್ಯೆ ಒಬ್ಬ ಸರ
ರನು ತನ್ನ ಸೈನ್ಯ ಸಹವಾಗಿ ಅರಸನ ಭೆಟ್ಟಿಗೋಸ್ಕರ
ದನು. ಆ ದ್ವಾರಪಾಲಕರು ಈ ವೃತ್ತಾಂತವನ್ನು ತಮ್ಮ
ಸನ ಬದಿಲೆ ಹೋಗಿ ಅರಿಕೆ ಮಾಡಿದರು. ಅದನ್ನು ಕೇಳಿ
ರಸನು ದ್ವಾರಪಾಲಕರಿಗೆ ಹೇಳಿದ್ದೇನಂದರೆ, ಸರದಾರನು

ನ ಸಂಗಡ ಎಷ್ಟು ದಂಡ ತಂದಿರುತ್ತಾನೋ ಅದನ್ನು ಒಂದೊಂದು ಅಗಸಿಯಲ್ಲಿ ಅರ್ಧ ಅರ್ಧಾ ದಂಡು ಇರಿಸಿಕೊಂಡು ಬಾಕಿ ಸೈನ್ಯ ಅರಮನೆಯೊಳಗೆ ಬಿಡಬೇಕೆಂದು ಅಪ್ಪಣೆ ಮಾಡಿದನು. ಅದೇ ಪ್ರಕಾರ ಆ ದ್ವಾರ ಪಾಲಕರು ಐದು ಅಗಸಿಗಳಲ್ಲಿ ಅರ್ಧಾ ಅರ್ಧಾ ದಂಡು, ಇರಿಸಿಕೊಂಡು ಬಾಕಿ ಸೈನ್ಯ ಒಳಗೆ ಬಿಟ್ಟರು. ಅರಮನೆಯೊಳಗೆ ಅರಸ ಸರದಾರರ ಭೆಟ್ಟಿಯಾಗಿ ಮರಳಿ ಬರುವಾಗ್ಯೆ ಅರಸನು ಸರದಾರನ ಸಂಗಡ ಅರಮನೆಯೊಳಗೆ ಬಂದಂಥಾ ದಂಡಿಗೆ ಇನಾಮು ಕೊಟ್ಟನು. ಅದು ಹ್ಯಾಗಂದರೆ ಮೊದಲನೇಯವನಿಗೆ ಒಂದು ರುಪಾಯಿ, ಎರಡನೇದವನಿಗೆ ಎರಡು ರುಪಾಯಿ ಮೂರನೇದವನಿಗೆ ನಾಲ್ಕು ರುಪಾಯಿ ನಾಲ್ಕನೇಯವನಿಗೆ ಎಂಟು ರುಪಾಯಿ ಐದನೇದವನಿಗೆ ಹದಿನಾರು ರುಪಾಯಿ, ಇದೇ ಪ್ರಕಾರ ಸರ್ವರಿಗೆ ಕೊಟ್ಟನಂತರಾ ಅರಸನ ಬಳಿಲೆ ಒಂದು ರುಪಾಯಿ ಶಿಲ್ಕು ಉಳಿಯಿತು. ಅದನ್ನು ಸರದಾರನ ಕೈಯೊಳಗೆ ಕೊಟ್ಟು ಕಳಿಸಿದನು. ತಿರುವಾಗ ಸರದಾರನು ತಾನು ಬಿಟ್ಟು ಹೋದಂಥಾ ಐದು ಅಗಸಿಗಳಲ್ಲಿರುವ ದಂಡು ಕರಕೊಂಡು ತನ್ನ ಊರಿಗೆ ಹೋಗಿ ಅರಸನು ಇನಾಮು ಕೊಟ್ಟ ಏಕಂದರ ರುಪಾಯಿಗಳಷ್ಟು ಕೂಡಿಸಿ ಹಂಚಲು, ತನ್ನ ಸರ್ವ ಸೈನ್ಯಕ್ಕೆ ದರ ಒಬ್ಬೊಬ್ಬನಿಗೆ ಒಂದೊಂದು ರುಪಾಯಿದಂತೆ ಸರ್ವ ದಂಡಿಗೆ ಸರಿಯಾದವು. ಆದರೆ ಮೊದಲು ಸರದಾರನ ಕೂಡ ಎಷ್ಟು ದಂಡು ಬಂದಿತ್ತು?

ಈ ಲೆಕ್ಕವನ್ನು ನಮ್ಮ ಬಾಂಧವರಾದ ಯಾವತ್ತು ಮಾರರಾಗಲಿ ಮತ್ತು ವಿದ್ವಜ್ಜನರಾಗಲಿ ರೀತಿಮಾತ ಮಾಡಿ ತಿಳುಸುವಿರೆಂದು ಅಪೇಕ್ಷಿಸುತ್ತೇನೆ ಪತ್ರವಿಸ್ತಾರಕ್ಕೆ ಕ್ಷಮೆ ಇಬೇಕು

ತಾ॰ ೨೫ ನೇ ಮಾಹೆ ಮೇ
ಸನ್ನ ೧೮೭೬ ಇ. ಮು॰
ಸಂಗ್ರಾಸಿಕೊಪ್ಪ ತಾ॰ ಪರ
ಸಗಡ, ಜಿಲ್ಲಾ ಬೆಳಗಾವ

ಸೈಯ್ಯದಶಾ ಬುಡ್ಡೆಶಾ ಧಾರ
ವಾಡಕರ ಬ್ರ್ಯಾಂಚ ಸ್ಕೂಲ
ಮಾಸ್ತರ ಸಂಗ್ರಾಸಿಕೊಪ್ಪ

ಮಹಾರಾಜ ರಾಜಶ್ರಿ ದಕ್ಷಿಣ ಪ್ರಾಂತದೊಳಗಿನ ಶಾಳಾ ಪತ್ರಿಕೆಯ ಎಡಿಟರರಿಗೆ-

ಸೇವಕನು ಬಿಂನ್ನೈಸುವದೇನಂದರೆ ಕೆಳಗೆ ಲೇಖಿಸಿದ ಎಂನ ನಾಲ್ಕು ಪಂಕ್ತಿಗಳಿಗೆ ತಮ್ಮ ಸುಂದರ ಮತಪತ್ರಿಕೆಯೊಳಗೆ ಸ್ಥಳ ಕೊಟ್ಟೇರಿ ಎಂಬ ಮಹತ್ಕಾಂಕ್ಷೆಯನ್ನು ತಾಳಿ ಈ ಪತ್ರವನ್ನು ಬರದಿದ್ದೇನೆ॰ ಬಡವನ ಅಪೇಕ್ಷೆಯನ್ನು ಕೊನೆಗಾಣಿಸುವವರು ಸಮರ್ಥರಿದ್ದೇರಿ

ಶ್ಲೋಕವು.

ಅಮೃತಧ್ವನಿವೃತ್ತ ಅಶ್ವಧಾಟಿ

ಜಂಭಾರಿಮುಖ್ಯ ಸುರದಂಭಾಪಹಾರ್ಯಸುರಕುಂಭೀನಸಾ
ಡಜಗುರೋ
ಸಂಭಾವಯಾನ್ಮ ಸುರಡಿಂಭಾಸುಖೇಭಪತಿಕುಂಭ ದ್ವಯಾ
ರ್ದನ ಕೃತೇ।
ಸ್ತಂಭೋದ್ಭವೇತಿ ದಿವಿರಂಭಾದಿಭಿಸ್ತುತಮಹಂಭಾವತಃ
ರತರಂ ಶಂಭ್ವಾ
ದಿದೇವನುತಮಂ ಭೋದಿಶಾಯಿನಮುರಂಭಾಸಮಾನ ನ
ಹರಿಂ॥ ೧॥

ಇದನ್ನು ಅವಲೋಕಿಸುವ ವಿದಗ್ಧ ಜನರಿಗೆ ಪ್ರಾರ್ಥನೆ ಏನಂದರೆ ಊರ್ಧ್ವಸ್ಥಾನದಲ್ಲಿ ಇರುವಂಥಾ ಶ್ಲೋಕದ ಅರ್ಥ ಎನಗೆ ಗ್ರಹಿಕ ಆಗದೆ ಇದ್ದದರಿಂದ ಎನ್ನ ಇಚ್ಛೆ ಪೂರ್ಣ

ಮಾಡಿ ಬರುವ ಮುಂದಿನ ಮತ ಪತ್ರಿಕೆಯಲ್ಲಿ ಮುದ್ರಿಸಿ ಕಳುಹಿಸರಿ ಎಂದ ಪೂರ್ಣ ವಿಜ್ಞಾಪನೆ ಇರುತ್ತದೆ·

ತಾ· ೧೫ ಜೂನ ೧೮೭೬ } ಭೀಮಾಜಿ ನಾರಾಯಣ ಯಾರ್ದಿ
ಇ. ಮುಕ್ಕಾಮ ಹುಕ್ಕೇರಿ } ಗೋಕಾವಿ ಇ. ಸ್ಕೂ. ಮಾ.

ರಾವಸಾಹೇಬ ಕನ್ನಡಶಾಲಾಪತ್ರಕದ ಎಡಿಟರ ಇವರ ಸಂನಿಧಾನಕ್ಕೆ-

ವಿಜಾಪೂರ ತಾಲೂಕ ಕಂನೂರ ಸಾಲಿಯ ಆರನೇ ಎತ್ತೆಯ ವಿದ್ಯಾರ್ಥಿಗಳು ಬೇಡಿಕೊಳ್ಳುವದೇನಂದರೆ, ಮಾಹೆ ನೊವೆಂಬರ ಸನ್ನ ೧೮೭೫ ಇಸವಿ ತಿಂಗಳ ಮತಪತ್ರಿಕೆಯ ೧೯೦।೧೯೧ ಪಾನಿನಲ್ಲಿ ಛಾಪಿಸಿರುವ ಮುಳಗುಂದ ಸಾಲಿಯ ಆರನೇ ಎತ್ತೆಯ ವಿದ್ಯಾರ್ಥಿಗಳ ಲೆಕ್ಕಗಳನ್ನು ಕೈಲಾದ ಮಟ್ಟಿಗೆ ರೀತಿ ಬಿಡಿಸಿ ಕಳಿಸಿರುತ್ತೇವೆ· ಯೋಗ್ಯ ಕಂಡಲ್ಲಿ ಮತಪತ್ರಿಕೆಯಲ್ಲಿ ಸ್ಥಳ ದೊರಿಯಬೇಕು.

ರೀತಿ.

೧ ಸೇ ಲೆಕ್ಕವು- ಒಂಭತ್ತು ತಿಂಗಳ ಸಂಬಳದ ಗೋಧಿಯನ್ನು ಕೊಂಡು ಹದಿನಾರು ಮಣದ ಹಗೆಯೊಳಗೆ ಹಾಕಲಾಗಿ ೫ ಮಣ ಕಡಿಮೆಯಾಯಿತು ಅಂದರೆ ೯ ತಿಂಗಳ ಸಂಬಳಕ್ಕೆ ೧೧ ಮಣ ಗೋಧಿ ದೊರೆದವು·

ಮಣ ರು. ಮಣ ರು. ಇವು ೯ ತಿಂಗಳ ಸಂಬಳದ
೮ ೭ ೧೧ = $\frac{೭೭}{೮}$ ರುಪಾಯಿಗಳು.

ತಿಂಗಳಗೆ ರು. ತಿಂಗಳಗೆ ರುಪಾಯಿ
೯ $\frac{೭೭}{೮}$ ೮ = $\frac{೭೭}{೯}$

ರೂ. ಮಣ ರೂ. ಮಣ ಗೋಧಿ ೮ ತಿಂಗಳ ಸಂ
೧೦ ೯ $\frac{೭೭}{೯}$ = $\frac{೭೭}{೧೦}$ ಬಳಕ್ಕೆ ದೊರಿದವು. ಇ

ವನ್ನು ಹದಿನಾರು ಮೊಣದ ಹಗೆಯೊಳಗ ಹಾಕಲಾಗಿ—
ಮು. ಮು. ಮು. ಮು. ಕಾರಣ ೮$\frac{೯}{೧೦}$ ಮು
೧೬ $\frac{೬೬}{೧೦}$ $\frac{೮೯}{೧೦}$ = ೮$\frac{೯}{೧೦}$ ಕಡಿಮೆ ಯಾಗುವದು
ಇದೇ ಉತ್ತರವು.

ರೀತಿ.

೨ ನೇ ಲೆಕ್ಕವು.



ಇದರ ಸುತ್ತು ೩ ಘೂಟ ರುಂ
ಯು ಛರಸಬಂದಿ ಮಾಡತಕ್ಕದ್ದು
ಘೂ.
ಕಾರಣ ೬೦+ ೩ = ೬೩ ಘೂ
ಯೊಂಲು
ಲಾಂಬ ೬೩+೬೩=೧೨೬+೮(
ಯೊಂದು. ಒಟ್ಟು ಲಾಂ.
= ೨೦೬
ಘೂ. ಲಾ. ಘೂ. ರು. ಘೂ. ಕಲ್ಲಿನ ಜಾಡಿ. ಘನಘೂ
೨೦೬ × ೩ × $\frac{೧}{೨}$ = ೩೦
ಛರಶಿಂದು ಮುತ್ತು



ಇದರ ಸುತ್ತು ೪ ಘೂಟ ರುಂ
ಛರಸಬಂದಿ ಮಾಡತಕ್ಕದ್ದು ಕಾ
ರಣ.
ಘೂ. ಘೂ. ಘೂ. ಎ, ಕ
೮೦+೪=೮೪+೮೪= ೧೬೮
ಘೂ. ಘೂ. ಘೂಟ ಎರಡು ಕಡಿಯು ರುಂದಿ ಕಾರಣ
೬೦ + ೬೦ = ೧೨೦

೧೭೯ + ೧೨೦ = ೨೯೯ ಪಟ್ಟು ಫರಸಿನ ಲಾಂಬಿ
ಸೂ. ಲಾ. ಫೂ. ರು. ಫೂಟ ಕಲ್ಲಿನ ಜಾಡಿ ಪಟ್ಟು
೨೯೯ × ೮ × $\frac{೧}{೬}$ = ೩೯೮
ಫರಶಿನ ಘನ ಫೂಟು ಆದ ಕಾರಣ ಪ್ರ. ಪ್ರಕಾರ.
ಪ್ರ. ಫೂ. ರೂ. ಘನಫೂಟ ರೂ.
೩೦ ೫೩೦ ೩೯೮ = ೭೫೯॥=। ೧೦೩
ಕಾರಣ ರೂ. ಆ. ಪೈ. ಉತ್ತರವು.
೭೫೯ ೧೦ ೩ ೧೦೩

ಪತ್ರ ಕರ್ತರೆ ತಮ್ಮ ಪತ್ರಿಕೆಯ ದರ್ಶನವು ಇದೇ ಮೊದಲಿನದು ಕಾರಣ ಏನಾದರು ಹಸ್ತ ದೋಷಗಳಿದ್ದರೆ ಕ್ಷಮಿಸಬೇಕು. ಇಂತಿ ಬಿನ್ನಹ

ಮು॰ ಕನ್ನೂರ
ತಾ॰ ೩।೨।೩೭
ರಾಘವೇಂದ್ರ ಕೂರ್ಮಾಚಾರ್ಯ ಪಿ॰ ಶಾಳಾ ಕನ್ನೂರ, ಸಿದ್ಧಪ್ಪಾ ಮುತ್ಯಪ್ಪಾ ಏ.
ಸಿದಲಿಂಗಪ್ಪಾ ಮುತ್ಯಪ್ಪಾ ವಿದ್ಯಾರ್ಥಿ

ರಾ॰ ಕನ್ನಡ ಶಾಲಾಪತ್ರಿಕದ ಏಡೀಟರರ ಸನ್ನಿಧಾನಕ್ಕೆ-

ಏ॰ ಏ. ಅಯ್ಯಾ; ತಂಮ ಕರದಲ್ಲಿ ಹೃಟ್ಟುವ ಕನ್ನಡ ಶಾಲಾಪತ್ರಕಗಳನ್ನು ಮೂಲಾರದಭದಿಂದ ಓದುವ ಅಭಿಲಾಷೆ ನನಗುಂಟು॰ ಆ ಪ್ರಕಾರ್ಯ ತಮಿಂದ ರಚಿಸಲ್ಪಟ್ಟ, ಮಾಹೆ ಫೇಬ್ರುವರಿ ಸನ್ನ ೧೯೩೭ ಇಸವಿ ತಿಂಗಳ ಸಂಚಿಕೆ (೧೧) ನೇದ್ದು. ಬಂದಕೂಡಲೆ: ಅದನ್ನು ನೋಡಲಾಗಿ, (೨೭೨।೭೩) ನೇ ಪೃಟದಲ್ಲಿ ಹಂಚಿನಾಳ ಸಾಲಿಯ. ಅಸಿಸ್ಟೆಂಟರು ಕೊಟ್ಟ ಲೆಕ್ಕವನ್ನು ನೋಡಿ, ಆನಂದವಾಯಿತು. ಅದರಲ್ಲಿ ಮನಸ್ಸು ಹಾಕಿ. ಶೋಧಿಸಿ ಕೆ. ಬಾದನಮಟಿ.ಗೆ ಬಿಡಿಸಿರುತೇನೆ. ಇದ

ನ್ನು ಸದರೀಯವರಿಗೂ, ಉಳಿದ ಬಾಂಧವರಿಗೂ, ದೃಷ್ಟಿಗೋ ಚರ ಮಾಡುವ ಭಾರ ತಮ್ಮನ್ನೇ ಕೂಡಿದೆ. ಆಸ್ಪದಾನುಸ ರ ಸ್ಥಳವಿದ್ದರೆ, ನಂನ ಶ್ರಮ ಸಾಫಲ್ಯವಾಗುತ್ತದೆ.

॥ಲೆಖ್ಖ॥

ಒಂದು ಗ್ರಾಮದಲ್ಲಿ ಮೂರು ದೇವಾಲಯಗಳಿದ್ದವು. ಬ್ಬನು ಪೂಜಿಸುವ ನಿಮಿತ್ತ ಕೆಲವು ಹೂವುಗಳಂನು ತಂದ ೧ ನೇ ದೇವಾಲಯದಲ್ಲಿ (೧)ಕ್ಕೆ (೨)ಆಗಲೆಂದನು ಆಗ ಅಲ್ಲಿ ಏಸಿಕೆ ಹೂವುಗಳನ್ನು ಏರಿಸಿ; (೨) ನೇದಕ್ಕೆ ಹೋಗಿ, ಬ್ಬ ಆಗಲೆಂದನು. ಆಗಲು ಒಂದನೇ ದೇವಾಲಯದಲ್ಲಿ ಏರಿ ದಷ್ಟೇ, ಏರಿಸಿ (೩)ನೇದಕ್ಕೆ ಸಾಗಿ; ಅಲ್ಲಿ ಏಕೋತ್ರಿ ಆಗಲೆ ದು ಆಗಲು, ಅಲ್ಲಿ ಸಹ ಮೊದಲಿನ ಸಂಕೇತದಂತೆ ಏರಿಸಲು ಬಾಕಿ ಏನು ಉಳಿಯಲಿಲ್ಲ. ಆದರೆ, ತಂದ ಹೂವು ಎಷ್ಟು?

॥ರೀತಿಯು॥

(೩) ದೇವಾಲಯಗಳಲ್ಲಿಯೂ, ಕಡೀ ದೇವಾಲಯಕ್ಕೆ ತ ದ ಸಂಖ್ಯೆಯು ವರ್ಗವೇರಿಸಿದಂತಾಯಿತು. ಕಾರಣ (೩) ನೇ ದೇವಾಲಯಕ್ಕೆ ತಂದ, ಯಾವದಾದರೊಂದು ಸಂಖ್ಯೆ ಹಿಡಿಯ ವಾ? ಹೂವುಗಳು ಅರ್ಧ ಏರುವದಿಲ್ಲ. ಆದಕಾರಣ, ವರ್ಗ ಕ್ಕೂ, ಲಬ್ಧಕ್ಕೂ, ಸಾಮ್ಯವಿರುವ (೨|೧೪|೪೯) ಇವುಗಳಲ್ಲಿ ದೇ * (೧೪) ಈ ಸಂಖ್ಯೆ ತೆಗೆದುಕೊಂಡು ಅದರ ವರ್ಗ (೧೯೬) ಇವು ಪ್ರತಿ ಒಂದು ಗುಡಿಯ ಏರಿಸಿದ ಹೂವುಗಳ ವಾಮ ಭಾಗಕ್ಕಿರುವ (೨) ನೇ ದೇವಾಲಯಕ್ಕೆ ಏರಿಸಿದ ಹೂ ವು (೧೯೬) ಮತ್ತು ಕಡಿ ಗುಡಿಗೆ ವೈದ ಹೂವುಗಳು (೧೪)

---

* ಬೇಕಾದೊಂದು ಸಂಖ್ಯೆ ಹಿಡಿದರೂ ಚಿಂತೆಯಿಲ್ಲ. ಆದರೆ ಪೂರ್ಣ ಹೂವುಗಳು ಒಂದ ವರ್ಗಮೂಳ ಹೊರಡದೆ ತೊಂದರೆಯಾ ಗಿ ಬೀಜಗಣಿತ ಪ್ರಕಾರ ಬಿಡಿಸುವದಕ್ಕೆ ಬರುತ್ತದೆ. ಅದು ಕೆಲವ ಗೆ ತಿಳಿಯುವದಿಲ್ಲಾದ ಕಾರಣ ನಾನು ಅಂಥ ಸಂಖ್ಯೆ ಹಿಡಿಯಲಿಲ್ಲ

ಡೂ ಕೂಡಿ (೨೧) ಇದೇ ಲಬ್ಧ ಸಂಖ್ಯೆ ಬಿದ್ದ ಕಾರಣ, ದು ಯಾವ ಸಂಖೆಯು ಲಬ್ಧವಿದೆಂಬುವದು ಗಣೀತ, ಶ್ರೇಢಿ ಸಾರಣಿ ಪ್ರಕಾರ, ಆದಿ, (೧) ಉತ್ತರ, (೧) ಸರ್ವಧನ ೧೦) ಇವುಗಳಿಂದ ಗಚ್ಛೆ ಪದವನ್ನು ತೆಗಿದುಕೊಂಡರೆ, ೀ ಅಂತೆ ಪದವಾಗುವದು. ಅದರಲ್ಲಿ ಒಂದನೇ ದೇವಾ ುದಲ್ಲಿ ಏರಿಸಿದ ಹೂವುಗಳನ್ನು ಕೂಡಿಸಿ, ಅವುಗಳ ಆ ಹೂವುಗಳೇ; ಮನೆಯಿಂದ ತಂದ ಹೂವುಗಳು.

॥ಪ್ರಸ್ತಾರ॥



ಬ್ಧ ಸಂಖೆಯಿಂದ ಗಚ್ಛೆ (ಅಂತ್ಯಪದ) ತೆಗಿ.

. ಉ.ಪ. ಸ. ಪ.
೧ ೨೧೦

ಉ.ಪ. ಅರ್ಧದವರ್ಗ
$= \frac{೧}{೨} \times \frac{೧}{೨} = \frac{೧}{೪}$

ಸ. ಪ.
೨೧೦ × ೨ = ೪೨೦ + $\frac{೧}{೪}$ =
ದಶಾಂಶವಲ್ಲಿ.
೪೨೦.೨೫ ಇದರ ವರ್ಗಮೂಳ
ಆ. ಪ.
ದ ಬರೋಬರಿ ೨೦. ೫−೦ =
ಉ. ಪ. ಅರ್ಧ
೧೯. ೫+. = ೨೦ ಇದೇ ಗ
ಚ್ಛೆ (ಅಂತೆಪದ).

ತಾರೀಖ ೧ ನೇ ಮೇ
ಸನ್ನ ೧೮೭೬ ಇ.
ಮುಕ್ಕಾಮ ಬಂಮನಹ
ಳ್ಳಿ ತಾ॰ ಹಾ॰ ಜಿ॰ಧಾ

ಸಹಿ ಜಗನ್ನಾಥ ಶ್ರೀಧ
ಗೋಖಲೆ ಹೆಡ್ಡ ಮಾಸ್ತ
ಬಂಮನಹಳ್ಳಿ

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ ಧಾರವಾಡ.

ಶಾಲಾಪತ್ರಕವು.

ಪುಸ್ತಕ ೧೨] [ಸಂಚಿಕೆ ೬

ತಾರೀಖು, ೨೫ನೇ ಮಾಹೆ ಜೂನ, ೧೮೭೬.

EDUCATIONAL INTELLIGENCE.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮು. ಎಜ್ಯುಕೇಶನಲ್ ಇನಸ್ಪೇಕ್ಟರ ದೊರೆಗಳು ಬೆಳಗಾವಿಯಲ್ಲಿಯೇ ಇದ್ದಾರೆ.

ರಾ. ಸಾ. ಕಾಶಿನಾಥ ನಾಂ. ಭಾನಗಾನಕರ ಇವರು ಹೋದ ತಿಂಗಳ ೨೧ನೇ ತಾರೀಖು ಬೆಳಗಾವಿ ಜಿಲ್ಲೆಯ ಆಕ್ಟಿಂಗ ಡೆಪ್ಯುಟಿ ಎ. ಇನಸ್ಪೇಕ್ಟರ ಕೆಲಸದ ಚಾರ್ಜ ತೆಕ್ಕೊಂಡದರಿಂದ, ರಾ. ರಾ. ಆಪ್ಪಾಜಿ ಬಾಬುರಾವ ದಿವೇಕರ ಇವರನ್ನು ಹೊಸದಾಗಿ ನಿರ್ಮಿಸಿದ ಬೆಳಗಾವ ಮತ್ತು ಕಲಾದಗೀ ಜಿಲ್ಲೆಗಳ ಅಸಿಸ್ಟಂಟ ಡೆಪ್ಯುಟಿ ಕೆಲಸಕ್ಕೆ ಆಕ್ಟಿಂಗ ನೇಮಿಸಿರುತ್ತಾರೆ.

ಹೋದ ತಿಂಗಳ ೨ನೇ ತಾರೀಖಿಗೆ ಧಾರವಾಡ ಟ್ರೇನಿಂಗ ಕಾಲೇಜದಲ್ಲಿ 'ಥರ್ಡ' ಕ್ಲಾಸ ಪರೀಕ್ಷೆ ಆಗತಕ್ಕ

ದ್ದಿತ್ತು. ಆದರೆ ಉಮೇದವಾರರು ಯಾರೂ ಬಾರದ್ದ ರಿಂದ ಪರೀಕ್ಷೆಯು ಆಗಲಿಲ್ಲ.

ದಕ್ಷಿಣಭಾಗದೊಳಗಣ ನಾಲ್ಕು ಜಿಲ್ಲೆಗಳ ಡಿ. ಇನ ಸ್ಪೇಕ್ಟರರು ಮೇ. ಎ. ಇ. ಸಾಹೇಬರವರ ಹುಕುಮಿನ ಮೇಲಿಂದ ಬೆಳಗಾವಿಗೆ ಬಂದಿರುತ್ತಾರೆ. ಇನ್ನು ಮಾಸ್ತ ಜನರ ಸಂಬಳದಬಗ್ಗೆ ತಸ್ತೀಕು ತೀವ್ರವೆ ತಯಾರ ಆ ದೀತೆಂದು ತೋರುತ್ತದೆ.

ಕೌಂಟ ಮೋಲ್ತಕೆ ಎಂಬ ಪ್ರಖ್ಯಾತರಾದ ಜರ್ಮನ ಸೇನಾಪತಿಗಳು ತಮ್ಮ ಜಾಹಾಗೀರೀ ಸೀಮೆಯಲ್ಲಿ ಒಂದು ಹೊಸ ಶಾಲಾಗ್ರಹ ಕಟ್ಟುವದಕ್ಕಾಗಿ ಎಂದು, ಅಜಮಾಸು ೮೦,೦೦೦ ರೂಪಾಯಿ ಕೊಟ್ಟಿರುತ್ತಾರೆ. ಶಾಲಾಗೃಹ ಸಿದ್ಧವಾದನಂತರ ಅದರಲ್ಲಿ ಸಾಮಾನಕ್ಕಾಗಿ ಇನ್ನೂ ೪೦,೦೦೦ ರೂಪಾಯಿ ಕೊಡತಕ್ಕವರಿದ್ದಾರೆ. ಇದರ ಕ ಸರು ವಿದ್ಯಾಪಕ್ಷಪಾತ!

ಲಂಡನ ಪಟ್ಟಣದಲ್ಲಿ ಸ್ಕೂಲಬೋರ್ಡದವರಿಗೆ, ೧೮೭೪ ಇಸವಿಯಲ್ಲಿ, ವಿದ್ಯಾವೃದ್ಧಿಗಾಗಿ ಕೂಡಿಸಿದ ಕರದಿಂ ೧೦,೫೯,೫೧೦ ರೂಪಾಯಿ ಉತ್ಪನ್ನವಾದವೆಂದು ತಿಳಿದ ಬರುತ್ತದೆ.

ಬರುವ ನೋವೆಂಬರ ತಿಂಗಳಲ್ಲಿ ಮದ್ರಾಸದಲ್ಲಿ ಕಲ ಕೌಶಲ್ಯದಿಂದ ಹುಟ್ಟುವ ಪದಾರ್ಥಗಳ ಪ್ರದರ್ಶನಾಗ

ಕ್ಕದ್ದದೆ.

ವಹ್ರಾಡ ಪ್ರಾಂತದಲ್ಲೀ ಖಾಲೀ ಇರುವ ಶಾಲಾಖಾತೆಯ ಇನಸ್ಪೇಕ್ಟರ ಕೆಲಸಕ್ಕೆ, ಹೈದರಾಬಾದದ ರಸಿಡೆಂಟ ಸಾಹೇಬರು ರಾ. ರಾ. ಶ್ರೀರಾಮ ಭಿಕ್ಕಾಜಿ ಜಠಾರ ಇವರನ್ನು ನೇಮಿಸಬೇಕೆಂದು ಹಿಂದುಸ್ಥಾನ ಸರಕಾರದವರಿಗೆ ಸಿಫಾರಸು ಮಾಡಿರುತ್ತಾರೆಂದು ತಿಳಿದುಬರುತ್ತದೆ.

ಇಂಗ್ಲಂಡದಲ್ಲಿ ಯುನಿವರ್ಸಿಟಗಳನ್ನು ಕಾಲೇಜಗಳನ್ನು ಬಿಟ್ಟು ಉಳಿದ ಸಾಲೆಗಳ ಬಗ್ಗೆ ಹೋದವರ್ಷ ೧೫,೪೮೫,೬೨೦ ರೂಪಾಯಿ ವೆಚ್ಚವಾಗಿರುತ್ತವೆ. ಅದೇ ಕೆಲಸದ ಬಗ್ಗೆ ನಡೇದವರ್ಷದಲ್ಲಿ ೧೩,೦೭೦೫೫೦ ರೂಪಾಯಿ ವೆಚ್ಚವಾದಾವು ಎಂದು ಅಜಮಾಸು ಮಾಡಿರುತ್ತಾರೆ.

ವಿಲಾಯತಿಯಲ್ಲಿ ಡಾಕ್ಟರ ಹಾಲೋವೆ ಎಂಬರೊಬ್ಬ ಬಹಳ ಪ್ರಸಿದ್ಧ ವೈದ್ಯರಿದ್ದಾರೆ. ಅವರು ಮಾಡಿದ ಗುಳಿಗೆಗಳೂ ಮಲಮೂ ಸರ್ವತ್ರ ಜನರಿಗೆ ಗೊತ್ತಿರುತ್ತವೆ ಈ ಡಾಕ್ಟರರಿಗೆ ತಂಮ ಔಷಧಗಳ ಬಗ್ಗೆ ಜಾಹಿರಾತುಗಳನ್ನು ಕೊಡುವದಕ್ಕೆ ವರ್ಷವೊಂದಕ್ಕೆ ಮೂರಲಕ್ಷ ರೂಪಾಯಿ ಹತ್ತುತ್ತವೆ.

ಹಿಂದುಸ್ಥಾನದೊಳಗಿನ ವಿದ್ಯಾಖಾತೆಯಲ್ಲಿ ೫ ಮಂದಿ ಡೈರೆಕ್ಟರರಿರುವರು. ಅವರಲಿ ಬಂಗಾಲ ಮದ್ರಾಸ.

ಮುಂಬಯಿ ಈ ಮೂರು ಇಲಾಖೆಗಳ ಡೈರೆಕ್ಟರರ ಸಂಬಳ ಪ್ರಾರಂಭಕ್ಕೆ ೨೦೦೦ ರೂಪಾಯಿ ಇದ್ದು ೧೦ ವರ್ಷಗಳಲ್ಲಿ ೨೫೦೦ ರೂಪಾಯಿತನಕ ಏರುತ್ತದೆ. ವಾಯವ್ಯಪ್ರಾಂತದ ಡೈರೆಕ್ಟರನ ಸಂಬಳ ೨೦೦೦ ರೂಪಾಯಿಯಿಂದ ೨೨೫೦ ರೂಪಾಯಿತನಕ, ಮತ್ತು ಪಂಜಾಬದ ಡೈರೆಕ್ಟರನ ಸಂಬಳ ೧೫೦೦ ರೂಪಾಯಿಯಿಂದ ೨೦೦೦ ರೂಪಾಯಿತನಕ ಏರುತ್ತಾ ಹೋಗಬೇಕೆಂದು ಸರಕಾರದ ಠರಾವು ಇರುತ್ತದೆ. ಈ ಡೈರೆಕ್ಟರರ ಯೋಗ್ಯತೆ ೨೦ ವರ್ಷ ನೌಕರಿ ಮಾಡಿದ ಸಿವಿಲಿಯನ ಅಥವಾ ದಂಡಿನೊಳಗಿನ ಕರ್ನಲ ಜನರ ಯೋಗ್ಯತೆಗೆ ಸರಿಯಿರುವದು. ಮೊದಲನೇ ಗ್ರೇಡಿನ ಪ್ರೋಫೆಸರರೂ ಇನಸ್ಪೇಕ್ಟರರೂ ಕೂಡಿ ೯ ಮಂದಿ ಇರುವರು. ಅವರ ಸಂಬಳ ೧೨೫೦ ರೂಪಾಯಿಯಿಂದ ೧೫೦೦ ರೂಪಾಯಿತನಕ ಏರುತ್ತದೆ. ಅವರೂ, ೧೨ ವರ್ಷ ನೌಕರಿಮಾಡಿದ ಸಿವಿಲಿಯನರೂ, ಇಲ್ಲವೆ ಲೆಫಟಿನೆಂಟ ಕರ್ನಲ್ಲರೂ ಯೋಗ್ಯತೆಯಲ್ಲಿ ಸರಿಯಾಗಿರುವರು. ಎರಡನೇ ಗ್ರೇಡಿನ ಕಾಮದಾರರು ೧೯ ಮಂದಿ ಇರುವರು. ಅವರ ಸಂಬಳ ೧೦೦೦ ರೂಪಾಯಿಂದ ೧೨೫೦ ರೂಪಾಯಿತನಕ ಏರುತ್ತದೆ. ಮೊದಲನೇ ಗ್ರೇಡಿನವರಂತೆ ಇವರ ಯೋಗ್ಯತೆ ಇರುವದು. ಮೂರನೇ ಗ್ರೇಡಿನಲ್ಲಿ ೩೧ ಕಾಮದಾರರು ಇರುವರು. ಸಂಬಳ ೭೫೦ ರೂಪಾಯಿಯಿಂದ ೧೦೦೦ ರೂಪಾಯಿತನಕ ಏರುತ್ತಾ ಹೋಗುತ್ತದೆ. ಇವರ ಯೋಗ್ಯತೆ ೮ ವರ್ಷ ನೌಕರಿ ಮಾಡಿದ ಸಿವಿಲಿಯನ ಇಲ್ಲವೆ ಮೇಜರ ಜನರ ಯೋಗ್ಯತೆಯಷ್ಟು, ನಾಲ್ಕನೇ ಗ್ರೇಡಿನಲ್ಲಿ ೩೭ ಕಾಮ

ದಾರರು ಇರುತ್ತಾರೆ. ಸಂಬಳ ೫೦೦ ರೂಪಾಯಿಯಿಂದ ೭೫೦ ರೂಪಾಯಿತನಕ ಏರುತ್ತದೆ. ಇವರ ಯೋಗ್ಯತೆ ೪ ವರ್ಷ ನೌಕರಿ ಮಾಡಿದ ಸಿವಿಲಿಯನ ಇಲ್ಲವೆ ಲಷ್ಕರದೊಳಗಿನ ಕ್ಯಾಪ್ಟನ ಇವರ ಯೋಗ್ಯತೆಯುಷ್ಟು. ಈ ಮೇಲೆ ಹೇಳಿದ ೧೦೧ ಕಾಮದಾರರಲ್ಲಿ ೬ ಮಂದಿ ಮಟ್ಟಿಗೆ ನಮ್ಮ ದೇಶದವರು ಇರುವರು. ಅವರಲ್ಲಿ ಒಬ್ಬನು ಎರಡನೇ ಗ್ರೇಡಿನಲ್ಲಿ ಡೈರೆಕ್ಟರ ಇರುವನು. ಒಬ್ಬನು ಮೂರನೆ ಗ್ರೇಡಿನಲ್ಲಿ ಮತ್ತೊಬ್ಬನು ನಾಲ್ಕನೇ ಗ್ರೇಡಿನಲ್ಲಿ ಈ ಮೇರಿಗೆ ಇಬ್ಬರು ಇನಸ್ಪೇಕ್ಟರರಿರುವರು, ಉಳಿದ ಮೂವರಲ್ಲಿ ಒಬ್ಬನು ಮೂರನೇ ಗ್ರೇಡಿನಲ್ಲಿ ಇಬ್ಬರು ನಾಲ್ಕನೇ ಗ್ರೇಡಿನಲ್ಲಿ ಪ್ರೋಫೇಸರರಿರುವರು.

ಸರಕಾರೀ ಠರಾವುಗಳು.

ಸರಕಾರಿ ಪತ್ರವ್ಯವಹಾರದಲ್ಲಿ ಪತ್ರದ ತಾರೀಖೂ ಮುಕ್ಕಾಮೂ ಪತ್ರದ ಕಡೆಗೆ ಹಾಕದೆ ಮೇಲೆ ನಂಬರದ ಹತ್ತಿರ ಹಾಕಬೇಕೆಂದು ಹಿಂದುಸ್ಥಾನ ಸರಕಾರದವರು ಠರಾವು ಮಾಡಿರುತ್ತಾರೆ.

ಸರಕಾರಿ ಕಚೇರಿಗಳಲ್ಲಿ ಹವಾಲದಾರ ಜಮಾದಾ ಮೊದಲಾದ ವರಿಷ್ಟಪ್ರತಿಯು ಸಿಪಾಹಿ ಜನರಿಗೆ ಬೆಳ್ಳೀ ಕಿಕ್ಕಲಗಳನ್ನು ಕೊಡಲಾಗದೆಂಬ ಬಗ್ಗೆ ನಾಮದಾರ ಗವರ್ನರಜನರಲ್ ಇನ್‌ಕೌನ್ಸಿಲ ಇವರು ಠರಾವು ಮಾಡಿರುತ್ತಾರೆ

ಯಾಪತ್ತು ಸಿವಿಲ ಕಾಮದಾರರು (ತಮ್ಮ ಕಚೇರಿ

ಯಲ್ಲಿ ಸಾದಾರಣವಾಗಿ ಹತ್ತತಕ್ಕಂಥ ಸಣ್ಣ ಬೆಲೆಯ ಸಾಮಾನುಗಳನ್ನು ಬಿಟ್ಟು) ತಮ್ಮ ವಶದಲ್ಲಿದ್ದ ಬೆಲೆಯುಳ್ಳ ಯಾವತ್ತು ಜಂಗಮ ಪದಾರ್ಥಗಳ ರಜಿಸ್ತರವನ್ನು ಇಡಬೇಕು, ಎಂದು ಸರಕಾರೀ ಠರಾವು ಆಗಿರುತ್ತದೆ.

ನೋಟೀಸುಗಳು.

NOTICES

ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳ ಕಡೆಯಿಂದ ಮುಚ್ಚಳಿಕೆಗಳನ್ನು ತಕ್ಕೊಳ್ಳ ಬಾರದೆಂಬ ಬಗ್ಗೆ ಹುಕುಮು ಮುಂದೆ ಬರುವವರಿಗೇ ಹೊರ್ತು ಹಿಂದಿನ ಜನರಿಗೆ ಲಾಗೂ ಇಲ್ಲ. ಅಂದರೇನು, ಈಗ ತಾವು ಬರೆದು ಕೊಟ್ಟ ಮುಚ್ಚಳಿಕೆಗಳ ಪ್ರಕಾರ ನೌಕರಿ ಮಾಡುತ್ತಿರುವ ಮಾಸ್ತರರು ವಿದ್ಯಾಖಾತೆಯ ಹಿತಕ್ಕೆ ಅವಶ್ಯವೆಂದು ಕಂಡು ಬಂದಲ್ಲಿ ಮುಂದಾದರೂ ಅದೇ ಮೋರಿಗೆ ಮಾಡಲಿಕ್ಕೆ ಬೇಕು. ಆದರೆ ಡಿಪುಟಿ ಇನಸ್ಪೆಕ್ಟರರು ತೋರಿಸಿ ಕೊಟ್ಟ ಕಾರಣಗಳ ಮೇಲಿಂದ ಎಜ್ಯುಕೇಶನಲ್ ಇನಸ್ಪೆಕ್ಟರ ದೊರೆಗಳಿಗೆ ಈ ಹುಕುಮು ಹಿಂದಿನವರಲ್ಲಿ ಸಹ ಕೆಲವರಿಗೆ ಲಾಗು ಮಾಡತಕ್ಕದ್ದು ಯೋಗ್ಯವೆಂದು ಕಂಡು ಬಂದಲ್ಲಿ ಹಾಗೆ ಮಾಡಲಿಕ್ಕೆ ಅಡ್ಡಿಯಿರುವದಿಲ್ಲ.

W. A. Russell.

ಎ. ಇನಸ್ಪೆಕ್ಟರ, ದಕ್ಷಿಣ ಭಾಗ.

ಧಾರವಾಡ ಜಿಲ್ಲೆಯೊಳಗಿನ ಯಾವತ್ತು ಸ್ಕೂಲ ಮಾ

ರರಿಗೆ— ಈ ಸರಕ್ಯೂಲರಿನಿಂದ ತಿಳಿಸುವದೇನಂದರೆ,— ರವಾಡ ಟ್ರೇನಿಂಕಾಲೇಜದ ಮೆ. ಪ್ರಿನ್ಸಿಪಾಲರಿಂದ ವದಾದರೊಂದು ಮಾಸ್ತರ ಅಥವಾ ಅಸಿಸ್ಟಂಟ ಮಾ ರನ ಕೆಲಸದ ಮೇಲೆ, ಮೆಹಬೂರ್ನ ಎ. ಇ. ರವರ ಂಜೂರಿಯಿಂದ ನೇಮಿಸಲ್ಪಟ್ಟ ಇಸಮು ಬಂದು ಹಾ ರಾದ ಕೂಡ್ಲೆ ಆಯಾ ಕೆಲಸದ ಮೇಲಿರುವವರು ಇತ್ಯಂ ಡಿಯ ಹುಕುಮಿನ ಮಾರ್ಗಪ್ರತಿಕ್ಷೆ ಮಾಡದೆ ಅವನಿಗೆ ಕದಂ ಚಾರ್ಜ ಕೊಟ್ಟು ಟ್ರೇನಿಂಗ ಕಾಲೇಜಕ್ಕೆ ಹೊರ ಹೋಗಬೇಕು. ಇದಕ್ಕೆ ವಿರೋಧವಾಗಿ ನಡಿಯ ಬಾರದು.

ಹಿಂದೆ ಇದೇ ಪ್ರಕಾರದ ಒಂದು ಸರಕ್ಯೂಲರ ಕೊಟ್ಟಿತ್ತು. ಆದರೆ ಅದನ್ನು ಕೆಲವು ಮಾಸ್ತರರು ಲಕ್ಷಿಸದೆ ಹೋದ ಕಾರಣ ಹೊಸತಾಗಿ ನೇಮಿಸಲ್ಪಟ್ಟ ಮನುಷ್ಯನು ಒಂದೆರಡಾವರ್ತಿ ಚಾರ್ಜ ತೆಗೆದು ಕೊಳ್ಳಲಿಕ್ಕೆ ಹೋದರೂ ಡೆಪ್ಯುಟಿಯವರ ಹುಕುಮಿನ ಹೊರ್ತು ಚಾರ್ಜ ಕೊಡುವದಿಲ್ಲವೆಂದು ಮಾಸ್ತರನು ಅಡ್ಡಿ ತೋರಿಸಿದ್ದರಿಂದ ಬಹು ತೊಂದರೆಯುಂಟಾಗಿ ಸರಕಾರೀ ಕೆಲಸ ಸುಯಂತ್ರ ನಡಿಯುವದಿಲ್ಲ. ಆದದರಿಂದ ಆ ಪ್ರಕಾರ ತೊಂದರೆಗಳುಂಟಾಗಬಾರದೆಂಬುವದೇ ಈಗ್ಗ ಕೊಟ್ಟಿರುವ ಸರಕ್ಯೂಲರದ ಉದ್ದೇಶವು ತಿಳಿಯುವದು. ತಾ|| ೧೯ ನೇ ಮಾಹೆ ಮೇ ಸನ್ನ ೧೮೭೬ ಇಸವಿ.

Shrinivas R. Savadi.

ಇಂಚಾರ್ಜ ಡಿ. ಎ. ಇ. ಧಾರವಾಡ.

ಪತ್ರವ್ಯವಹಾರವು.

CORRESPONDENCE

ರಾವಸಾಹೇಬ ಕನ್ನಡ ಶಾಲಾಪತ್ರ ಕರ್ತೃರಡಿಗಳಿ ಬೇಡಿಕೊಳ್ಳುವಬಿನ್ನಃ ಏನಂದರೆ ಕೆಳಗೆ ಬರೆದ ನಾಲ ಪಂಕ್ತಿಗಳಿಗೆ ಮಠಪತ್ರಕದಲ್ಲಿ ಆಶ್ರಯ ದೊರಿದೀತೆಂ ಆಶೆತಾಳುತ್ತೇನೆ.

ಈ ಊರಸುತ್ತಲು ಅಷ್ಟೋತ್ತರತೀರ್ಥಗಳೂ, ಷಷ್ಟೋತ್ತರಲಿಂಗಗಳೂ ಉಂಟೆಂದು, ಇಲ್ಲಿ ಜನರು ಹ ಳುವರು. ಅವುಗಳಲ್ಲಿ ಮಾಹಿತಿ ದೊರೆದಷ್ಟೂತೆರ್ ತೀರ್ಥ ಲಿಂಗಗಳವಿಷಯ ಪ್ರತ್ಯೇಕ ಪ್ರತ್ಯೇಕವಾಗಿ ರ್ಣಿಸುವ.

ಈ ಊರಿಂದ ಸ್ವಲ್ಪ ದೂರವಾಗಿ ಪಶ್ಚಿಮದಿಕ್ಕಿಗೆ ಹ ಗುಡ್ಡದ ಸಾಲುಂಟು. ಅವುಗಳೊಳ್ಗೊಂದುನ್ನತವಾದ ಗುಡ್ಡ ದೆ. ಅಲ್ಲಿ ದೊಡ್ಡ ದೊಡ್ಡ ಬಂಡೆಗಲ್ಲುಗಳ ಹಾಸಿಗೆಗಳ ಉಂಟು; ಅಂಥಾ ಗುಡ್ಡದ ಪ್ರದೇಶದಲ್ಲಿ ಒಂದು ತೀರ್ಥ ಕುಂಡವಿರುವದು; ಅದರ ಹೆಸರು ರಾಮತೀರ್ಥವೆಂಬುವದ ಅದು ಇಲ್ಲಿಯ ಅಬಾಲ ಗೋದಲು ಹೂಡಿಕೊಂಡು, ಎಲ್ಲ ಗೂ ಗೊತ್ತಿರುವದು. ಆ ತೀರ್ಥಗುಂಡವು ಗುಡ್ಡದ ಒಳಭ ಗದಲ್ಲಿ ಎಷ್ಟುದ್ದ ಒಳಗೆ ಹೋಗಿದೆಯೆಂಬುವದು ಪ್ರಮ ಣವಿಲ್ಲ; [illegible] ಮಾತ್ರ ಅಜಮಾಸ ಇಪ್ಪತ್ತು ಫ ಟ ವಿಸ್ತಾರವಿದ್ದು ಅಲ್ಲಿ ಭಾರವಾದ ಕಲ್ಲು ಕಂಭಗಳನ್ನು ನಿಲ್ಲಿಸಿ ಮೇಲೆ ಕಲ್ಲಿನ ಹಾಸಿಗೆಗಳನ್ನು ಹಾಕಿ, ನಾಲ್ಕು ಜು ಗೋಡೆಗಳಿಗೆ ಕೆತ್ತಿಸಿದ ಕಲ್ಲುಗಳನ್ನೊಂದುಗೂಡಿ

ಟ್ಟಿ, ಮೇಲೆ ಹಾಸುಗಲ್ಲುಗಳನ್ನಾಕಿ, ಚಿತ್ರ ಕೆತ್ತಿಸಿದ ಲ್ಲುಗಳಿಂದ ಗೋಪುರವನ್ನು ಕಟ್ಟಿ, ಅಲ್ಲಿ ರಾಮಲಿಂಗ ನೆಂಬ ಈಶ್ವರ ಸ್ಥಾಪನೆ ಮಾಡಿರುವರು. ಇದೇ ಯಾವ ಮ ಹಾರಾಯನಿಂದ ನಿರ್ಮಾಣವಾಯಿತೆಂಬುವದು ಈಗ ತಿಳಿಯ ಬರುವದಿಲ್ಲ.

ಆ ದೇವಾಲಯದ ಬಳಿಯಲ್ಲಿಯೇ ಮತ್ತೊಂದು ಸಂ ದೇವಾಲಯವನ್ನು ಕೆತ್ತಿಸಿದ ಕಲ್ಲಿನಿಂದಲೇ ಕಟ್ಟಿ, ಅಲ್ಲಿ ರಾಮಮೂರ್ತಿಯನ್ನು ಸ್ಥಾಪಿಸಿರುವರು. ಇದಃವರೂ ತೀರ್ಥ ಕುಂಡವೊಂದು ಇರುವದು. ರಘುಕುಲ ಸಾರ್ವಭೌಮನಾದ ರಾಮಚಂದ್ರನು ರಾವಣನ ಕೂಡಾ ಯುದ್ಧ ಮಾಡುವಾಗ್ಯೆ ಬಿಡುವ ಬಾಣಗಳಲ್ಲೊಂದು ಬಾಣವು ಮೇಲೆ ಹೇಳಿದ ಗುಡ್ಡಕ್ಕೆ ತಾಕಿ ಆ ತೀರ್ಥಕುಂಡವು ಉತ್ಪನ್ನವಾಗಿದೆಯೆಂದು, ಇಲ್ಲಿಯ ಜನರು ಪರಂಪರೆಯಿಂದ ಹೇಳುತ್ತ ಬಂದ ರೂಢಿಯುಂಟು.

ಈ ಊರಸುತ್ತಲು ಪುಷ್ಕಳ ತೀರ್ಥಗಳುಂಟೆಂದು ಮೇಲೆ ಹೇಳಲ್ಪಟ್ಟಿದೆ. ಅವುಗಳಲ್ಲಿ ಮತ್ತೊಂದಾದ ಗಾಲ್ವತೀರ್ಥವು ಆ ರಾಮತೀರ್ಥದಿಂದ ಒಂದು ಮೈಲಿನಮೇಲೆ ಅದರ ಪೂರ್ವಭಾಗಕ್ಕೆ ಗುಂಡಪೇಯೆಂಬ ಗ್ರಾಮದ ಬಳಿ ರು ಸಪಾಟವಿದ್ದ ಸ್ಥಳದಲ್ಲಿ ಇರುವದು. ಮೇಲೆ ಹೇಳಿದ ಮತೀರ್ಥದಲ್ಲಿ ನಿಂಬೇಹಣ್ಣಾಗಲಿ ಅಥವಾ ಮತ್ತೇನಾದ ರೂ ತೇಲಿಬರುವ ಪದಾರ್ಥವನ್ನಾಗಲಿ ಚಲ್ಲಿದರೆ, ಈ ಗಾಲ್ವತೀರ್ಥಕ್ಕೆ ತೇಲಿ ಬರುವದು. ಇದೊಂದು ಇಲ್ಲಿ ಬಹು ಆಶ್ಚರ್ಯಕರವಾದದ್ದು.

ಇದೇ ಗಸದ ಸಾಲಿನ ಉತ್ತರಭಾಗಕ್ಕೆ ಅಜಮಾಸ

ದೀಡ ಮೈಲಿನ ಮೇಲೆ ತಪ್ಪೇಶ್ವರವೆಂಬಲಿಂಗವಿದ್ದು ಆ ಲಿಂಗವನ್ನು ಒಬ್ಬನೇ ಆರ್ಚಗೂರನು ಪೂಜಿಸುವ ಪೂರ್ತಿ ದೇವಾಲಯವನ್ನು ಕಲ್ಲುಗಚ್ಚುಗಳಿಂದ ಕಟ್ಟಿರುವದು. ಈ ಲಿಂಗದ ಝಲಾರದೊಳಗಿಂದೊಂದು ಹಳ್ಳ ಹೊರಟು, ಹರಿಯುತ್ತದೆ. ಅದಕ್ಕೆ ತಪ್ಪೆಹಳ್ಳವೆಂಬಹೆಸರು. ಹಲಸಿಗಿ ಊರ ಮಹಾತ್ಮ್ಯೆಯಲ್ಲಿ ಆ ಹಳ್ಳಕ್ಕೆ ಸುವರ್ಣ ನದಿಯಂದು ಬರೆದಿರುವದು. ಇದು ಪಶ್ಚಮದಿಂದ ಪೂರ್ವಕ್ಕೆ ಹರಿದು, ಸಂಪಗಾವ ತಾಲೂಕಪೈಕಿ ವಿರಾಪುರದ ಹತ್ತಿ ಮಲಪ್ರಭಾನದಿಗೆ ಕೂಡುತ್ತದೆ. ಇದೊಂದು ಇಲ್ಲಿ ತೀರ್ಥವೆನಿಸಿಕೊಳ್ಳುತ್ತದೆ.

ತಪ್ಪೇಶ್ವರದಿಂದ ದಕ್ಷಿಣಕ್ಕೆ (ಊರಿಂದ ಸ್ವಲ್ಪ ದೂರವಾಗಿ ಉತ್ತರದಿಕ್ಕಿನಲ್ಲಿ) ವ್ಯಾಸತೀರ್ಥವಿದ್ದು ಅದರ ಮೇಲೆ ವ್ಯಾಸಮೂರ್ತಿ ದೇವಾಲಯ ವಿರುವದು. ವೇದಶಾಸ್ತ್ರದಲ್ಲಿ ಘನತರಸಜ್ಞರಾದ ಪಾಂಫ್ರಿ ಪ್ರಾಣಾಚಾರ್ಯರು ಇಪ್ಪತ್ತು ವರುಷದ ಕೆಳಗೆ ಈ ಹಲಸಿ ಊರಿಗೆ ಬಂದು ಕೆಲವು ದಿವಸದನಂತರ ಅಂದರೆ ಸಂನ೧೮೬೪ ನೇ ವರುಷದಲ್ಲಿ ಸೋಮಯಯಜ್ಞವನ್ನು ಮಾಡುವದಕ್ಕೋಸ್ಕರವಾಗಿ, ಕೊಲ್ಲಾಪುರ, ಸತಾರಾ, ಇವೇ ಮೊದಲಾದ ಸ್ಥಾನಗಳಿಗೆ ಆ ಯಜ್ಞದ ವಿಷಯವಾಗಿ ಪತ್ರ ಬರೆದು ಆ ಆ ಸಂಸ್ಥಾನದ ಪಂಡಿತರನ್ನು ಕರಿಸಿಕೊಂಡು, ಮೇ॥ ರಿವಿನಿಯುಕಮಿಶನರಸಾಹೇಬ ಬಹಾದ್ದೂರವರ ಚೇಟ್ಣೀಸರಾದ ಹತ್ತಿಬೆಳಗಲಿ ಶ್ರೀನಿವಾಸರಾಯರೇ ಮೊದಲಾದ ದೊಡ್ಡ ದೊಡ್ಡ ಕಾಮದಾರರ ಮದ್ದತ್ತಿನಿಂದ ಆ ಯಜ್ಞವನ್ನು ಪೂರೈಸಿ, ಕೆಲವು ದಿವಸ ಈ ಗ್ರಾಮದಲ್ಲಿದ್ದು, ಪರಂಧಾಮ

ಕ್ಕೆ ಹೋದರು. ನಂತರ ಅವರ ದೇಹವನ್ನು ಅವರ ಮಕ್ಕಳಾದ ಸಮಿಣಾಚಾರ್ಯರು ವ್ಯಾಸತೀರ್ಥಗಳ ಬಳಿಯಲ್ಲಿ ದಹನಮಾಡಿಸಿ, ಅಲ್ಲಿಂದ ಅವರ ಕ್ರಿಯಾ ಕರ್ಮವನ್ನು ನೆರವೇರಿಸಿ, ಕೆಲವು ದಿವಸದ ಮೇಲೆ ಕಾಶೀಯಾತ್ರೆಯನ್ನು ಮಾಡಿ, ತಮ್ಮ ವಂಶೋದ್ಧಾರವನ್ನು ಪಡೆದು ಬಂದು ಆ ದೇವಾಲಯದ ಹಿಂಭಾಗದಲ್ಲಿ (ತಮ್ಮ ಪಿತೃಗಳನ್ನು ದಹನ ಮಾಡಿಸಿದ ಸ್ಥಳದಲ್ಲಿ) ಹೋದ ವರುಷ ಬಹು ಸಮಾರಂಭದಿಂದ ಪ್ರಾಣ ದೇವರ ಪ್ರತಿಸ್ಥಾಪನೆಯನ್ನು ಮಾಡಿ, ತಮ್ಮ ಶಿಷ್ಯರಿಗೋದು ಹೇಳುವದಕ್ಕೋಸ್ಕರ ಒಂದು ಧರ್ಮಶಾಲೆಯನ್ನು ಅಲ್ಲಿ ಕಟ್ಟಿಸಿ, ತುಲಸಿ ಗಿಡಗಳನ್ನೂ ಸಂಪಿಗೆ ಮೊದಲಾದ ನಾನಾ ಪ್ರಕಾರದ ಪುಷ್ಪ ಜಾತಿ ಗಿಡಗಳನ್ನೂ, ಫಲ ಕಾಯಿಗಳಾಗುವಂಥ ಗಿಡಗಳನ್ನೂ, ಹಚ್ಚಿಸಿ ಮನೋಹರವಾಗಿ ತೋರುವ ಹಾಗೆ ಮಾಡಿರುವರು.

॥ಭಾಮಿನಿ॥

ಹನುಮನಾಮವ ಮನದಿ ನೆನೆದರೆ।
ಮನದ ಜಾಡ್ಯವ ಪೋಗಿ ಚಪಲತೆ।
ಮನದಿ ಉದ್ಭವಿಸುವದು ನಿರ್ಭಯ ಬಲ್ಮೆ ಯುಲ್ಲದಲೇ॥
ಜನಜನಿ ತಮಳ ಕೀರ್ತಿ ಮತಿಗಳು॥
ಅನಿಶ ನವೃತನ ನುಕರಿಸಿದನಿಲ।
ಇನನು ತಿಸುತಿಹ ಭಕ್ತಜನಕತಿ ಶುಲಭದಿಂದ ಲೊಡಗುವವು॥೧॥

ಅಂಥಾ ಪ್ರಾಣಾಚಾರ್ಯರ ಮಕ್ಕಳು ಅಂದ ಬಳಿಕ
ವರ ರಸಜ್ಞತೆಯು ವಿಷಯವಾಗಿ ಹೇಳತಕ್ಕದ್ದೇನು? ಸ
ಲ ಶಾಸ್ತ್ರದ ವಿಷಯದಲ್ಲಿ ಸಾಕ್ಷಾತ್ ಪ್ರಾಣಹರೇ—

ಆ ವ್ಯಾಸ ತೀರ್ಥದಿಂದ ಸ್ವಲ್ಪಾಂತರದ ಮೇಲೆ ಚಕ
ತೀರ್ಥವಿದ್ದು, ಅದರ ಮೇಲೆ ಬಹು ದೊಡ್ಡದಾದ ಕ
ನ ಚಕ್ರವು ಪುರಾತನದಿಂದ ಇದ್ದದರಿಂದ ಅದಕ್ಕೆ ಚಕ
ತೀರ್ಥವೆನ್ನುವದುಂಟು. ಈ ತೀರ್ಥ ಕುಂಡವನ್ನು ಮ
ಲೆ ಹೇಳಿದ ಸಮೀರಣಾಚಾರ್ಯರ ತಂದಿಯಿಂದಿರು ಸೋ
ಮ ಯಜ್ಞವನ್ನು ಮಾಡುವದಕ್ಕಿಂತ ಪೂರ್ವದಲ್ಲಿ ಈ
ಕ್ರ ತೀರ್ಥದಲ್ಲಿ ಏನಿರುವದೆಂದು ವಿಚಾರ ಮಾಡುವದಕಾ
ಗಿ ನಾಲ್ಕೆಂಟು ಮಂದಿ ಕಾಮಾಟಿಯವರನ್ನು ಹಚ್ಚಿ ಬ
ಸುವ ವೇಳೆಯಲ್ಲಿ, ನಾಲ್ಕು ಕಂಚಿನ ಪತ್ರಗಳು ನಾಗರಿ
ಬರಹದಿಂದ್ಯುಕ್ತವಾದವು ದೊರಿದವು. ಅವು ಇಷ್ಟು ದಿ
ಸಗಳ ತನಕ ಊರ ಮಧ್ಯದಲ್ಲಿ ಗೋಪುರಗಳಿಂದುಕ್ತವಾ
ದ ನರಸಿಂಹ ದೇವರ ಗುಡಿಯಲ್ಲಿ ಇರುತ್ತಿದ್ದವು; ಅವು
ಗಳನ್ನು ಹಿಂದಕ್ಕೆ ಅಂದರೆ ೪ ನಾಲ್ಕು ವರುಷದ ಕೆಳ
ಮೇ. ಪ್ಲೀಟಸಾಹೇಬ ಬಾಹದ್ದೂರವರು ಈ ಬೆಳಗಾಂ
ಜಿಲ್ಹೇದಲ್ಲಿ ಅಶಿಷ್ಟಾಂಟ ಕಲೇಕಟರ ಕೆಲಸದ ಮೇ
ಇರುವಾಗ್ಯೆ ಇತ್ತ ಕಡಿಗೆ ಜಮಾಬಂದಿ ಲೆಕ್ಕದ ತಪಾಸಣ
ಗೋಸ್ಕರ ಬಂದಾಗ್ಯೆ ಈ ವರ್ತಮಾನ ಕೇಳಿ ಆ ನಾಗರೀ
ಬರಹದ ಪತ್ರಗಳನ್ನು ಇಲ್ಲಿಯ ಜನರ ಸಮ್ಮತಿಯಿಂದ
ತೆಗೆದುಕೊಂಡು ಹೋಗಿ ಆ ನಾಗರೀ ಬರಹದ ಅರ್ಥವ
ನ್ನು ಗ್ರಹಿಸಿಕೊಂಡು, ಅದಕ್ಕನುಸರಿಸಿ, ಸಂಸ್ಕೃತ ಲಿಪಿ
ಯಿಂದ ಒಂದು ಪುಸ್ತಕವನ್ನು ಛಾಪಿಸಿ, ಮೇ. ಸಂಪನ್ನ

ದ ಬಾಬಾಭಟ್ಟ ಪಾರಪತ್ಯಗಾರ ಇವರಿಗೆ ಆ ಪುಸ್ತಕ
ಟ್ಟು ಪದಕ್ಕೋಸ್ಕರ, ರಿಜಿಷ್ಟರ ಮಾಡಿ, ಕಳುಹಿಸಿ
ಟ್ಟಿರುವರು. ಅದರ ವಿಷಯವಾಗಿ ವಿಚಾರಿಸಿ, ಮುಂ
ಬರಿಯುವೆನು. ರಾವಸಾಹೇಬರೇ ಪತ್ರವಿಸ್ತಾರವಿದ್ದದ
ಕ್ಷಮಾವಿರಬೇಕು. ಇಂತಿ ವಿಜ್ಞಾಪನಃ

ರೀಖು ೬ ಮಾಹೆ
ನ ಸನ್ನ ೧೮೭೬
ಸವಿ.

ರಂಗೋ ಬಾಳಾಜಿ ಕುಲಕರ್ಣಿ,
ಹೆಡ್ಡ ಮಾಸ್ತರ ಹಲಸಿ ತಾ. ಬೀ
ಡಿ ಜಿಲ್ಲಾ ಬೆಳಗಾಂವ.

ಈ ತರದ ಮಾಹಿತಿ ಓದುವವರಿಗೆ ಬಹಳ ಮನೋ
ಂಜಕರವಾಗಿಯೂ ಉಪಯುಕ್ತವಾಗಿಯೂ ಇರುವದು.

ಎಡಿಟರ್

* * *

ಮ. ರಾ. ರಾ. ರಾವಸಾಹೇಬ ದಕ್ಷಿಣಭಾಗದ ಕಂನಡ ಶಾಲಾಪತ್ರಕ ಕರ್ತರ ಸಂನಿಧಿಗೆ—

ವಂತಿ ವಿಜ್ಞಾಪನಂಗಳು ಮಾಡಿ ಬೇಡಿಕೊಳ್ಳುವದೇನಂದ
, ಕೆಳಗೆ ಬರೆದ ನಾಲ್ಕು ಪಂಗ್ತಿಗಳನ್ನು ತಂಮ ಸುಂದ
ವಾದ ಮತಪತ್ರಿಕೆಯಲ್ಲಿ ಛಾಪಿಸಿ ಪ್ರಶಿದ್ಧಿಸಬೇಕು.

(ಜೋಗಳಪದವು.)

ಗೋಕರ್ಣ ಬೆರಳಿಗೆ ಉಂಗುರಿಟ್ಟವಳು। ಗೋಕರ್ಣವೈರಿಯ ಮುಡಿಕಟ್ಟುಳ್ಳವಳು। ಗೋಜಾತಮುಖವುಳ್ಳ ಗೋಪುತ್ರಿಯಳು। ಪಲ। ಗೋಪವಾಹನಸತಿ ತೂಗಿಪಾಡಿದಳು ಜೋ ಜೋ ॥ ೧ ॥ ಹರಿಮಧ್ಯೆ ಒಪ್ಪುವ ಹರಿಣನೇತ್ರಿಯರು। ಹರಿಸಖವದನಸು ಹರಿಯವಾಣಿಯರು। ಹರಿವೈರಿಗಮನೇರು ಹರಿಯವೇಣಿಯು

ರು। ನರ। ಹರಿಪಟ್ಟದರಸೇರು ತೂಗಿ ಪಾಡಿದರು ಜೋ
ಜೋ ॥ ೨ ॥ ಕಮಲಗಂಧಿಯು ಸಂಣ ಭ್ರಮರಕ
ತಳಿಯು। ಕಮಲಕೋರಕ ಕುಚಯುಗ್ಮ ಸುಂದರಿಯ
ಕಮಲಸಂಭವರಾಣಿ ಕರುಣಿಶಾರದೆಯು। ಕರ। ಕಮ
ದಿ ತೊಟ್ಟಿಲ ತೂಗಿ ಪಾಡಿದಳು ಜೋ ಜೋ ॥ ೩

ಈ ಮೇಲೆ ಬರದಿರುವ ಮೂರು ನುಡಿಗಳುಳ್ಳ ಪ
ನಂಮ ಮಿತ್ರರಾದ ಸಂಪದತ್ತಿ ಎರಡನೇ ನಂಬರ ಸಾಲಿ
ರಡನೇ ಶಿಕ್ಷಕರಾದ ಕಟ್ಟಾಚಾರ್ಯ ಇವರು ನನ್ನ ಕ
ಗೆ ಕಳುಹಿಸಿದ್ದರು. ಆದರೆ ಇದರಲ್ಲಿ ಕೆಲವು ಅರ್ಥ
ಗಲಿಲ್ಲದ ಕಾರಣಾ ಈ ಪತ್ರಿಕೆಯಲ್ಲಿ ಪ್ರಶಿದ್ಧ ಮಾಡಿದೆ
ನೆ ಇದರಲ್ಲಿ ಏನಕಿ ಶಬ್ದಾರ್ಥ ಮೊದಲಾದದ್ದು ಬಹು ಕ
ಣ ಇದ್ದು ಇದರ ಭಾಷೆಯು ಬಹು ಸರಸವಾಗಿ ಇ
ಮೂಲಕ ಬರವಿದ್ಧೇನೆ ಯಾರಾದರು ಈ ಪದದ ಶಬ
ರ್ಥ ಮೊದಲಾದದ್ದು ಬರದು ನಂನ ಸಂಶಯ ದೂರಮಾ
ವರೆಂದು ಇಚ್ಛಿಸುತ್ತೇನೆ. ಇಂತಿ ವಿನಯಪೂರ್ವಕ
ನ್ನಹಾ.

ಮು. ಹಿರೇ ಸ್ವಾಮಿ ಶೇಷಾಚಾರ್ಯ ಕಾಲ
ಕೊಪ್ಪ ತಾ॥ ಸ್ಕೂಲ ಮಾಸ್ತರ, ಹಿರೇಕೊಪ್ಪ
೧೦।೬।೨೬ ತಾಲೂಕ ಪರಸಗಡ.

ಮಹಾರಾಜ ಕೃಪಾಸಾಗರ ರಾಜ್ಯಮಾನ್ಯ ರಾಜಶ್ರೀ
ನ್ನಡ ಶಾಲಾಪತ್ರ ಕರ್ತರಿಗೆ—

ವಿ. ವಿ. ಕೆಳಗೆ ಬರೆದ ನಾಲ್ಕು ಪಂಕ್ತಿಗಳನ್ನು ತಂಮ ಕ
ಸ್ತಕಮಲದಿಂ ಸಂಜನಿಸಿದ ವಿಸ್ತಾರವಾದ ಶಾಲಾಪುಸ್ತಕ

ಮುದ್ರಿಸಿ ಸಮಸ್ತರೋಳ್ಪ್ರಸಿದ್ಧ ಪಡಿಸಬೇಕೆಂದು
ಸ್ತಕದಿಂದಭಿವಂದಿಸುವೆನು.

ಶ್ಲೋಕವು

೧	೨	೫	೬	,,	,,	,,	,,
ಯಾ	ಮಾ	ತಾ	ಸು	ಸು	ತಾ	ಮಾ	ಯಾ
ಮಾ	ಪ	ರೋ	ಕ್ಷ	ಕ್ಷ	ರೋ	ಪ	ಮಾ
ತಾ	ರೋ	ಸೋ	ಗ	ಗ	ಸೋ	ರೋ	ತಾ
ಸು	ಕ್ಷ	ಗ	ಕ್ಷ	ಕ್ಷ	ಗ	ಕ್ಷ	ಸು
,,	,,	,,	,,	೮	೩	೪	೭

ಈ ಶ್ಲೋಕವನ್ನು ಎಡಗಡೆಯಿಂದ ಬಲಗಡೆಗೂ ಬಲ ಡೆಯಿಂದ ಎಡಗಡೆಗೂ ಮತ್ತು ಮೇಲಿನಿಂದ ಎಂಟನವೆ ಗೆ ಅಂಕೆಗಳನ್ನು ತುಂಬಿದ ಮನೆಗಳಲ್ಲಿಯೂ ಓದಿಕೊಂ ರೆ ತಿರತಿರಿಗಿ ಅದೇ ಶ್ಲೋಕವೇ ಬರುತ್ತದೆ. ಪ್ರಾಚೀ ಕುಶಲ ಕವಿಯಿಂದ ರಚಿಸಲ್ಪಟ್ಟ ಈ ಕವಿತೆಯೇ ಇ ಷ್ಟು ಚಮತ್ಕಾರವಿದ್ದ ಮೇಲೆ ಇದರ ಅರ್ಥವೆಷ್ಟು ಸರ ಸವಿದ್ದೀತೆಂಬ ಭ್ರಾಂತಿಯುಂಟಾಗಿದೆ. ಆದರೆ ನಮ್ಮ ದೇಶಬಾಂಧವರಾದ ಮಾಸ್ತರರೂ ಬೇರೆ ವಿದ್ವಜ್ಜನರೂ ಇದರ ಶಬ್ದಾರ್ಥ ಭಾವಾರ್ಥವನ್ನು ಬರೆದು ಇದೇ ಪತ್ರ ದ್ವಾರದಿಂದ ನನಗೆ ತಿಳಿಸುವರೆಂದು ಆಶೆ ಗೈಯುತ್ತೇನೆ.

ಇಂತಿ ಬಿನ್ನಹ.

ಮು. ಕೌಜಗೇರಿ ತಾ.	ಮಲ್ಲಯ್ಯಾ ಪೆದ್ದಯ್ಯಾ ಜಗಾ
ನೇ ಮಾಹೆ ಜೂನ ಸ	ಪೂರ ಸ್ಕೂಲಮಾಸ್ತರ ಕೌಜಗೇ
ನ್ ೧೮೭೩ ಇಸ್ವಿ.	ರಿ ತಾ. ರೋಣ ಜಿ. ಧಾರವಾಡ.

೯೨. ಕನ್ನಡ ಶಾಲಾಪತ್ರಿಕದ ಸಂಪಟರರ ಸನ್ನಿಧಾನಕ್
ವಿ. ವಿ. ಅಯ್ಯಾ? ಎಲ್ಲ ಸಾಲಿಗಳಲ್ಲಿ ಒಂದೇ ಪ್ರಕಾರವ
ಗಿ ಅಭ್ಯಾಸ ನಡಿಸುವಕ್ರಮ ವಿಲ್ಲದ್ದರಿಂದ, ಒಂದು ಸಾ
ಯು ಮಾಸ್ತರನು ಬೇರೊಂದು ಸಾಲಿಗೆ ವರ್ಗಾಗಿ ಹೋ
ತರುವಾಯ, ಮೊದಲಿನವನು ಇಟ್ಟ ಕ್ರಮದಂತೆ ಕಲ
ಡೆ, ಬೇರೊಂದು ತರದಿಂದ ಕಲಿಸಹತ್ತುತ್ತಾನೆ. ಆದ್ದ
ರಿಂದ ವಿದ್ಯಾರ್ಥಿಗಳಿಗೂ, ಮಾಸ್ತರನಿಗೂ, ಬಹಳ ತೊಂ
ರೆಯಾಗಿ, ಹುಡುಗರು ತಂನ ಕ್ರಮಕ್ಕನುಸಾರವಾಗಿ ಅಭ್ಯಾ
ಸ ಮಾಡುವ ಪುಟ್ಟಿಗೂ, ಹಿಂದೆ ನಡೆದ ವಿಷಯಗಳನ್ನು
ಮುಂದಕ್ಕೆ ಸಾಗಿಸುವದಲ್ಲ. ಈ ತೊಂದರೆಯನ್ನು ನೀ
ಗಬೇಕಾದರೆ, ಸರ್ವರು ಒಂದೇ ಪ್ರಕಾರ ಕಲಿಸುವ ಪದ್ಧ
ತಿ ಪ್ರಸಿದ್ಧವಾಗಲಿಕ್ಕೇ ಬೇಕು. ಇಂಥ ಪದ್ಧತಿ ಟ್ರೇ
ನಿಂಗಕಾಲೇಜದ ವಿದ್ಯಾರ್ಥಿಯಾದವರಿಗೆ ಸಾಧಾರಣವಾಗಿ
ಗೊತ್ತಿರಬಹುದು. ಆದಾಗ್ಯೂ, ಎಲ್ಲ ಮಾಸ್ತರರು, ಅಸಿ
ಸ್ಟೇಂಟರು ಇನ್ನೂ, ಟ್ರೇಂಡರಾಗಿಲ್ಲ. ಆದಪ್ರಯುಕ್ತ,
ನಾನು, ನನ್ನ ಅಲ್ಪ ಬುದ್ಧಿಗೆ, ತಿಳಿದ ಮಟ್ಟಿಗೆ, ವಾಚನ,
ವ್ಯಾಕಣ, ಗಣೀತ, ಭೂಗೋಲ, ಮುಂತಾದ, ವಿಷಯಗ
ಳನ್ನು, ಇದೇ ಕ್ರಮದಿಂದಲೇ; ಕಲಿಸಬೇಕೆಂಬದನ್ನು
ಪ್ರಗಟ ಮಾಡುವ ಉದ್ದಿಶ್ಯ, ಕೆಳಗೆ ನಾಲ್ಕು ಪಂಕ್ತಿಗಳ
ನು ಬರೆದು ಕಳುಹಿಸಿದ್ದಕ್ಕೆ ತಮ್ಮ ಜ್ಞಾನದರ್ಪಣವೆಂಬ
ಪುಸ್ತಕದಲ್ಲಿ ಆಶ್ರಯ ಕೊಟ್ಟು, ಇದರಲ್ಲಿ ನಾನೇನಾದ
ರೂ, ತಪ್ಪಿದರೆ, ನಂಮ ಬಾಂಧವರಿಂದ ತಿದ್ದಿಬಂದ, ಉ
ತ್ತರವನ್ನು ಇದೇ ಪತ್ರದ್ವಾರದಿಂದ ಪ್ರಕಟಮಾಡಿ, ನನ್ನ
ಲ್ಲಿದ್ದ ಅಜ್ಞಾನವನ್ನು ಬೇರೆಮಾಡುವಿರೆಂದು ಬೇಡಿಕೊಳ್ಳು

ತ್ತೇನೆ. ತಂಮ ವಿಚಾರಕ್ಕೆ ಸಮ ಕಂಡರೆ, ಸ್ಥಳ ದೊರಿಯಬೇಕು.

(ವಾಚನಪಾಠ.)

೧ ಮೊದಲು ಹುಡುಗರನ್ನು ಒಂದು ಸಾಲಾಗಿ (ಆರ್ಧಚಂದ್ರಾಕಾರ) ನಿಲ್ಲಿಸಬೇಕು. ಅಂದರೆ, ಮಾಸ್ತರನಿಗೆ ಎಲ್ಲ ವಿದ್ಯಾರ್ಥಿಗಳು ಸಮದೂರತ್ವದಲ್ಲಿದ್ದು, ಮಾಸ್ತರನ ನಜರು ಎಲ್ಲರ ಮೇಲೆ ಸಮವಾಗಿ ಬೀಳುವದುಂಟು.

೨ ತರುವಾಯ, ಒಂದು ಬದಿಯಿಂದ ಓದಿಸಲಿಕ್ಕೆ ಆರಂಭ ಮಾಡಬೇಕು. ಪರಂತು, ನಂಬರವಾರ ಓದಿಸಬಾರದು. ಯಾಕಂದರೆ ಮೊದಲಿನವನು ಓದುವಾಗ್ಯೆ, ಅವನ ಕೆಳಗಿವವನೊಬ್ಬನೇ ಮಾತ್ರ ಎಚ್ಚರಿರುತ್ತಾನೆ. ಉಳಿದವರ ಲಕ್ಷವು, ಆ ಪಾಠದ ಕಡಿಗಿರದೆ, ತಂಮ ನಂಬರವು ಇನ್ನೂ ದೂರದೆಂದು ಅಲಕ್ಷ ಮಾಡುತ್ತಾರೆ. ಆದಕಾರಣ, ಮಾಸ್ತರನು ತನ್ನ ಮನಸ್ಸಿಗೆ ಬಂದವನನ್ನು ಓದಿಸಿಕೊಳ್ಳಬೇಕು. ಇದರಿಂದ ಎಲ್ಲ ವಿದ್ಯಾರ್ಥಿಗಳು, ಆ ಪಾಠದಕಡಿಗೆ ದುರ್ಲಕ್ಷ ಮಾಡದೆ, ಎಚ್ಚರಿರುವರೆಂಬದಕ್ಕೇ ಏನು ಸಂದೇಹವಿಲ್ಲ.

೩ ಓದಿಸುವಾಗ್ಯೆ ಕೆಲವರು ಅಲ್ಲಲ್ಲಿಗೆ ಶಬ್ದಾರ್ಥಗಳನ್ನು ಕೇಳುತ್ತಾರೆ. ಇದು ಸಮವಲ್ಲ. ಇದರಿಂದ, ಹುಡುಗರಿಗೆ ಚಿನ್ಹಕ್ಕೆ ಸರಿಯಾಗಿಯೂ, ಅಸ್ಖಲಿತತನವಿಲ್ಲದ್ದಾಗಿಯೂ, ಕೊಟ್ಟಷ್ಟು ಪಂಗ್ತಿಗಳನ್ನು ಸರಸವಾಗಿ ಓದಿ, ಭಾವಾರ್ಥವನ್ನು ಹೇಳುವದಕ್ಕೂ, ಏನು ತಿಳಿಯುವದಿಲ್ಲ. ಅದಕಾರಣ, ಹುಡುಗರನ್ನು ಓದಿಸುವಾಗ್ಯೆ, ಸಮನೆ ಶಬ್ದಾರ್ತ ಕೇಳದೆ; ಕೇಳುವ ಜನರಿಗೆ ರಹಸ್ಯವಾ

ಗುವಂತೆಯೂ, ಭಾವಾರ್ಥದ ಗ್ರಹಿಕೆಯಾಗುವಂತೆಯೂ, ಓದುವದಕ್ಕೆ ಕಲಿಸಬೇಕು.

೪ ಓದುವಾಗ್ಯೆ ಲಕ್ಷವಿಡುವದೇನೆಂದರೆ, ಒಂದೇ ವಾಕ್ಯವನ್ನು ಎರಡಾವರ್ತಿ ಅಂಬೋಣ, ಹಾಗೂ, ಅಲ್ಲಲ್ಲಿಗೆ ಚಿನ್ಹವಿಲ್ಲದೇ ಮುಕ್ಕಾಮು ಮಾಡೋಣ, ಮೊದಲಾದ, ದುರ್ಬಾಳಗಳನ್ನು ಎಷ್ಟು ಮಾತ್ರಕ್ಕೂ, ಹತ್ತಗೊಡಬಾರದೆಂಬದು ಸ್ಪಷ್ಟವೇ ?

೫ ಒಬ್ಬನು ಓದಿದಕೂಡಲೇ, ಅವನಷ್ಟಕ್ಕೇ ಶಬ್ದಾರ್ಥ ಭಾವಾರ್ಥಗಳನ್ನು ಕೇಳಕೂಡದು. ಯಾಕಂದರೆ, ಆ ಹುಡುಗನು ತನ್ನ ಯಾವತ್ತೂ ವಿಷಯಗಳು ಮುಗಿದವೆಂದು ವರ್ಗದೊಳಗಿನ ಎಲ್ಲ ಹುಡುಗರ ವಿಷಯಗಳು ತೀರುವ ಮಟ್ಟಿಗೂ, ಮುಂದಿನ ಕಥೆಯ ತಾತ್ಪರ್ಯವನ್ನು ಗ್ರಹಿಸದೆ, ಅಸಡ್ಡೆತನದಿಂದ, ಆ ಪಾಠದಕಡೆಗೆ ಲಕ್ಷಕೊಡದೆ, ಅತ್ತಿತ್ತ ನೋಡುತ್ತ ನಿಂದಿರುತ್ತಾನೆ. ಇದರಿಂದ ಅವನಿಗೆ ಆ ಪಾಠದ ತಾತ್ಪರ್ಯವು ಏನು ತಿಳಿಯುವದಿಲ್ಲ. ಅವನು ಓದಿದ ನಾಲ್ಕೈದು ಪಂಕ್ತಿಗಳ ಪಟ್ಟಾರ್ಥವನ್ನು ಹೇಳಿದಾಗ್ಯೂ, ಏನು ಫಲವಿಲ್ಲ. ಎಲ್ಲ ವಿದ್ಯಾರ್ಥಿಗಳಿಗೆ—ಎಲ್ಲ ಪಾಠದ ತಾತ್ಪರ್ಯವು ಕಥೆಯಂತೇ ಗ್ರಹಿಕೆ ಆಗಲಿಕ್ಕೇಬೇಕು. ಇದಕ್ಕೆ ಉಪಾಯಗಳು.

(ಅ) ಮೊದಲು ಎಲ್ಲರಕಡೆಯಿಂದ ಎಂಟು ಹತ್ತು ಸಾಲುಗಳನ್ನು ಚಿನ್ಹಕ್ಕೆ ಸರಿಯಾಗಿಯೂ, ಕೇಳುವವರ ಕಿವಿಗಿಂಪಾಗಿಯೂ, ಓದಿಸಬೇಕು.

(ಬ) ಎಲ್ಲ ಕಥೆಯ ತಾತ್ಪರ್ಯವು ಹುಡುಗರಿಂದ ಹೊರಡಿಸುವಂತೆ ಮಾಸ್ತರನು ಕೆಲವು ಪ್ರಶ್ನಗಳನ್ನು ತೆಗೆ

ದು, ಕೇಳಬೇಕು. ಅಂದರೆ, ಹುಡುಗರು ಸುಲಭವಾಗಿ ಉತ್ತರಗಳನ್ನು ಕೊಡುವರು.

(ಕ) ಯಾವ ಹುಡುಗನು ತನ್ನ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರಗಳನ್ನು ಕೊಡುತ್ತಾನೋ; ಆವನಿಗೆ ಆ ವಿಷಯವು ಚನ್ನಾಗಿ ಗ್ರಹಿಕೆಯಾಗಿದೆಂದು ತಿಳಿಯಬೇಕು. ಅವನನ್ನು ಬಹುಮಾನಮಾಡಿ, ಮೇಲಿನ ನಂಬರವಂನು ಕೊಟ್ಟು, ತಪ್ಪಿದವರಿಗೆ ಶಿಕ್ಷಣದ ನೇಮಗಳಂತೆ, ಶಿಕ್ಷೆಗಳನ್ನು ಕೊಡಬೇಕು. ಪ್ರಶ್ನ ರೂಪದಿಂದ ಕಥೆಯ ತಾತ್ಪರ್ಯವನ್ನು ವಿದ್ಯಾರ್ಥಿಗಳ ಕಡೆಯಿಂದ ಹೊರಡಿಸಿ, ಮಾಸ್ತರನು ಆ ಕಥೆಯ ಭಾವಾರ್ಥವನ್ನು ತಾನು ಹೇಳಬೇಕು. ಆದರೆ ಆ ವಿಷಯವು ಚನ್ನಾಗಿ ಗ್ರಹಿಸಿದಂತಾಯಿತು.

(ಖ) ಪಾಠವು ದೊಡ್ಡದಿದ್ದರೆ, ಅದರಲ್ಲಿ ಭಾಗಗಳನ್ನು ಮಾಡಿ, ಕಲಿಸಲಿಕ್ಕೆ ಬೇಕು. ಹಾಗೂ, ಯಾವ ವಿಷಯವನ್ನು ಹೇಳತಕ್ಕದ್ದದೆಯೋ; ಅದರ ನಕ್ಷೆಯನ್ನು ವಿದ್ಯಾರ್ಥಿಗಳ ಮುಂದೆ, ಭವ್ಯವಾಗಿ ಕಾಣುವಂತೆ, ಇಡಬೇಕು.

೬ ಇಷ್ಟಾದಬಳಿಕ, ಕಠಿಣ ಶಬ್ದಗಳ ಅರ್ಥವನ್ನು ಪ್ರಶ್ನೆ ರೂಪದಿಂದ ಎಲ್ಲ ವಿದ್ಯಾರ್ಥಿಗಳಿಂದ ತೆಗೆದುಕೊಂಡರೆ; ಓದುವ ವಿಷಯವು ಮುಗಿದಂತಾಯಿತು. ತರುವಾಯ, ಆ ವಿಷಯದ ವ್ಯಾಕರಣವನ್ನು ಕೇಳಬೇಕು. ಇದರ ವಿಷಯವಾಗಿ ಮುಂದಿನ ನಿಬಂಧದಲ್ಲಿ ನೋಡುವ.

೭ ಯಾವದಾದರೊಂದು ವಿಷಯವನ್ನು ನಡಿಸುವಾಗ್ಗೆ, (ಕಲಿಸುವಾಗ್ಗೆ), ವಿದ್ಯಾರ್ಥಿಗಳಿಗೆ ಪಾಠಮಾಡುವದಕ್ಕೆ

ವೇಳೆ ಕೊಡದೆ, ಅಭ್ಯಾಸವನ್ನು ಕೇಳುವದಕ್ಕಾಗಿ, ಮುಂಜಾನೆಯಿಂದ ಮಧ್ಯಾನ್ಹದವರಿಗೂ, ನಿಂದಿಸುವದರಲ್ಲಿ ಏನು ಪ್ರಯೋಜನವಿಲ್ಲ. ಈ ನಡತೆಯು ಕಾಲೇಜ ಮುಂತಾದವುಗಳಲ್ಲಿ ಸಲ್ಲಬಹುದು. ಯಾಕಂದರೆ, ವಿದ್ಯಾರ್ಥಿಗಳು ಬುದ್ಧಿ ಬಲ್ಲವರಾಗುವ ಮಟ್ಟಿಗೂ, ಮನೆಯಲ್ಲಿ ಅಭ್ಯಾಸ ಮಾಡುವದಿಲ್ಲ. ಆದ್ದರಿಂದ ಸಾಲಿಯಲ್ಲಿಯೇ, ಕಲಿಯುವ ಉದ್ದಿಶ್ಯ ಸ್ವಲ್ಪ ವೇಳೆಯನ್ನು ಕೊಟ್ಟು, ಅಷ್ಟರಲ್ಲಿಯೇ, ಕಲಿಯಲಕ್ಕೇ ಬೇಕೆಂಬದು ತಾಕಿದಿ ಮಾಡಿ, ಅಲ್ಲಿಂದ ಕೊಟ್ಟ ವಿಷಯವನ್ನು ಕಲಿತರೋ; ಇಲ್ಲೋ; ಎಂಬುವದಕ್ಕಾದೆ ಒಪ್ಪಿಸಿಕೊಳ್ಳಬೇಕು. ಮನೆಯಲ್ಲಿ ಕಲಿತು ಬರಬಾರದೆಂದು, ಹೇಳಬೇಕೆಂದು, ನನ್ನ ತಾತ್ಪರ್ಯವಿಲ್ಲ.

೮ ಯಾವ ಹುಡುಗನಿಗೆ ಪ್ರಶ್ನವನ್ನು ಮಾಡಿದೆಯೋ; ಅವನೊಬ್ಬನೇ, ಅದರ ಉತ್ತರವನ್ನು ಹೇಳಬೇಕೆಂದು, ಬೇರೆಯವರು ಹೇಳಕೂಡದೆಂದೂ, ಹೇಳಿದರೆ, ಖಂಡಿತನಾಗಿ ಶಿಕ್ಷೆಗೆ ಪಾತ್ರರಾಗುವರೆಂದು ಬೋಧಕನು ಮೊದಲೇ ಹೇಳರಬೇಕು.

೯ ಹುಡುಗರಿಗೆ ವಸ್ತ್ರಗಳನ್ನು ನಿರ್ಮಲವಾಗಿ ಇಡುವದಕ್ಕೂ, ಅಂಗಗಳನ್ನು ತೊಟ್ಟು ಬರುವದಕ್ಕೂ, ಖಜ್ಜಿ, ವೈಲೆ, ಮುಂತಾದ, ರೋಗಿಷ್ಟರನ್ನು ಎಷ್ಟು ಮಾತ್ರಕ್ಕೂ, ಬರಬಾರದೆಂಬ ಬಗ್ಗೆ, ಬೋಧಕನು ಅಪ್ಪಣೆಯನ್ನು ಕೊಡಬೇಕು. ಹಾಗೂ ಸಾಲಿಯು ವೇಳೆ ತಪ್ಪಿಸಬಾರದೆಂಬದಂತೂ, ಸತ್ಯವೇ?

೧೦ ಸಾಲಿಯಲ್ಲಿ ಹುಡುಗರನ್ನು ದಪ್ಪೈತವಾಗಿ ಕೂಡ

ಗೊಡಬಾರದು, ಯಾಕೆಂದರೆ, ಒಬ್ಬರಿಗೊಬ್ಬರು ಹೇಳಿ
ಕೊಡುವದಕ್ಕೂ, ಕಾಪಿ (ನಕಲು) ಮಾಡುವದಕ್ಕೂ, ಅ
ಸ್ಪದವಾಗುವದು. ಇದರಿಂದ, ಅವರಲ್ಲಿ ಆಲಸ್ಯತ್ವ ಉಂ
ಟಾಗಿ, ಮುಂದುವರಿದು ತಾವು ಕಲ್ಪನೆಗಳನ್ನು ಹಾಕುವ
ಹವಣಿಕೆಯನ್ನು ಎಷ್ಟುಮಟ್ಟಿಗೂ ಮಾಡುವದಿಲ್ಲ. ಇದ
ಕ್ಕಾಗಿ ದೂರದೂರಾಗಿ ಕೂಡಿಸುವ ವ್ಯವಸ್ಥೆ ಮಾಡುವ
ಶ್ಯವು.

ತಾರೀಖ ೮ ⎫ ಸಹಿ ಜಗನ್ನಾಥ ಶ್ರೀಧರ ಗೋಖಲೇ
ಜೂನ ಸನ್ನ ⎬ ಹೆ. ಮಾ. ಬಮ್ಮನಹಳ್ಳಿ ತಾ. ಹಾ.
೧೮೭೪ ಇ. ⎭ ಜಿ. ಧಾರವಾಡ.

(ಮುಂದಕ್ಕೆ ಸಾಗುವದು.)

◆

ರಾವಸಾಹೇಬ ಕನ್ನಡ ತ್ರಾನ್ಸಲೇಟರ ದಕ್ಷಿಣಭಾ
ಇವರಿಗೆ—

ಸಂವದತ್ತಿ ಅ. ಹ್ಯಾ. ಸ್ಕೂಲಮಾಸ್ತರ ಇವರಕಡಿಂದಾ.
ನ್ನಡ ವಾಚನ ಪಾಠದ ಮೇಲೆಯ ಪುಸ್ತಕಗಳಿಗಾಗಿ ಪಾ
ಗಳನ್ನು ರಚಿಸಿ ತಮ್ಮ ಕಡಿಗೆ ಕಳುಹಿಸಬೇಕೆಂದು ರಾ
ಸಾಹೇಬ ಡಿ. ಎ. ಇನಸ್ಪೇಕ್ಟರ ಬೆಳಗಾವ ಇವರಕಡಿಂ
ಹುಕುಂ ಬಂದದ್ದಕ್ಕೆ ಅವರಿಗೆ ಈ ಸಂಬಂಧದ ಕೆಲವು
ಶ್ನಗಳನ್ನು ಕೇಳಿದೆವು. ಅವುಗಳ ವುತ್ತರಗಳನ್ನು
ಮ್ಮ ಕಡಿಗೆ ಮಠಪತ್ರಿಕೆಯಲ್ಲಿ ಪ್ರಕಟಿಸುವದಕ್ಕೆ ಕಳು

ಹಿಸಿದ್ಧೇನೆ ಎಂದೂ, ತಮ್ಮ ಕಡಿಂದಲೇ ಆ ಪ್ರಶ್ನೆಗಳ
ತ್ತರಗಳನ್ನು ದೊರಕಿಸಬೇಕೆಂದೂ ಬರೆವ ಬಂದದ್ದರಿಂ
ತಾರೀಖ ೩ನೇ ಜೂನವದಿನಸ ತಮಗೆ ಆ ಪ್ರಶ್ನೆಗಳನ್ನು
ಕೇಳದಿವಿ ಅದಕ್ಕೆ ಇನ್ನೂ ಉತ್ತರದೊರಿಯಲಿಲ್ಲಾ ಕಾ
ಣ ಪುನಾಃ ಕೇಳುತ್ತೇನೆ ದಯಮಾಡಿ ತೀವ್ರ ಪ್ರತ್ತ
ಕೊಡುವ ತಜವೀಜ ಆಗಬೇಕು.

ಪ್ರಶ್ನೆಗಳು.

೧ ಕಂನಡ ವಾಚನ ಪಾಠಗಳ ಮೇಲೆ ಪುಸ್ತಕಗಳು
ಗತಕ್ಕವು ಎಷ್ಟು?

೨ ಅವುಗಳಲ್ಲಿ ಸೇರಿಸತಕ್ಕಂಥ ವಿಷಯಗಳು ಯಾ
ವವು?

೩ ಪೌರಾಣಿಕ ಕಥೆಗಳನ್ನೂ, ದಂತಕಥೆಗಳನ್ನೂ ಬರೆಯ
ಬಹುದೊ?

೪ ಮತಸ್ಥಾಪಕರ ಚರಿತ್ರೆಗಳನ್ನಾಗಲಿ ಧರ್ಮ ಸಂಬಂ
ದ ಸಂಗತಿಗಳನ್ನಾಗಲಿ ಬರೆಯುವದಕ್ಕೆ ಪ್ರತಿಬಂ
ಉಂಟೋ?

೫ ಸ್ತ್ರೀವರ್ಣನಾದಿ ಶೃಂಗಾರಿಕ ವಿಷಯದ ಕಥೆಗಳು
ಕ್ಕವು ಆಗುವವೋ?

೬ ಕಥೆಗಳು ಎಷು ದೊಡ್ಡದಿರಬೇಕು?

೭ ಭಾಷಾ ಯಾವ ಪ್ರಕಾರದ್ದಿರಬೇಕು?

ಈ ಪ್ರಶ್ನೆಗಳಿಗೆ ಮೇಹರ್ಬಾನಗಿಯಿಂದಲೇ ಪ್ರತ್ತ
ಕೊಡುವ ತಜವೀಜ ಆಗಬೇಕು. ತಾರೀಖು ೧೫ ಸೇ

ಜೂನ ಸನ್ನ ೧೮೭೬ ಇಸ್ವಿ.

ಸಹಿ ದಾಸೋ ಶ್ರೀಧರ ಜೋಸಿ.
(ಹೆಡ್ಡಮಾಸ್ತರ ಅ. ಹ್ವ. ಸ್ಕೂಲ ಸಂವದತ್ತಿ.)

ಮೇಲಿನ ಪ್ರಶ್ನಗಳಿಗೆ ಅನುಕ್ರಮದಿಂದ ಉತ್ತರಗಳು.

೧ ಮೊದಲಿನಂತೆಯೇ ಆರು ಪುಸ್ತಕಗಳಾಗತಕ್ಕ ವಿರುತ್ತವೆ.

೨ ಅವುಗಳಲ್ಲಿ ಸೇರಿಸತಕ್ಕಂಥ ವಿಷಯಗಳ ಬಗ್ಗೆ ಮೋಡಿ ಮತ್ತು ಕಂನಡ ಮೂರನೇ ನಾಲ್ಕನೇ ಐದನೇ ಆರನೇ ಪುಸ್ತಕಗಳಲ್ಲಿದ್ದ ಅನುಕ್ರಮಣಿಕೆಗಳನ್ನು ನೋಡಬೇಕು. ಇಷ್ಟೇ ಐದನೇ ಪುಸ್ತಕಗಳಲ್ಲಿ ರಜಪೂತ ಜನರವೂ ಯುರೋಪಿಯನ್ನ ಜನರವೂ ಕಥೆಗಳಿರುತ್ತವೆ. ಅವನ್ನು ತೆಗೆದು ಹಾಕಿ ನಮ್ಮ ದೇಶದೊಳಗಣ ಜನರ ಕಥೆಗಳನ್ನು ಹಾಕತಕ್ಕದ್ದಿರುತ್ತದೆ.

೩ ಸಾಧಾರಣವಾದ ಪೌರಾಣಿಕ ಇಲ್ಲವೆ ದಂತಕಥೆಗಳು ಅವಶ್ಯವಿಲ್ಲ, ಅವುಗಳಲ್ಲಿ ಏನಾದರು ವಿಶೇಷ ಮಾಹಿತಿ ಆಗುವಂತೆ ಇದ್ದರೆ ಮಾತ್ರ ಕೊಡಬೇಕು.

೪ ಏನೂ ಪ್ರತಿಬಂಧವಿಲ್ಲ.

೫ ಸ್ತ್ರೀಯ ಪಾತಿವ್ರತ್ಯ ಮೊದಲಾದ ಗುಣಗಳ ಬಗ್ಗೆ ಕಥೆಗಳು ಬೇಕು. ಕುತ್ಸಿತವಾಗಿಯೂ ಬೀಭತ್ಸವಾಗಿಯೂ ಇದ್ದ ಶೃಂಗಾರದ ಕಥೆಗಳು ಬೇಡ.

೬ ಇವಕ್ಕೆ ಒಂದು ನಿಯಮ ಮಾಡಲಿಕ್ಕೆ ಬರುವದಿಲ್ಲ.

೭ ಭಾಷೆ ವ್ಯಾಕರಣಶುದ್ಧವಾಗಿಯೂ ವಿವರಣೆಮಾಡತಕ್ಕ

ತಿಷಯಕ್ಕೆ ತಕ್ಕದ್ದಾಗಿಯೂ ಇರಬೇಕು. ಅಂದರೆ ನೆಂದು ಕೇಳಿದರೆ ಶಾಸ್ತ್ರೀಯ ವಿಷಯವಾಗಿದ್ದರೆ ಭ ಷೆಯು ಪ್ರೌಢವಾಗಿರಬೇಕು. ವಿಷಯ ಕಥಾನ ರೂಪವಾಗಿದ್ದರೆ ಅದು ಸರಸವಾಗಿಯೂ ಮನೋರ ಜಕವಾಗಿಯೂ ಇರಬೇಕು; ದುರ್ಭೋಧ ಇಲ್ಲ ಕ್ಲೀಷ್ಟವಾಗಿರಬಾರದು.

P V. Chintamanpetka

ಆಕ್ಟಿಂಗ ಕನ್ನಡ ತ್ರಾನಸ್ಲೇಟರ ಮತ್ತು
ಕನ್ನಡ ಶಾಲಾಪತ್ರಕದ ಏಡಿಟರ.

ಶಾಲಾಪತ್ರಕವು.

ಪುಸ್ತಕ ೧೨] [ಸಂಚಿಕ ೪

ತಾರೀಖು, ೨೫ನೇ ಮಾಹೆ ಜುಲಯಿ, ೧೮೭೬.

EDUCATIONAL INTELLIGENCE.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮ. ಎಜ್ಯುಕೇಶನಲ್ ಇನಸ್ಪೇಕ್ಟರ ಸಾಹೇಬ ಬಹಾ
ರ, ದಕ್ಷಿಣಭಾಗ, ಇವರ ಅಪ್ಪಣೇಮೇಲಿಂದ ಬೆಳಗಾ
ಯಲ್ಲಿ ಕೂಡಿದ ಈ ದಕ್ಷಣಭಾಗದೊಳಗಿನ ನಾಲ್ಕೂ ಜಿ
ಗಳ ಡಿಪುಟಿ ಇನಸ್ಪೇಕ್ಟರರ ಕಮೇಟೀ ಕೆಲಸ ತೀರಿ
ು; ಡಿಪುಟಿಯವರಿಗೆ ತಮ್ಮ ತಮ್ಮ ಜಿಲ್ಲೆಗಳಿಗೆ
ೋಗಲಿಕ್ಕೆ ಅಪ್ಪಣೆಯಾಯಿತು. ಈ ಕಮೇಟಿಯಲ್ಲಿ
ದ ಜಾವತ್ತು ಠರಾವುಗಳು ಇನ್ನೂ ಸರಕಾರೀ ರೀತಿ
ಂದ ಹೊರಬಿದ್ದಿಲ್ಲ; ಆದರೂ ಕೆಲಕೆಲವು ಮಾತುಗಳ
ಳದವೆ. ಮೊದಲು ಆರು ಇಯತ್ತೆಗಳಿದ್ದದ್ದು ಮುರಿ
ಏಳು ಇಯತ್ತೆಗಳನ್ನು ಮಾಡಿರುತ್ತಾರೆ. ಮೊದ
ನ ಇಯತ್ತೆಗಳಲ್ಲಿ ಗಣಿತಭಾಗ ಬಹಳ ಕಡಿಮೆ ಇತ್ತು-
ನ್ನು ಹೊಸ ಇಯತ್ತೆಗಳಲ್ಲಿ ಹೆಚ್ಚು ಮಾಡಿರುತ್ತಾರೆ.
ಷ್ಟ ದಿವಸ ಕನ್ನಡ ಮುಲಕಿಪರೀಕ್ಷೆಗೆ ಆರನೇ ಇಯತ್ತೆ

ಯಿತ್ತು. ಇನ್ನು ಮುಂದೆ ಏಳನೇ ಇಯತ್ತೆಯಂತೆ ಪರೀಕ್ಷೆ ಕೊಡಲಿಕ್ಕೆ ಬೇಕಾಗುವದು. ಇಷ್ಟು ದಿನ ದೊಡ್ಡ ದೊಡ್ಡ ಊರುಗಳಲ್ಲೀ ಶಾಲೆಗಳಿಗೂ ಹಳ್ಳಿಗಳಲ್ಲೀ ಸಾಲೆಗಳಿಗೂ ಒಂದೇ ಇಯತ್ತೆಗಳಿದ್ದವು. ಆದರೆ ಇನ್ನು ಮುಂದೆ ದೊಡ್ಡ ಊರುಗಳ ಸಾಲಿಗಳಿಗಾಗಿ ಏಳು ಇಯತ್ತೆಗಳು ಬೇರೆ, ಹಳ್ಳಿಗಳ ಸಾಲಿಗಳಿಗಾಗಿ ನಾಲ್ಕು ಇಯತ್ತೆಗಳು ಬೇರೆ ಮಾಡಿರುತ್ತಾರೆ. ಈ ಹೊಸ ನಾಲ್ಕು ಇಯತ್ತೆಗಳಲ್ಲಿ, ಇತಿಹಾಸ ಭೂಗೋಲ ವ್ಯಾಕರಣ ಮುಂತಾದ, ಹಳ್ಳೀ ಜನರಿಗೆ ವಿಶೇಷವಾಗಿ ಬೇಕಾಗದಂಥ ಕೆಲವು ವಿಷಯಗಳನ್ನು ಕಡಿಮೆಮಾಡಿ ಕೈಬರಹ, ಕೈಬರಹದ ಕಗದ ಓದೋಣ, ಲೆಕ್ಕ ಮುಂತಾದ ಸಾಧಾರಣ ಉಪಯುಕ್ತ ವಿಷಯಗಳ ಕಡಿಗೆ ವಿಶೇಷ ಲಕ್ಷಕೊಟ್ಟಿರುತ್ತಾರ ಸಾಲೇ ಮಾಸ್ತರ ಜನರ ಸಂಬಳದ ಬಗ್ಗೆಯೂ ಅವರಿಗ ಅವರ ವರಿಷ್ಠರಾದ ಡಿಪುಟಿಗಳಿಗೂ ಇರುವ ಸಂಬಂಧ ಬಗ್ಗೆಯೂ ಹಲವು ನೇಮಗಳಾಗಿರುತ್ತವೆ. ಆದರೆ ಅವು ಮಗೆ ನಂಬಿಗೆ ಇಡುವಂತೆ ಪೂರ್ಣವಾಗಿ ಇನ್ನು ತಿಳಿದಿಲ್ಲ

ಈಗ ಮುಂಬಯಿ ಯುನಿವರ್ಸಿಟಿಯ ಪ್ರವೇಶ (ಮ್ಯಾಟ್ರಿಕ್ಯುಲೇಶನ) ಪರೀಕ್ಷೆಯು ಮುಬಯಿಯಲ್ಲಿ ಮಾತ್ರ ಆಗುತ್ತದೆ. ಆದರಿಂದ ಉಮೇದವಾರರಿಗೆ ಬಹಳ ವೆಚ್ಚವೂ ಕಷ್ಟಗಳೂ ಉಂಟಾಗುತ್ತವೆ. ಈ ಅಡ್ಡಿ ದೂ ಮಾಡಬೇಕೆಂಬದಾಗಿ ಇಲಾಖೆಯು ಪ್ರತಿಯೊಂದು ಭಾ ದಲ್ಲಿ ಕೆಲವು ಮುಖ್ಯಸ್ಥಳಗಳನ್ನು ನೋಡಿ, ಅಲ್ಲಿ ಸ ತ್ತುಮುತ್ತಿನ ಉಮೇದವಾರರಿಗೆ ಬರ ಹೇಳಿ ಇಂಗ್ರ

ಲೇಖಿ ಪರೀಕ್ಷೆ ತಕ್ಕೊಂಡು, ಈ ಪರೀಕ್ಷೆಯಲ್ಲಿ ಪಾಸಾ
ದವರಿಗೆ ಮಾತ್ರ ಮುಂದೆ ಮುಂಬಯಿಗೆ ಬರ ಹೇಳದ
ರ ಸುಲಭ ವಾಗುವದು, ಎಂಬ ವಿಚಾರ ನಡೆವದೆ.

ಡಾಕ್ತರ ಮಾರ್ಟಿನಹಾ ಎಂಬ ಪ್ರಸಿದ್ಧ ಜರ್ಮನ
ಸಂಸ್ಕೃತಜ್ಞರು ಸ್ವಲ್ಪ ದಿವಸಗಳ ಕೆಳಗೆ ಸ್ವಿಟ್ಝರ್ಲಂ
ಡದೇಶದಲ್ಲಿ ತೀರಿಕೊಂಡರು. ಇವರು ಕೆಲವು ವ
ರ್ಷ ಪುಣೇ ಕಾಲೇಜದಲ್ಲಿ ಸಂಸ್ಕೃತ ವಿದ್ಯಾಗುರುಗಳಾ
ಗಿದ್ದಾಗ ಐತರೇಯ ಬ್ರಾಹ್ಮಣದ ಇಂಗ್ರಜಿ ಭಾಷಾಂ
ತರ ಮಾಡಿದರು.

ಪರಲೋಕವಾಸಿ ಡಾಕ್ತರ ವಿಲ್ಸನ ಸಾಹೇಬರ ಅಮೂ
ಲ್ಯ ಪುಸ್ತಕಗಳನ್ನು ಲಿಲಾವು ಮಾಡಿ ಮಾರಿಬಿಡದಲೆ,
ಮುಂಬಯಿ ಯುನಿವರ್ಸಿಟಿಗೆ ತಕ್ಕೊಳ್ಳಬೇಕೆಂಬ ಬಗ್ಗೆ
ಚಾರ ನಡೆದಿರುತ್ತದೆ.

ಸರವಿಲ್ಯಮಮ್ಯುರ ದೊರೆಗಳು ಕಾಶ್ಮೀರದೊಳಗಿಂ
ದೊಂದು ಅಥರ್ವಣ ವೇದದ ಬಹಳ ಹಳದಾದಪ್ರತಿ ದೊರ
ಸಿರುತ್ತಾರೆ. ಅದು ಭೂರ್ಜ ಪತ್ರಗಳ ಮೇಲೆ ಶಾರದಾ
ಪಿಯಲ್ಲಿ ಬರೆವದೆ. ಇದರಷ್ಟು ಹಳೇ ಪುಸ್ತಕ ಮತ್ತೆ
ಯೂ ಇಲೆಂದು ತಿಳದು ಬರುತ್ತದೆ.

ಒಂದು ಪಾತ್ರೆಯಲ್ಲಿ ಒಂದು-ಕ್ವಾರ್ಟ ನೀರಲ್ಲಿ ೬ ಔ
ಂಸ ಪಟಕ, ೪ ಔಂಸಬಿಳಸಜ್ಜು ಕಾರ, ಹಾಕಿ ಕರಗಸಬೇ

ಕು. ಇನ್ನೊಂದು ಪಾತ್ರೆಯಲ್ಲಿ ಅಷ್ಟೇ ನೀರ
೨ ಔಂಸ ಅಂಟು, ೧ ಔಂಸ ಸರಸು, ಹಾಕಿ ಕರಗಿಸಬೇಕ
ಬಳಿಕ ಇವೆರಡು ನೀರ ಮಿಶ್ರಣಗಳನ್ನು ಒತ್ತಟ್ಟು ಕೂಡಿ
ಅದರೊಳಗೆ ಕಾಗದ ಮುಳುಗಿಸಿ ತಗೆದು ಮೇಲಿಂದ ರೋ
ತಿರುವಿಯಾಗಲೀ ನೀರೆಲ್ಲ ಬಿದ್ದು ಹೋಗುವತನಕ ಜೆ
ತು ಬಿಟ್ಟಾಗಲೀ ಒಣಗಿಸಬೇಕು. ಈ ಪ್ರಕಾರದಿಂ
ಸಿದ್ಧ ಮಾಡಿದ ಕಾಗದಕ್ಕೆ ನೀರಿನದೂ ಹುಳುಗಳ ಹತ
ವದೂ ಭಯವಿಲ್ಲ.

ಯೂರೋಪ ಖಂಡದೊಳಗಣ ರೂಷದೇಶದರಾ
ಧಾನಿಯಾದ ಸೆಂತಪಿತರ್ಸಬರ್ಗ ಪಟ್ಟಣದಲ್ಲಿಯ ಸರಕ
ರದ ಪುಸ್ತಕಾಲಯದಲ್ಲಿ ಮುಸಲಮಾನ ಜನರ ಧಮ
ಶಾಸ್ತ್ರವಾದ ಕುರಾಣದ್ದೊಂದು ಪ್ರತಿಯದೆ. ಅದನ್ನು ವ
ಹಮ್ಮದ ಪೈಗಂಬರನ ತರುವಾಯ ಆಗಿಹೋದ ಮೂರನೆ
ಖಲೀಪನಾದ ಓಸಮಾನನು ಬರೆದನೆಂದು ತಿಳಿದು ಬರ
ತ್ತದೆ. ಈ ಮೇರಿಗೆ ಈ ಪುಸ್ತಕವು ಬರೆದು ೧೨೦೦
ವರ್ಷ ಆಗಿದ್ದಾಗ್ಯೂ ಇನ್ನೂ ಘಟ್ಟಿಯಾಗಿದೆ!

ಜರ್ಮನ ದೇಶದೊಳಗಿನ ಸಂಸ್ಕೃತಜ್ಞರಲ್ಲಿ ಬಹಳೆ
ಹೆಸರಾದ ಪ್ರೊಫೆಸರ (ವಿದ್ಯಾಗುರು)ಲಾಸೆನ ಎಂಬ ಪಂಡಿ
ರು ಒಂದೆರಡು ತಿಂಗಳ ಕೆಳಗೆ ಕಾಲಾಧೀನರಾದರು. ನ
ರ್ವೆ ದೇಶದಲ್ಲೀ ಬರ್ಜೆನ ಪಟ್ಟಣದಲ್ಲಿ ಇಂ ಸ
೧೮೦೦ ರಲ್ಲಿ ಇವರ ಜನ್ಮವಾಯಿತು ಇವರು ಚಿಕ್ಕ
ದಿನಲ್ಲಿ ಒಮ್ಮೆ ಜರ್ಮನದೇಶಕ್ಕೆ ಬಂದವರು ದೇಹಾ

ಸಾನದ ವರೆಗೆ ಅಲ್ಲೆ ಇದ್ದರು. ಇವರು ಬೋನ ಯೂನಿವರ್ಸಿಟಿಯಲ್ಲಿ ಸಂಸ್ಕೃತವಿದ್ಯೆಯ ಗುರುಗಳಾಗಿದ್ದರು. ಯೂರೋಪಖಂಡದಲ್ಲಿ ಸಂಸ್ಕೃತಭಾಷಾಬ್ಯಾಸಕ್ಕೆ ಈಗೇನು ಇಷ್ಟು ಉತ್ತೇಜನ ಬಂದಿರುತ್ತದೆ, ಅದಕ್ಕೆ ಇವರ ಪರಿಶ್ರಮವೇ ಮುಖ್ಯಕಾರಣವು.

ಫ್ರಾನ್ಸದೇಶದ ಚಕ್ರವರ್ತಿಯಾದ ೧೬ನೇ ಲೂಯಿಯು ಮಹಿಸೂರಿನ ಟೀಪುಸುಲತಾನನಿಗೆ ಕಾಣಿಕೆ ಕೊಟ್ಟಂಥಾದ್ದೊಂದು ಹೂಜೆಯು ಕೆಲವು ದಿವಸಗಳ ಕೆಳಗೆ ವಿಲಾಯತಿಯಲ್ಲಿ ೧೪೫೯೧ ರೂಪಾಯಕ್ಕೆ ಮಾರಿತು. ೧೭೯೯ ರಲ್ಲಿ ಇಂಗ್ರೇಜರು ಶ್ರೀರಂಗಪಟ್ಟಣ ತಕೊಡು ಲೂಟಿಮಾಡಿದಾಗ ಗಾರ್ಡನ ಎಂಬ ಒಬ್ಬ ಸೇನಾಧಿಕಾರಿಯ ಕೈಗೆ ಈ ಹೂಜೆ ಹತ್ತಿ ವಿಲಾಯತಿಗೆ ಹೋಯಿತು. ಇದು ೧೮ ಫೂಟು ಎತ್ತರವೆ, ಹಾಂಗೂ ಇದರ ಮೇಲಿನ ಸುಳವಿನ ಕೆಲಸ ಬಹಳ ಚಿತ್ರವಿಚಿತ್ರವಾಗಿದೆ.

ETYMOLOGY.

ಶಬ್ದಗಳ ವ್ಯುತ್ಪತ್ತಿ.

ದಕ್ಷಿಣ ಹಿಂದುಸ್ಥಾನದೊಳಗೆ ನಡೆಯುವ ಹಲವು ವಿಡ ಭಾಷೆಗಳಲ್ಲಿ ತಮಿಳ (ಇಲ್ಲವೆ ಶುದ್ಧ ದ್ರವಿಡ), ಲಗು, ಕನ್ನಡ (ಇಲ್ಲವೆ ಕರ್ನಾಟಕ) ಎಂಬೀ ಮೂ ಭಾಷೆಗಳು ಕಡೆಗೂ ಬಹಳ ಪ್ರಸಿದ್ಧವು. ಈ ದ್ರಾವಿಡ ಷೆಗಳಿಗೂ, ಸಂಸ್ಕೃತ ಭಾಷೆಗೂ ಹಾಗೂ ಸಂಸ್ಕೃತದಿಂ

ದ ಹೊರಟಂಥ ಬಂಗಾಲಿ, ಹಿಂದಿ, ಪಂಜಾಬಿ, ಗುಜರಾಥಿ, ಮರಾಠಿ (ಆರೆ) ಮುಂತಾದ ಭಾಷೆಗಳಿಗೂ ಏನೇನು ಸಂಬಂಧ ವಿಲ್ಲೆಂದು ಈಗಿನ ಹಲವು ಭಾಷಾ ಶಾಸ್ತ್ರಜ್ಞರ ಮತವುಂಟು. ಈ ಮತದಬಗ್ಗೆ ಮುಂದೆ ಅವಕಾಶಾನುಸಾರ ಸ್ವತಂತ್ರವಾಗಿ ವಿಚಾರ ಮಾಡುವೆವು. ಈಗ ನಡೆಯುವ ವಿಷಯಕ್ಕೆ ಅದರಿಂದ ವಿಶೇಷ ಪ್ರಯೋಜನ ವಿಲ್ಲ. ತಮಿಳ, ತೆಲಗು, ಕನ್ನಡ ಭಾಷೆಗಳ ಪ್ರಾಚೀನ ವ್ಯಾಕರಣಕಾರರು ಸಹ ಈ ಭಾಷೆಗಳಲ್ಲೀ ಶಬ್ದಗಳನ್ನು ತತ್ಸಮ, ತದ್ಭವ, ದೇಶ್ಯ, ಅನ್ಯದೇಶ್ಯ ಎಂಬ ನಾಲ್ಕು ವಿಭಾಗಗಳಾಗಿ ಮಾಡಿ ವ್ಯವಸ್ಥೆ ಮಾಡಿರುತ್ತಾರೆ. ತತ್ಸಮ ವರ್ಗದಲ್ಲಿ ರೂಪ ಭೇದವಾಗದೆ ದ್ರಾವಿಡ ಭಾಷೆಗಳಲ್ಲಿ ಬಂದಂಥ ಶುದ್ಧ ಸಂಸ್ಕೃತ ಶಬ್ದಗಳು ಬರುತ್ತವೆ. ಈ ಶಬ್ದಗಳಿಗೆ ದ್ರಾವಿಡ ಪ್ರತ್ಯಯಗಳ ಹೊರ್ತು ಏರಡನೇ ಕಾರ್ಯಗಳೇನು ಆಗುವದಿಲ್ಲ. ತದ್ಭವ ವರ್ಗದಲ್ಲಿ ದ್ರಾವಿಡ ಜನ ಉಚ್ಚಾರವಿಶೇಷದಿಂದಲೂ ಇತರ ಹಲವು ಕಾರಣಗಳಿಂದಲೂ ಮೂಲ ಸಂಸ್ಕೃತ ರೂಪ ಕೆಟ್ಟು ಆದಂಥ ಅಪಭ್ರ ಶಗಳು ಬರುತ್ತವೆ. ದೇಶ್ಯ ವರ್ಗದಲ್ಲಿ ಸೇರಿರುವ ಶಬ್ದಗಳೆಲ್ಲ ಶುದ್ಧ ದ್ರಾವಿಡ ಶಬ್ದಗಳು. ನಾಲ್ಕನೇ ವರ್ಗದಲ್ಲಿ ಅರಬಿ, ಫಾರಸಿ, ಮುಸಲಮಾನಿ, ಇತ್ತತ್ತ ಇಂಗ್ರಜಿ, ಮುಂತಾದ ಹಿಂದುಸ್ಥಾನದ ಹೊರಗಿನ ಭಾಷೆಗಳೊಳಗಿಂದ ಬಂದಂಥ ಶಬ್ದಗಳು ಬರುತ್ತವೆ. ಇದರ ಮೇಲಿಂದ ತಿಳಿದು ಬರುವದೇನಂದರೆ, ತಮಿಳ ತೆಲಗು ಕರ್ನಾಟಕ ಭಾಷೆಗಳಲ್ಲಿ ತತ್ಸಮ ತದ್ಭವ ಶಬ್ದಗಳು ಬೇರೆ, ದೇಶ್ಯ ಶಬ್ದಗಳು ಬೇರೆ, ಎಂದು ಪ್ರಾಚೀನ ಕಾಲದಿಂದ ವ್ಯವ

ಯುಂಟು. ಇನ್ನು ತತ್ಸಮ ತದ್ಭವ ಶಬ್ದಗಳಿಗೂ ದೇಶ್ಯ ಶಬ್ದಗಳಿಗೂ ಏನಾದರು ಮೂಲ ಸಂಬಂಧವಿದೆಯೋ ಇಲ್ಲವೋ ಎಂಬ ಬಗ್ಗೆ ಈಗ ನಾವು ವಿಚಾರ ಮಾಡುವದಿಲ್ಲಂದ ಮೇಲೇ ಹೇಳಿರುತ್ತೇವೆ.

ತಮಿಳ ರಾಷ್ಟ್ರವು ದಕ್ಷಿಣ ಹಿಂದುಸ್ಥಾನದ ತೀರ ದಕ್ಷಿಣ ಮೂಲೆಯಲ್ಲಿ ಅದೆ. ಅದರ ದಕ್ಷಿಣಕ್ಕೂ ಪೂರ್ವಕ್ಕೂ ಸಮುದ್ರವು, ಉತ್ತರಕ್ಕೂ ಪಶ್ಚಿಮಕ್ಕೂ ತೆಲಗು ಕನ್ನಡ ಮುಂತಾದ ದ್ರಾವಿಡ ರಾಷ್ಟ್ರಗಳು ಉಂಟು. ಆದದರಿಂದ ತಮಿಳ ಭಾಷೆಯಲ್ಲಿ ತತ್ಸಮ ತದ್ಭವ ಶಬ್ದಗಳು ಬಹಳ ಕಡಿಮೆ, ದೇಶ್ಯ ಶಬ್ದಗಳದೇ ಸಂಖ್ಯೆಯು ಹೆಚ್ಚು. ದರೆ ತೆಲಗು ಕನ್ನಡ ರಾಷ್ಟ್ರಗಳಿಗೆ ಮಹಾರಾಷ್ಟ್ರ ಒಧಿರು ಮುಂತಾದ ಪ್ರಾಂತಗಳು ತೀರ ಹೊಂದಿರುವದರಿಂದ, ಈ ಭಾಷೆಗಳಲ್ಲಿ ತತ್ಸಮ ತದ್ಭವ ಶಬ್ದಗಳು ಬಹಳ ಸೇರಿರುತ್ತವೆ. ತತ್ಸಮ ತದ್ಭವ ಶಬ್ದಗಳಿಲ್ಲದೆ ಶುದ್ಧ ದೇಶ್ಯ ಶಬ್ದಗಳಿಂದ ಭಾಷಣ ವಾಗಲಿ, ಗ್ರಂಥರಚನೆ ಯಾಗಲಿ ಚಂದ ಕಾಣುವದಿಲ್ಲೆಂದು ತಿಳಿಯುತ್ತಾರೆ. ಮತ್ತು ಗೆ ತಿಳಿಯುವದೇನು ಸರ್ವಥೈವ ಸುಳ್ಳಲ್ಲ. ಆದದರಿಂ ಕನ್ನಡ ಭಾಷೆಯ ಜ್ಞಾನವು ಚನ್ನಾಗಿ ಆಗಬೇಕೆಂಬ ಅಪೇಕ್ಷೆಯುಳ್ಳವರು ತತ್ಸಮ ತದ್ಭವ ಶಬ್ದಗಳವ್ಯುತ್ಪತ್ತಿಯನ್ನೂ ದೇಶ್ಯ ಶಬ್ದಗಳ ವ್ಯುತ್ಪತ್ತಿಯನ್ನೂ ತಿಳಿಕೊಳ್ಳುವದು ಬಹಳ ಅವಶ್ಯವಾಗಿದೆ. ಆದದರಿಂದ ಈಗ ನಾವು ಮೊದಲು ಪ್ರಚಾರದಲ್ಲಿದ್ದಂಥ ಹಲವು ತತ್ಸಮ ತದ್ಭವ ಶಬ್ದಗಳ ಬಗ್ಗೆ ಮೊದಲು ವಿಚಾರ ಮಾಡುವ.

(೧) ಜಗತ್-ಈ ಶಬ್ದವು ಸಂಸ್ಕೃತ, ಗಮ್ ಅಂದರೆ ಹೋ

ಗುಎಂಬ ಧಾತುವಿನಿಂದ ಹೊರಟಿದೆ. ಆದದರಿಂದ 'ಜಗತ್' ಎಂದರೆ 'ಹೋಗುವದು, ನಡೆಯುವದು, ಸ್ಥಿರವಲ್ಲದದ್ದು' ಎಂಬದು ಮೂಲಾರ್ಥವು. ಮುಂದೆ ಕ್ಷಣಿಕವಾದ ಇಹಲೋಕವುಎಂಬ ಅರ್ಥದಲ್ಲಿ ಈ ಶಬ್ದವು ರೂಢವಾಯಿತು.

೨ ಜಂಗಮ— ಈ ಶಬ್ದವು 'ಗಮ್' ಅಂದರೆ ಹೋಗು ಎಂಬ ಸಂ. ಧಾತುವಿನಿಂದ ಹೊರಟಿದೆ. 'ಜಂಗಮ' ಅಂದರೆ 'ಹೋಗುವದು', ನಡೆಯುವದು. ಈ ಭೂಮಿಯಲ್ಲಿ ಯಾವತ್ತು ಸೃಷ್ಟ ಪದಾರ್ಥಗಳಲ್ಲಿ ಸ್ಥಾವರ ಜಂಗಮ ಎಂಬವೆರಡು ಸ್ವಾಭಾವಿಕ ಭೇದಗಳುಂಟು. ಚಲನ ಶಕ್ತಿಯಿಲ್ಲದ ಗಿಡ ಪಾಷಾಣ ಮುಂತಾದ ಪದಾರ್ಥಗಳೆಲ್ಲ ಸ್ಥಾವರಗಳೆನಿಸುವವು. ಚಲನ ಶಕ್ತಿಯುಳ್ಳ ಮನುಷ್ಯ ಪಶುಪಕ್ಷಿ ಮುಂತಾದವೆಲ್ಲ ಜಂಗಮಗಳು. ಲಿಂಗಾಯತ ಜನರಲ್ಲಿ ಅಯ್ಯಗಳಿಗೆ ಜಂಗಮರು ಎಂದೆನ್ನುತ್ತಾರೆ. ಆ ಶಬ್ದವಾದರೂ ಇದೇ ಅರ್ಥದ್ದು. ಅದ್ವೈತರಲ್ಲಿ ಜೀವೇಶ್ವರ ಭೇದವಿಲ್ಲ; ಆದದರಿಂದ ಅಯ್ಯಗಳೂ ಈಶ್ವ ನೂ ಒಂದೇಯೆಂದು ತಿಳಿದು ಅಯ್ಯಗಳಿಗೆ ಈಶ್ವರನ ಜಂಗಮ ಇಲ್ಲವೆ ಚರಮೂರ್ತಿಗಳು ಎಂಬ ಹೆಸರು ಕೊಟ್ಟರು.

೩ ಸಂಸಾರ— ಈ ಶಬ್ದ 'ಸೃ' ಅಂದರೆ ಹೋಗುಎಂ ಸಂ. ಧಾತುವಿನಿಂದ ಹೊರಟಿದೆ. ಆದದರಿಂದ ಬಂಡೀ ಗ ಲಿಯಂತೆ ದುಂಡಗೆ ತಿರುಗೋಣ, ಎಂಬದು ಸಂಸಾರ ಬ್ದದಮೂಲ ಅರ್ಥ. ಹಿಂದು ಜನರಲ್ಲಿ ಜೀವಕ್ಕೆ ತಾನ ಮಾಡಿದ ಪುಣ್ಯ ಪಾಪಗಳ ಮೇರೆಗೆ ಉಚ್ಚನೀಚ ಯೋ ನಿಗಳುಂಟಾಗುತ್ತವೆಂದು ತಿಳವಳಿಕೆಯದೆ. ಆದದರಿಂದ

ದು ಯೋನಿಯಿಂದ ಮತ್ತೊಂದಕ್ಕೆ, ಅಲ್ಲಿಂದ ಮತ್ತೊಂದಕ್ಕೆ ಈ ಮೇರಿಗೆ ಮುಕ್ತಿಯಾಗುವವರೆಗೂ ಜೀವದ ತಿರುಗುವದಕ್ಕೆ ಸಂಸಾರವೆಂಬ ಶಬ್ದವು ರೂಢವಾಯಿತು.

೪ ಪ್ರಪಂಚ— ಈ ಶಬ್ದವು ಪಚ್ ಅಂದರೆ ವಿಸ್ತರಿಸು, ಪಸರಿಸು, ಎಂಬ ಸಂ. ಧಾತುವಿನಿಂದ ಉಂಟಾಗಿದೆ. 'ಪ್ರಪಂಚ' ಅಂದರೆ ದೊಡ್ಡ ವಿಸ್ತಾರವು. ಈ ಜಗತ್ತಿನ ಆವಾಢವ್ಯ ವಿಸ್ತಾರಕ್ಕೆ ಈ ಶಬ್ದವು ರೂಢವಾಯಿತು. ಆದರೆ ಪ್ರತಿಯೊಬ್ಬನಿಗೆ ಜಗತ್ತಿನ ವಿಸ್ತಾರವೆಲ್ಲಾ ನೋಡಿ ಆಲೋಚನೆ ಮಾಡುವದು ಅಸಾಧ್ಯ ಕೆಲಸವಾದದರಿಂದ, ಮುಂದೆ ಬರುಬರುತ್ತಾ ತಮ್ಮತಮ್ಮ ಸಂಬಂಧದ ಭಾಗಕ್ಕಷ್ಟೇ ಪ್ರಪಂಚವೆಂಬ ಹೆಸರುಂಟಾಯಿತು. ಈಗ ನಾವು ಯಾವನೊಬ್ಬನ ಪ್ರಪಂಚವೆಂದರೆ ಆತನ ಹೆಂಡರು ಮಕ್ಕಳು, ಬಳಗದವರು, ಆಳುಮಕ್ಕಳು, ದನ ಕರ ಮುಂತಾದವನ್ನು ಮಾತ್ರತಿಳಿಯುತ್ತೇವೆ.

೫ ಕ್ರಮ—ಈ ಶಬ್ದವು ಕ್ರಮ್ ಅಂದರೆ ಹೋಗು ಎಂಬ ಸಂಸ್ಕೃತ ಧಾತುವಿನಿಂದ ಬಂದದೆ. ಮುಂದೆ ಯಾವದಾದರೊಂದು ಕೆಲಸ ಪ್ರಾರಂಭದಿಂದ ಕಡೆತನಕ ಸಾಗಿಸಿಕೊಂಡು ಹೋಗುವ ರೀತಿ ಎಂಬ ಅರ್ಥದಲ್ಲಿ ಈಶಬ್ದದ ಉಪಯೋಗವಾಯಿತು. ಯಾವದೊಂದು ಪುಸ್ತಕ ಕ್ರಮದಿಂದ ಇಲ್ಲವೆ ಯಂಥಾ ಕ್ರಮ ಓದುವದಂದದರೆ, ಒಂದು ಪುಟವಾದ ಮೇಲೆ ಒಂದು ಈ ಮೇರಿಗೆ ಮೊದಲಿನಿಂದ ಕಡೆತನಕ ಓದುವದು.

೬ ಕ್ರಾಂತಿ—ಈಶಬ್ದವಾದರೂ ಕ್ರಮ್ ಅಂದರೆಹೋಗು ಎಂಬ ಸಂಸ್ಕೃತ ಧಾತುವಿನಿಂದ ಬಂದದೆ. ಕ್ರಾಂತಿ ಯಂದ

ಗುಎಂಬ ಧಾತುವಿನಿಂದ ಹೊರಟಿದೆ. ಆದದರಿಂದ ‘ಜಗತ್’ ಎಂದರೆ ‘ಹೋಗುವದು, ನಡೆಯುವದು, ಸ್ಥಿರವಲ್ಲದದ್ದು’ ಎಂಬದು ಮೂಲಾರ್ಥವು. ಮುಂದೆ ಕ್ಷಣಿಕವಾದ ಇಹಲೋಕವುಎಂಬ ಅರ್ಥದಲ್ಲಿ ಈ ಶಬ್ದವು ರೂಢವಾಯಿತು.

೨ ಜಂಗಮ— ಈ ಶಬ್ದವು ‘ಗಮ್’ ಅಂದರೆ ಹೋಗು ಎಂಬ ಸಂ. ಧಾತುವಿನಿಂದ ಹೊರಟಿದೆ. ‘ಜಂಗಮ’ ಅಂದರೆ ‘ಹೋಗುವದು’, ನಡೆಯುವದು. ಈ ಭೂಮಿಯಲ್ಲಿ ಯಾವತ್ತು ಸೃಷ್ಟ ಪದಾರ್ಥಗಳಲ್ಲಿ ಸ್ಥಾವರ ಜಂಗಮ ಎಂಬವೆರಡು ಸ್ವಾಭಾವಿಕ ಭೇದಗಳುಂಟು. ಚಲನಶಕ್ತಿಯಿಲ್ಲದ ಗಿಡ ಪಾಷಾಣ ಮುಂತಾದ ಪದಾರ್ಥಗಳೆಲ್ಲ ಸ್ಥಾವರಗಳೆನಿಸುವವು. ಚಲನ ಶಕ್ತಿಯುಳ್ಳ ಮನುಷ್ಯ ಪಶುಪಕ್ಷಿ ಮುಂತಾದವೆಲ್ಲ ಜಂಗಮಗಳು. ಲಿಂಗಾಯತ ಜನರಲ್ಲಿ ಅಯ್ಯಗಳಿಗೆ ಜಂಗಮರು ಎಂದೆನ್ನುತ್ತಾರೆ. ಆ ಶಬ್ದವಾದರೂ ಇದೇ ಅರ್ಥದ್ದು. ಅದ್ವೈತರಲ್ಲಿ ಜೀವೇಶ್ವರ ಭೇದವಿಲ್ಲ; ಆದದರಿಂದ ಅಯ್ಯಗಳೂ ಈಶ್ವರನೂ ಒಂದೇಯೆಂದು ತಿಳಿದು ಅಯ್ಯಗಳಿಗೆ ಈಶ್ವರನ ಜಂಗಮ ಇಲ್ಲವೆ ಚರ ಮೂರ್ತಿಗಳು ಎಂಬ ಹೆಸರು ಕೊಟ್ಟರು.

೩ ಸಂಸಾರ— ಈ ಶಬ್ದ ‘ಸೃ’ ಅಂದರೆ ಹೋಗುಎಂಬ
ಸಂ. ಧಾತುವಿನಿಂದ ಹೊರಟಿದೆ. ಆದದರಿಂದ ಬಂಡೀ ಗ
ಲಿಯಂತೆ ದುಂಡಗೆ ತಿರುಗೋಣ, ಎಂಬದು ಸಂಸಾರ
ಬ್ದದಮೂಲ ಅರ್ಥ. ಹಿಂದು ಜನರಲ್ಲಿ ಜೀವಕ್ಕೆ ತಾನ
ಮಾಡಿದ ಪುಣ್ಯ ಪಾಪಗಳ ಮೇರೆಗೆ ಉಚ್ಚನೀಚ ಯೋ
ನಿಗಳುಂಟಾಗುತ್ತವೆಂದು ತಿಳುವಳಿಕೆಯಿದೆ. ಆದದರಿಂದ

ದು ಯೋನಿಯಿಂದ ಮತ್ತೊಂದಕ್ಕೆ, ಅಲ್ಲಿಂದ ಮತ್ತೊಂದಕ್ಕೆ ಈ ಮೇರಿಗೆ ಮುಕ್ತಿಯಾಗುವವರೆಗೂ ಜೀವದ ತಿರುಗುವದಕ್ಕೆ ಸಂಸಾರವೆಂಬ ಶಬ್ದವು ರೂಢವಾಯಿತು.

೪ ಪ್ರಪಂಚ— ಈ ಶಬ್ದವು ಪಚ್ ಅಂದರೆ ವಿಸ್ತರಿಸು, ಪಸರಿಸು, ಎಂಬ ಸಂ. ಧಾತುವಿನಿಂದ ಉಂಟಾಗಿದೆ. ‘ಪ್ರಪಂಚ’ ಅಂದರೆ ದೊಡ್ಡ ವಿಸ್ತಾರವು. ಈ ಜಗತ್ತಿನ ಆವಾಧವ್ಯ ವಿಸ್ತಾರಕ್ಕೆ ಈ ಶಬ್ದವು ರೂಢವಾಯಿತು. ಆದರೆ ಪ್ರತಿವೊಬ್ಬನಿಗೆ ಜಗತ್ತಿನ ವಿಸ್ತಾರವೆಲ್ಲಾ ನೋಡಿ ಆಲೋಚನೆ ಮಾಡುವದು ಅಸಾಧ್ಯ ಕೆಲಸವಾದದರಿಂದ, ಮುಂದೆ ಬರುಬರುತ್ತಾ ತಮ್ಮತಮ್ಮ ಸಂಬಂಧವ ಭಾಗಕ್ಕಷ್ಟೇ ಪ್ರಪಂಚವೆಂಬ ಹೆಸರುಂಟಾಯಿತು. ಈಗ ನಾವು ಯಾವನೊಬ್ಬನ ಪ್ರಪಂಚವೆಂದರೆ ಆತನ ಹೆಂಡರು ಮಕ್ಕಳು, ಬಳಗದವರು, ಆಳುಮಕ್ಕಳು, ದನ ಕರ ಮುಂತಾದವನ್ನು ಮಾತ್ರ ತಿಳಿಯುತ್ತೇವೆ.

೫ ಕ್ರಮ—ಈ ಶಬ್ದವು ಕ್ರಮ್ ಅಂದರೆ ಹೋಗು ಎಂಬ ಸಂಸ್ಕೃತ ಧಾತುವಿನಿಂದ ಬಂದದೆ. ಮುಂದೆ ಯಾವದಾದರೊಂದು ಕೆಲಸ ಪ್ರಾರಂಭದಿಂದ ಕಡೆತನಕ ಸಾಗಿಸಿ ಕೊಂಡು ಹೋಗುವ ರೀತಿ ಎಂಬ ಅರ್ಥದಲ್ಲಿ ಈ ಶಬ್ದದ ಉಪಯೋಗ ವಾಯಿತು. ಯಾವದೊಂದು ಪುಸ್ತಕ ಕ್ರಮದಿಂದ ಇಲ್ಲವೆ ಯಂಥಾ ಕ್ರಮ ಓದುವದಂದದರೆ, ಒಂದು ಪುಟವಾದ ಮೇಲೆ ಒಂದು ಈ ಮೇರಿಗೆ ಮೊದಲಿನಿಂದ ಕಡೆತನಕ ಓದುವದು.

೬ ಕ್ರಾಂತಿ—ಈ ಶಬ್ದವಾದರೂ ಕ್ರಮ್ ಅಂದರೆ ಹೋಗು ಎಂಬ ಸಂಸ್ಕೃತ ಧಾತುವಿನಿಂದ ಬಂದದೆ. ಕ್ರಾಂತಿ ಯಂದ

ರೆ ಹೋಗೋಣ. ಸೂರ್ಯನ ಸುತ್ತು ಪೃಥ್ವಿ ತಿರಗುವ ಲಂಬವರ್ತುಲಹಾದಿಗೆ ಕ್ರಾಂತಿವೃತ್ತ ಎಂಬ ಹೆಸರುಂಟು. ಒಬ್ಬ ಅರಸನನ್ನು ಆತನ ಪ್ರಧಾನಮಂಡಲವನ್ನು ಅಧಿಕಾರದಿಂದ ತೆಗೆದು, ಹೊಸ ಅರಸನನ್ನು ಪಟ್ಟಕ್ಕೆ ಕುಳ್ಳಿಸುವದು ರಾಜ್ಯಕ್ರಾಂತಿಯನಿಸುವದು.

೬ ಭ್ರಮ— ಈ ಶಬ್ದವು, ಭ್ರಮ್ ಅಂದರೆ ತಿರಗು ಎಂಬ ಸಂಸ್ಕೃತ ಧಾತುವಿನಿಂದ ಹುಟ್ಟಿದೆ. ಆದದರಿಂದ ಭ್ರಮ ಅಂದರೆ ತಿರಗೋಣ. ಯಾವನದಾದರೂ ತಲೆಯೊಳಗಿನ ಮದಡು ಕೆಟ್ಟು ವಿಚಾರಶಕ್ತಿ ಸ್ಥಿರವಾಗಿ ನಿಲ್ಲದೆ ನೆನೆಪುಗೆಟ್ಟು ತಲೆ ತಿರಗಹತ್ತಿದರೆ, ಅವನಿಗೆ ಭ್ರಾಂತ (ಹುಚ್ಚ) ನೆನ್ನುತ್ತಾರೆ. ಒಂದು ಪದಾರ್ಥದಲ್ಲಿ ಬುದ್ಧಿಯ ಚಂಚಲತೆಯಿಂದ ಬೇರೆಯೊಂದು ಪದಾರ್ಥದ ಭಾಸವಾದರೆ ಅದಕ್ಕೆ ಭ್ರಾಂತಿಯನ್ನುವರು. ಪಿತ್ತದಿಂದ ತಲೆತಿರಗಿ ವಾಂತಿ ಯಾದರೆ, ಅದಕ್ಕೆ ಸಹ ಭ್ರಾಂತಿಯನ್ನುವರು.

೭ ಆಲೋಚನೆ— ಈ ಶಬ್ದವು ಲೋಚ ಅಂದರೆ ನೋಡು ಎಂಬ ಸಂಸ್ಕೃತ ಧಾತುವಿನಿಂದ ಬಂದವೆ.— ಆಲೋಚನೆಯಂದರೆ ನಾಲ್ಕು ಕಡೆಗೆ ನೋಡೋಣ. ಇನ್ನು ನಾವು ಯಾವದಾದರೊಂದು ಕೆಲಸ ಮಾಡುವಾಗ ಅದಕ್ಕೆ ಅನುಕೂಲವಾಗಿಯೂ ಪ್ರತಿಕೂಲವಾಗಿಯೂ ಇರುವ ಸಂಗತಿಗಳನ್ನು ಚನಾಗಿ ನೋಡುತ್ತೇವೆ, ಅಂದರೆನು ಆಬಗ್ಗೆ ಮನಸಿನಲ್ಲಿ ಪೂರ್ಣ ವಿಚಾರಮಾಡುತ್ತೇವೆ. ಆದದರಿಂದ ಆಲೋಚನೆಯೆಂದರೆ ವಿಚಾರಮಾಡೋಣ, ವಿಚಾರವು ಎಂಬ ಅರ್ಥವುಂಟಾಯಿತು.

NOTICES AND CIRCULARS.

ನೋಟೀಸುಗಳು

—000—

ಸಾಲೇ ಮಾಸ್ತರರು ತಮ್ಮ ಸಾಲೇ ಕೆಲಸ ಮಾಡಿ ಉಳಿದ ವೇಳೆಯಲ್ಲಿ ಟಪಾಲ (ಪೋಸ್ಟ) ಕೆಲಸ ನೋಡುವದಕ್ಕೆ ಏನೂ ಪ್ರತಿಬಂಧವಿರುವದಿಲ್ಲ.

ಬೆಳಗಾಂವ. ತಾರೀಖ
೧೭ ನೇ ಜುಲಾಯಿ
೧೮೭೬

(Signed). W. A. Russell
ಎ. ಇ. ದಕ್ಷಿಣಭಾಗ.

ಸನ್ ೧೮೭೬ | ೭೭ ಇಸವೀ ನಂಬರ ೮೮೧.

ಟ್ರೇನಿಂಗ ಕಾಲೇಜ.

೧. ಟ್ರೇನಿಂಗ ಕಾಲೇಜದ ಪ್ರತಿ ವಾರ್ಷಿಕ ಸರಟಿಫಿಕೇಟ ಪರೀಕ್ಷೇಗೆ ಸನ್ ೧೮೭೬ ಇಸವೀ ಅಕ್ಟೋಬರ ತಿಂಗಳ ಎರಡನೇ ಸೋಮವಾರದ ದಿನ ಪ್ರಾರಂಭವಾಗುವದು.

೨. ಈ ವರ್ಷ ಟ್ರೇನಿಂಗ ಕಾಲೇಜ ಪ್ರವೇಶ ಪರೀಕ್ಷೆ ಯಾಗುವದಿಲ್ಲ.

ಬೆಳಗಾವ ತಾ.
೪ನೇ ಜುಲಾಯಿ.

(Signed.) W. A. Russell.
ಎ. ಇ. ದಕ್ಷಿಣಭಾಗ.

ಬೆಳಗಾಂವ ಜಿಲ್ಲೆಯೊಳಗಿನ ಯಾವತ್ತು ಸ್ಕೂಲಮಾಸ್ತರರಿಗೆ— ಡಿ॥ ಎ॥ ಇನಸ್ಪೇಕಟರ ಜಿಲ್ಹಾ ಬೆಳಗಾಂವ ವರಕಡಿಂದ ತಿಳಿಯು ಪಡಿಸುವ ದೇನಂದರೆ— ಈ ಜಿ

ಲ್ಲೆ ಯೊಳಗಿನ ಅನೇಕ ಸ್ಕೂಲ ಮಾಸ್ತರು ಅಂವು ಅ ರ್ಜಿ ಮುಂತಾದವುಗಳನ್ನು ಡೆ॥ ಎ॥ ಇನಸ್ಪೇಕಟರ ಸಾ ಹೇಬ ಬಹದ್ದೂರ ದಕ್ಷಿಣಭಾಗ ಇವರ ಕಡಿಗಾಗಲಿ, ಅಥ ವಾ ಪರ ಖಾತೇದ ವರಿಷ್ಟರ ಕಡಿಗಾಗಲಿ, ಪರಭಾರೆ ಳುಹಿಸಿದ ಉದಾಹರಣೆಗಳು ಅನೇಕಸಾರಿ ದೃಷ್ಟೋತ್ಪತ್ತಿಗೆ ಬಂದಿರುತ್ತವೆ. ಆದರೆ ಇನ್ನು ಮೇಲೆ ಯಾವತ್ತು ಸ್ಕೂಲ ಮಾಸ್ತರಜನರು ತಂಮ ಯೀ ತರದ ಕಾಗದ ಪತ್ರಗಳನ್ನಾಗಲಿ ಅಥವಾ ಡಿಪ್ಯೂಟಿಯವರು ಕೊಟ್ಟ ನಿಕಾಲೆಯ ಮೇಲೆ ಅಪೀಲುಗಳಂನಾಗಲಿ ನಮ್ಮ ಮುಖಾಂತರದಿಂದಲೆ ಡೆ॥ ಎ॥ ಇ॥ ಸಾಹೇಬ ಬಹದ್ದೂರವರ ಕಡಿಗಾಗಲಿ ಅಥವಾ ಪರ ಖಾತೇದ ವರಿಷ್ಟರ ಕಡಿಗಾಗಲಿ ಕಳುಹಿಸ ತಕ್ಕದು. ಈ ಸರಕ್ಯೂಲರದ ಮೇರಿಗೆ ನಡಿಯದವರಿಗೆ ಯೋಗ್ಯ ಶಾಸನ ಮಾಡಲಾದೀತು. ತಿಳಯೋದು. ತಾರೀಖು ೧೩ನೇ ಜೂನ ಸಂನ ೧೮೭೬ ಇಸವಿ. ಮುಕ್ಕಾಂ ಬೆಳಗಾಂವ.

(Sd.) K. N. Bhangamkar.
ಅ॥ ಡಿ॥ ಎ॥ ಇ॥ ಜಿ॥ ಬೆಳಗಾಂವ.

ಬೆಳಗಾಂವಿ ಜಿಲ್ಲೆಯೊಳಗಿನ ಯಾವತ್ತು ಸ್ಕೂಲಮಾಸ್ತರ ಹಾಂಗು ಅಶಿಷ್ಟಂಟ ಜನರಿಗೆ— ಡಿ॥ ಎ॥ ಇ॥ ಜಿ॥ ಬೆಳಗಾಂವ ಇವರಕಡಿಂದ ತಿಳಯ ಪಡಿಸುವದೇನಂದರೆ, ಸನ್ ೧೮೭೫ ಇಸವಿಯ ಜಾನೇವರಿ ತಿಂಗಳ ೧ ನೇ ತಾರೀಖಿನ ದಿವಸಾ, ಹಾಂಗು ಆನಂತರ ಈ ಖಾತೆದಲ್ಲಿ ಸೇ ದ ಯಾವತ್ತು ಸ್ಕೂಲ ಮಾಸ್ತರರು ಹಾಂಗು ಅಶಿಷ್ಟಂಟರ

(೮ ರುಪಾಯಿಪಗಾರ ಉಳ್ಳವರು ಮತ್ತು ೮ ರುಪಾಯಿಪಗಾರದಕಿಂತ ಹೆಚ್ಚಿಗೆ ಇದ್ದವರು) ಪಬ್ಲಿಕ ಸರ್ವಿಸ ಸರಟಿಫಿಕೇಟ (ಮುಲ್ಕಿ) ಪರೀಕ್ಷೆಯಲ್ಲಾಲಿಗಅಥವಾ ಟ್ರೇನಿಂಗ ಕಾಲೇಜದ ಸರಟಿಫಿಕೇಟ ಪರೀಕ್ಷೆಯಲ್ಲಾಗಲಿ ಪಾಸಾಗಿರಬೇಕು. ಸದರ ಪರೀಕ್ಷೆಯಲ್ಲಿ ಪಾಸಾಗದೆಇದ್ದವರು ಈಗಿರುವ ತಂಮ ಜಾಗೆಕ್ಕೆ ಕಾಯಂಎಂದು ಎಣಿಸಲಿಕ್ಕಿಲ್ಲ. ಹಾಂಗು ಸದರ ಪರೀಕ್ಷೆಗಳಲ್ಲಿ ಪಾಸಾದ ಜನರು ನವ್ಕ್ರಗೆ ದೊರಿಯಲಿಕ್ಕೆ ಹತ್ತುತ್ತಲೇ ಕ್ರಮೇಣ ಆ ಪರೀಕ್ಷೆಗಳನ್ನು ಕೊಡದೆ ಇದ್ದವರನ್ನು ಕೆಲಸದಿಂದ ತೆಗೆಯಲಾದೀತು. ಇದನ್ನು ತಿಳಿದು ಯಾವತ್ತು ಪರೀಕ್ಷೆಯನ್ನು ಕೊಡದೆ ಇದ್ದ ಜನರು ಆದಷ್ಟು ಮೇಹನತಮಾಡಿ ಮೇಲೆ ಬರದಿರುವ ಯಾವದಾದರೊಂದು ಪರೀಕ್ಷೆಯನ್ನು ಕೊಟ್ಟು ಸರಟಿಫಿಕೇಟ ಪಡೆಯುವ ತಜವೀಜ ಮಾಡಬೇಕು. ತಿಳಿಯೋದು ತಾರೀಖು ೨೨ ಜುಲೈ ೧೮೭೬ ಇಸವಿ ಮುಕ್ಕಾಮ ಬೆಳಗಾಂವ.

(Sd.) K. N. Bhangam kar

ಅ॥ ಡಿ॥ ಎ॥ ಇ॥ ಜೆ॥ ಬೆಳಗಾಂವ.

ಈ ನೋಟಿಸು ಯಾವತ್ತು ದಕ್ಷಿಣಭಾಗದ ಮಾಸ್ತರರಿಗೆ ಮತ್ತು ಅಸಿಷ್ಟಂಟರಿಗೆ ಲಾಗೂಅದೆ, ತಾರೀಖು ಸದರ.

(Signed.) W. A. Russell

ಎ॥ ಇನಸ್ಪೇಕ್ಟರ ದಕ್ಷಿಣಭಾಗ

CORRESPONDENCE.

ಪತ್ರವ್ಯವಹಾರವು.

ರಾ॥ ಕನ್ನಡ ವಾರಪತ್ರಿಕೆಯ ಎಡಿಟರ, ದಕ್ಷಿಣಭಾಗ
ಇವರ ಸಂನಿಧಾನಕ್ಕೆ.

ಏ, ಏ. ತಮ್ಮ ಹಸ್ತಾಂತರದಲ್ಲುದ್ಭವಿಸುವ ಸುಂದ ವಾದ ಸಂಕೆಯಲ್ಲಿ ಮುದ್ರಿಸುವದಕ್ಕೆ ಸ್ಥಳದೊರೆಯುವದೆಂದು ಅಂಗಲಾಚೆ ಬೇಡಿಕೊಳ್ಳುತ್ತೆನೆ.

„ಪದವು"

ಬಿದಿಗಿಚಂದಿರ ನಡೆಯಲಾರನೆ ಗಿರಿಯೊಳುಳದ
ನೋ॥ ಮದಗಜದ ಶಿರದೊಳೆಸೆವ ಅಂಕುಶದಾ
ನೆಯೊ॥ ೧ ॥
ಮದನು ಮೂರ್ಜಗ ಗೆಲಿದು ತಂದಿಟ್ಟ ಕುಸುಮಧ
ನುವಿದೋ॥ ಮುದದಿಶಂಭುವಿಗೇರಿಶಿದ ಕಿಂಸ
ಕುಸುಮವೋ॥ ೨॥
ಆದರ ಕನಕಕಲಶಪೆಡಿಗೆ ಛಾಯದೋರಿತೋ॥
ಮಧುರಫಲವ ಸವಿಯಬಂದ ಗಿಳಿಯಚಂಚವೋ॥ ೩॥
ಶ್ರಂಗಾರಪೊಳಗಿದೊಂದು ಮೋಮೊಂದುಬರದ
ಬೆಳ್ಳಿಪ್ರೋ॥ ಅಂಗಜತ್ರಂಗಿನಕಾಯ ಕೆಡಹಿಲಿಕ್ಕಿ
ದದೋಟಿಯೋ ॥

ಈ ಪದದನ್ನು ನನ್ನ ಅಲ್ಪಬುದ್ಧಿಗೆ ತಿಳಿದಷ್ಟು ಪ್ರಯತ್ನದಿಂದ ರಚಿಸಿದ್ದೇನೆ. ಆದರೆ ನನ್ನ ಬಂಧುಗಳಾ ಮಾಸ್ತರಜನರು ಇದೇ ಪತ್ರದ್ವಾರದಿಂದ ಕವಿತಾ ರೂ ನಿಂದ ಇದರ ಸಮರ್ಪಕ ಉತ್ತರವನ್ನು ಬರೇದು ಕಳ

ಸುವರೆಂದು ಕೋರುತ್ತೇನೆ. "ಪತ್ರಕತ್ರರಾಯರೇ,, ಪ
ವಿಸ್ತಾರದ ಬಗ್ಗೆ ಕ್ಷಮೆ ಇರಲಿ.

ಮು. ಎ. ತಾ. ರಾ. ಜಿ.
ರವಾಡ ತಾರೀಖು
೦ನೇ ಜುಲಾಯಿ ಸಂ
೮೯೬ ಇಸವಿ.

ರಾಮಚಂದ್ರ ನರಸೋ ಹೆ
ಮಾ. ಎ.

ಜಾ. ನ. ೧೧

ಮ|| ರಾ|| ರಾ|| ಕನ್ನಡ ಶಾಲಾಪತ್ರಿಕೆಯ ಎಡಿಟರ ಸನ್ನಿಧಿಗೆ

ವಿ. ವಿ. ತಮ್ಮ ಕರದ್ವಯದಿಂದುದ್ಭವಿಸುವ ಶಾಳಾಪತ್ರ ಯಲ್ಲಿ ನಾನು ವಿನಯಪೂರ್ವಕ ಕಳುಹಿಸಿದ ಶ್ಲೋಕದ ಎಲ್ಲ ಪಙ್ಕ್ತಿಗಳಿಗೆ ಸ್ಥಳ ದೊರೆಯುವದೆಂದು ಕೋರಿಕೆ ಯುಳ್ಳವನಾಗಿದ್ದೇನೆ. ತಿರಸ್ಕರಿಸಲಾಗದು.

ದಾತ್ರೇ ಕರಂಡಹೃದಯೆ ಹಿಮಗುಂ ನಿಧಾಯ।
ಸರ್ವೇಷಯತ್ಯಭಿನವಪ್ರಣಯಂ ನಿರೀಕ್ಷ್ಯ||
ಕಾಂತ್ರೆ ಪರತ್ರ ಚತುರಾಸ್ಯನಸಾಮಣೀಂಸಾ।
ನಿಕ್ಷಿಪ್ಯ ತತ್ರ ತದಬುದ್ಧಿಮಪಾಚಕಾರ ||೧||

ಈ ಶ್ಲೋಕದ ಶಬ್ದಾರ್ಥವು ನಾನು ಅಲ್ಪ ಬುದ್ಧಿಗೆ ಯದಕಾರಣ, ನಮ್ಮ ಬಂಧುಗಳಾದ ಮಾಸ್ತರರಾಗಲಿ ಥವಾ ವಿದ್ವಜನರಾಗಲಿ ಯಿದರ ಉತ್ತರವನ್ನು ಇದೇ ತ್ರದ್ವಾರದಿಂದಲೆ ನನಗೆಬಂದ ಭಾವಾರ್ಥದ ಸಂಶಯವ ದೂರಮಾಡ್ಯಾರೆಂದು ಅಪೇಕ್ಷಿಸುತ್ತೇನೆ.

ತಾರೀಖು ೮ ಜುಲೈ ಸನ್ ೧೮೭೬ ಇ॥ ಮುಂ॥ ಶಿರಗೋಳ ತಾಲ್ಲೂಕ ನವಲಗುಂದ ಜಿಲ್ಲಾ ಧಾರವಾಡ.

ಅನಂತ ವಾಸುದೇವ ತಡಕೋಡಕರ ಹೆಡ್ಡ ಮಾಸ್ತರ.

ಮ. ರಾ. ರಾ. ಮಠಕತ್ರ ಕರ್ತರಾದ ಯಡಿಟರರ ಚರಣ ಸಂನಿಧಾನಕ್ಕೆ ವಿನಂತಿ ವಿಜ್ಞಾಪನ: ಮಾಡಿಬೇಡಿಕೊಳ್ಳುವದೇನಂದರೆ; ಕೆಳಗೆ ಬರದ ನಾಲ್ಕು ಪಂಕ್ತಿಗಳಿಗೆ ತಂಮ ಕರಕಮಲದಲ್ಲಿ ಉದ್ಭವಿಸುವ ಶಾಲಾಪತ್ರದಲ್ಲಿ ಸ್ಥಳ ಕೊಟ್ಟು ಛಾಪಿಸಿ ಪ್ರಸಿದ್ಧ ಮಾಡುವಿರೆಂದು ಅಪೇಕ್ಷಿಸುತ್ತೇನೆ.

ಲೆಖ್ಖವು.

(೧) ಒಂದು ಗ್ರಾಮದಲ್ಲಿ ಐದು ದೇವಾಲಯಗಳಿದ್ದವು. ಅಲ್ಲಿಗೆ ಒಬ್ಬ* ಪೂಜಾರಿಯು ಕೆಲವು ಹೂವುಗಳಂನು ತೆಗೆದುಕೊಂಡು (೧) ಮೊದಲನೇ ದೇವಾಲಯಕ್ಕೆ ಹೋಗಿ ಅಲ್ಲಿ ಮೊದಲು ಏನಕೇ ಹೂವುಗಳಂನು ಏರಿಸಿ ಹಿಂಗೆ ಪ್ರಾರ್ಥನೇ ಮಾಡಿದನಲ್ಲಾ; ನಂನ ಹತ್ತರ ಶಿಲ್ಕು ಉಳಿದ ಪುಷ್ಪಗಳು ಒಂದಕ್ಕೆ ಎರಡು ಆಗಲಿ. ಅಂದು ಅದರಂತೆಯಾಗಲು ಅವುಗಳನ್ನು ಎರಡನೇ ದೇವಾಲಯಕ್ಕೆ ವೈದು ಅಲ್ಲಿ ಮೊದಲಿನ ದೇವಾಲಯದಲ್ಲಿ ಏರಸಿದಷ್ಟೇ ಹೂವುಗಳು ಏರಸಿ ಬಾಕಿ ಉಳಿದ ಪುಷ್ಪಗಳು ಒಂದಕ್ಕೆ ಏಳಾಗಲಿ ಅಂದನು. ಅದರಂತೆಯಾಗಲು ಆವುಗಳನ್ನು ಮೂರನೆಯ ದೇವಾಲಯಕ್ಕೆ ವೈದು ಅಲ್ಲಿ ಮೊದಲಿನ ದೇವಾಲಯದಲಿ ಏರಸಿದಷ್ಟೇ ಏರಿಸಿದಷ್ಟ

ಹುವುಗನ್ನು ಏರಿಸಿ ಬಾಕಿ ಉಳಿದ ಹುವುಗಳು ಒಂದಕ್ಕೆ ಮೂರ ಆಗಲಿ ಅಂದನು. ಅದರಂತೆಯಾಗಲು ಅವುಗಳಂನು ನಾಲ್ಕನೇ ದೇವಾಲಯಕ್ಕೆ ವೈದು ಅಲ್ಲ ಮೊದಲಿನಷ್ಟು ಏರಸಿ ಬಾಕಿ ಉಳಿದಪುಷ್ಪಗಳು ಒಂದಕ್ಕೆ ಐದು ಆಗಲಿ ಅಂದನು. ಅದೇರಂತೆಯಾಗಲು ಅವುಗಳಂನ ಐದನೇ ದೇವಾಲಯಕ್ಕೆ ವೈದು ಅಲ್ಲಿ ಮೊದಲಿನೇ ದೇವಾಲಯದಲ್ಲಿ ಏರಸಿದಷ್ಟೇ ಏರಸಲಾಗಿ ಪುಷ್ಪಗಳು ಬಾಕಿ ಉಳಿಯಲಿಲ್ಲಾ. ಆದರೇ ಆವನು ಮನೆಯಿಂದ ಮೊದಲು ತಂದ ಪುಷ್ಪಗಳೆಷ್ಟು ಹಾಂಗು ಏರಿಸಿದಪುಷ್ಪಗಳೆಷ್ಟು?

(೨) ಒಂದು ಆನೆಯು ನಿತ್ಯದಲಿ ತೊಂಭತ್ತೆರಡು ಹರದಾರಿ ನಡಿಯುತ್ತಾ ಮದ್ರಾಸದಿಂದ ಬಂಗಾಲಕ್ಕೆ ಹೋಯಿತು. ಮತ್ತು ಅದೇ ಮಾರ್ಗದಿಂದ ಒಂದು ಒಂಟೇಯು ಮದ್ರಾಸದಿಂದ ಅದೇ ದಿವಸ ಬಂಗಾಲ ದೇಶಕ್ಕೆ ಪ್ರಥಮದಿವಸ ಒಂದು ಹರದಾರಿ ನಡೆದು ಯೆರಡನೇ ದಿವಸ ವಿಶ್ರಾಂತಿ ತಕೊಂಡು, ಮೂರನೇ ದಿವಸ ಯೆರಡು ಹರದಾರಿ ನಡೆದು ನಾಲ್ಕನೇ ದಿವಸ ವಿಶ್ರಾಂತಿ ತಕೊಂಡು, ಇದೇ ಪ್ರಕಾರ ಒಂದುದಿನಸ ಒಂದೊಂದು ಹರದಾರಿ ಹೆಚ್ಚು ನಡಿಯುತ್ತಾ, ಒಂದು ದಿವಸ ವಿಶ್ರಾಂತಿ ತಕ್ಕೊಳ್ಳುತ್ತಾ, ಹೋಯಿತು. ಆದರೆ ಸದರ ಆನೆಗೆ ಒಂಟಿಯು ಯೆಷ್ಟು ದಿವಸಕ್ಕೆ ಹೋಗಿ ಕೂಡಿತು? .. .. ಈ ಲೆಖ್ಖಗಳನ್ನು ನಮ್ಮ ಬಾಂಧವರಾದ ಮಾಸ್ತರರೂ ಹಾಂಗು ವಿದ್ವಾನ ಜನರು ರೀವಾರ ಮಾಡಿ ತಿಳಸಿ, ನನ್ನ ಕಾಂಕ್ಷೆಯನ್ನು ಕೈಗೂಡಿಸುವರೆಂದು ಇಛ್ಛೈಸುತ್ತೇನೆ. ಪತ್ರವಿಸ್ತಾರಕ್ಕೆ ಕ್ಷಮೆ ಯಿರಬೇಕು .. .. : .. ..

ತಾರೀಕ ೨೦ ಜೂನ ಸನ್ನ ೧೮೭೬ ಇ. ಬೆಳಗಾಂವ ಜಿ. ಪರಸಗಡ ತಾ. ಬೈಕಿ ಮೋಜೆ ಸಂಗ್ರಾಶಿ ಕೊಪ್ಪ }
ಸೈಯದಶಾ ಬುಡ್ಡೇಶಾ ಧ
ರವಾಡಕನ್ನಡಬ್ರಾಂಚಸಾ
ಸ್ಕೂಲ ಮಾಸ್ತರ, ಸಂಗ
ಸಿಕೊಪ್ಪ, ತಾಲೂಕ ಪರಸಗ

A SHORT ACCOUNT OF BANAVASI.

ಬನವಸಿಯು ವೃತ್ತಾಂತವು.

ಈ ಸ್ಥಳವು ಉತ್ತರಕಾನಡಾ ಜಿಲ್ಲೆಯಲ್ಲಿ ವರದ ನದಿಯ ತೀರದಲ್ಲಿ ಅದೆ. ಇದನ್ನು ಭರತಖಂಡದೊಳ ನ ಕಾಶೀ ರಾಮೇಶ್ವರ ಕನ್ಯಾಕುಮಾರಿ ಮುಂತಾದ ಮಹಾಕ್ಷೇತ್ರಗಳೊಳಗೆ ಎಣಿಸುತ್ತಾರೆ. ವರದಾ ನದಿಯು ಮೈಸೂರ ಸೀಮೆಯಲ್ಲಿ ಸಾಗರ ತಾಲೂಕಿನಲ್ಲಿ ಇಕ್ಕೇರಿಯ ಹತ್ತರ ಹುಟ್ಟಿ, ಮೊದಲು ಉತ್ತರಕ್ಕೆ ಮುಂದೆ ಪೂರ್ವಕ್ಕೆ ಹರಿದು, ತುಂಗಭದ್ರಾ ನದಿಗೆ ಕೂಡುತ್ತದೆ. ಬನವಾಸಿಗೆ ಪ್ರಾಚೀನಕಾಲದಲ್ಲಿ ವೈಜಯಂತಿ ಇಲ್ಲವೆ ಜಯಂತಿಪುರ ಎಂಬ ಹೆಸರಿತ್ತು.

ಬನವಾಸಿಯು ಪೂರ್ವ ಉತ್ತರ ದಕ್ಷಿಣ ಈ ಮೂರು ದಿಕ್ಕುಗಳಿಗೂ ಒಂದು ಹರದಾರೀ ಮೇಲೆ ಮೈಸೂರ ಸೀಮೆಯದೆ. ಇಲ್ಲಿಂದ ಸುಮಾರು ೪ ಹರದಾರಿಯ ಮೇಲೆ ಈಶಾನ್ಯ ದಿಕ್ಕಿಗೆ ಬೆಳಗಾಂವ ಶಿರಾಳಕೊಪ್ಪ ಎಂಬ ಎ ಡು ಬಹಳ ಪ್ರಾಚೀನ ಸಂಸ್ಥಾನಗಳಿದ್ದವು. ಇಲ್ಲಿ ಈ ಗ್ಯೂ ಹಲವು ಪ್ರಾಚೀನ ಶಿಲಾಲೇಖಗಳೂ ಅಸಂಖ್ಯ ಸು ದರ ಮೂರ್ತಿಗಳೂ ಉಂಟು. ಈ ಮೂರ್ತಿಗಳಲ್ಲಿ ಶೋಭೀ ಭಿನ್ನಭಿನ್ನವಾಗಿರುತ್ತವೆ. ಬನವಾಸಿಯಿಂದ ಪ್ರ

ರ್ವಕ್ಕೆ ೪ ಹರದಾರಿಯ ಮೇಲೆ ಕೈಟಭೇಶ್ವರ ಎಂಬ ದೇವಸ್ಥಾನವು ಅದೆ. ಈ ದೇವಸ್ಥಾನಕ್ಕೆ ಮೈಸೂರ ಧೊರೆಯ ಕಡೆಯಿಂದ ನೆಮಣೂಕು ಸಲ್ಲುತ್ತದೆ. ದಕ್ಷಿಣಕ್ಕೆ ಚಂದ್ರ ಗುತ್ತಿಯ ಗುಡ್ಡದಮೇಲೆ ರೇಣುಕಾ ದೇವಸ್ಥಾನವದೆ. ಇಲ್ಲಿ ಕೀರ್ತಿವರ್ಮ ಅರಸರ ಕಾಲದಿಂದ ಟೀಪು ಸುಲತಾನ ಕಾರಕಿರ್ದಿಯ ಕೊನೆವರೆಗೆ ಕೋಟೆಇದ್ದು ಅಲ್ಲಿ ಅಧಿಕಾರಿಗಳು ಇರುತ್ತಿದರು. ಈ ಚಂದ್ರಗುತ್ತೀ ರೇಣುಕಾ ದೇವಸ್ಥಾನಕ್ಕೆ ವಿನಿಯೋಗಕ್ಕಾಗಿ ಮೈಸೂರ ರಾಜರು ನೇಮಣೂಕು ಮಾಡಿ ಕೊಟ್ಟಿದ್ದಾರೆ. ಬೆಳಗಾಂವಜಿಲ್ಲೆಯಲ್ಲಿ ಸವದತ್ತಿ ತಾಲೂಕಿನಲ್ಲಿ ಗುಡ್ಡದ ಎಲ್ಲಮ್ಮನಿಗೆ ನಡೆಕೊಳ್ಳುವಂತೆ, ಈ ದೇವಸ್ಥಾನಕ್ಕಾದರೂ ಬಹಳ ಜನರು ನಡೆಕೊಳ್ಳುತ್ತಾರೆ. ಪ್ರತಿವರ್ಷ ಇಲ್ಲಿ ದೊಡ್ಡ ಜಾತ್ರೆಯು ನೆರೆಯುತ್ತದೆ. ಬನವಾಸಿಯಿಂದ ಪಶ್ಚಿಮಕ್ಕೆ ಸೋದೆಯಲ್ಲಿ ವಾದಿ ರಾಜಸ್ವಾಮಿಯ ಮಠ, ಬಹಳ ಪ್ರಸಿದ್ಧವದೆ. ಈ ಮಠಕ್ಕೆ ವೈಷ್ಣವ ಬ್ರಾಹ್ಮಣರು ನಡೆಕೊಳ್ಳುವದು ಬಹಳ. ಬನವಾಸಿಯಲ್ಲಿ ಹಾಗೂ ಅವರ ಸುತ್ತುಮುತ್ತು ಹೈಗ ಬ್ರಾಹ್ಮಣರ ವಸತಿ ವಿಶೇಷ. ಅವರ ತರುವಾಯ ಲಿಂಗಾಯತರು, ಮಲನರು, ಆರೇರು (ಮರಾಠೆಯರು), ಮುಸಲಮಾನರು ಉಂಟು. ಬನವಾಸಿಯ ಸುತ್ತುಮುತ್ತು ಬತ್ತ, ಯಾಲಕ್ಕೆ, ಮೆಣಸು, ಅಡಿಕೆ ಬಹಳ ಬೆಳೆಯುತ್ತವೆ. ತೋಟಿಗಳಲ್ಲಿ ಈ ಪದಾರ್ಥಗಳ ಸಾಗುವಳಿಯನ್ನು ಹವಿಗ ಬ್ರಾಹ್ಮಣರು ಸ್ವತ: ಮಾಡುತ್ತಾರೆ.

ಬನವಾಸಿಯಲ್ಲಿ ದಕ್ಷಿಣ ದೇಶದಲ್ಲಿ ಪ್ರಸಿದ್ಧವಾದ ಮಧುಕೇಶ್ವರ ಎಂಬ ವಿಷ್ಣುಸ್ಥಾಪಿತ ಲಿಂಗವದೆ. ಈ ಸ್ಥ

ಳದಬಗ್ಗೆ ಸಹ್ಯಾದ್ರಿ ಖಂಡದಲ್ಲಿ ಕೆಲವು ವರ್ಣನೆ ಕೊಟ್ಟಿ
ರುತ್ತದೆ. ಅದನ್ನು ಸಂಕ್ಷೇಪದಿಂದ ಹೇಳುತ್ತೇವೆ.

ಹಿಂದಕ್ಕೆ ಕೃತಯುಗದಲ್ಲಿ ರೈವತಕ ಮನುವಿನ ಕಾಲದ
ಲ್ಲಿ ಸುಧಾ ಎಂಬ ರಾಕ್ಷಸನು ಅವನಿಯನ್ನು ಆಳುತ್ತಿರಲಾ
ಗಿ ಶುಕ್ರನವರ ಪ್ರದಾನದಿಂದ ಆ ರಾಜನಿಗೆ ಮಧು ಕೈಟಭ
ಎಂಬ ಇಬರು ಪುತ್ರರು ಹುಟ್ಟಿದರು. ಮಧು ಎಂಬವನು
ಬನವಾಸಿಯಲ್ಲಿ ಮಧುಕೇಶ್ವರ ಎಂಬ ಲ್ಲಿಂಗವನ್ನು,ಕೈಟ
ಭನು ಕುಬಟೂರಬಲ್ಲಿ ಕೈಟಭೇಶ್ವರ ಎಂಬ ಲಿಂಗವನ್ನು
ಸ್ಥಾಪಿಸಿ, ಪೂಜೆಮಾಡಿ ಶಿವನಿಂದ ವರ ಪಡೆದು ತ್ರೈಲೋ
ಕ್ಯಕ್ಕೆಲ್ಲ ಅಜಿಂಕ್ಯರಾದರು. ವಿಷ್ಣುವಿನ ದೇವಾಲಯಗಳ
ನ್ನು ಮುರಿದು ಹಾಕಿದರು. ವಿಷ್ಣು ಭಕ್ತರಿಗೆ ಬಹಳ ಪೀ
ಡೆ ಮಾಡಹತ್ತಿದರು. ಮುಂದೆ ಈ ಸುದ್ದಿಯು ನಾರದನ
ಮುಖದಿಂದ ಶಿವನಿಗೆ ತಿಳಿಯಿತು. ಆಗ ಆತನು ವಿಷ್ಣುವಿಗ
ಈ ದೈತ್ಯರನ್ನು ಸಂಹರಿಸಿ ಕೈಲಾಸಕ್ಕೆ ತಕ್ಕೊಂಡುಬಾ
ಎಂದು ಅಪ್ಪಣೆ ಮಾಡಿದನು. ಆ ಮೇರೆಗೆ ವಿಷ್ಣುವು ಅ
ರನ್ನು ಕೊಂದು ಕೈಲಾಸಕ್ಕೆ ಒಯ್ದಾಗ ಪರಮೇಶ್ವರನ
ಇವರು ಈಗ ಇಲ್ಲಿ ಇರಲಿಕ್ಕೆ ಯೋಗ್ಯರಲ್ಲ. ಇನ್ನೊ
ಮ್ಮೆ ನಿನ್ನ ಕರ್ಣದಿಂದ ಹುಟ್ಟಿ, ನಿನ್ನ ಕೈಯಿಂದಲೇ
ಮರಣ ಹೊಂದಿ ಕೈಲಾಸಕ್ಕೆ ಬಂದರೆ ಶಿವಪ್ರಮಥ ಗಣಗ
ಳಲ್ಲಿ ಶೇರುವರುಎಂದು ಹೇಳಿದನು. ಮುಂದೆ ಪ್ರಲಯ
ಸಮುದ್ರದಲ್ಲಿ ಮಹಾವಿಷ್ಣುವು ವಟಪತ್ರದಮೇಲೆ ಮ
ಗಿರುವಾಗ ಆತನ ಕರ್ಣದಿಂದ ಮಧುಕೈಟಭರು ಹುಟ್ಟಿ
ತಾವು ಪೂರ್ವ ಜನ್ಮದಲ್ಲಿ ಸ್ಥಾಪಿಸಿದ ಲಿಂಗವು ಜ್ಯೋತಿ
ರ್ಮಯ ಸ್ವರೂಪವಾಗಿರುವದನ್ನು ಕಂಡು, ಆರಾಧನೆ ಮಾ

ದ ವರ ಪಡೆದು ಮೂರು ಲೋಕಗಳಲ್ಲಿ ಅಜಿಂಕ್ಯರಾದರು. ಬಳಿಕ ಬ್ರಹ್ಮನು ನಿರ್ಮಾಣ ಮಾಡಿದ ಸೃಷ್ಟಿಗೆ ವಿಘಾತ ಮಾಡಹತ್ತಿದರು. ಅದನ್ನು ಕಂಡು ಕ್ರೋಧಬಂದು ಮಹಾ ವಿಷ್ಣುವು ಅವರೊಡನೆ ದಿವ್ಯಮಾನದಿಂದ ಸಹಸ್ರ ವರ್ಷ ಪರ್ಯಂತರ ಯುದ್ಧ ಮಾಡಿದಾಗ್ಯೂ ಅವರು ಸಾಯಲಿಲ್ಲ. ಕಡೆಗೆ ಮೋಸದಿಂದ ಅವರನ್ನು ಕೊಂದನು. ಸಾಯುವಾಗ ಅವರಿಬ್ಬರೂ ತಾವು ಪೂಜಿಸಿದ ಲಿಂಗಗಳು ಜಗತ್ತಿನಲ್ಲಿ ಅಕ್ಷಯವಾಗಿ ಇರಬೇಕೆಂದು ಪ್ರಾರ್ಥನೆ ಮಾಡಿದರು, ಆ ಮೇರೆಗೆ ವಿಷ್ಣುವು ಬನವಾಸಿಯಲ್ಲಿ ಮಧುಕೇಶ್ವರ ಲಿಂಗವನು, ಕುಬಟೂರದಲ್ಲಿ ಕೈಠಭೇಶ್ವರ ಲಿಂಗವನ್ನು ಸ್ಥಾಪಿಸಿ, ತಾನು ಬನವಾಸೀ ಕ್ಷೇತ್ರದ ಉತ್ತರ ದಿಗ್ಭಾಗದಲ್ಲಿ ಸಂಹಾರ ಚಕ್ರವನ್ನು ಧರಿಸಿ ನಿಂತುಕೊಂಡನು. ಈ ಮೂರ್ತಿಗೆ ಆದಿಮಾಧವ ಎಂಬ ಹೆಸರುಂಟು. ಇದು ಒಂದು ಪುರುಷ ಪ್ರಮಾಣದ್ದು ಬಹಳ ಸೋಜಿಗವಾಗಿದೆ.

ಕಲಿಯುಗದಲ್ಲಿ ಪರೀಕ್ಷಿತರಾಯನಾರಭ್ಯ ನಂದನಾರಿಯಪರಿಯಂತರ ಅರಸರು ಏಕಛತ್ರಾಧಿಪತಿಗಳು ಆಗಿ ಹೋದರು. ನಂದನಾರಿಯ ತರುವಾಯ ಕ್ಷತ್ರಿಯರ ಕುಲಗಳು ಲಯ ಹೊಂದಿದವು. ದೇಶದಲ್ಲೆಲ್ಲ ಅರಾಜಕವಾಗಿ ಜನರು ತಮ್ಮ ತಮ್ಮ ಇಚ್ಛಾನುಸಾರವಾಗಿ ನಡೆಯಹತ್ತೀದರು. ಹೀಗೆ ಕೆಲವುಕಾಲ ಹೋದಬಳಿಕ ತ್ರಿನೇತ್ರ ಕದಂಬನುನು ಹುಟ್ಟಿದನು. ಈತನು ಶಿವನ ವರಪ್ರದಾನದಿಂದ ಮಹಾ ಪ್ರತಾಪಶಾಲಿಯಾಗಿ ಅಖಿಲ ಭೂಮಂಡಲವನ್ನು ಜಯಿಸಿ, ೨೨ ಸಿಂಹಾಸನಗಳನ್ನು ಸ್ಥಾಪಿಸಿ, ಬನವಾಸಿಯ

ಲ್ಲಿ ತನ್ನ ಮುಖ್ಯಸಿಂಹಾಸನವನ್ನು ಮಾಡಿಕೊಂಡು ಮಧುಕೇಶ್ವರನ ಸೇವೆಯಲ್ಲಿ ತತ್ಪರನಾಗಿದ್ದನು. ತ್ರಿನೇತ್ರ ಕದಂಬನು ಅನೇಕ ದೊಡ್ಡ ಕಾರ್ಯಗಳನ್ನು ಮಾಡಿದನು. ಇವನು ಕದಂಬೇಶ್ವರ ಎಂಬ ಹೊಸ ದೇವಾಯತನವನ್ನು ಕಟ್ಟಿಸಿದನು.

ಇವನ ತರುವಾಯ ಕದಂಬ ವಂಶದ ರಾಜ್ಯವು ಬರ್ಬರ ರಾಯರ ಸ್ವಾಧೀನವಾಯಿತು. ಈ ಬರ್ಬರರು ವಿಜಯಿ ಶಿಕಂದರನ ಅನುಯಾಯಿಗಳಾದ ಗ್ರಿಕ ಇಲ್ಲವೆ ಮಿಸರ ಜನರು ಇರಬಹುದೆಂದು ತರ್ಕವದೆ. ಈ ಬರ್ಬರ ವಂಶದ ರಾಯರ ಕಾಲದಲ್ಲಿ ದೇವಸ್ಥಾನದ ನಿಯೋಗವು ಕಡಿಮೆಯಾಯಿತು. ಮುಂದೆ ಕೆಲವು ಕಾಲದಮೇಲೆ ಬರ್ಬರರ ರಾಜ್ಯವು ಹೋಗಿ ತಿರಿಗಿ ಕದಂಬ ವಂಶಜರು ಆಳಹತ್ತಿದರು. ಕದಂಬ ವಂಶದ ಕೀರ್ತಿವರ್ಮನೆಂಬವನು ಶಾಲಿವಾಹನ ಶಕ ೯೯೦ ನೇ ಕೀಲಕ ಸಂವತ್ಸರದ ಚೈತ್ರ ಶುದ್ಧ ೧೫ ಯಲ್ಲಿ ಮಧುಕೇಶ್ವರನ ಗರ್ಭಗುಡಿಯ ಹೊರಗೆ ಸುಮಾರು ೨೫ ಫೂಟು ಉದ್ದ, ೨೦ ಫೂಟು ಅಗಲ ಶಿಲೆಗಳಿಂದ ಚಂದ್ರಶಾಲೆಯನ್ನು ಕಟ್ಟಿಸಿ, ಆ ಬಗ್ಗೆ ಬರೆದಿಟ್ಟ ಶಿಲಾಲೇಖವು ಇಂದಿಗೂ ಉಂಟು. ಈ ಕೆಲಸಕ್ಕೆ ಬಹಳ ದ್ರವ್ಯವು ಹತ್ತಿರ ಬಹುದೆಂದು ಕಂಡುಬರುತ್ತದೆ. ಈ ಅರಸನ ಕಾಲದಲ್ಲಿ ಈ ದೇವಾಲಯಕ್ಕೆ ೧೦,೦೦೦ ರೂಪಾಯಿ ನೆಮಣೂಕು ಇತ್ತಂತೆ.

ಶಾಲಿವಾಹನ ಶಕ ೧೨೯೦ ಕೀಲಕ ಸಂತ್ಸರದ ಚೈತ್ರ ಶುದ್ಧದಲ್ಲಿ ಬುಕ್ಕ ಮಹಾರಾಜನಿಗೆ ಆನೇಗುಂದಿಯ ಪಟ್ಟವಾಯಿತು. ಆಗ ತನ್ನ ಮನೋರಥ ಸಿದ್ಧಿ ಆದದರಿಂದ

ತವನು ಅಪ್ಪಣೆಮಾಡಿ ಬನವಾಸಿಪುರದಲ್ಲಿ ವೀರಭದ್ರ ದೇವಸ್ಥಾನವನ್ನು ಕಟ್ಟಿಸಿದನು. ಆದೇ ಸಂವತ್ಸರದ ವೈಶಾಖ ಬಹುಳ ೩೦ ಸೋಮವಾರದಲ್ಲಿ ತಡಗೋಡ ಗ್ರಾಮವನ್ನು ಮಧುಕೇಶ್ವರ ದೇವರಿಗೆ ಉಂಬಳಿ ಹಾಕಿಕೊಟ್ಟನು. ಈ ವಿಷಯದಲ್ಲಿ ಶಿಲಾಲೇಖಗಳು ಉಂಟು. ಇದೇ ವರ್ಷದ ಆಷಾಢ ಶುದ್ಧ ೧ ಆದಿತ್ಯವಾರದಲ್ಲಿ, ಇದೇ ಬುಕ್ಕರಾಯನು ತಿರುಮಲ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿಸಿ ನಾಲ್ಕು ಗ್ರಾಮಗಳನ್ನು ಉಂಬಳಿ ಕೊಟ್ಟನು ಎಂಬ ವಿಷಯದಲ್ಲಿಯೂ ಶಿಲಾಲೆಖವುಂಟು. ಶಕ ೧೩೦೭ ಕ್ರೋಧನ ಸಂವತ್ಸರದಲ್ಲಿ ತ್ರ್ಯಂಬಕರಾಯನು ಅಷ್ಟದಿಕ್ಪಾಲಕರ ಸ್ಥಾಪನೆ ಮಾಡಿದನು. ಶಕೆ ೧೪೩೪ ನೇ ಪರಿಧಾವಿ ಸಂವತ್ಸರದ ಶ್ರಾವಣ ಶುದ್ಧ ೧ ಶುಕ್ರವಾರ ದಿವಸ, ಆನೆಗುಂದೀ ಸದಾಶಿವರಾಯನ ಅಪ್ಪಣೇ ಮೇಲಿಂದ ಚಂದ್ರಗುತ್ತಿ ದುರ್ಗ ಆಳುವ ವೇಂಕಟಾದ್ರಿ ರಾಜಯ್ಯನನು ನಾರಸಿಂಹ ದೇವರಸ್ಥಾಪನೆಮಾಡಿ ದುರ್ಗಾದೇವಿಯ ಶಜ್ಜಾಗೃಹವನ್ನು ಕಟ್ಟಿಸಿದನು.

ಆನೇಗುಂದಿಯ ರಾಜ್ಯವು ಸಿಥಿಲವಾದನಂತರ ಚಂದಗುತ್ತಿದುರ್ಗವನ್ನಾಳುವ ವೇಂಕಟಾದ್ರಿರಾಜಯ್ಯನ ಕಾರ್ಯಕರ್ತನಾದ ಆರಗಪ್ಪನಾಯಕನು ಸ್ವಾದೇ ಸಂಸ್ಥಾನದಲ್ಲಿ ತನ್ನ ಸಿಂಹಾಸನವನ್ನು ಸ್ಥಾಪನೆಮಾಡಿದನು. ಇವನ ಮಗನಾದ ಹಂಪೆರಾಯನು ಗೋವೆ ಚಂದ್ರಗುತ್ತಿಯಲ್ಲಿ ತನ್ನ ದೊಂದು ಹೊಸರಾಜ್ಯ ಸ್ಥಾಪಿಸಿದನು. ಈ ಸ್ವಾದಿಯ ಸಂಸ್ಥಾನದವರು ಪೂರ್ವದಲ್ಲಿ ಕೀಳ ಜಾತಿಯವರಾಗಿದ್ದರು. ಅವರಲ್ಲಿ ಈ ಮಧುಕೇಶ್ವರ ದೇವರ ವರದಿಂದ ಪುತ್ರೋತ್ಪತ್ತಿ ದರಿಂದ ಆತನ

ಹೆಸರು ಮಧುಲಿಂಗ ಎಂತ ಇಟ್ಟು, ಶಾಪ್ತ ದೀಕ್ಷಪಡೆದು ಲಿಂ
ಗ ಧಾರಣವನ್ನು ಮಾಡಿದರು. ಆದ್ದರಿಂದ ಇವರಿಗೆ ಮ
ವರು ಎಂಬ ಹೆಸರು ಬಂತ್ತು. ಬನವಾಸಿಯ ಸುತ್ತು ಮು
ತ್ತಲು ಈ ಕುಲದ ಜನರು ಬಹಳ. ಅವರಲ್ಲಿ ಕೆಲವರು
ಸ್ವಾದಿಯ ಅರಸರಿಗೆ ಗೋತ್ರಜನರು, ಅಪ್ತರು ಉಂಟು.
ಬೀಳಗೀ ಅರಸರಿಗೆ ಸಹ ಮಲವರದೇ ಹೆಣ್ಣು ಆಗಿದೆ.

ಶಾಲಿವಾಹನ ಶಕ ೧೪೯೧ನೇ ಪ್ರಜೋತ್ಪತ್ತಿ ಸಂವತ್ಸ
ದ ವೈಶಾಖ ಬಹುಳ ಮಂಗಲವಾರ ದಿನ ಈ ಅರಸಪ್ಪನಾ
ಯಕನ ಮಗಳು ಅರಸಾದೇವಿಯು ನಾರಸಿಂಹ ದೇವರಿ
ವರದಕೊಪ್ಪ ಎಂಬ ಗ್ರಾಮವನ್ನು ಉಂಬಳಿ ಕೊಟ್ಟಳ
ಎಂಬ ಬಗ್ಗೆ ಶಿಲಾ ಲೇಖವದೆ. ಶಕೆ ೧೫೨೧ ವಿಳಂಬಿ ಸಂವ
ರದ ಶ್ರಾವಣ ಶುದ್ಧ ೫ ಯಲ್ಲಿ ಅರಸಪ್ಪ ನಾಯಿಕನು ಬ
ವಾಸಿ ಮೊದಲಾದ ೨೫ ಗ್ರಾಮಗಳನ್ನು ಉಂಬಳಿಯಾ
ಕೊಟ್ಟ ಬಗ್ಗೆ ಶಿಲಾಲೇಖವದೆ. ಇವನ ತರುವಾಯ ರಾಮ
ಚಂದ್ರರಾಯನು ಧ್ವಜಸ್ತಂಭ ಸ್ಥಾಪನೆ ಮಾಡಿದನು. ಈ
ಧ್ವಜಸ್ತಂಭವು ಒಂದೇಕಲ್ಲಾಗಿ ೩೫ ಫೂಟು ಎತ್ತರವದೆ
ಈ ರಾಮಚಂದ್ರನಾಯಕನು ದೇವರಿಗೆ ಒಂದು ಹೊಸ ರಥ
ನ್ನು ಕಟ್ಟಿಸಿ ಕೊಟ್ಟನು. ಈ ರಥವು ಹಂಪೆ, ವೆಂಕಟಾದ್ರಿ
ಗೋಕರ್ಣ ಮೊದಲಾದ ರಥಗಳಿಗಿಂತಲು ದೊಡ್ಡದೆಂದ
ಜನರು ಹೇಳುತ್ತಾರೆ.

ಶಾಲಾಪತ್ರಿಕವು.

ಪುಸ್ತಕ ೧೨] [ಸಂಚಿಕೆ ೫

ತಾರೀಖು, ೨೫ನೇ ಮಾಹೆ ಆಗಸ್ಟ, ೧೮೭೬.

EDUCATIONAL INTELLIGENCE.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮ. ಎಜ್ಯುಕೇಶನಲ ಇನಸ್ಪೇಕ್ಟರ ದೊರೆಗಳು ಬೆಳಗಾವಿಯಲ್ಲಿ ಹಾಯಸ್ಕೂಲ ವಾರ್ಷಿಕ ಪರೀಕ್ಷೆಯನ್ನು ನಡೆಸಿದ್ದಾರೆ.

ಮೇಜರ ಕ್ಯಾಂಡಿಸಾಹೇಬ, ಮರಾಠಿ ತ್ರಾನಸ್ಲೇಟರ, ಇವರು ತೀವ್ರವೇ ತಮ್ಮ ಕೆಲಸದ ರಾಜಿನಾಮೆ ಕೊಟ್ಟು ಪೇನಶನ ತಕ್ಕೊಂಡು ವಿಲಾಯತಿಗೆ ಹೋಗತಕ್ಕವರಿದ್ದಾರೆಂದು ಕೇಳುತ್ತೇನೆ.

ನಡೆದ ವರ್ಷದ ಸಪ್ಟಂಬರ ೧೮ನೇ ತಾರಿಖೆಗೆ ದಕ್ಷಿಣಭಾಗದೊಳಗಿನ ೪ ಜಿಲ್ಲೆಗಳಲ್ಲಿಯೂ ಒಂದನೇ, ಉ

ರಡನೇ ವರ್ಗದ ಮುಲಕೀ ಪರೀಕ್ಷೆ ಆಗುವದೆಂದು ವೆ. ಎ. ಇನಸ್ಪೇಕ್ಟರ ಸಾಹೇಬರ ಪಕಟನೆ ಪ್ರಸಿದ್ಧವಾಗಿದೆ.

ವಹ್ರಾಡ ಪ್ರಾಂತ್ರದೊಳಗಿನ ಎಜ್ಯುಕೇಶನಲ ಇನಸ್ಪೆಕ್ಟರ ಕೆಲಸಕ್ಕೆ ನೇಕ ನಾಮದಾರ ಗವರ್ನರ ಜನರಲ ಪ್ರಭುಗಳು ರಾ. ರಾ. ಶ್ರೀರಾಮ ಭಿಕಾಜಿ ಜಠಾರ ಇವರನ್ನು ನೇಮಿಸಿದರು. ರಾ. ಜಠಾರರಿಗೆ ಪ್ರಾರಂಭದಲ್ಲಿ ೨೦೦ ರಂತೆ ಸಂಬಳ ದೊರೆಯುವದು. ಮುಂದೆ ಎರಡೆರಡು ವರ್ಷಕ್ಕೆ ೫೦ ರಂತೆ ೫೦೦ ರೂಪಾಯಿ ಆಗುವ ವರೆಗ ಬಢತಿಯಾಗಬೇಕು ಎಂದು ಠರಾವು ಆಗಿದೆ.

ಯಾವತ್ತು ಪೃಥ್ವಿಯಮೇಲೆ ಒಟ್ಟು ೧೪,೦೦೦೦೦೦೦೦ಕ್ಕಿಂತ ಹೆಚ್ಚು ಜನರಿದ್ದಾರೆಂದು ಒಬ್ಬ ವರ್ತಮಾನ ಪತ್ರಕರ್ತನು ಬರೆಯುತ್ತಾನೆ.

ಸನ್ ೧೮೭೪ರಲ್ಲಿ ಸಿವಿಲ ಸರ್ವಿಸ ಪರೀಕ್ಷೆಯಲ್ಲಿ ಪಾಸಾದ ನೇಟಿವರಲ್ಲಿ ರಸ್ತುಮಜಿ ಎಂಬ ಪಾರ್ಸಿ ಗೃಹಸ್ಥರು, ಬೀ. ಆರ. ಚೆಟ್ಟಿ ಎಂಬ ಮದ್ರಾಸಿ ಗೃಹಸ್ಥರು ಕ ಯು ಪರೀಕ್ಷೆಯಲ್ಲಿ ಈ ವರ್ಷ ಪಾಸಾದರು. ಸರಕಾರ ವರು ಮೊದಲಿನವರಿಗೆ ವಾಯವ್ಯ ಪ್ರಾಂತದಲ್ಲಿ, ಎರಡನೆ ಯವರಿಗೆ ಮದ್ರಾಸದಲ್ಲಿ ಕೆಲಸ ಕೊಟ್ಟಿರುತ್ತಾರೆ.

ಡಾಕ್ಟರ ಡಿ. ಜಿ. ಎಫ ಮಾಗ್ಡೊನಲ ಎಂಬವರು ಸ ಯಿಯ ದಂಶದ ಬಗ್ಗೆ ತಮ್ಮ ಅಭಿಪ್ರಾಯವನ್ನು, ಒಂದ

ಸ್ಥಳದಲ್ಲಿ ಪ್ರಸಿದ್ಧ ಮಾಡಿದ್ದಾರೆ. ಈ ಸಾಹೇಬರು ಅನ್ನುವದೇನಂದರೆ, ಯಾವನಿಗಾದರೊಬ್ಬನಿಗೆ ನಾಯಿ ಕಚ್ಚಿ, ಮುಂದೆ ಆ ನಾಯಿಗೆ ಹುಚ್ಚು ಹಿಡಿದರೆ, ದಂಶವಾದವನಿಗೆ ಆದರ ವಿಷದ ಬಾಧೆಯಾಗುತ್ತದೆಂದು ಹಲವರು ತಿಳಿಯುತ್ತಾರೆ. ಆದರೆ ಶೋಧಮಾಡಿ ನೋಡಿದರ ಮೇಲಿಂದ ಈ ತಿಳುವಳಿಕೆ ತೀರ ತಪ್ಪೆಂದು ಕಂಡು ಬಂದದೆ. ಯಾವನಿಗಾದರೊಬ್ಬನಿಗೆ ನಾಯಿ ಕಚ್ಚಿದ ಕೂಡ್ಲೆ ಅದು ಹುಚ್ಚನಾಯಿ ಇರಬಹುದೆಂಬ ಸಂಶಯವು ಮನಸ್ಸಿಗೆ ಹೊಳೆಯುತ್ತದೆ. ಆದರೆ ನಿಜವಾಗಿ ಹುಚ್ಚ ನಾಯಿಯು ಸಾವಿರಕ್ಕೆ ಒಂದು ಶಿಕ್ಕರೆ ಬಹಳ. ಚಲೋ ನಾಯಿಯು ಕಚ್ಚಿನಿಂದ ಏನೇನು ಅಪಾಯವಾಗುವದಿಲ್ಲ ಇಷ್ಟೇ ಅಲ್ಲ; ಹುಚ್ಚನಾಯಿಯು ಕಚ್ಚಿನಿಂದ ಸಹ ಸರ್ವದಾ ಅಪಾಯವಾಗುತದೆಂಬ ನಿಯಮವಿಲ್ಲ. ಹುಚ್ಚನಾಯಿ ಕಚ್ಚಿದವರಲ್ಲಿ ಸಾಧಾರಣ ೩೦ ಕ್ಕೆ ೧ ರಂತೆ ಮರಣದ ಪ್ರಮಾಣವದೆಂದು ವಿದ್ವಾಂಸರಾದವರು ಅನುಭವದ ಮೇಲಿಂದ ಶೋಧಿಸಿ ತೆಗೆದಿದ್ದಾರೆ.

ವಿಮಾನದಲ್ಲಿ ಕುಳಿತುಕೊಂಡು ಆಕಾಶ ಮಾರ್ಗದಿಂದ ಪ್ರಯಾಣ ಮಾಡುವ ವಿದ್ಯೆಯಲ್ಲಿ ಬಲು ನಿಪುಣರಾದ ಪ್ರೊಫೆಸರ ವೆಲ್ಸ ಎಂಬ ಅಮೇರಿಕನ ವಿದ್ವಾಂಸರು ಕೆಲವು ದಿವಸಗಳು ಮುಂಚೆ ಲಾಹೋರಲ್ಲಿ ವಿಮಾನಗಳ ವಿಷಯ ಒಂದು ವ್ಯಾಖ್ಯಾನ ಕೊಟ್ಟರು. ಅದರಲ್ಲಿ ಅವರು ರಸಿಯನರು ಇತ್ತಿತ್ತ ಉಗೀ ಯಂತ್ರದ ಸಾಹ್ಯದಿಂದ ಬಹಳ ದೊಡ್ಡ ವಿಮಾನಗಳನ್ನು ಕಟ್ಟಹತ್ತಿದ್ದಾರೆ. ಈ ವಿಮಾನಗಳೊಳಗಿಂದ ರಸಿಯದವರಿಗೆ ಹಿಂದುಸ್ಥಾನದ ಮೇಲೆ ಬೇಕಾದಾ

ಗ ಬೇಕಾದಷ್ಟು ಸೈನ್ಯ ತಕೊಂಡು ಬರಲಿಕ್ಕೆ ಬಹಳೇ ಸುಲಭ ಬೀಳುವದೆಂದು ಹೇಳಿದರು.

ಇಷ್ಟು ದಿವಸ ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ದೇಶದಲ್ಲಿ ಕಲಾದಗಿಯಲ್ಲಿ ೧, ಬೆಳಗಾವಿಯಲ್ಲಿ, ೨, ಧಾರವಾಡದಲ್ಲಿ, ೨, ಈ ಮೇರೆಗೆ ೫ ವರ್ತಮಾನಪತ್ರಗಳು ಹೊರಡುತ್ತಿದ್ದವು. ಆದರೆ ಈ ತಿಂಗಳಲ್ಲಿ ಹುಬ್ಬಳ್ಳಿಯಲ್ಲಿ ಹುಬ್ಬಳ್ಳೀವೈಭವ ಎಂತ, ಧಾರವಾಡದಲ್ಲಿ ಚಂದ್ರೋದಯ ಎಂತ ಹೊಸ ಪತ್ರಗಳು ಹೊರಡತಕ್ಕವೆ ಎಂದು ತಿಳಿಯುತ್ತದೆ.

ಇಲಾಖೆ ಸರಕಾರದವರು ಯಾವನಿಗಾದರು ಸರಕಾರೀ ನೌಕರನಿಗೆ ಕೊಟ್ಟ ವೇತನವು ಕೊಡತಕ್ಕದಕ್ಕಿಂತ ಹೆಚ್ಚು ಕೊಟ್ಟದೆ ಎಂದು ಹಿಂದುಸ್ಥಾನ ಸರಕಾರಕ್ಕೆ ಕಂಡು ಬಂದರೆ, ಹೆಚ್ಚಿಗೆ ತಕ್ಕೊಂಡ ಹಣವು ತಿರುಗಿ ತಕ್ಕೊಳ್ಳಲಾದೀತೆಂದು ಮುಖ್ಯ ಸರಕಾರದವರು ಠರಾವು ಮಾಡಿದ್ದಾರೆ.

ವಿಲಾಯತಿಯಲ್ಲಿ ಒಬ್ಬ ಗೃಹಸ್ಥನು ಆಕಾಶಮಾರ್ಗದಿಂದ ತಾಸಿಗೆ ೨೦೦ ಮೈಲು ನಡೆಯುವ ಯಂತ್ರವನ್ನು ಮಾಡ ಹತ್ತಿರುತ್ತಾನೆ. ಈ ಯಂತ್ರವು ಹೊಗೆಬಂಡಿಯಂತೆ ಸುಸೂತ್ರವಾಗಿ ಸಾಗುವದು ಎಂದು ಆತನ ಅಭಿಪ್ರಾಯ ಉಂಟು.

ಮುಂಬಯಿ ಇಲಾಖೆಯೊಳಗಿನ ವಿದ್ಯಾಖಾತೆಯ ಮು

ಖ್ಯಾಧಿಕಾರಿಗಳಾದ ಮಿ. ಚಾಟಫೀಲ್ಡ್ ಸಾಹೇಬ ಬಹಾದ್ದೂರವರು ರಜಾ ತಕ್ಕೊಂಡು ವಿಲಾಯತಿಗೆ ಹೋಗತಕ್ಕವರಿದ್ದಾರೆಂದು ಜ್ಞಾನಪ್ರಕಾಶದ ಮೂಲಿಂದ ತಿಳಿಯುತ್ತದೆ. ಆದರೆ ಈ ಸುದ್ದಿಯಲ್ಲಿ ತಥ್ಯಾಂಶವೆಷ್ಟೋ ತಿಳಿಯದು.

ಕಲಿಕತ್ತೆಯಲ್ಲಿ ಕಲಕತ್ತಾ ರಿವ್ಯೂ ಎಂಬದೊಂದು ತ್ರೈಮಾಸಿಕ ಪುಸ್ತಕವು ಹೊರಡುತ್ತದೆ. ಈಗ ಬಂಗಾಲ ಎಜ್ಯುಕೇಶನಲ ಖಾತೆಯೊಳಗಿನ ಪ್ರೋಫೆಸರ ಲೆಥಬ್ರಿಜ ಸಾಹೇಬರು ಆ ಪುಸ್ತಕದ ಎಡಿಟರರಾಗಿದ್ದಾರೆ.

ಅಮೇರಿಕಾ ಖಂಡದೊಳಗಿನ ಪ್ರಸಿದ್ಧ ಸಂಸ್ಕೃತಜ್ಞರಾದ ಪ್ರೋಫೆಸರ ಹ್ವಿಟ್ನಿ ಸಾಹೇಬರು ಹಿಂದುಸ್ಥಾನಕ್ಕೆ ಬಂದು, ಆರ್ಯ ಭಾಷೆಗಳಬಗ್ಗೆ ವಿಶೇಷ ಮಾಹಿತಿ ಮಾಡಿಕೊಂಡು ಹೋಗಿ ಆ ವಿಷಯ ಒಂದು ಪುಸ್ತಕ ಬರೆಯತಕ್ಕವರಿದ್ದಾರೆ.

ಬೌದ್ಧ, ಜೈನ ಜನರ ಧರ್ಮಗ್ರಂಥಗಳು ಬಹುತರವಾಗಿ ಪಾಲಿ ಎಂಬ ಪ್ರಾಕೃತ (ಅಂದರೆ ಸಂಸ್ಕೃತದಿಂದ ಹುಟ್ಟಿದ) ಭಾಷೆಯಲ್ಲಿ ಬರೆದವೆ. ಕೆಲವು ತಿಂಗಳ ಕೆಳಗೆ ಪ್ರೋಫೆಸರ ಚಾಯಲ್ಡರ್ಸ ಸಾಹೇಬರು ಪಾಲಿ ಭಾಷೆಯದೊಂದು ಕೋಶವನ್ನು ಮಾಡಿ ಛಾಪಿಸಿದರು. ಕೋಶಕರ್ತರಿಗೆ ಫ್ರಾನ್ಸ ದೇಶದೊಳಗಿನ ಪಂಡಿತರು ಬಹು ಆದರದಿಂದ ವ್ಹೋಲ್ನೆ ಪ್ರೈಜ ಎಂಬ ಬಕ್ಷಿಸು ಕೊಟ್ಟರು.

THE CHANDRA TREE.

ಚಂದ್ರಗಿಡವು.

ಈ ಜಾತಿಯು ಗಿಡಗಳು ಮುಂಬಯಿ ಇಲಾಖೆಯೊಳ
ನ ಬೆಳಗಾಂವಿ ತಾಲೂಕಿನಲ್ಲಿ, ಬೆಳಗಾವಿಯು ಪಶ್ಚಿಮೋ
ತ್ತರ ಇರುವ ಗುಡ್ಡಗಳಲ್ಲಿಯೂ, ಮದ್ರಾಸ ಇಲಾಖೆಯೊಳ
ಗೆ ತಾಡಪತ್ರಿ ಮೊದಲಾದ ಪಟ್ಟಣಗಳ ಸೆರೆಯಲ್ಲಿರುವ ಗ
ಡ್ಡಗಳಲ್ಲಿಯೂ ತನ್ನಿಂದ ತಾನೇ ಬೆಳೆಯುತ್ತವೆ. ಈ
ಡವು ಬಹಳವಾಗಿ ಬೆಳೆದರೆ ಹತ್ತು ಹನ್ನೆರಡು ಮೊಳ
ತ್ತರವಾಗುತ್ತದೆ. ಇದರ ಎಲೆಗಳು ಲಿಂಬುವ ಎಲೆಗಳಹ
ಗೆ ಇದ್ದು ಸಂಣ ಇರುತ್ತವೆ. ಇದು ವರ್ಷದೊಳಗೆ ಎರಡ
ಸಾರಿ ಫಲ ಫಲಿಸುತ್ತದೆ. ಮೊದಲು ಭಾದ್ರಪದ ಮಾಸ
ಲ್ಲಿ ಹೂವು ಆಗಲಿಕ್ಕೆ ಪ್ರಾರಂಭವಾಗಿ ಆಶ್ವೀನ ಇಲ್ಲವೆ ಕ
ರ್ತಿಕ ಮಾಸಕ್ಕೆ ಕಾಯಿಗಳು ಪಕ್ವವಾಗುತ್ತವೆ. ಎರಡನೆ
ಸಾರಿ ಮಾರ್ಗಶೀರ್ಷ ಮಾಸದಲ್ಲಿ ಹೂವು ಕಾಯಿಗಳು, ಆ
ಫಾಲ್ಗುಣಮಾಸಕ್ಕೆ ಪಕ್ವಕ್ಕೆ ಬರುತ್ತವೆ. ಒಂದೊಂದ
ಕಡೆಗೆ ಎರಡನೇ ಸಾರಿ ಬೆಳೆಯನ್ನೇ ತಕೊಳ್ಳುತ್ತಾರೆ.
ದರ ಹೂವು ಮೊದಲು ನಸುಗೆಂಪಿನ ಮೇಲೆ ಶುಭ್ರವಾ
ದ್ದು, ಸಂಣ ಸಂಣ ದುಂಡಗಿನ ಕಾಯಿಗಳುಳ್ಳ ಗೊಂಚ
ಗಳಾಗುತ್ತವೆ. ಕಾಯಿಗಳು ಪಕ್ವಕ್ಕೆ ಬಂದ ಬಂದ ಹಾಗೆ
ವುಗಳಮೇಲೆ ಕುಂಕುಮವರ್ಣದ ಹುಡಿಯು ಉತ್ಪನ್ನ
ಗುತ್ತಾಹೋಗುತ್ತದೆ. ಕಾಯಿಗಳು ಬಲಿತಬಳಿಕ ಅವುಗಳನ
ಗಿಡಮೇರಿ ಕೊಯ್ದು ಕೊಂಡು ಬಂದು, ಬಿಸಲೊಳಗೆ ಬಂ

ದಿವಸ ಒಣಗಲಿಕ್ಕೆ ಹಾಕುತ್ತಾರೆ. ಮರುದಿವಸ ಆ ಒಣಗಿದ ಕಾಯಿಗಳನ್ನು ಒಂದು ಸಣ್ಣ ತೂತುಳ್ಳ ಸಾರಣಿಗೆಯೊಳಗೆ ಹಾಕಿ, ಅದರ ಕೆಳಗೆ ಒಂದು ಸಾರಣೆ ಮಾಡಿದ ಪುಟ್ಟಿಯನ್ನಾಗಲಿ ದಪ್ಪನ್ನ ಬಟ್ಟೆಯನ್ನಾಗಲಿ ಇಟ್ಟು, ಕಾಯಿಗಳನ್ನು ಕೈಯಿಂದ ತಿಕ್ಕುತ್ತಾರೆ. ಅದರಿಂದ ಆ ಕಾಯಿಗಳ ಮೇಲೆ ಹತ್ತಿರುವ ಪುಡಿಯು ಉದುರಿ ಕೆಳಗಿಟ್ಟ ವಸ್ತ್ರದೊಳಗೆ ಬೀಳುತ್ತದೆ. ಆ ಪುಡಿಯ ಸಮುದಾಯಕ್ಕೆ ಚಂದ್ರಹಿಟ್ಟೆಂದು ಅನ್ನುತ್ತಾರೆ. ಇದು ಬಹಳ ಶ್ರಮದಿಂದ ಸ್ವಲ್ಪವೇ ದೊರಿಯುವ ಕಾರಣ, ಇದಕ್ಕೆ ಕ್ರಯವು ಹೆಚ್ಚ ಬೀಳುತ್ತದೆ. ಕೆಲವರು ಇದರ ಕಾಯಿಗಳನ್ನು ಸಹ ಸಣ್ಣಾಗಿ ಕುಟ್ಟಿ ಹಿಟ್ಟಿನಂತೆ ಮಾಡಿ, ಸೋಸಿ, ಆ ಕುಂಕುಮ ವರ್ಣದ ಹಿಟ್ಟಿನಲ್ಲಿ ಬೆರೆಸುತ್ತಾರೆ. ಅದರಿಂದ ಅದರ ವರ್ಣವು ಸ್ವಲ್ಪ ಹಸರು ಆಗುತ್ತದೆ. ಇದು ಕಚ್ಚಾ ಆಗುವ ಕಾರಣ, ಸ್ವಲ್ಪ ಅಗ್ಗವಾಗಿ ದೊರಿಯುತ್ತದೆ. ಈ ಹಿಟ್ಟು ದೊರಕಿಸುವವರ ಶ್ರಮಕ್ಕೆ ಸರಿಯಾದ ಕಿಮ್ಮತ್ತಿನಷ್ಟೇ ದೊರಿಯುವಕಾರಣ ಇದನ್ನು ದೊರಕಿಸಲಿಕ್ಕೆ ಬಹಳಮಂದಿ ಪ್ರಯತ್ನಿಸುವದಿಲ್ಲ. ಇದರ ಕ್ರಯವು ಹೆಚ್ಚಿರುವ ಕಾರಣವು ಇದರ ಅಭಾವದ ಮೇಲೆಯೇ ಇರಬಹುದೆಂದು ತೋರುತ್ತದೆ.

ಈ ಹಿಟ್ಟು ಪುರಿ, ಚಾರಸ್, ಸಕ್ಕರಕಾನಿ, ಕಸೇರಿ, ಗದಕಸೇಲಿ, ಮುಂತಾದ ರೇಶಿಮೆಯ ಬಣ್ಣಕ್ಕೆ ಹಾಕುವದಕ್ಕೆ ಬಹಳ ಪ್ರಯೋಜನವಾಗಿರುತ್ತದೆ. ಕಸೇಲಿಯ ರೇಶ್ಮೆಯ ಬಣ್ಣಕ್ಕೆ ಹಾಕುವಕಾರಣ ಈ ಹಿಟ್ಟಿಗೆ ಕಸೇಲಿಯ ಹಿಟ್ಟೆಂಬುವದೇ ಬಹಳ ರೂಢಿಯುಂಟು. ಯಾವದಾದರೊಂದು ಪ್ರಸ್ತಾದರೆ ಈ ಹಿಟ್ಟನ್ನು ಕೊಬ್ಬರಿಯ ಎಣ್ಣೆಯೊ

ಗೆ ಕಲಿಸಿ ಅದ್ದಕ್ಕೆ ಹಚ್ಚಿದರೆ ಬಹಳವಾಗಿ ಆ ಹುಣ್ಣು ವಾಸಿಯಾಗುತ್ತದೆ. ನಿಜವಾಗಿ ಸ್ವಲ್ಪಾದರೂ ಗುಣ ಕೊಡುತ್ತದೆ. ಇದರ ಹೊರ್ತು ಅನೇಕ ಪ್ರಕಾರದ ಔಷಧಗಳಿಗೆ ಉಪಯೋಗಿಸಲ್ಪಡುತ್ತದೆಂದು ಹೇಳುತ್ತಾರೆ. ಈ ಹಿಟ್ಟಿನ ಬಳಕೆ ವಿಶೇಷವಾಗಿ ರೇಶ್ಮೆಯ ವಸ್ತ್ರಗಳನ್ನು ನೇಯುವ ಸ್ಥಳಗಳಲ್ಲಿ ಅಂದರೆ ಹುಬ್ಬಳ್ಳಿ, ಗದಗು ಬಾಗಲಕೋಟೆ ಮೊದಲಾದ ಕಡೆಗೆ ಆಗುತ್ತದೆ.

ಪಕ್ವಕ್ಕೆ ಬಂದ ಕಾಯಿಗಳುಳ್ಳ ಗೊಂಚಲುಗಳಿಂದ ತುಂಬಿದಾಗ್ಯೆ ಈ ಗಿಡವು ನೋಟಕ್ಕೆ ಬಹು ಅಂದವಾಗಿ ತೋರುತ್ತದೆ. ಚಂದ್ರೋದಯವಾದಾಗ್ಯೆ ಚಂದ್ರನನ್ನು ನೋಡಲಾಗಿ ಮನಸ್ಸಿಗೆ ಎಷ್ಟು ಅಲ್ಹಾದವಾಗುತ್ತದೆಯೋ ಅಷ್ಟೇ ಹರ್ಷವು ಈ ಗಿಡವನ್ನು ನೋಡೋಣದರಿಂದ ಆಗುತ್ತದೆ. ಆದಕಾರಣ ಈ ಗಿಡಕ್ಕೆ ಚಂದ್ರ ಗಿಡವೆಂಬ ಹೆಸರು ತಕ್ಕದ್ದಾಗಿದೆ ಎಂದು ಯೋಚಿಸುವದಕ್ಕೆ ಆಸ್ಪದವಾಗುತ್ತದೆ.

ETYMOLOGY.

ಶಬ್ದವ್ಯುತ್ಪತ್ತಿ.

——000——

ವೇದ— ಈ ಶಬ್ದವು ‘ವಿದ್,’ ಎಂದರೆ ತಿಳಿ, ಎಂಬ ಸಂಸ್ಕೃತ ಧಾತುವಿನಿಂದ ಹುಟ್ಟಿಯದೆ. ಆದದರಿಂದ ವೇದ ಶಬ್ದದ ಮೂಲಾರ್ಥವು, ತಿಳುವಳಿಕೆ ಇಲ್ಲವೆ ಜ್ಞಾನ ಮಾಡಿಕೊಡುವವನು. ಹಿಂದು ಜನರಲ್ಲಿ ಯಾವತ್ತು ತರದ ಐಹಿಕ ಮತ್ತು ಪಾರಮಾರ್ಥಿಕ ಜ್ಞಾನವು ಋಕ್, ಯಜು, ಸಾಮ

ಗಳಲ್ಲಿ ಅಂತರ್ಹಿತವಾಗಿರುವವರಿಂದ ವೇದಶಬ್ದವು ಅವುಗಳ ದ್ಯೋತಕವಾಯಿತು.

ಶ್ರುತಿ— ಈ ಶಬ್ದವು ಸಂಸ್ಕೃತ 'ಶ್ರು' ಅಂದರೆ ಕೇಳು, ಎಂಬ ಧಾತುವಿನಿಂದ ಹೊರಟಿದೆ. ಶ್ರುತಿ ಶಬ್ದದ ಮೂಲಾರ್ಥವು ಕೇಳೋಣ. ಬಹಳ ಪ್ರಾಚೀನ ಕಾಲದಲ್ಲಿ ಲೇಖನ ಕಲೆಯು ಗೊತ್ತಿರಲಿಲ್ಲ. ಆಗ ವೇದವನ್ನು ಎರಡನೆಯವರ ಬಾಯಿಂದ ಕೇಳಿ ಪಾಠ ಮಾಡಬೇಕಾಗುತ್ತಿತ್ತು; ಎರಡನೆ ಮಾರ್ಗವಿರಲಿಲ್ಲ. ಆದದರಿಂದ ಗುರು ಪರಂಪರೆಯಿಂದ ವೇದವನ್ನು ಒಬ್ಬರ ಬಾಯಿಂದ ಕೇಳಿ ಮತ್ತೊಬ್ಬನು ಪಾಠ ಮಾಡಬೇಕಾಗೋಣದರಿಂದ, ಆದಕ್ಕೆ ಶ್ರುತಿ ಎಂಬ ಶಬ್ದವು ರೂಢವಾಯಿತು. ವೇದಕ್ಕೆ ಒಮ್ಮೊಮ್ಮೆ ಶ್ರವಣ ಎಂದು ಸಹ ಅನ್ನುತ್ತಾರೆ. ಅದರ ವ್ಯುತ್ಪತ್ತಿಯಾದರೂ ಮೇಲಿನದರಂತೆಯೇ.

ಸ್ಮೃತಿ— ಈ ಶಬ್ದವು 'ಸ್ಮೃ' ಅಂದರೆ 'ನೆನಪಿಸು,' ಎಂಬ ಸಂಸ್ಕೃತ ಧಾತುವಿನಿಂದ ಹೊರಟಿದೆ. ಆದದರಿಂದ ಸ್ಮೃತಿ ಎಂದರೆ ನೆನಪು ಎಂಬುದು ಮೂಲಾರ್ಥವು. ಬಹಳ ಪ್ರಾಚೀನ ಕಾಲದಲ್ಲಿ ಈಗಿನಂತೆ ಬರಹದ ಯುಕ್ತಿಯು ಗೊತ್ತಿದ್ದಿಲ್ಲ. ಆಗಿನ ಜನರಿಗೆ ತಮ್ಮ ಹಿಂದಿನವರು ಹಾಕಿಕೊಟ್ಟಂಥ ಧರ್ಮ, ಕರ್ಮ ವ್ಯವಹಾರ ಮುಂತಾದವುಗಳ ನಿಯಮಗಳನ್ನು ನೆನಪಿಡ ಬೇಕಾಗುತ್ತಿತ್ತು. ಮುಂದೆ ಬರುಬರುತ್ತ ಸುಧಾರಣೆಯಾಗಿ ಲೇಖನ ಕಲೆಯು ಗೊತ್ತಾಯಿತು. ಆಗ ಕೆಲವು ಲೋಕಮಾನ್ಯರಾದ ಪುರುಷರು ಎರಡನೆಯವರಿಗೂ ತಮಗೂ ನೆನಪಿದ್ದ ತಮ್ಮ ಪೂರ್ವಜರ ಆಚಾರ ವಿಚಾರಗಳನ್ನು ಒತ್ತಟ್ಟಿಗೆ ಕೂಡಿಸಿ ಬರೆದಿಟ್ಟು,

ಈ ಗ್ರಂಥಗಳಿಗೆ ಸ್ಮೃತಿ ಎಂಬ ಹೆಸರು ಇಟ್ಟರು. ಹಿಂದು ಜನರ ಧರ್ಮ ವಿಚಾರದಲ್ಲಿ ವೇದಗಳ ತರುವಾಯ ಸ್ಮೃತಿಗಳಿಗೆ ಬಹಳ ಮಾನ್ಯತೆ ಉಂಟು.

ಧರ್ಮ — ಈ ಶಬ್ದವು 'ಧೃ' ಅಂದರೆ 'ಹಿಡಿ,' ಎಂಬ ಸಂಸ್ಕೃತ ಧಾತುವಿನಿಂದ ಉತ್ಪತ್ತಿಯಾದೆ. ಆದದರಿಂದ ಧರ್ಮ ಅಂದರೆ ಹಿಡಿತ. ಮನುಷ್ಯಮಾತ್ರರ ಮನಸ್ಸಿನಲ್ಲಿ ಈ ಜಗತ್ತಿನಲ್ಲಿ ತಮಗೆ ಬೇಕಾದಹಾಗೆ ಸೌಖ್ಯವಾಗಬೇಕೆಂಬ ಅಪೇಕ್ಷೆಯು ಜನ್ಮಸಿದ್ಧವಾಗಿ ಇದ್ದೇ ಇರುತ್ತದೆ. ಆದರೆ ತಮಗೆ ಸೌಖ್ಯವಾಗಬೇಕೆಂಬುದಾಗಿ ಪ್ರಬಲರು ತಮ್ಮ ಸ್ವೇಚ್ಛೆಗಳಿಗೆ ಇಲ್ಲವೆ ದುರ್ಬಲರಿಗೆ ಪೀಡಿಸಹತ್ತಿದರೆ, ಜನಸ್ಥಿತಿಯು ಸುಸೂತ್ರ ಸಾಗಲರಿಯದು; ಇಷ್ಟೇ ಅಲ್ಲ, ದೊಡ್ಡ ಅನರ್ಥಗಳು ಉಂಟಾಗುವವು. ಆದರೆ ಈ ಪ್ರಕಾರವು ಆಗಬಾರದು; ಪ್ರತಿಯೊಬ್ಬನು ಎರಡನೆಯವರ ಶರೀರಕ್ಕೆ, ಸ್ವಾಸ್ಥ್ಯಕ್ಕೆ ಹಾನಿ ಇಲ್ಲವೆ ಪೀಡೆಯಾಗದಂತೆ ತನಗೆ ಆದಷ್ಟು ಸೌಖ್ಯ ಮಾಡಿಕೊಳ್ಳಬೇಕು; ಎಂಬ ಸಲುವಾಗಿ ಪೂರ್ವಿಕರು ತಮ್ಮ ಬುದ್ಧಿಯಿಂದ ಹಲವು ಕಟ್ಟಳೆಗಳನ್ನು ಮಾಡಿದರು. ಈ ಕಟ್ಟಳೆಗಳಂತೆ ನಡೆಯುವವರಿಗೆ ಇಹದಲ್ಲಿಯೂ ಪರದಲ್ಲಿಯೂ ಸುಖವಾಗುವದೆಂತ, ಅವುಗಳನ್ನು ಮೀರಿ ನಡೆಯುವವರಿಗೆ ಇಹಪರಗಳಲ್ಲಿ ದುಃಖವೂ ದಂಡವೂ ಆಗುವದೆಂತ ಫಲಶ್ರುತಿ ಮಾಡಿಟ್ಟರು. ಈ ಕಟ್ಟಳೆಗಳೇ ಧರ್ಮವು. ಪ್ರತಿ ಒಬ್ಬ ಮನುಷ್ಯನು ಈ ಕಟ್ಟಳೆಗಳ ಹಿಡಿತದಲ್ಲಿ ಸಿಕ್ಕಿಗುತ್ತಾನೆ. ಆದದರಿಂದ ತನಗೆ ಬೇಕಾದಹಾಗೆ ಸ್ವೇಚ್ಛಾಚಾರ ನಡೆದು, ಎರಡನೆಯವರಿಗೆ ಉಪದ್ರವ ಕೊಟ್ಟೇನೆಂದರೆ, ಬರುವಹಾಗಿಲ್ಲ. ಈ

ಗಿನ ಸರಕಾರದವರು ಮಾಡಿರುವ ಕಾಯಿದೆಗಳೂ ಒಂದು ಪ್ರಕಾರದ ಧರ್ಮವೇ ಅನ್ನಬಹುದು.

ಪುರಾಣ— ಈ ಶಬ್ದವು ‘ಪೄ’ ಅಂದರೆ ‘ತುಂಬಿಬಿಡು, ಮುಗಿಸು’ ಎಂಬ ಸಂಸ್ಕೃತ ಧಾತುವಿನಿಂದ ಬಂದದೆ. ಆದದರಿಂದ ಪುರಾಣ ಎಂದರೆ ತುಂಬಿದ್ದು; ಮುಗಿದದ್ದು, ಆಗಿಹೋದದ್ದು ಎಂಬ ಅರ್ಥವು. ಮುಂದೆ ಪ್ರಾಚೀನ ಕಾಲದಲ್ಲಿ ಆಗಿಹೋದ ಕಥೆಗಳಿಗೆ ಇಲ್ಲವೆ ಅಂಥ ಕಥೆಗಳ ಪುಸ್ತಕಕ್ಕೆ ಈ ಶಬ್ದವು ರೂಢವಾಯಿತು. ಈಗ ನಾವು ಪುರಾಣವೆಂದರೆ ಪ್ರಾಚೀನ ಕಾಲದಲ್ಲಿ ದೇವತೆಗಳೂ, ದೈತ್ಯರೂ, ಋಷಿಗಳೂ, ರಾಜರೂ ಮಾಡಿದ ಕೃತ್ಯಗಳ ಕಥಾನಕವೆಂದು ತಿಳಿಯುತ್ತೇವೆ. ಪುರಾಣಕ್ಕೂ ಇತಿಹಾಸಕ್ಕೂ ಮುಖ್ಯ ವೈಲಕ್ಷಣ್ಯವೇನಂದರೆ ಇತಿಹಾಸದಲ್ಲಿ ನಿಜವಾಗಿ ಆಗಿಹೋದ ಮಾನುಷಿಕ ಸಂಗತಿಗಳು ಮಾತ್ರ ಬರುತ್ತವೆ. ಪುರಾಣದಲ್ಲಿ ಹಾಗಿಲ್ಲ; ದೈವಿಕ ಕೃತ್ಯಗಳೂ ದಂತ ಕಥೆಗಳೂ ಬರುತ್ತವೆ.

ಇತಿಹಾಸ— ಈ ಶಬ್ದವು ಇತಿ+ಹ+ಆಸ ಎಂಬ ಸಂಸ್ಕೃತ ಶಬ್ದಗಳು ಕೂಡಿ ಆಗಿದೆ. ಈ ಮೇರೆಗೆ+ನಿಜವಾಗಿ+ ಆಯಿತು, ಎಂಬುದು ಈ ಶಬ್ದಗಳ ಅರ್ಥವು. ಮೊದಲು ಯಾವದಾದರೊಂದು ಕಥೆ ಹೇಳಿ ಕಡೆಗೆ ಇದು ಬರೇ ಕೇಳಿಕೇ ಮಾತಲ್ಲ; ಇತಿಹಾಸ, (ಈ ಮೇರೆಗೆ ನಿಜವಾಗಿ ಆಯಿತು) ಎಂದು ಅನುವದರ ಮೇಲಿಂದ, ಇತಿಹಾಸವೆಂದರೆ ನಿಜವಾಗಿ ಆದಂಥ ಸಂಗತಿ, ಎಂಬ ಅರ್ಥವು ಬಂದಿರಬಹುದು.

ನೀತಿ— ಈ ಶಬ್ದವು ಸಂಸ್ಕೃತ ‘ನೀ’ ಅಂದರೆ ‘ಒ

ಯ್ಯು' ಎಂಬ ಧಾತುವಿನಿಂದ ಬಂದದೆ. ಆದದರಿಂದ ನೀತಿ ಅಂದರೆ, ಒಯ್ಯೋಣ. ಮನುಷ್ಯನು ತನ್ನ ಮನಸ್ಸಿನಲ್ಲಿ ಯಾವದಾದರೊಂದು ಉದ್ದೇಶವನ್ನು ಹಿಡಿದು ತನ್ನನ್ನು ಆ ಉದ್ದೇಶದ ಫಲಕ್ಕೆ ಒಯ್ಯಲಿಕ್ಕೆ, ಅಂದರೇನು, ಆ ಉದ್ದೇಶದ ಫಲವನ್ನು ತನ್ನ ಸ್ವವಶ ಮಾಡಿ ಕೊಳ್ಳಲಿಕ್ಕೆ, ಅರ್ಥಾತ್, ಸಂಪಾದಿಸಲಿಕ್ಕೆ ಮಾಡುವ ಹಂಚಿಕೆ ನೀತಿ ಎನಿಸುವದು. ಅರಸನು ತನ್ನ ರಾಜ್ಯದಲ್ಲಿ ಜನರು ಸುಖದಿಂದಿರಬೇಕು, ಸ್ವಚಕ್ರದಿಂದಾಗಲಿ, ಪರಚಕ್ರದಿಂದಾಗಲ್ಲಿ ಯಾವ ಪ್ರಕಾರದ್ದು ಪೀಡೆಯಾಗಬಾರದು, ಮುಂತಾದ ಉದ್ದೇಶಗಳನ್ನು ಮನಸ್ಸಿನಲ್ಲಿ ಹಿಡಿದು; ಜನರಿಗೆ ಹಿತಕರವಾದ ಕಾಯಿದೆಗಳನ್ನು ಮಾಡಿ, ಕುಶಲ ಪ್ರಧಾನಿಗಳ ಸಾಹ್ಯದಿಂದ ಸುಜನರನ್ನು ಮನ್ನಿಸುತ್ತಾ, ಕುಜನರನ್ನು ಆಗಿಂದಾಗ್ಗೆ ದಂಡಿಸುತ್ತಾ, ಶತ್ರುಗಳನ್ನು ಜಯಿಸುತ್ತಾ, ಉತ್ಕೃಷ್ಟರೀತಿಯಾಗಿ ರಾಜ್ಯವನ್ನು ಆಳುವ ಹಂಚಿಕೆಗೆ ರಾಜನೀತಿ ಎನ್ನುತ್ತಾರೆ.

ಶಾಸ್ತ್ರ — ಈ ಶಬ್ದವು „ಶಾಸ್", ಅಂದರೆ, ಅಧಿಕಾರ ನಡಿಸು, ಆಳು, ವ್ಯವಸ್ಥೆ ಮಾಡು, ಎಂಬ ಸಂಸ್ಕೃತ ಧಾತುವಿನಿಂದ ಬಂದದೆ. ಶಾಸ್ತ್ರವೆಂದರೆ ಯಾವದಾದರೊಂದು ವಿಷಯದ ವ್ಯವಸ್ಥೆ ಮಾಡುವ ಕಟ್ಟಳೆಗಳ ಸಂಗ್ರಹವು. ವ್ಯಾಕರಣದ ಸಂಬಧ ವ್ಯವಸ್ಥೆ ಮಾಡುವ ಕಟ್ಟಳೆಗಳಿಗೆ ವ್ಯಾಕರಣ ಶಾಸ್ತ್ರವೆನ್ನುತ್ತಾರೆ; ಧರ್ಮ ಸಂಬಧದ ವ್ಯವಸ್ಥೆ ಮಾಡುವ ಕಟ್ಟಳೆಗಳ ಸಂಗ್ರಹಕ್ಕೆ ಧರ್ಮ ಶಾಸ್ತ್ರವೆನ್ನುತ್ತಾರೆ

ಮಂತ್ರ — ಈ ಶಬ್ದವು ಮಂತ್ರ ಅಂದರೆ ಆಲೋಚನೆ ಮಾಡು ಎಂಬ ಸಂಸ್ಕೃತ ಧಾತುವಿನಿಂದ ಹುಟ್ಟಿಯದೆ. ಮಂತ್ರ

ಷ್ಯಂಧರ ಆಲೋಚನೆ; ವಿಶೇಷತಃ ಗುಪ್ತ ಆಲೋಚನೆ, ಲೋಚನೆ ಮಾಡಿ ತೆಗೆದ ಹಂಚಿಕೆ. ಅರಸನ ಕೂಡ ಜ್ಯಕಾರ್ಯದ ಸಂಬಂಧದಿಂದ ಗುಪ್ತ ಆಲೋಚನೆ ಮಾಡುವ ಪುರುಷರಿಗೆ ಮಂತ್ರಿಗಳು ಅನ್ನುತ್ತಾರೆ. ಇದ ಮೇರೆಗೆ ಹಾವು ಚೇಳು ಮುಂತಾದವುಗಳು ದಂಶದಿಂ ಇಲ್ಲವೆ ಪಿಶಾಚ ಮುಂತಾದವುಗಳು ಬಡಿದು, ಉಂಟಾ ವ ವ್ಯಥೆಯನ್ನು ಇಲ್ಲವೆ ಮರಣವನ್ನು ದೂರ ಮಾಡುದಕ್ಕಾಗಿ ಹುಡುಕಿ ತೆಗೆದ ಗುಪ್ತ ಆಲೋಚನೆಗಳಿಗೆ (ಅದರೆ, ಹಂಚಿಕೆಗಳಿಗೆ), ಸಹ ಮಂತ್ರ ಅನ್ನುತ್ತಾರೆ. ಈ ಪ್ರಕಾರದ ಮಂತ್ರಗಳನ್ನು ಬಲ್ಲವರಿಗೆ ಮಾಂತ್ರಿಕರೆನ್ನುತ್ತಾರೆ.

ವರ್ಷ— ಈ ಶಬ್ದವು, “ವೃಷ್,” ಅಂದರೆ ‘ಮುಗರೆ,’ ಎಂಬ ಸಂಸ್ಕೃತ ಧಾತುವಿನಿಂದ ಹೊರಟಿದೆ. ವರ್ಷವೆಂದರೆ ಮಳೆ ಕರೆಯೋಣ. ವರ್ಷಾ ಎಂದರೆ ಮಳೆಗಾಲವು. ಈಗಿನ ಹಿಂದು ಜನರ ಪೂರ್ವಜರಾದ ಆರ್ಯರು ಹಿಂದುಸ್ಥಾನದೊಳಗೆ ಬರುವದಕ್ಕಿಂತ ಮೊದಲು ಹಿದು ಕುಶದ ಉತ್ತರಕ್ಕೆ ಆರ್ಯಾನ (ಈಗಿನ ಇರಾಣ ಎಂಬ ದೇಶವಲ್ಲಿಯೂ, ಕಾಕೇಶಸ ಪರ್ವತದ ಬುಡಕ್ಕೆ ಹೊಂದಿರುವ ಸೀಮೆಯಲ್ಲಿಯೂ ಇರುತ್ತಿದ್ದರು. ಅಲ್ಲಿ ಹಿಂದುಸ್ಥಾನದಲ್ಲಿಯಂತೆ ಮಳೆಗಾಲವು ನಿಯಮಿತ ಕಾಲಕ್ಕೆ ಬರುವದರಿಂದ ಈ ಮಳೆಗಾಲದಿಂದ ಮುಂದಿನ ಮಳೆಗಾಲದ ತನಕ ಹೋಗುವ ಕಾಲವೆಂಬ ಅರ್ಥದಲ್ಲಿ ವರ್ಷ ಎಂಬ ಶಬ್ದವು ರೂಢವಾಗಿರಬಹುದು. ವರ್ಷಕ್ಕೊಮ್ಮೆ ಮಾಡತಕ್ಕದ್ದಕ್ಕೆ ವಾರ್ಷಿಕ ಅನ್ನುತ್ತಾರೆ. ಉದಾಹರಣ:

ವಾರ್ಷಿಕ ಉತ್ಸಾಹ; ವಾರ್ಷಿಕ ಉತ್ಪನ್ನ, ಇತ್ಯಾದಿ. ವೃಷ್ಟಿ, ಅಂದರೆ ಮಳೆ, ಎಂಬ ಶಬ್ದವೂ ವೃಷ್ ಧಾತುವಿನಿಂದ ಹುಟ್ಟಿದೆ.

ಯಜಮಾನ— ಈ ಶಬ್ದವು ‚ಯಜ್,' ಅಂದರೆ ಯಜ್ಞಮಾಡು, ಎಂಬ ಸಂಸ್ಕೃತ ಧಾತುವಿನಿಂದ ಹೊರಟಿದೆ. ಆದಬರಿಂದ ಯಜಮಾನ ಎಂದರೆ ಯಜ್ಞಮಾಡುವವನು ಎಂಬದು ಮೂಲ (ಯೋಗಿಕ) ಅರ್ಥವು. ಯಜ್ಞಕರ್ಮದಲ್ಲಿ ಯಜಮಾನನು ಖರ್ಚ ವೆಚ್ಚ ಮಾಡುವವನು, ಮುಖ್ಯನಾಗಿರುತ್ತಾನೆ. ಅದರಿಂದ ಯಜಮಾನ ಅಂದರೆ ಮುಖ್ಯನು ಎಂಬ ಅರ್ಥವು ಬರುಬರುತ್ತ ರೂಢವಾಯಿತು. ಈ ಮೇರೆಗೆ ಶಬ್ದದ ಯೌಗಿಕ ಅರ್ಥಕ್ಕೂ ರೂಢ ಅರ್ಥಕ್ಕೂ ಒಮ್ಮೊಮ್ಮೆ ಬಹಳ ಅಂತರ ಬೀಳುತ್ತದೆ.

CORRESPONDENCE.

ಪತ್ರವ್ಯವಹಾರವು.

ಎರಡನೇ ನಿಬಂಧವು.

ಹಿಂದಿನ (೩) ನೇ ಸಂಚಿಕೆಯಿಂದ ಸಾಗಿದ್ದು.

(ವ್ಯಾ. ಕ. ಸ.)

ರಾವಸಾಹೇಬ ಕನ್ನಡ ಶಾಲಾಪತ್ರಕದ ಎಡೀಟರರಿಗೆ.

ವಿ. ವಿ. ಈ ವಿಷಯವನ್ನು, ಇದೇ ರೀತಿಯಿಂದ, ಕಲಿಸಬೇಕೆಂಬದು. ಇದುವರಿಗೂ ಯಾವ ಗ್ರಂಥದಲ್ಲಿಯೂ, ನಾನು ನೋಡಿಲ್ಲ. ಪರಂತು, ಟ್ರೇನಿಂಗ ಕಾಲೇಜದಲ್ಲಿ ನಾನು ಇದ್ದಾಗ, ಅಲ್ಲ್ಯಾದರೂ ಗ್ರಂಥದ ಮೇಲಿಂದ ವ್ಯಾಕರಣ ನಾ

ಡುವ ಪದ್ಧತಿ ಹೇಳಲಿಲ್ಲ. ಆದಾಗ್ಯೂ, ಕಲಿಸುವ ಪದ್ಧತಿಯಲ್ಲಿ ಪದಾರ್ಥಗಳ ಮೇಲಿಂದ ವ್ಯಾಕರಣವನ್ನು ತಿಳಿಸ ಬೇಕೆಂಬದಾಗಿ, ಇಷ್ಟೇ ಹೇಳಿದೆ. ಅಷ್ಟರಿಂದ ಏನೇನು ಉಪಯೋಗವಾಗಲಾರದೆಂದು, ಕಾಲೇಜದಲ್ಲಿ ಕಲಿತಂಥವರಿಗೆ ಗ್ರಹಿಕೆಯಾಗಿರ ಬಹುದು.

ನಾನು ಇದರಲ್ಲಿ ಪಂಡಿತನು; ಎಲ್ಲರಿಗೆ ಸಮ್ಮತಿ ಪಡಿಸುವೆನೆಂದು ಹೇಳುವದಿಲ್ಲ. ಆದರೂ. ನಂನ ಅಲ್ಪ ಬುದ್ಧಿಗೆ ತಿಳಿದ ಮಟ್ಟಿಗೆ ಬರೆದಿದ್ದೇನೆ. ಬಂಧುವರ್ಗದವರು, ಇದರಲ್ಲಿದ್ದ ದೋಷ ರಹಿತವಾದ ಅಲ್ಪ ಲಾಭವನ್ನು ಸ್ವೀಕರಿಸುವರೆಂದು, ಅವರಿಗೆ ವಿನಯದಿಂದ ಬೇಡಿಕೊಳ್ಳುತ್ತೇನೆ.

೧. ವ್ಯಾಕರಣವನ್ನು ಕಲಿಸ ಬೇಕಾದರೆ, ಕೆಲವು ಸಾಲಿಗಳಲ್ಲಿ ಬಾಲ ವ್ಯಾಕರಣವಾಗಲೀ, ಶಾಲಾವ್ಯಾಕರಣವಾಗಲೀ, ಮೊದಲಿನಿಂದಾ ಹುಡುಗರ ಕಡೆಯಿಂದ ಪಾಠ ಮಾಡಿಸುತ್ತಾರೆ. ಇದು ನೆಟ್ಟಗಲ್ಲ. ಯಾಕಂದರೆ, ಅದರಲ್ಲಿ ಸಂಸ್ಕೃತ ಶಬ್ದಗಳೇ ಬಹಳಿದ್ದು, ಅವುಗಳ ಅರ್ಥವನ್ನು ವಿದ್ಯಾರ್ಥಿಗಳ ಲಕ್ಷದಲ್ಲಿ ಶುಲಭವಾಗಿ ಬರದೆ ಅವರು ಪಾಠು ಮಾಡಿದ್ದು, ಅವರಿಗೇ ತಿಳಿಯುವದಿಲ್ಲ. ಆದ ಪ್ರಯುಕ್ತ, ಮಾಸ್ತರನು, ಅವುಗಳಲ್ಲಿಯ ಮುಖ್ಯ ಭಾಗಗಳು ಅಂದರೆ, ನಾಮ, ಸರ್ವನಾಮ, ವಿಶೇಷಣ ಅವ್ಯಯ, ಕ್ರಿಯಾಪದ ಮೊದಲಾದವುಗಳ ವಿವರಗಳನ್ನು, (ಮೂಲತತ್ವಗಳನ್ನು) ಕಪ್ಪು ಹಲಿಗೆಯ ಮೇಲೆ ಪದಾರ್ಥಗಳ ಮೇಲಿಂದ, ಸ್ಪಷ್ಟವಾಗಿ ತಿಳಿಯುವ ಹಾಗೆ ಹೇಳಿ, ಆದ ಬಳಿಕ ಅವುಗಳಲ್ಲಿಯ ಪ್ರೋಟ ಭಾಗಗಳನ್ನು ಮಾಹಿತಿ ಮಾಡಿಕೊಡಬೇಕು.

೨. ಮುಖ್ಯ ಭಾಗಗಳಿಗೂ. ಪ್ರೋಟ ಭಾಗಗಳಿಗೂ, ಯಾ ಸಂಬಂಧವಿರುವದೋ ಅವನ್ನು ತಿಳಿಸತಕ್ಕದ್ದು. ಹ್ಯಾ

ಗೆಂದರೆ, ನಾಮ ಎಂಬ ಮುಖ್ಯ ಭಾಗಕ್ಕೆ. ಸರ್ವನಾಮ, ವಿಶೇಷಣನಾಮ. ಅಂಕಿತನಾಮ. ಕ್ರಿಯಾನಾಮ. ಕೃದ್ನಾಮ. ಮೊದಲಾದ ಪ್ರೋಟ ಭಾಗಗಳ ಹೆಸರುಗಳು ಯಾವ ಸಂಬಂಧದಿಂದ ಬಂದವೆಂಬ ಸ್ಪಷ್ಟವಾಗಿ ಹೇಳತಕ್ಕದ್ದು. ಅವಶ್ಯವು.

೩. ಈ ಪ್ರಕಾರ ಎಲ್ಲ ಭಾಗಗಳ ವಿವರವನ್ನೂ. ಸಂಧಿಸಮಾಸಗಳ ಮೂಲ ತತ್ವಗಳನ್ನೂ, ಶಬ್ದಗಳ ಉತ್ಪತ್ತಿ ವಾಕ್ಯರಚನೆ ಮುಂತಾದ ಮುಖ್ಯ ವರ್ಗಗಳಲ್ಲಿಯ ಇಂಗಿತವನ್ನು ಸುಲಭವಾಗಿ ವಿದ್ಯಾರ್ಥಿಗಳು ಗ್ರಹಿಸುವಂತೆ ಹೇಳತಕ್ಕದ್ದು. ಈ ಪ್ರಕಾರ ತಿಳಿಸದ ಹೊರ್ತು, ಬರೆ ಪಾಠ ಮಾಡುವದಕ್ಕೆ ಹೇಳ ಕೂಡದು. ಮೇಲೆ ಹೇಳಿದ ಎಲ್ಲ ಭಾಗಗಳು ವಿದ್ಯಾರ್ಥಿಗಳಿಗೆ ಗ್ರಹಿಕೆ ಆದ ನಂತರ. ಕೆಳಗೆ ವಿವರಿಸಿದ ಪ್ರಕಾರ ಗ್ರಂಥದ ಮೇಲಿಂದ ವ್ಯಾಕರಣ ಮಾಡುವದಕ್ಕೆ ಕಲಿಸಬೇಕು. ಇದು ಇಂತೆನೆ.

೧. ಶಬ್ದ ಬಂದಲ್ಲಿ=ಪ್ರಕೃತಿ, ಹಾಗೂ, ಆಗಮ, ಮತ್ತು, ಪ್ರತ್ಯಯಗಳನ್ನು ತಿಳಿಸತಕ್ಕದ್ದು. ಉದಾಹರಣೆ. (ಮರವು) ಇದರಲ್ಲಿ ಮರ+ವ್+ಉ=ಮರವು.

೨. ನಾಮ ಬಂದಲ್ಲಿ=ನಾಮ, ಅಂತ, ಲಿಂಗ, ವಿಭಕ್ತಿ, ವಚನ, ಈ ಪ್ರಕಾರ ಹಚ್ಚಬೇಕು. ಉಂ. (ಗಿಡಗಳು) ಗಿಡ, ರೂಢನಾಮ, ಅಕಾರಾಂತ, ನಪುಂಸಕಲಿಂಗ, ಪ್ರಥಮದ ಬಹುವಚನವು.

೩. ಪ್ರಥಮ ವಿಭಕ್ತಿ ಬಂದಲ್ಲಿ=ಕರ್ತು ಯಾವ ಕ್ರಿಯಾಪದವನ್ನು ಮಾಡುತ್ತಾನೆಂಬುವದನ್ನು, ಹೇಳಬೇಕು. ಉಂ. (ರಾಮನು ಹೋದನು.) ರಾಮನು ಕರ್ತೃ, ಹೋದನು ಈ ಕ್ರಿಯಾಪದದ ಕಡಿಗೆ:

೪. ದ್ವಿತೀಯಾ ವಿಭಕ್ತಿ ಬಂದಲ್ಲಿ=ಕರ್ಮ ಪದವು ಯಾವ

ಕ್ರಿಯಾಪದದ ಕಡೆಗೆ ಇರುವದೆಂಬುದನ್ನು ಹೇಳಬೇಕು. ಉ. (ಗಿಡವನ್ನು ಕಡಿದನು.) ಗಿಡವನ್ನು ಕರ್ಮ, ಕಡಿದನು ಈ ಕ್ರಿಯಾಪದದ ಕಡೆಗೆ.

೫. ಷಷ್ಠಿ ವಿಭಕ್ತಿ ಬಂದಲ್ಲಿ=ಅದರ ಸಂಬಂಧ ಯಾತರ ಕಡೆಗಿರುವದೋ, ಅದನ್ನು ಹೇಳಬೇಕು. ಉ. (ಮನುಷ್ಯನ ಆತ್ಮ) ಮನುಷ್ಯನ ಷಷ್ಠಿ ಏಕ ವಚನ, ಇದರ ಸಂಬಂಧ ಆತ್ಮ ಈ ನಾಮಪದದ ಕಡೆಗೆ.

೬. ವಿಶೇಷಣ ಬಂದಲ್ಲಿ=ಅದು ಯಾವ ಪದವನ್ನು ವರ್ಣಿಸುತ್ತದೋ, ಅದನ್ನು ಹೇಳಬೇಕು. ಉ. (ಹತ್ತು ಕುದುರೆಗಳು) ಹತ್ತು ಸಂಖ್ಯಾವಾಚಕ ವಿಶೇಷಣ, ಇದರ ವಿಶೇಷ್ಯ, ಕುದುರೆ ಈ ನಾಮ ಪದದ ಕಡೆಗೆ.

೭. ಸರ್ವನಾಮ ಬಂದಲ್ಲಿ=ಅರ್ಥ, ಪುರುಷ ಲಿಂಗ, ವಿಭಕ್ತಿ, ವಚನ, ಇಷ್ಟು ಹಚ್ಚಬೇಕು. ಉ. (ಅವನು) ಅವ ಈ ಪುರುಷಾರ್ಥಕ ಸರ್ವನಾಮ, ಪ್ರಥಮ ಪುರುಷ, ಪುಲಿಂಗ, ಪ್ರಥಮದ ಏಕವಚನ.

೮. ಕ್ರಿಯಾಪದ ಬಂದಲ್ಲಿ=ಧಾತುತ್ರಯ ಅರ್ಥತ್ರಯ, ರೂಪತ್ರಯ, ಕಾಲತ್ರಯ. ಪುರುಷತ್ರಯ, ಲಿಂಗತ್ರಯ, ವಚನತ್ರಯ ಈ ಪ್ರಕಾರ ಹಚ್ಚಬೇಕು. ಉ. (ಮಾಡುತ್ತಾನೆ.) ಮಾಡು ಈ ಸಕರ್ಮಕ ಧಾತುವಿನ, ಸಂಭವಾರ್ಥ, ಪುರುಷಾತ್ಮಕ ರೂಪ, ವರ್ತಮಾನಕಾಲ, ಪ್ರಥಮ ಪುರುಷ, ಪುಲ್ಲಿಂಗ, ಏಕ ವಚನ.

೯. ನ್ಯೂನ ಬಂದಲ್ಲಿ=ಧಾತುತ್ರಯ, ಕಾಲತ್ರಯ, ಹಾಗೂ, ನ್ಯೂನಗಳ ಪ್ರಕಾರವನ್ನು ಹೇಳಬೇಕು; ಉ. (ಮಾಡುತ್ತಾ) ಮಾಡು ಈ ಸಕರ್ಮಕ ಧಾತುವಿನ ವರ್ತಮಾನ ಕಾಲಾರ್ಥಕ ಕ್ರಿಯಾನ್ಯೂನ.

ಗಂದರೆ, ನಾನು ಎಂಬ ಮುಖ್ಯ ಭಾಗಕ್ಕೆ, ಸರ್ವನಾಮ, ವಿಶೇಷಣನಾಮ. ಅಂಕಿತನಾಮ. ಕ್ರಿಯಾನಾಮ. ಕೃದ್ನಾಮ. ಮೊದಲಾದ ಸ್ಫೋಟ ಭಾಗಗಳ ಹೆಸರುಗಳು, ಯಾವ ಸಂಬಂಧದಿಂದ ಬಂದವೆಂಬ ಸ್ಪಷ್ಟವಾಗಿ ಹೇಳತಕ್ಕದ್ದು, ಅವಶ್ಯವು.

೩. ಈ ಪ್ರಕಾರ ಎಲ್ಲ ಭಾಗಗಳ ವಿವರವನ್ನೂ, ಸಂಧಿಸಮಾಸಗಳ ಮೂಲ ತತ್ವಗಳನ್ನೂ, ಶಬ್ದಗಳ ಉತ್ಪತ್ತಿ ವಾಕ್ಯರಚನೆ ಮುಂತಾದ ಮುಖ್ಯ ವರ್ಗಗಳಲ್ಲಿಯು. ಇಂಗಿತವನ್ನು ಸುಲಭವಾಗಿ ವಿದ್ಯಾರ್ಥಿಗಳು ಗ್ರಹಿಸುವಂತೆ ಹೇಳತಕ್ಕದ್ದು. ಈ ಪ್ರಕಾರ ತಿಳಿಸದ ಹೊರ್ತು, ಬರೆ ಪಾಠ ಮಾಡುವದಕ್ಕೆ ಹೇಳಕೂಡದು. ಮೇಲೆ ಹೇಳಿದ ಎಲ್ಲ ಭಾಗಗಳು ವಿದ್ಯಾರ್ಥಿಗಳಿಗೆ ಗ್ರಹಿಕೆ ಆದ ನಂತರ, ಕೆಳಗೆ ವಿವರಿಸಿದ ಪ್ರಕಾರ ಗ್ರಂಥದ ಮೇಲಿಂದ ವ್ಯಾಕರಣ ಮಾಡುವದಕ್ಕೆ ಕಲಿಸಬೇಕು. ಇದು ಇಂತೆನೆ.

೧. ಶಬ್ದ ಬಂದಲ್ಲಿ=ಪ್ರಕೃತಿ, ಹಾಗೂ, ಆಗಮ, ಮತ್ತು, ಪ್ರತ್ಯಯಗಳನ್ನು ತಿಳಿಸತಕ್ಕದ್ದು. ಉದಾಹರಣೆ. (ಮರವು) ಇದರಲ್ಲಿ ಮರ+ವ್+ಉ=ಮರವು.

೨. ನಾಮ ಬಂದಲ್ಲಿ=ನಾಮ, ಅಂತ, ಲಿಂಗ, ವಿಭಕ್ತಿ, ವಚನ, ಈ ಪ್ರಕಾರ ಹಚ್ಚಬೇಕು. ಉಂ. (ಗಿಡಗಳು) ಗಿಡ ರೂಢನಾಮ, ಅಕಾರಾಂತ, ನಪುಂಸಕಲಿಂಗ, ಪ್ರಥಮದ ಬಹುವಚನವು.

೩. ಪ್ರಥಮ ವಿಭಕ್ತಿ ಬಂದಲ್ಲಿ=ಕರ್ತು ಯಾವ ಕ್ರಿಯಾಪದವನ್ನು ಮಾಡುತಾನೆಂಬುವದನ್ನು, ಹೇಳಬೇಕು. ಉಂ (ರಾಮನು ಹೋದನು.) ರಾಮನು ಕರ್ತೃ, ಹೋದನು ಈ ಕ್ರಿಯಾಪದದ ಕಡಿಗೆ.

೪. ದ್ವಿತೀಯಾ ವಿಭಕ್ತಿ ಬಂದಲ್ಲಿ=ಕರ್ಮ ಪದವು ಯಾ

ಕ್ರಿಯಾಪದದ ಕಡಿಗೆ ಇರುವದೆಂಬದನ್ನು ಹೇಳಬೇಕು. ಉ. (ಗಿಡವನ್ನು ಕಡಿದನು.) ಗಿಡವನ್ನು ಕರ್ಮ, ಕಡಿದನು ಈ ಕ್ರಿಯಾಪದದ ಕಡಿಗೆ.

೫. ಷಷ್ಠೀ ವಿಭಕ್ತಿ ಬಂದಲ್ಲಿ=ಅವರ ಸಂಬಂಧ ಯಾತರ ಕಡಿಗಿರುವದೋ, ಅದನ್ನು ಹೇಳಬೇಕು. ಉ. (ಮನುಷ್ಯನ ಆತ್ಮ) ಮನುಷ್ಯನ ಷಷ್ಠೀ ಏಕ ವಚನ, ಇವರ ಸಂಬಂಧ ಆತ್ಮ ಈ ನಾಮಪದದ ಕಡಿಗೆ.

೬. ವಿಶೇಷಣ ಬಂದಲ್ಲಿ=ಅದು ಯಾವ ಪದವನ್ನು ವರ್ಣಿಸುತ್ತದೋ, ಅದನ್ನು ಹೇಳಬೇಕು. ಉ. (ಹತ್ತು ಕುದುರೆಗಳು) ಹತ್ತು ಸಂಖ್ಯಾವಾಚಕ ವಿಶೇಷಣ, ಇವರ ವಿಶೇಷ್ಯ, ಕುದುರೆ ಈ ನಾಮ ಪದದ ಕಡಿಗೆ.

೭. ಸರ್ವನಾಮ ಬಂದಲ್ಲಿ=ಅರ್ಥ, ಪುರುಷ ಲಿಂಗ, ವಿಭಕ್ತಿ ವಚನ, ಇಷ್ಟು, ಹಚ್ಚಬೇಕು. ಉ. (ಅವನು) ಅವ ಈ ಪುರುಷಾರ್ಥಕ ಸರ್ವನಾಮ, ಪ್ರಥಮ ಪುರುಷ, ಪುಲಿಂಗ, ಪ್ರಥಮದ ಏಕವಚನ.

೮. ಕ್ರಿಯಾಪದ ಬಂದಲ್ಲಿ=ಧಾತುತ್ರಯ ಅರ್ಥತ್ರಯ, ರೂಪತ್ರಯ, ಕಾಲತ್ರಯ. ಪುರುಷತ್ರಯ, ಲಿಂಗತ್ರಯ, ವಚನದ್ವಯ ಈ ಪ್ರಕಾರ ಹಚ್ಚಬೇಕು. ಉ. (ಮಾಡುತ್ತಾನೆ.) ಮಾಡು ಈ ಸಕರ್ಮಕ ಧಾತುವಿನ, ಸಂಭವಾರ್ಥ, ಪುರುಷಾತ್ಮಕ ರೂಪ, ವರ್ತಮಾನಕಾಲ, ಪ್ರಥಮ ಪುರುಷ, ಪುಲ್ಲಿಂಗ, ಏಕವಚನ.

೯. ನ್ಯೂನ ಬಂದಲ್ಲಿ=ಧಾತುತ್ರಯ, ಕಾಲತ್ರಯ, ಹಾಗೂ, ನ್ಯೂನಗಳ ಪ್ರಕಾರವನ್ನು ಹೇಳಬೇಕು; ಉ. (ಮಾಡುತ್ತಾ) ಮಾಡು ಈ ಸಕರ್ಮಕ ಧಾತುವಿನ ವರ್ತಮಾನ ಕಾಲಾರ್ಥಕ ಕ್ರಿಯಾನ್ಯೂನ.

[illegible] ಬಂದಲ್ಲಿ = [illegible] ಉ. ([illegible]) [illegible]

[illegible] ಬಂದಲ್ಲಿ = [illegible]

[illegible] ಬಂದಲ್ಲಿ = ಪುರುಷ ಲಿಂಗ, ಏಕವಚನ. [illegible] ಉ. ([illegible]) [illegible] ಪುಲ್ಲಿಂಗ ಏಕ ವಚನ.

[illegible] ಬಂದಲ್ಲಿ = ಪುರುಷ ಲಿಂಗ, ವಚನ [illegible] ಉ. ([illegible]) [illegible] ನಪುಂಸಕಲಿಂಗ ಏಕ ವಚನ.

[illegible] ಬಂದಲ್ಲಿ = ಅನ್ಯಗಳ [illegible] ಉ. ([illegible]) [illegible]

[illegible] ಬಂದಲ್ಲಿ = ಲಿಂಗ, ವಚನಗಳು [illegible] ಉ. ([illegible]) ಈ [illegible] ಪುಲ್ಲಿಂಗ ಪ್ರಥಮದ ಏಕವಚನ

[illegible] ಬಂದಲ್ಲಿ = ಧಾತು [illegible] ಪರಂತು, ಪುರುಷ, ಲಿಂಗ, ವಚನಗಳು [illegible] ಉ. ([illegible]) [illegible] ಲಿಂಗ, ಏಕ ವಚನ

[illegible] ಬಂದಲ್ಲಿ = [illegible] ಉ. ([illegible], [illegible]

[illegible] [illegible] [illegible] [illegible] ಕಾಲಗಳು [illegible] ನದಲ್ಲಿ [illegible] [illegible] [illegible] [illegible] ಯಾಗಿ, [illegible] ಮಾಡುವದ [illegible] [illegible] [illegible] ಕೆಲವು ತೊಂದರೆಗ [illegible] [illegible] [illegible] ಅವರ, ಅನ್ಯಗಳನ್ನು [illegible] [illegible] [illegible] ಗಂಭೀರವಾಗುವವು. ಆ [illegible] [illegible] [illegible] ನಿವಾರಿಸುವ್ರಗಳ ಪ್ರಸ್ತು [illegible] [illegible] [illegible] ಅವರ ವಿಷಯವಾ [illegible] [illegible] [illegible] [illegible] ಮುಂದಕ್ಕೆ ಹಾಗುವದ

[illegible]

ಸಹಿ. ಜಗನ್ನಾಥ ಶ್ರೇಷ್ಠ
ಗುರುತೀರ್ಥ [illegible]
ಸ್ಥಳ ಬೆಂಗಳೂರು

[illegible] [illegible] [illegible] [illegible] [illegible] [illegible] [illegible] [illegible] (೩) ಚಿಕ್ಕವನ್ನು [illegible] [illegible] [illegible] ಚಿಕ್ಕ [illegible] [illegible] ಜನರಿಗೆ ತೊಂದರೆ [illegible] [illegible] [illegible]. ಈ ಚಿಕ್ಕವನ್ನು [illegible]

೧೦. ಕೃದ್ವಾಚಕ ಬಂದಲ್ಲಿ=ಧಾತುತ್ರಯ, ಕಾಲತ್ರಯಗಳಿಷ್ಟೆ ಹಚ್ಚಬೇಕು. ಉ. (ಹೋಗದ) ಹೋಗು ಈ ಅಕರ್ಮಕ ಧಾತುವಿನ, ನಿಷೇಧಾರ್ಥಕ ಕೃದ್ವಾಚಕ.

೧೧. ಭಾವರೂಪ ಬಂದಲ್ಲಿ=ಧಾತುತ್ರಯ, ಒಂದೇ ಹತ್ತುತ್ತದೆ. ಉ. (ನಡಿಯುಬು) ಈ ಅಕರ್ಮಕ ಧಾತುವಿನ ೨ನೇ ಭಾವರೂಪ.

೧೨. ಕೃದ್ನಾಮ ಬಂದಲ್ಲಿ=ಪುರುಷ, ಲಿಂಗ, ವಚನಗಳು ಹತ್ತುತ್ತವೆ. ಉ. (ಮಾಡುವವನು) ಕೃದ್ನಾಮ, ಪ್ರಥಮ ಪುರುಷ, ಪುಲ್ಲಿಂಗ ಏಕ ವಚನ.

೧೩. ಕ್ರಿಯಾನಾಮ ಬಂದಲ್ಲಿ=ಪುರುಷ ಲಿಂಗ, ವಚನಗಳಿಷ್ಟೇ ಹತ್ತುತ್ತವೆ. ಉ. (ನುಡಿದದ್ದು) ಕ್ರಿಯಾನಾಮ ಪ್ರಥಮ ಪುರುಷ ನಪುಂಸಕಲಿಂಗ ಏಕ ವಚನ.

೧೪. ಅವ್ಯಯ ಬಂದಲ್ಲಿ=ಅವುಗಳ ಸ್ಥಳ, ಕಾಲ, ರೀತಿ. ಮೊದಲಾದವುಗಳಲ್ಲದೆ ಮತ್ತೇನು ಹತ್ತುವದಿಲ್ಲ. ಉ. (ಯಾವಾಗ) ಕಾಲವಾಚಕ ಕ್ರಿಯಾವಿಶೇಷಣಾವ್ಯಯ.

೧೫. ವಿಶೇಷಣಾರ್ಥಕ ನಾಮಪದ ಬಂದಲ್ಲಿ=ಲಿಂಗ, ವಿಭಕ್ತಿ, ವಚನಗಳು ಹತ್ತುತ್ತವೆ. ಉ. (ದೊಡ್ಡವನು) ಈ ವಿಶೇಷಣಾರ್ಥಕ ನಾಮಪದದ ಪುಲಿಂಗ ಪ್ರಥಮದ ಏಕವಚನ.

೧೬. ಊನ ಕ್ರಿಯಾಪದ ಬಂದಲ್ಲಿ=ಧಾತು ಹಾಗೂ, ಸಂಪೂರ್ಣವಾದ ಕ್ರಿಯಾಮಾಲೆ ಇಲ್ಲ. ಪರಂತು, ಪುರುಷ, ಲಿಂಗ, ವಚನಗಳು ಹತ್ತುತ್ತವೆ. ಉ. (ಆಪೆನು) ಊನ ಕ್ರಿಯಾಪದದ ಉತ್ತಮ ಪುರುಷ, ಸಾಮಾನ್ಯ ಲಿಂಗ, ಏಕ ವಚನ.

೧೭. ಅವ್ಯಯ ಕ್ರಿಯಾಪದ ಬಂದಲ್ಲಿ=ಮೇಲಿನ ಆಖ್ಯಾತ ಪ್ರತ್ಯಯಗಳು ಸಹ ಹತ್ತುವದಿಲ್ಲ. ಉ. (ಬೇಕು, ಬೇಡ) ಮೊದಲಾದವುಗಳು.

ಮೇಲೆ ಹೇಳಿದ ಇಷ್ಟು ಪ್ರಕಾರಗಳು ಧ್ಯಾನದಲ್ಲಿಟ್ಟರ ಗ್ರಂಥಗ ಮೇಲಿಂದ ಸರಸವಾಗಿ, ವ್ಯಾಕರಣ ಮಾಡುವದಕ್ಕೆ ಬರುವದು. ಇವುಗಳಲ್ಲದೆ, ಇನ್ನೂ ಕೆಲವು ತೊಂದರೆಗಳು ವಿದ್ಯಾರ್ಥಿಗಳಿಗೆ ಬರುವವು. ಆದರೆ, ಅವುಗಳೆಲ್ಲವನ್ನು ಇಲ್ಲಿ ಬರಿಯುತ್ತ ಹೋದರೆ, ಒಂದು ಗ್ರಂಥವಾಗುವದು. ಆದ್ದರಿಂದ ಯಾರಿಗಾದರೂ, ಮೇಲೆ ವಿವರಿಸಿದವುಗಳ ಪ್ರೊರ್ತು, ಮತ್ತೇನಾದರೂ ತೊಂದರೆಗಳು ಬಂದಾಗ್ಗೆ, ಅದರ ವಿಷಯವಾಗಿ, ವಿಚಾರ ಮಾಡುವದಕ್ಕೆ ಬರುವದು. ಮುಂದಕ್ಕೆ ಸಾಗುವದು.

ತಾ. ೩೦ ನೇ ಮಾಹೆ ಜು
ಲಾಯಿ ೧೮೭೬ ನೇ ಇಸ
ವಿ ಮು. ಬೊಂ. ಶಾ. ಹಾ.
ಜಿ. ಧಾ.

ಸಹೀ ಜಗಂನಾಥ ಶ್ರೀಧರ
ಗೋಖಲೇ ಹೆಡ್ಡಮಾಸ್ತರ
ಸ್ಕೂಲ ಬೊಂಮನಹಳ್ಳಿ.

ರಾವಸಾಹೇಬ ಶಾಲಾಪತ್ರಕದ ಎಡೀಟರ ಇವರಿಗೆ.

ಅಯ್ಯಾ ತಂಮ, ಮೇ ತಿಂಗಳ ಶಾಲಾಪತ್ರಕ ಪಾನು (೩೨೭।೨)ನೇದ್ದರಲ್ಲಿ, ರಾಣೇಬಿನ್ನೂರ ಸಾಲಿಯಿಂದ ಬಂದ (೧) ಲೆಕ್ಕವನ್ನು ನೋಡಿದೆ. ಇಂಥ ಆಗದಂಥ ಲೆಕ್ಕವನ್ನು ಬರೆದು ಸುಮ್ಮನೇ ಜನರಿಗೆ ತೊಂದರೆ ಕೊಡುವದರಿಂದ ಏನು ಪ್ರಯೋಜನವಿಲ್ಲ. ಈ ಲೆಕ್ಕವನ್ನು ವಿದ್ಯಾರ್ಥಿಯು ಕಡಿಂದ ಛಾಪಿಸುವದರಿಂದಾದರೂ, ತಂಮ್ಮ ಸಾಲಿಯು ಮಹತ್ವವು ಕಡಿಮೆ ಅಗುವದಂತೂ ಸಹಜವೇ. ಈ ಲೆಕ್ಕವನ್ನು ಎಂಥಾವನಾದರೂ ನೋಡಿದಕೂಡಲೇ ತಪ್ಪು ಗ್ರಹಿಸುವನು. (೧।।೩।।೬।।೯।।೧೫) ಈ ಸಂಖೆಗಳು ಮೂರು ಉತ್ತರದಿಂದ ಬೆಳದವೆ. ಕಾರಣ, ಅದೇ ಅಂಕೆಯನ್ನು ಎಷ್ಟುಸಾರೆ ಇಟ್ಟು ಕೂಡಿಸಿದಾಗ್ಯು, ಬೇರೀಜು (೪೮) ಅಥವಾ (೫೧)

ಆಗುತ್ತದೆ. ಇದರಕಿಂತಲೂ, ಹೆಚ್ಚಿಗೆ ಸರ್ವ ಧನವು ನಮಗೆ ಬೇಕಾಗಿಲ್ಲ, ಒಳಗೂ ಬೇಕಿಲ್ಲ. ನಮಗೆ(೫)ಸರ್ವ ಧನವಾಗಬೇಕು. ಬೇರೆ ಇದ್ದ ಒಂದು ವರಹದ ಚೀಲವು (೫೧) ಈ ಗುಂಪಿನಲ್ಲಿ ಬರುವದಲ್ಲ. ಎರಡು ಪದಗಳಲ್ಲಿ ಒಂದು (೪೯) ಎರಡನೇದ್ದು (೫೧) ಈ ಪ್ರಕಾರಬಂದು, (೫೧) ಸರ್ವ ಧನವುಳ್ಳಭಾಗದೊಳಗೆ, ಒಂದು ವರಹದ ಚೀಲವು ಬರಲಿಕ್ಕೇ ಬೇಕು. ಹೀಗೆ ಬರುವದಂತೂ ಅಶಕ್ಯವೇ ಆದ್ದರಿಂದ, ಚೀಲಗಳನ್ನು ಒಡೆಯದೇ ಎಂಥವನಾದರೂ ಹಂಚಲಾರನು. ಇದೇ ಮಾಸಲೆಯ, ಇನ್ನೊಂದು ಸುಳ್ಳು ಲೆಕ್ಕವನ್ನು ನಂನ ನೋಡುವಿಕೆಯಲ್ಲಿ ಒಳಗಡೆ ಬಂದಿತ್ತು. ಅದು ಹೀಗೆ (೧॥೩॥೫॥೭॥೯॥೧೧॥೧೩॥೧೫॥೧೭॥೧೯॥ ಈ ಪ್ರಕಾರ ಕ್ರಯವುಳ್ಳ (೧) ಉಂಗರಗಳನ್ನು ಉಭಯಬಾಂಧವರಿಗ ವರಹಗಳೂ ಉಂಗರಗಳೂ, ಸಮನಾಗುವಂತೆ ಹಂಚ್ಚತಕ್ಕದ್ದಾದರೂ ದುರ್ಲಭವೆಂಬದಕ್ಕೆ ಏನು ಸಂಶಯವಿಲ್ಲ. ಇಂಥವುಗಳನ್ನು ತೆಗೆದುಕೊಂಡು ವ್ಯರ್ಥ ಶ್ರಮಬಡುವವರು ಆಗದಂಥ ಕೆಲಸಕ್ಕೆ ಕೈಹಚ್ಚಿ ಕಡೆಗೆ ನಿರಾಶಿತರಾಗುವಂತೇ ಸರಿ.

ತಾ. ೨೮ ಅವಷ್ಟ ಸನ್
೧೮೭೬ ಇ. ಮು. ಬಂಮ
ನಹಳ್ಳಿ. ತಾ ಹಾ. ಜಿ. ಧಾ.

ಸಹಿ ಜಗಂನಾಥ ಶ್ರೀಧ
ಗೋಖಲೇ ಹೆ. ಬಮನ
ಳ್ಳಿ.

ಮಹಾರಾಜ ರಾಜಮಾನ್ಯ ರಾಜಶ್ರೀ ಕನ್ನಡ ಶಾಲಾಪತ್ರಕ
ಎಡೀಟರರಿಗೆ.

ಏ. ವಿ. ತಮ್ಮ ಕರದೊಳುದ್ಭವಿಸುವ ಮತಪತ್ರಿಕೆಯ ಕೆಳಗೆ ಬರೆದ ನಾಲ್ಕು ಪಂಕ್ತಿಗಳಿಗೆ ಸ್ಥಳದೊರಿಯುವದೆಂದು ಶೆಗ್ಗೈಯುತನೆ ಶಾಲಾಪತ್ರಕ ೧೨ ಪಾನು ೩-೪ ನೇದರ

ಜಿಲ್ಲಾ ಧಾರವಾಡ ತಾಲೂಕಾ ಹಾನಗಲ್ಲ ಪೈಕಿ ಆಲೂರ ಸಲಿಯ ವಿದ್ಯಾರ್ಥಿಯಾದ. ಬಸಯ್ಯಾ ಚನಬಸಯ್ಯಾ ಜವಳಿವರ ಇತನು ಪ್ರಶ್ನಮಾಡಿದ್ದು ಯೇನಂದರೆ. ಲೆಖ್ಖವು. ಒಂದ ಶಹರಿನಲ್ಲಿ ೫ ಕೋಟೆಗಳಿದ್ದವು. ಆ ಶಹರಿಗೆ ಯರ್ಡನೇ ಭೂಪಾಲನು ಬಂದು ಮೊದಲನೇ ಕೋಟೆಗೆ ಮುತ್ತಿಗಿ ಹಾಕಿದನು ಆ ಕೋಟೆಯ ಯಜಮಾನನು ಬಾಕಿ ನಾಲ್ಕು ಕೋಟೆಯವರಿ ನಮ್ಮಲ್ಲಿ ಇದ್ದಷ್ಟು ಜನರನ್ನು ನೀವು ಪ್ರತ್ಯಪ್ರತ್ಯೇಕ ಕೋಟೆಯುವರು ಕೊಡರಿ ಅಂದನು. ಅವರು ಅದರಂತೆ ಕೊಟ್ಟರು. ಆ ಮೇಲೆ ಶತ್ರುಗಳು ಹಿಮ್ಮೆಟ್ಟಿ ಯರ್ಡನೇ ಮೂರನೇ ನಾಲ್ಕನೇ ಐದನೇ ಕೊಟೆಗಳಿಗೆ ಮುತ್ತಿಗೆ ಹಾಕುತ್ತಿರಲಾಗಿ ಪ್ರತ್ಯೇಕಕೊಟೆಯುವರು ಮೊದಲನೇ ಕೋಟೆಯುವನಂತೆ ಸಹಾಯ ಮಾಡಿದ್ದರಿಂದ ಶತ್ರುಗಳು ಹಿಮ್ಮೆಟ್ಟಿ ತಿರುಗಿ ಹೋದಮೇಲೆ ಪ್ರತ್ಯಪತ್ರ್ಯೇಕ ಕೋಟೆಗಳಲ್ಲಿ ನೋಡುತ್ತಿರಲಾಗಿ ಆ ಆ ಕೋಟೆಯಲ್ಲಿ ಮೊದಲು ಇದ್ದಷ್ಟೆ ಜನರಿದ್ದರು ಆದರೆ ಮೊದಲು. ಒಂದೊಂದು ಕೋಟೆಗಳಲ್ಲಿ ಎಷ್ಟೆಷ್ಟು ಜನರಿದ್ದರೆಂಬುವದಕ್ಕೆ ರೀತಿಯು.

ಮೊದಲನೇ ಕೋಟಯಲ್ಲಿ ಎಷ್ಟು ಜನರಿರುವರೆಂದು ಸ್ಥಾಪಿಸುವಿರಿ ಮೋದಲನೇ ಕೋಟೆಯ ೨ ಪಾಲು ೨ನೇ ಕೊಟೆಯಲ್ಲಿ. ೧ನೇ ಕೋಟೆಯ ೩ ಪಾಲು ೩ನೇ ಕೋಟೆಯಲ್ಲಿ. ೧ನೇ ಕೋಟೆಯ ೪ ಪಾಲು ೪ನೇ ಕೋಟೆಯಲ್ಲಿ ಮೊದಲನೇ ಕೋಟೆಯ ೫ ಪಾಲು ೫ನೇ ಕೋಟೆಯಲ್ಲಿ ಈ ಪ್ರಕಾರಾ ಎಷ್ಟು ಕೋಟೆಗಳಿದ್ದರೂ ಚಿಂತೆಇಲ್ಲ ಮೊದಲನೇ ಕೋಟೆಯ ಪಟ್ಟುಗಳನ್ನು ಹೆಚ್ಚು ಮಾಡಿಕೋತ ಹೋದರಾಯಿತು ಮೊದಲನೇ ಕೋಟೆಯಲ್ಲಿ ಬೇಕಾದಂಥ ಸಂಖ್ಯ ಇಚ್ಛಿಸಿದರೂ ಚಿಂತೆಇಲ್ಲ. ಮೊದಲನೇ ಕೋಟೆಯ ಪಟ್ಟುಗಳನ್ನು ಹೆಚ್ಚು ಮಾಡ

ಆಗುತ್ತದೆ. ಇದರಕಿಂತಲೂ, ಹೆಚ್ಚಿಗೆ ಸರ್ವ ಧನವು ನಮಗ
ಬೇಕಾಗಿಲ್ಲ, ಒಳಗೂ ಬೇಕಿಲ್ಲ. ನಮಗೆ(೫)ಸರ್ವ ಧನವ
ಗಬೇಕು. ಬೇರೆ ಇದ್ದ ಒಂದು ವರಹದ ಚೀಲವು (೫೧
ಈ ಗುಂಪಿನಲ್ಲಿ ಬರುವದಿಲ್ಲ. ಎರಡು ಪದಗಳಲ್ಲಿ ಒಂದ
(೪೯) ಎರಡನೇದ್ದು (೫೧) ಈ ಪ್ರಕಾರಬಂದು, (೫೧
ಸರ್ವ ಧನವುಳ್ಳಭಾಗದೊಳಗೆ, ಒಂದು ವರಹದ ಚೀಲವು ಬ
ಲಿಕ್ಕೇ ಬೇಕು. ಹೀಗೆ ಬರುವದಂತೂ ಅಶಕ್ಯವೇ. ಆದ್ದರಿಂದ
ಚೀಲಗಳನ್ನು ವಡೆಯದೇ ಎಂಥವನಾದರೂ ಹಂಚಲಾರನು
ಇದೇ ಮಾಸಲೆಯ, ಇನ್ನೊಂದು ಸುಳ್ಳು ಲೆಕ್ಕವನ್ನು ನಂ
ನೋದುವಿಕೆಯಲ್ಲಿ ಒಳಗಡೆ ಬಂದಿತ್ತು. ಅದು ಹೀಗೆ (೧
೩||೫||೭||೯||೧೧||೧೩||೧೫||೧೭||೧೯|| ಈ ಪ್ರಕಾ
ಕ್ರಯವುಳ್ಳ (೧) ಉಂಗರಗಳನ್ನು ಉಭಯಬಾಂಧವರಿ
ವರಹಗಳೂ ಉಂಗರಗಳೂ, ಸಮನಾಗುವಂತೆ ಹಂಚ್ಚತಕ್ಕದ
ದರೂ ದುರ್ಘಟನೆಂಬವಕ್ಕೆ ಏನು ಸಂಶಯವಿಲ್ಲ. ಇಂಥವುಗ
ನ್ನು ತೆಗೆದುಕೊಂಡು ವ್ಯರ್ಥ ಶ್ರಮಬಡುವವರು ಆಗದಂಥ
ಲಸಕ್ಕೆ ಕೈಹಚ್ಚಿ ಕಡೆಗೆ ನಿರಾಶಿತರಾಗುವಂತೇ ಸರಿ.

ತಾ. ೨೮ ಅವಷ್ಟ ಸನ್
೧೮೭೬ ಇ. ಮು. ಬಂಮ
ನಹಳ್ಳಿ. ತಾ ಹಾ. ಜಿ. ಧಾ.

ಸಹಿ ಜಗಂನಾಥ ಶ್ರೀಧ
ಗೋಖಲೇ ಹೆ. ಬಮನ
ಳ್ಳಿ.

ಮಹಾರಾಜ ರಾಜಮಾನ್ಯ ರಾಜಶ್ರೀ ಕನ್ನಡ ಶಾಲಾಪತ್ರಕ
ಎಡೀಟರರಿಗೆ.

ವಿ. ವಿ. ತಮ್ಮ ಕರದೊಳುದ್ಭವಿಸುವ ಮಠಪತ್ರಿಕೆಯ
ಕೆಳಗೆ ಬರೆದ ನಾಲ್ಕು ಪಂಕ್ತಿ ವಳಿಗೆ ಸ್ಥಳದೊರಿಯುವದೆಂದು
ಶೆಗೈಯುತ್ತೇನೆ ಶಾಲಾಪತ್ರಕ ೧೨ ಪಾನು ೩-೪ ನೇದರ

ಜಿಲ್ಹಾ ಧಾರವಾಡ ತಾಲೂಕಾ ಹಾನಗಲ್ಲ ಪೈಕಿ ಆಲೂರ ಸಾಲಿಯ ವಿದ್ಯಾರ್ಥಿಯಾದ. ಬಸಯ್ಯಾ ಚನಬಸಯ್ಯಾ ಜವಳಿಮರ ಇತನು ಪ್ರಶ್ನಮಾಡಿದ್ದು ಯೇನಂದರೆ. ಲೆಖ್ಖವು. ಒಂದು ಶಹರಿನಲ್ಲಿ ೫ ಕೋಟಿಗಳಿದ್ದವು. ಆ ಶಹರಿಗೆ ಯರ್ಡನೇ ಭೂಪಾಲನು ಬಂದು ಮೊದಲನೇ ಕೋಟಿಗೆ ಮುತ್ತಿಗಿ ಹಾಕಿದನು. ಆ ಕೋಟಿಯ ಯಜಮಾನನು ಬಾಕಿ ನಾಲ್ಕು ಕೋಟಿಯವರಿಗೆ ನಮ್ಮಲ್ಲಿ ಇದ್ದಷ್ಟು ಜನರನ್ನು ನೀವು ಪ್ರತ್ಯಪ್ರತ್ಯೇಕ ಕೋಟಿಯವರು ಕೊಡರಿ ಅಂದನು. ಅವರು ಅದರಂತೆ ಕೊಟ್ಟರು. ಆ ಮೇಲೆ ಶತ್ರುಗಳು ಹಿಮ್ಮೆಟ್ಟಿ ಯರ್ಡನೇ ಮೂರನೇ ನಾಲ್ಕನೇ ಐದನೇ ಕೊಟಿಗಳಿಗೆ ಮುತ್ತಿಗೆ ಹಾಕುತ್ತಿರಲಾಗಿ ಪ್ರತ್ಯೇಕಕೊಟಿಯವರು ಮೊದಲನೇ ಕೋಟಿಯವನಂತೆ ಸಹಾಯ ನೀಡಿದ್ದರಿಂದ ಶತ್ರುಗಳು ಹಿಮೆಟ್ಟಿ ತಿರುಗಿ ಹೋದಮೇಲೆ ಪ್ರತ್ಯಪ್ರತ್ಯೇಕ ಕೋಟಿಗಳಲ್ಲಿ ನೋಡುತ್ತಿರಲಾಗಿ ಆ ಆ ಕೋಟಿಯಲ್ಲಿ ಮೊದಲು ಇದ್ದಷ್ಟೆ ಜನರಿದ್ದರು ಆದರೆ ಮೊದಲು. ಒಂದೊಂದು ಕೋಟಿಗಳಲ್ಲಿ ಎಷ್ಟೆಷ್ಟು ಜನರಿದ್ದರೆಂಬುವದಕ್ಕೆ ರೀತಿಯು.

ಮೊದಲನೇ ಕೋಟಿಯಲ್ಲಿ ಎಷ್ಟು ಜನರಿರುವರೆಂದು ಸ್ಥಾಪಿಸುವಿರಿ ಮೋದಲನೇ ಕೋಟಿಯ ೨ ಪಾಲು ೨ನೇ ಕೊಟಿಯಲ್ಲಿ. ೧ನೇ ಕೋಟಿಯ ೩ ಪಾಲು ೩ನೇ ಕೋಟಿಯಲ್ಲಿ. ೧ನೇ ಕೋಟಿಯ ೪ ಪಾಲು ೪ನೇ ಕೋಟಿಯಲ್ಲಿ ಮೊದಲನೇ ಕೋಟಿಯ ೫ ಪಾಲು ೫ನೇ ಕೋಟಿಯಲ್ಲಿ ಈ ಪ್ರಕಾರಾ ಎಷ್ಟು ಕೋಟಿಗಳಿದ್ದರೂ ಚಿಂತೆಇಲ್ಲ ಮೊದಲನೇ ಕೋಟಿಯ ಪಟ್ಟುಗಳನ್ನು ಹೆಚ್ಚು ಮಾಡಿಕೋತ ಹೋದರಾಯಿತು ಮೊದಲನೇ ಕೋಟಿಯಲ್ಲಿ ಬೇಕಾದಂಥ ಸಂಖ್ಯೆ ಇಚ್ಛಿಸಿದರೂ ಚಿಂತೆಇಲ್ಲ. ಮೊದಲನೇ ಕೋಟಿಯ ಪಟ್ಟುಗಳನ್ನು ಹೆಚ್ಚು ಮಾಡಿ

ದರೆ ಉತ್ತರ ಹೊರಡುವದು.

೧ನೇ ಕೋಟಿಯ
ಲ್ಲಿ ೬ ಜನರಿದ್ದರು } ೨ನೇ ಕೋ.
೧೪ ಜನರು } ೩ನೇ ಕೋ.
೨೧ ಜನರು
೪ ನೇ ಕೋ.
೨ ಜನರು } ೫ ನೇ ಕೋಟಿಯ
ಲ್ಲಿ ೩೫ ಜನರು.

ಈ ಪ್ರಕಾರ ಜನರಿದ್ದರು.

ಪತ್ರ ವಿಸ್ತಾರವಾದ ಬಗ್ಗೆ ಕ್ಷಮೆ ಇರಬೇಕು ಇತಿ ವಿಜ್ಞಾಪನಾಃ. ತಾರೀಖು ೬ ಮಾಹೆ ಸಪ್ಟಂಬರ ಸನ್ನ ೧೮೬೭ ನೇ ಇಸವಿ.

ಸಹೀ ಬಾಬಾ ದಿಕ್ಷಿತ ಬಿನ್ನ ದಿವಾಕರ ದಿಕ್ಷಿತ ಅಗರ
ಖೇಡ ವಿದ್ಯಾರ್ಥಿ ಶಾಲಾ ಇಂಡಿ ತಾಲೂಕ ಇಂಡಿ
ಜಿಲ್ಲಾ ಕಲಾದಗಿ.

ಮೇಹರಬಾನ ರಾವಸಾಹೇಬ ದಕ್ಷಿಣಭಾಗದ ಕನ್ನಡ ಶಾಲಾಪತ್ರಕದ ಎಡೀಟರರ ಚರಣಾರವಿಂದಕ್ಕೆ.

ಸೇವಕನು ಮಾಡುವ ಬಿನ್ನಹ ವೇನಂದರೆ ಕೆಳಗೆ ಬರೆದ ನಾಲ್ಕು ಪಂಕಿ ಗಳನ್ನು ತಮ್ಮ ಮನೋಹರವಾದ ಮತಪತ್ರಕದಲ್ಲಿ ಛಾಪಿಸಿ ಪ್ರಸಿದ್ಧಿಸುವಿರೆಂದು ಮಹತ್ಕಾಂಕ್ಷೆಯನ್ನು ಧರಿಸಿಧ್ಧೇನೆ.

|| ಪದಾ ||

ಬಾರೋಬಾವಜನಯ್ಯಾ । ತೂರಿಸುಯನ್ನನುಸೀನು || ದೋರೀಸನ್ಮಾರ್ಗವನು । ಶಿರಿಯಾದಿವರಿಯನೆಮರಿಯುವಹೊಕ್ಕನು ||

|| ಪಲ್ಲಾ ||

ಸುರಭೀಃಬೋರವಿದಾರಾ । ಸುರಭೀಸಂಹರಧೀರಾ || ಸುರಸ್ತುತೀಭಾಗವತಾರಾ । ಗುರುತನವರತಲರಿತನರೊಳಗಿಹ || ೧ || ನ

ಗಜಾವಾತಸನೂತಾ। ನಗದಾದ್ವೈರಿಯಭ್ರಾತಾ ॥ ನಗದಭಿದಾನ
ಸೂತಾ। ನಗಧರಜಗಧರದುಸುದಬ್ಧಿವಾಸನೆ ॥ ೨ ॥
ಗುರುಘಾತಕಅನುಜೇಯಾ। ಗುರುತಭಿವಾನದೊಡಿಯಾ ॥
ಗುರುಮುಹಿಪತಿಪ್ರಿಯಾ । ಶರಣಾರಭರಣಾಸು । ಕರುಣೊಳುವಾ
ರತಿ ॥ ೩ ॥

ಈ ಪದವು ನನಗೆ ಬಹು ಚಮತ್ಕಾರವಾಗಿ ಕಂಡು ಬಂದಿ
ುತ್ತದೆ. ಆದರೆ ನಮ್ಮ ಪ್ರಿಯ ಬಾಂಧವರಾದ ಯಾವತ್ತು
ಸ್ಕೂಲಮಾಸ್ತರರು ನಮ್ಮಮೇಲೆ ದಯಮಾಡಿ ಈ ಪದವನ್ನು
ೀಕಿಸುವಿರೆಂದು ತುಂಬಾ ಕೋರಿಕೆಯುಂಟು. ಪತ್ರವಿಸ್ತಾರ
ಾದ ಬಗ್ಗ ಕ್ಷಮಾ ಇರಬೇಕು. ತಾರೀಖು ೧೩ ಮಾಹೆ ಆ
ಷ್ಟ, ಸನ್ ೧೯೩೬ ಇಸವಿ.

ಸಹೀ ರಾಘವೇಂದ್ರ, ಅಪ್ಪಾಜಿ ಘಪ್ಪ ಅಶಿಸ್ಟಂಟ ಮಾಸ್ತರ
ಬಾಗೇವಾಡಿ.

ರಾವಸಾಹೇಬ ಕನ್ನಡ ಶಾಲಾಪತ್ರಕದ ಕರ್ತರಿಗೆ

ವಿ. ವಿ. ಸನ್ನ ೧೯೩೬ ಇಸವಿ ಜೂನ ತಿಂಗಳದ ಕನ್ನ
ಶಾಲಾಪತ್ರಿಕೆಯು, ಪಾನಶಿಳ್ಳಿಯಲ್ಲಿ ಸ್ವಾಮಿ ಶೇಷಾಚಾರ್ಯ
ಲಿಗಿ ಸ್ಕೂಲಮಾಸ್ತರ ಹಿರೇಕೊಪ್ಪ ಇವರು ಕೊಟ್ಟ ಜೋ
ಳ ಪದದ ಅರ್ಥವನ್ನು. ನನ್ನ ಬುದ್ಧಿಗೆ ತಿಳಿದಷ್ಟು ಬರದಿ
ೀನೆ, ಅದನ್ನು ಛಾಪಿಸಿ ಪ್ರಸಿದ್ಧಗೈವಿರೆಂದು ಅಪೇಕ್ಷಿಸು
ನೆ.

- ಜೋಗಳ ಪದವು

॥ ಪದ ॥ ಗೋಕರ್ಣಬೆರಳಿಗೆಉಂಗರಿಟ್ಟವಳು । ಗೋಕ
ರ್ಣವೈರಿಯಮುಡಿಕಟ್ಟುಳ್ಳವಳು । ಗೋಜಾತಮುಖವುಳ್ಳಗೋ

ತ್ರಿಯಳು । ವರ । ಗೋಪವಹಾನಸತಿತೂಗಿಪಾಡುವಳುಜೋ
ಜೋ ॥ ೧ ॥

ಶಬ್ದಾರ್ಥವು; ಗೋಕರ್ಣ=ಸರ್ಪವನ್ನು (ಗೋ=ಕಂಣು
ಕರ್ಣ=ಕಿವಿಯಾದದ್ದು) ಬೆರಳಿಗೆ । ಉಂಗರಿಟ್ಟವಳು=ಉಂಗ
ವನ್ನು ಮಾಡಿ ಇಟ್ಟಂಥವಳು (ಪಾರ್ವತಾದೇವಿಯು.) ಗೋ
ರ್ಣ=ಸರ್ಪವು; ವೈರಿ=ವಿರೋಧಿಯಾದನ ವಿಲಿನಹಾಗೆ, ಮುಡಿ
ಟ್ಟುಳ್ಳವಳು=ತುರುಬುವುಳ್ಳಂಥಾ ಪಾರ್ವತಾದೇವಿಯು ಗೋಜ
ತ=ಕಮಲ (ಗೋ=ಉದಕ ಜಾತ=ಹುಟ್ಟಿದಂಥಾದ್ದು) ಮು
ವುಳ್ಳ=ಮೋರಿಯುಳ್ಳ ಗೋಪುತ್ರಿಯಳು=ಪರ್ವತರಾಜನ ಮ
ಳಾದ, ವರ=ಶ್ರೇಷ್ಠನಾದ, ಗೋಪವಾಹನ=ಈಶ್ವರನ (ಗೋ=ನ
ದಿಕೇಶ್ವರನನ್ನು, ವಾಹನ=ವಾಹನ ಮಾಡಿದಂಥವನ) ಸತಿ=
ಹೆಂಡತಿಯಾದ ಪಾರ್ವತಾದೇವಿಯು, ತೂಗಿ ಪಾಡುವಳು, ತ
ಗಿದಾಡುವಳು.

ಭಾವಾರ್ಥವು; ಸರ್ಪವನ್ನು ಉಂಗರಮಾಡಿ ಬೆರಳಲ್ಲಿ
ಟ್ಟಂಥಾ; ನವಿಲಿನಹಾಗೆ ಮುಡಿಕಟ್ಟುಳ್ಳಂಥಾ, ಕಮಲದಹಾ
ಮುಖವುಳ್ಳಂಥಾ ಪರ್ವತರಾಜನ ಮಗಳಾದಂಥಾ ಶ್ರೇಷ್ಠನಾ
ಪರಮೇಶ್ವರನ ಸತಿಯಾದ ಪಾರ್ವತಾದೇವಿಯು ತೂಗಿ, ಜೋ
ಗಳವನ್ನು ಹಾಡಿದಳು. (ಮುಂದಕ್ಕೆ ಸಾಗುವದು.)

ಬಸಲಿಂಗಪ್ಪಾ ಬಸಪ್ಪಾ ಕುರಡಿಕೇರಿ, ಹೆಡ್ಡಮಾಸ್ತರ, ಸ
ಡಿ. ತಾ॥ ರೋಣ ಜಿಲ್ಲಾ ಧಾರವಾಡ.

ಶಾಲಾಪತ್ರಕವು.

ಪುಸ್ತಕ ೧೨]   [ಸಂಚಿಕೆ ೬

ತಾರೀಖು, ೨೫ನೇ ಮಾಹೆ ಸಪ್ಟಂಬರ, ೧೮೭೬.

EDUCATIONAL INTELLIGENCE.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮ. ಎಜ್ಯುಕೇಶನಲ ಇನಸ್ಪೇಕ್ಟರ ಧೊರೆಗಳು ಟ್ರೇನಿಂಗ ಕಾಲೇಜದ ವಾರ್ಷಿಕ ಪರೀಕ್ಷೆಗಾಗಿ ಧಾರವಾಡಕ್ಕೆ ಬರತಕ್ಕವರಿದ್ದಾರೆಂದು ಕೇಳುತ್ತೇವೆ. ಈ ಪರೀಕ್ಷೆ ಬರುವ ತಿಂಗಳ ಎರಡನೆ ಸೋಮವಾರ ದಿನ ಪ್ರಾರಂಭವಾಗತಕ್ಕದ್ದದೆ.

ಮೇಜರ ಕ್ಯಾಂಡಿಸಾಹೇಬ, ಮರಾಠಿ ಟಾನಸ್ಲೇಟರ, ಇವರು ನಡೆದ ತಿಂಗಳ ಪ್ರಾರಂಭದಿಂದ ತಮ್ಮ ಕೆಲಸದ ರಾಜೀನಾಮೆ ಕೊಟ್ಟು ಪೇನಶನ ತಕ್ಕೊಂಡರು. ಅವರ ಕೆಲಸಕ್ಕೆ ಅಹಮುದನಗರ ಜಿಲ್ಲೆಯ ಡಿ. ಇನಸ್ಪೇಕ್ಟರರಾದ ರಾ. ಸಾ. ಶ್ರೀಕೃಷ್ಣ ರಂಘನಾಥ ಶಾಸ್ತ್ರಿ, ತಳೇಕರ ಇವರನ್ನು ನೇಮಕ ಮಾಡಿದರು.

ಇಂಗ್ಲಂಡ ದೇಶದೊಳಗಿನ ಪ್ರಸಿದ್ಧ ಸಂಸ್ಕೃತಜ್ಞರಾದ

ಡಾಕ್ಟರ ಮೋನಿಯರ ವಿಲಿಯಮ್ಸ ಸಾಹೇಬರು ಈ ವರ್ಷ
ಕೊನೆಕೊನೆಗೆ ತಿರುಗಿ ಹಿಂದುಸ್ಥಾನಕ್ಕೆ ಬರತಕ್ಕವರಿದ್ಧಾರ
ದು ಕೇಳುತ್ತೇನೆ. ಹಿಂದುಜನರ ಧರ್ಮ ತತ್ವಗಳ ಶೋಧನ
ಡಿ, ಆ ವಿಷಯ ಒಂದು ಪುಸ್ತಕ ಬರೆಯಬೇಕೆಂಬ ಅಪೇಕ್ಷ
ಅವರ ಮನಸ್ಸಿನಲ್ಲಿ ಬಹಳವದೆ.

ಮುಂಬಯಿ ಯುನಿವರ್ಸಿಟಿಯ ಅಸಿಸ್ಟಂಟ ರಜಿಸ್ಟ್ರಾ
ರಾವಸಾಹೇಬ ಗಣಪತರಾವ ಮೋರೋಬಾ ಪಿತಳೆ. ಎಂಬವ
ಕೆಲವು ವರ್ಷಗಳ ಕೆಳಗೆ ಮುಂಬಯಿ ಯುನಿವರ್ಸಿಟಿಯ ಮ್ಯಾಟ್ರಿ
ಕ್ಯುಲೇಶನ ಲಿಟಲಗೋ, ಬೀಏ, ಎಮೆ ಪರೀಕ್ಷೆಗಳಲ್ಲಿ ಬೇ
ಬೇರೆ ವಿಷಯಗಳಲ್ಲಿ ಹಾಕಿದ ಯಾವತ್ತು ಪ್ರಶ್ನಗಳನ್ನು
ಪ್ರಾರಂಭದಿಂದ ಒತ್ತಟ್ಟಿಗೆ ಕೂಡಿಸಿ ಛಾಪಿಸಿ ಪ್ರಸಿದ್ಧ ಮಾಡಿ
ರು. ಈಗ ಅವರು ಎಲೆಲಬೀ ಪರೀಕ್ಷೆಯ ಪ್ರಶ್ನಗಳನ್ನು
ಒತ್ತಟ್ಟಿಗೆ ಕೂಡಿಸಿ ಛಾಪಿಸಿದ್ಧಾರೆ. ಈ ಮೇರಿಗೆ ಪರೀಕ್ಷೆ
ಳ ಪ್ರಶ್ನಗಳನ್ನು ಮುದ್ರಿಸುವದರಿಂದ ಯಾವದೊಂದು ವಿ
ಯದಮೇಲೆ ಹಾಕಿದ ಯಾವತ್ತು ಹಿಂದಿನ ಪ್ರಶ್ನಗಳು ನೋ
ಡಲಿಕ್ಕೆ ಶಿಕ್ಕು, ಪರೀಕ್ಷಕರಿಗೂ ಉಮೇದವಾರರಿಗೂ ಬಹ
ಲಾಭವಾಗುವದು.

ವಿಲಾಯತಿಯಲ್ಲಿ ಮಿಸ್ಟರ ಫೆರನ ಎಂಬ ಸಾಹೇಬರು ಸಾ
ಲೆಗಳ ತಪಾಸಣೆ ವಿಷಯುವ ಮೇಲೆ ಒಂದು ಸ್ಕೂ ಕ್ರೊಸ ಪು
ಸ್ತಕವನ್ನು ಬರೆದಿದ್ಧಾರೆ. ಈ ಗ್ರಹಸ್ಥರು ಸುಮಾರು ಹತ್ತು
ವರುಷ ಸ್ವತಃ ಸಾಲೇ ಇನಸ್ಪೇಕ್ಟರ ಕೆಲಸ ಮಾಡಿದ್ಧಾರೆ. ಇ
ವರು ಮಾಡಿದ ಪುಸ್ತಕವಲ್ಲಿ ಮುಖ್ಯವಾಗಿ ಸಾಲೆಗಳ ಪರೀಕ್ಷೆ
ಹ್ಯಾಗೆ ತಕ್ಕೊಳ್ಳಬೇಕು, ಸಾಲೆಗಳಲ್ಲಿ ವಿದ್ಯಾಭ್ಯಾಸವು ಉತ್ಕ

ಷ್ಟವಾಗಿ ಸಾಗುವದಕ್ಕೆ ಏನೇನು ಹಂಚಿಕೆಗಳನ್ನು ಮಾಡಬೇಕು, ಎಂಬ ಬಗ್ಗೆ ವಿಶೇಷ ವಿವರ ಕೊಟ್ಟಿರುತ್ತಾರೆ.

ಈಗ ವಿಲಾಯತಿಯಲ್ಲಿ ಹಿಂದುಸ್ಥಾನಕ್ಕೆ ಬರುವ ಸಿವಿಲ ಎಂಜಿನೆಯರ ಜನರನ್ನು ಕಲಿಸಿ ತಯಾರ ಮಾಡುವದಕ್ಕಾಗಿ ಕೂವರ್ಸಹಿಲ್ಲ ಕಾಲೇಜ, ಎಂಬದೊಂದು ಸ್ವತಂತ್ರ ವಿದ್ಯಾಲಯವದೆ. ಅದೇ ಮೇರೆಗೆ ಹಿಂದುಸ್ಥಾನಕ್ಕೆ ಬರುಪ ಸಿವಿಲ ಸರ್ವಂಟ ಜನರಿಗೆ ಅಭ್ಯಾಸ ಮಾಡಿಸುವದಕ್ಕಾಗಿಯೂ ಒಂದು ಹೊಸ ಕಾಲೇಜವನ್ನು ಹಾಕಬೇಕೆಂದು ಈಗಿನ ಸ್ಟೇಟ ಸೆಕ್ರೆಟರಿಗಳ ಅಭಿಪ್ರಾಯವದೆ.

ಮುಂಬಯಿಯೊಳಗಿನ ಪ್ರಸಿದ್ಧರಾದ ಸರ ಜಮಶೇಟಜಿ ಜಿಜಿಭಾಯಿ ಬಾರೋನೆಟ, ಇವರ ಅಳಿಯರಾದ ಮಿಸ್ಟರ ಮೋರಾಭಾಯಿ ಎಂಬವರು ವಿಲಾಯತಿಯಲ್ಲಿ ಬಾರಿಸ್ಟರ ಪರೀಕ್ಷೆಯಲ್ಲಿ ಪಾಸಾದರೆಂದು ತಿಳಿಯುತ್ತದೆ. ಮತ್ತು ಲಂಡನ ಯುನಿವರ್ಸಿಟಿ ಕಾಲೇಜ ಆಸ್ಪಿತ್ರಿಯಲ್ಲಿ ಕಾನೋಬಾ ರಣಛೋಡ ಎಂಬವರಿಗೆ ಬೆಳ್ಳಿಯದು. ಆತ್ಮಾರಾಮ ನಾರಾಯಣ ಎಂಬವರಿಗೆ ಬಂಗಾರದ್ದು ಪದಕಗಳು ಬಕ್ಷೀಸು ದೊರೆದವು. ಈ ಮೇರೆಗೆ ನಮ್ಮ ದೇಶದವರು ವಿಲಾಯತಿಗೆ ಹೋಗಿ, ಅಭ್ಯಾಸಮಾಡಿ ದೊಡ್ಡ ಪರೀಕ್ಷೆಗಳಲ್ಲಿ ಪಾಸಾಗಿ ಬಕ್ಷೀಸುಗಳನ್ನು ಪಡಿಯುವದು ಬಹಳೇ ಭೂಷಣಾಸ್ಪದವಾದ ಮಾತು.

ರುರ್ಕೀ ಎಂಜಿನಿಯರ ಕಾಲೇಜದಲ್ಲಿ ಈ ವರ್ಷದ ಪರೀಕ್ಷೆಯಲ್ಲಿ, ಪಾಸಾದವರಲ್ಲಿ ಬಾಬು ಕೃಷ್ಣಚಂದ್ರ ಬಂಡೋಪಾಧ್ಯ, ಎಂಬವರು ಮೊದಲನೆ ನಂಬರು ಬಂದು ಕಾರಣ,

ಅವರಿಗೆ ೮೦೦೦ ದ ಬಕ್ಷೀಸು ದೊರಕಿತು. ಈ ಕಾಲೇಜದಲ್ಲಿ ಈ ಪ್ರಕಾರದ ಬಕ್ಷೀಸು ದೊರಕಿಸಿದವರು; ಇವರೇ ಮೊದಲಿನ ಹಿಂದು ಗೃಹಸ್ಥರು.

ಹುಬ್ಬಳ್ಳಿಯಲ್ಲಿ ಹೋದತಿಂಗಳ ೨೭ ತಾರೀಖಿನಿಂದ ಹುಬ್ಬಳ್ಳಿವೈಭವವೆಂಬದೊಂದು ಸಾಪ್ತಾಹಿಕ ವರ್ತಮಾನಪತ್ರವು ಹೊರಡ ಹತ್ತಿದೆ.

ಧಾರವಾಡದಲ್ಲಿ ನಡೆದ ತಿಂಗಳ ಪ್ರಾರಂಭದಿಂದ ಚಂದ್ರೋದಯ ಎಂಬ ಸಾಪ್ತಾಹಿಕ ಕನ್ನಡ ವರ್ತಮಾನಪತ್ರವು ಹೊರಡಹತ್ತಿದೆ. ಈ ಪತ್ರವು ದಕ್ಷಿಣಮಹಾರಾಷ್ಟ್ರ ದೇಶದೊಳಗಿನ ಇತರ ಕೆಲವು ಪತ್ರಗಳಂತೆ ಅರ್ಧಕನ್ನಡ ಅರ್ಧ ಮಹಾರಾಷ್ಟ್ರವಿಲ್ಲದೆ, ಪೂರ್ಣವಾಗಿ ಕನ್ನಡಭಾಷೆಯಲ್ಲಿಯೆ ಹೊರಡುತ್ತದೆ.

ವಿಕ್ಟೋರಿಯಾ ಮಹಾರಾಣಿ ಧೊರೆಗಳವರ ಜೇಷ್ಠ ಪುತ್ರರಾದ ಯುವರಾಜ ಪ್ರಿನ್ಸ ಆಫ ವೆಲ್ಸ ಇವರು, ಹಿಂದುಸ್ಥಾನಕ್ಕೆ ಬಂದಾಗ, ಇಲ್ಲಿಯ ಸಂಸ್ಥಾನಿಕರು ಅವರಿಗೆ ಎಷ್ಟೋಚಮ ಚಮತ್ಕಾರದ ಬೆಲೆಯುಳ್ಳ ಪದಾರ್ಥಗಳನ್ನು ಕಾಣಿಕೆಯಾಗಿ ಕೊಟ್ಟರು. ಅವುಗಳಲ್ಲಿ ವಿಲಾಯತಿಯಲ್ಲಿ ಜನರು ಎಂದೂ ಕಾಣದಂಥ ಎಷ್ಟೋ ಪದಾರ್ಥಗಳನ್ನು ಯುವರಾಜರು ಬಂದು ಪ್ರಸಿದ್ಧ ಸ್ಥಳದಲ್ಲಿ ಇರಿಸಿದ್ದಾರೆ. ಈ ಪ್ರದರ್ಶನವನ್ನು ನೋಡ ಬಂದವರು ಕೊಟ್ಟ ಫೀಯ ಆಕಾರವು ದಿನ ವೊಂದಕ್ಕೆ ನಿದಾನ ೧,೦೦೦ ರೂಪಾಯಿ ಆಗುತ್ತದೆಂದು ಒಬ್ಬ ಇಂಗ್ಲಿ

ವರ್ತಮಾನ ಪತ್ರಕರ್ತನು ಬರೆದಿದ್ದಾನೆ. ಇದು ಸುಧಾರಣೆಯ ಪರಿಣಾಮವು!

ಜರ್ಮನ ದೇಶದಿಂದ ಕೃಷಿಶಾಸ್ತ್ರದಲ್ಲಿ ಪರಮ ಪ್ರವೀಣನಾದ ಸ್ಕ್ರಾಟ್ಸ ಎಂಬ ಸಾಹೇಬರು ಮುಂಬಯಿಯಲ್ಲಿ ಬಂದು ನಿಂತಿದ್ದಾರೆ. ಅವರು ಇತ್ತಲಾಗಿ ಹಿಂದುಸ್ಥಾನದೊಳಗಿನ ಕೃಷಿಕರ್ಮದ ವಿಷಯವಾಗಿ 'ಕೃಷಿಕರ್ಮದ ಮೂಲತತ್ವಗಳು, ಎಂಬ ಪುಸ್ತಕವನ್ನು ರಚಿಸಿದ್ದಾರೆ. ಈ ನಮ್ಮ ದೇಶದವರು ಈಗೆ ನಡೆದ ಪ್ರಮಾಣವಿಲ್ಲದೆ ಸಾಗು ಮಾಡುವ ರೀತಿಯನ್ನು ಬಿಟ್ಟು ಕೊಟ್ಟು. ಈ ಪುಸ್ತಕದಲ್ಲಿ ವಿವರಿಸಿದ ರೀತಿಯನ್ನು ಅನುಕರಿಸಿ, ಒಕ್ಕಲತನ ಮಾಡಹತ್ತಿದರೆ; ಈಗ್ಗ ಹುಟ್ಟುವದಕ್ಕಿತಲೂ ಹೆಚ್ಚು ಧಾನ್ಯವು ಹುಟ್ಟುವದೆಂಬ ಬಗ್ಗೆ ಸಂದೇಹವಿಲ್ಲ. ಸ್ಕ್ರಾಟ್ಕ ದೊರೆಗಳು ಈಗ ನಮ್ಮ ದೇಶದಲ್ಲಿ ರೈತರು ಸಾಗುವಳಿ ಮಾಡುವ ಕ್ರಮವನ್ನು ಪರಿತ್ಯಜಿಸಿರೆಂದು ಹೇಳುವದಿಲ್ಲ; ಆದರೆ ಅವನ್ನು ತಿದ್ದುವದಕ್ಕೆ ಕೆಲವು ಹೊಸ ಕಮಗಳನ್ನು ಹೇಳಿ, ಅವುಗಳಂತೆ ನಡೆಯುರಿ ಎಂದು ಹೇಳಿರುತ್ತಾರೆ. ಈ ಪುಸ್ತಕದ ಮಹಾರಾಷ್ಟ್ರ ಭಾಷಾಂತರವನ್ನು ನಾಶಿಕದೊಳಗಿನ ಅನಂತರಾವಜಿ ಕಾವಳೇ ಎಂಬ ಗೃಹಸ್ಥರು ಮಾಡಿರುತ್ತಾರೆ. ಅದರ ಕಯವನ್ನು ೨॥ ಅಂಣೆ ಇಟ್ಟಿರುತ್ತಾರೆ. ಕರ್ನಾಟಕ ದೇಶದಲ್ಲಿ ಯಾರಾದರು ದೇಶಾಭಿಮಾನಿಗಳು ಈ ಪುಸ್ತಕದ ಕನ್ನಡ ಭಾಷಾಂತರವನ್ನು ಮಾಡಿ ಛಾಪಿಸಿದರೆ, ಒಕ್ಕಲತನ ಮಾಡುವವರಿಗೆ ಬಹಳೇ ಉಪಯೋಗವಾಗುವದು.

ಮದ್ರಾಸ ಸರಕಾರದ ಮಾಡೆಲ ಫಾರ್ಮದ ಸುಪರಿಂಟೆಂಡೆಂಟ

ರು ಮದ್ರಾಸ ಕೃಷಿಕರ್ಮಶಾಲೆಎಂಬ ಹೊಸದಾಗಿ ಸ್ಥಾಪಿಸಿದ ಶಾಲೆಗೆ ಬರುವ ವಿದ್ಯಾರ್ಥಿಗಳು ತಮ್ಮ ಕಡೆ ಅರ್ಜಿ ಮಾಡಬೇಕೆಂದು ಪ್ರಗಟ ಮಾಡಿದ್ದಾರೆ. ಆ ಶಾಲೆಯ ಮೊದಲನೇ ಟರ್ಮು (ಮುದ್ದತ್ತು) ೧ ನೇ ಅಕ್ಟಂಬರ ಸನ್ ೧೮೭೬ ದಿಂದ ಪ್ರಾರಂಭವಾಗಿ ೩೧ ನೇ ಮಾರ್ಚ ಸನ್ ೧೮೭೭ ಕ್ಕೆ ಮುಗಿಯುತ್ತದೆ. ಈ ಟರ್ಮಿನಲ್ಲಿ ಚನ್ನಾಗಿ ಅಭ್ಯಾಸ ಮಾಡಿದರೆಂದು ನಿಶ್ಚಯವಾದ ೨೪ ವಿದ್ಯಾರ್ಥಿಗಳಿಗೆ ಸರಕಾರಿ ಸಂಬಳ ದೊರೆಯುವದು. ಈ ಸಂಬಳವು ಸರಕಾರದವರು ಮಾಡಿದ ಕೆಲವು ನಿಯಮಗಳನ್ನು ಅನುಸರಿಸಿ ನಡೆಯುವವರಿಗೆ ಎರಡೂವರೆ ವರ್ಷತನಕ ನಡೆಯುವದು. ಸರಕಾರಿ ಸಂಬಳ ದೊರೆಯುವ ಪ್ರತಿಯೊಂದು ವಿದ್ಯಾರ್ಥಿಗೆ ಮೊದಲನೇ ಆರು ತಿಂಗಳು ಮುಗಿಯುವ ತನಕ ೧೨॥ ರೂಪಾಯಿ, ಮುಂದೆ ಒಂದು ವರ್ಷತನಕ ೧೫ ರೂಪಾಯಿ, ಬಳಿಕ ಒಂದು ವರ್ಷತನಕ ೧೨॥ ರೂಪಾಯಿ ಕೊಡಬೇಕು ಎಂಬ ನಿಶ್ಚಯವಾಗಿದೆ. ಇದಲ್ಲದೆ ಆ ಶಾಲೆಯಲ್ಲಿ ತಿಂಗಳಿಗೆ ಹತ್ತತ್ತು ರೂಪಾಯಿಯ ಮೂರು ಪಗಾರಿ ವಿದ್ಯಾರ್ಥಿಗಳನ್ನು ಇಟ್ಟುಕೊಳ್ಳುವರು. ಅವರಿಗೆ ಹತ್ತು ರೂಪಾಯಂತೆ ಎರಡು ವರ್ಷತನಕ ತಲಬು ಮುಟ್ಟುವದು.

NOTICES.

ನೋಟೀಸುಗಳು.

ದಕ್ಷಿಣಭಾಗದೊಳಗಿನ ಡಿಪ್ಯುಟಿ ಎ. ಇನಸ್ಪೆಕ್ಟರರಿಗೂ, ಹಾಯ ಮತ್ತು ಇಂಗ್ಲಿಶ ಸ್ಕೂಲಗಳ ಹೆಡ್ಡಮಾಸ್ತರರಿಗೂ ನೋಟಿಸು.— ೧ ನೇ ಸಪ್ಟಂಬರದಿಂದ ವಿದ್ಯಾಖಾತೆಯ ರೋಖಿ ಹಣದ ಲೆಖ್ಖವು ತಿಜೋರಿಗಳಿಂದ ತೆಗೆದು ಮೆ. ಎಜು.ಕೇ

ಸಲ ಇನಸ್ಪೇಕ್ಟರ ಸಾಹೇಬರವರ ಆಫೀಶಿನಲ್ಲಿ ಇಡಬೇಕೆಂನು ಸರಕಾರದ ಠರಾವು ಆಗಿರುತ್ತದೆ. ಆದದರಿಂದ ಶಾಳಾಖಾತೆಯ ಕಾಮದಾರರು ಇನ್ನು ಮುಂದೆ ತಿಜೋರಿಗಳಲ್ಲಿ ತಮ್ಮ ಬಿಲ್ಲುಗಳನ್ನು ತ್ರಿಪ್ಲಿಕೇಟ (ಮೂರು) ಕಳುಹಿಸುವ ಕಾರಣ ವಿಲ್ಲ. ನಡೆಯುತ್ತ ಬಂದಂತೆ ಡುಪ್ಲಿಕೇಟ (ಎರಡು) ಕಳುಹಿಸಿದರೆ ಸಾಕು.

ಬೆಳಗಾಂವ
೧೮ ನೇ ಸಪ್ಟಂಬರ ೧ ೭೬

(Signed) W.A. Russell.
ಎ. ಇನಸ್ಪೇಕ್ಟರ ದಕ್ಷಿಣಭಾಗ

ಸಂನ ೧೮೭೬ ಇಸ್ವಿಯ ಅಗಸ್ಟ ತಿಂಗಳದಲ್ಲಿ ಮೇಹೆರ್ಬಾನ ಇ. ಇ. ಸಾಹೇಬ ಬಾಹದ್ದೂರ ಪ್ರಾಂತ ದಕ್ಷಿಣಭಾಗ ಇವರ ಮಂಜೂರಿಯಿಂದ ಕಲಾದಗಿ ಜಿಲ್ಹೆಯೊಳಗಣ ಮಾಸ್ತರ ವ ಅ. ಜನರ ವರ್ಗಾವರ್ಗಿಗಳು:-

೧ ಬಾಗೇವಾಡಿ ತಾಲೂಕ ಮೋಳವಾಡ ಸಾಲಿಯ ಹೆಡ್ಡ ಮಾಸ್ತರರಾದ ದಾಮೋದರ ಮಹಾದೇವ ಇವರಂನು, ಇಂಡಿ ತಾಲೂಕ ಛತ್ರ ಗುಣಕಿ ಸಾಲಿಯ ಹೆಡ್ಡ ಮಾಸ್ತರರ ಕೆಲಸಕ್ಕೆ ನೇಮಿರುತ್ತದೆ. ಪಗಾರ ರೂ. ೧೨

೨ ಬಾಗಲಕೋಟ ತಾಲೂಕ ಬೇವೂರ ಸಾಲಿಯ ಮಾಸ್ತರರಾದ ವಿಠಲ ರಂಗೋ ಇವರಂನು, ಬಾಗೇವಾಡಿ ತಾಲೂಕ ಮೋಳವಾಡ ಸಾಲಿಯ ಹೆಡ್ಡ ಮಾಸ್ತರರ ಕೆಲಸಕ್ಕೆ ನೇಮಿಸಿರುತ್ತದೆ. ಪಗಾರ ರೂ. ೧೨.

೩ ಮುದ್ದೇಬಿಹಾಳ ತಾಲೂಕ ಬಸರಕೋಡ ಸಾಲಿಯ ಮಾಸ್ತರರಾದ ಅಂಣಾಜಿ ಬಾಳಕೃಷ್ಣ ಹಂಪಿಹೊಳಿ ಇವರಂನು, ಬಾಗಲಕೋಟ ತಾಲೂಕ ಬೇವೂರ ಸಾಲಿಯ ಹೆಡ್ಡ ಮಾಸ್ತರರ ಕೆಲಸಕ್ಕೆ ನೇಮಿಸಿರುತ್ತದೆ. ಪ. ರೂ. ೧೦

೪ ಶಿಂದಗಿ ತಾಲೂಕ ಹಿಪ್ಪರಗಿ ಸಾಲಿಯ ೧ ನೇ ಅ. ದ ವೆಂಕಾಜಿ ವಾಸುದೇವ ಇವರಂನ್ನು ಮುದ್ದೇಬಿಹಾಳ ತಾ ಕ ಬಸರಕೋಡ ಸಾಲಿಯ ಹೆಡ್ಡ ಮಾಸ್ತರರ ಕೆಲಸಕ್ಕೆ ನೇ ಸಿರುತ್ತದೆ. ಪ. ರೂ. ೧೦

೫ ಇಂಡಿ ತಾಲೂಕ ಭತ್ತಗುಣಕೀ ಸಾಲಿಯ ಮಾಸ್ತರ ದ ರಾಮಚಂದ್ರ ಲಕ್ಷ್ಮಣ ಇವರಂನು ಪಗಾರ ಕಡಿಮೆ ಮಾ ಶಿಂದಗಿ ತಾಲೂಕ ಹಿಪ್ಪರಗಿ ಸಾಲಿಯ ೧ ನೇ ಅ. ಮಾಸ್ತ ಕೆಲಸಕ್ಕೆ ನೇಮಿಸಿರುತ್ತದೆ. ಪ. ರೂ. ೮

Ramchandra A. Sawanoor.

ಡಿ. ಇ. ಇ. ಜಿ. ಕಲಾದಗಿ.

THE CLOUD MESSENGER.

ಮೇಘದೂತಕಾವ್ಯ.

——000——

ಪೀಠಿಕೆ.

ಈ ನಮ್ಮ ಭರತ ಖಂಡದಲ್ಲಿ ಪ್ರಾಚೀನ ಕಾಲದಿಂದ ಇಂದಿನ ವರೆಗೆ ಆಗಿ ಹೋದ ಅಸಂಖ್ಯಾತ ಕವಿಗಳಲ್ಲಿ ಕಾಲಿದಾಸನೇ ಅಗ್ರಗಣ್ಯನೆಂದು, ನಮ್ಮ ದೇಶದವರೇ ಅಲ್ಲ; ಯಾವತ್ತು ಯೂರೋಪಿಯನ ಜನರು ಸಹ ಒಪ್ಪಿಕೊಳ್ಳುತ್ತಾರೆ. ಯೂರೋಪ ಖಂಡದೊಳಗಿನ ಹಲವು ದೇಶಗಳಲ್ಲಿ ಈಗೇನು ಜನರಿಗೆ ಸಂಸ್ಕೃತ ವಿದ್ಯೆಯ ಅಭ್ಯಾಸದ್ದು ಇಷ್ಟು ರುಚಿ ತಕ್ಕೊಂಡಿರುತ್ತದೆಯೋ; ಅದಕ್ಕೆ ಕಾಲಿದಾಸನ ಗ್ರಂಥಗಳೇ ಮೂಲ ಕಾರಣವು. ನಡೆದ ಶತಮಾನದ ಪ್ರಾರಂಭದ ಸುಮಾರಕ್ಕೆ ಕಲಕತ್ತೆಯ ನ್ಯಾಯ ಸಭೆಯ ಮುಖ್ಯರಾದ ಸರ ವಿಲಯಮ ಜೋನ್ಸ ದೊರೆಗಳು ಕಾಲಿದಾಸನ ಶಾಕುಂತಲ ನಾಟಕದ

ಇಂಪ್ರಜಿ ಭಾಷಾಂತರವನ್ನು ಮಾಡಿದರು. ಆ ಭಾಷಾಂತರವನ್ನು ಓದಿ ನೋಡಿದ ಮೇಲಿಂದ ಸಂಸ್ಕೃತ ಭಾಷೆಯೊಳಗಿನ ತರತರದ ಸರಸ ಗ್ರಂಥಗಳನ್ನು ಓದಿ ನೋಡಬೇಕೆಂಬ ಇಚ್ಛೆ ಹಲವರ ಯುರೋಪಿಯನ ಪಂಡಿತರ ಮನಸ್ಸಿನಲ್ಲಿ ಉಂಟಾಯಿತು. ಜರ್ಮನ ದೇಶದಲ್ಲಿ ಗೇದ ಎಂಬನೊಬ್ಬ ಮಹಾಕವಿಯು ಆಗಿ ಹೋದನು. ಅತನು ಕಾಲಿದಾಸನ ಶಾಕುಂತಲ ನಾಟಕವನ್ನು ಓದಿ "ಶಕುಂತಲಾ ಎಂಬ ಹೆಸರಿನಲ್ಲಿ ಈ ಪೃಥ್ವಿಯ ಮೇಲೆಯೂ, ಸ್ವರ್ಗದಲ್ಲಿಯೂ ಇರುವ ಯಾವತ್ತು ಅಪರೂಪ ಸುಂದರ ವಸ್ತುಗಳ ಸಮಾವೇಶವಾಗುವದು" ಎಂಬ ಉದ್ಗಾರವನ್ನು ಪ್ರಕಟ ಮಾಡಿದನು. ಈಗ ಯೂರೋಪದೊಳಗೆ ಕಾಲಿದಾಸನ ಶಾಕುಂತಲ ನಾಟಕದ ಯೋಗ್ಯತೆ ಇಷ್ಟು ಬೆಳೆದಿರುತ್ತದೆಯಲ್ಲ, ಯೂರೋಪದಲ್ಲಿ ನಡೆಯುವ ಬಹುತರ ಯಾವತ್ತು ಭಾಷೆಗಳಲ್ಲಿ ಅದರ ಭಾಷಾಂತರಗಳು ಆಗಿರುತ್ತವೆ.

ಈ ಮೇರೆಗೆ ನಮ್ಮ ದೇಶದಲ್ಲಿಯೆ ಅಲ್ಲ; ಯೂರೋಪ ಖಂಡದಲ್ಲಿ ಸಹ ಕಾಲಿದಾಸನ ಬಗ್ಗೆ ಜನರದು ಇಷ್ಟು ಪೂಜ್ಯಬುದ್ಧಿ ಇದಾಗ್ಯೂ ಅವನು ಹಿಂದುಸ್ಥಾನ ಯಾವ ಪ್ರದೇಶದಲ್ಲಿ, ಎಂದು ಆಗಿಹೋದನು. ಎಂಬ ಬಗ್ಗೆ ನಿಶ್ಚಯಾತ್ಮಕವಾಗಿ ಯಾರಿಗೂ ಗೊತ್ತಿಲ್ಲೆಂದರೆ ಸಾಗುವದು. ನಮ್ಮ ದೇಶದಲ್ಲಿ ಪೂರ್ವಿಕರು ಹೇಳುವ ಕೆಲವು ದಂತಕಥೆಗಳಮೇಲಿಂದ ಕಾಲಿದಾಸನು ಧಾರಾನಗರಿಯ ಭೋಜರಾಜನ ಆಶ್ರಯದಲ್ಲಿ ಇದ್ದನೆಂದು ತಿಳಿದು ಬರುತ್ತದೆ. ಮತ್ತು ಕೆಲವು ದಂತಕಥೆಗಳಲ್ಲಿ ಆತನು ಉಜ್ಜನಿಯ ಚಕ್ರವರ್ತಿಯಾದ ವಿಕ್ರಮಾರ್ಕರಾಯನ ಸಭೆಯಲ್ಲಿ ನವರತ್ನರೆಂದೆನಿಸಿಕೊಂಡ ಪಂಡಿತರಲ್ಲಿ ಒಬ್ಬನಾಗಿದ್ದನೆಂದು ಹೇಳಿಯದೆ. ಇತಲಾಗಿ ಪರಲೋಕವಾ

ಸಿ ಪ್ರಸಿದ್ಧ ಪಂಡಿತ ಡಾಕ್ತರ ಭಾವು ದಾಜಿ ಎಂಬವರು ಕಾಲಿದಾಸನ ವಿಷಯ ಬಹಳ ಸೂಕ್ಷ್ಮ ರೀತಿಯಿಂದ ಶೋಧ ಮಾಡಿ, ಆತನು ಕಾಶ್ಮೀರದೇಶದವನು, ಸಾರಸ್ವತಬ್ರಾಹ್ಮಣನು; ಕ್ರಿಸ್ತ ಶತಕದ ಆರನೆ ಶತಮಾನದ ಮಧ್ಯದಲ್ಲಿ ಉಜ್ಜನಿಯ ಅರಸನಾದ ಹರ್ಷ ವಿಕ್ರಮಾದಿತ್ಯನ ಕಾಲಕ್ಕೆ ಪ್ರಸಿದ್ಧಿಗೆ ಬಂದನು; ಎಂದು ತಮ್ಮ ಅಭಿಪ್ರಾಯ ಕೊಟ್ಟಿರುತ್ತಾರೆ. ಕೆಲವ ಯೂರೋಪಿಯನ ಪಂಡಿತರು ಕಾಲಿದಾಸನು ಕ್ರಿಸ್ತ ಶಕದ ಎರಡನೇ ಶತಮಾನದಲ್ಲಿ ಆಗಿ ಹೋಗಿರಬೇಕು, ಎಂದು ತರ್ಕಮಾಡುತ್ತಾರೆ. ಕಲಕತ್ತೆಯ ಸಂಸ್ಕೃತ ಪಾಠಶಾಲೆಯೊಳಗಿನ ನ್ಯಾಯಶಾಸ್ತ್ರದ ವಿದ್ಯಾಗುರುಗಳಾದ ಪಂಡಿತ ತಾರಾನಾಥ ತರ್ಕವಾಚಸ್ಪತಿಗಳು ಕಾಲಿದಾಸನು ಕ್ರಿಸ್ತ ಶಕದ ಆರಂಭಕ್ಕಿಂತ ಮೊದಲು ೫ |೬೦ ವರ್ಷ ವಿಕ್ರಮಾರ್ಕರಾಯನ ಆಶ್ರಯದಲ್ಲಿದ್ದನೆಂದು ಸ್ಥಾಪಿಸಿದ್ದಾರೆ.

ಈಗ ನಮ್ಮ ಜನರಲ್ಲಿ ಕಾಲಿದಾಸನ ಹೆಸರಿನ ಮೇಲೆ ಎಷ್ಟೋ ಗ್ರಂಥಗಳು ಮಾರುತ್ತವೆ. ರಘುವಂಶ ಕುಮಾರಸಂಭವ ಮೇಘದೂತ ಕಾವ್ಯಗಳು, ಶಾಕುಂತಲ ವಿಕ್ರಮೋರ್ವಶಿ, ಮಾಲವಿಕಾಗ್ನಿಮಿತ್ರ ನಾಟಕಗಳು. ಋತುಸಂಹಾರ ಶ್ರುತಬೋಧ ಶೃಂಗಾರತಿಲಕ, ಪುಷ್ಪಬಾಣವಿಲಾಸ ಜ್ಯೋತಿರ್ವಿದಾಭರಣ, ಘಟಖರ್ಪರ ಮುಂತಾದ ಚಿಲ್ಲರ ಗ್ರಂಥಗಳು ಆತನೇ ಬರದದ್ದವೆಂದು ಹಲವು ಜನರು ಹೇಳುತ್ತಾರೆ. ಆದರೆ ಈ ಸಂಗತಿ ನಿಜವಲ್ಲವೆಂದು ಸ್ಪಷ್ಟವಾಗಿ ಹೇಳಬಹುದು. ಮೇಲೆ ಹೇಳಿದ ಗ್ರಂಥಗಳಲ್ಲಿ ಮೊದಲಿನವು ಆರು ಕಾಲಿದಾಸನವೆಂದು ಬಹುತರವಾಗಿ ಯಾವತ್ತು ಪಂಡಿತರ ಐಕಮತ್ಯವದೆ. ಉಳಿದವುಗಳಲ್ಲಿ ಋತುಸಂಹಾರವೆಂಬ ಕಾವ್ಯವು ಆತನದೇ ಇರಬಹುದೆಂದು ಕೆಲವರ ಅಭಿಪ್ರಾಯವದೆ. ಆದರೆ ಉಳಿದವನ್ನ

ಲ್ಲ ಎರಡನೆಯವರು ಯಾರಾದರೂ ಬರೆದು, ಕೇವಲ ಜನರಲ್ಲಿ ಪ್ರಸಿದ್ಧ ಯಾಗಬೇಕೆಂದು ಕಾಲಿದಾಸನ ಹೆಸರು ಹಾಕಿರುತ್ತಾರೆಂಬದಕ್ಕೆ ಸಂಶಯವಿಲ್ಲ.

ಮಹಾರಾಷ್ಟ್ರ ಭಾಷೆಯಲ್ಲಿ ಶಾಕುಂತಲ, ವಿಕ್ರಮೋರ್ವಶಿ ಮಾಲವಿಕಾಗ್ನಿಮಿತ್ರ ನಾಟಕಗಳವೂ ಕುಮಾರಸಂಭವ ಮೇಘದೂತ ಕಾವ್ಯಗಳವೂ ಭಾಷಾಂತರಗಳು ಆಗಿರುತ್ತವೆ. ಆದರೆ ಕನ್ನಡದಲ್ಲಿ ರಾ. ರಾ. ಶೇಷೋ ರಾಮಚಂದ್ರ ಚೂರಮುರಿ, ಎಂಬವರು ಮಾಡಿದ ಶಾಕುಂತಲ ನಾಟಕದ ಭಾಷಾಂತರದ ಹೊರ್ತು, ಕಾಲಿದಾಸನ ಎರಡನೆ ಗ್ರಂಥವು ಗೊತ್ತಿಲ್ಲ. ಆದದರಿಂದ ಈಗ ನಾವು ಮೇಘದೂತ ಕಾವ್ಯದ ಗದ್ಯಾತ್ಮಕ ಭಾಷಾಂತರವನ್ನು ಮಾಡಿ ನಮ್ಮ ವಾಚಕರಸಲುವಾಗಿ ಪ್ರತಿ ಅಂಕಿನಲ್ಲಿ ಅವಕಾಶಾನುಸಾರವಾಗಿ ಪ್ರಸಿದ್ಧ ಮಾಡುತ್ತೇವೆ.

ಮೇಘದೂತ ಕಾವ್ಯವು ಬಹಳ ಸಣ್ಣದದೆ, ಅದರಲ್ಲಿ ೧೫೦ಕ್ಕೆ ಕೆಲವು ಕಡಿಮೆ ಶ್ಲೋಕಗಳುಂಟು. ಅದರಲ್ಲಿ ವರ್ಣಿಸಿದ ಕಥೆಯು ಸಣ್ಣದಿದಾಗ್ಯೂ ಬಹು ಮನೋರಂಜಕವಾಗಿದೆ. ಈ ಕಾವ್ಯದಲ್ಲಿ ಅಲ್ಲಲಿಗೆ ಸೃಷ್ಟ ಶೋಭೆಯ ವರ್ಣನಗಳೂ, ಮನುಷ್ಯರ ಶುದ್ಧ ಮನೋವೃತ್ತಿಗಳ ವರ್ಣನಗಳೂ, ಬಹಳೇ ಸರಸವಾಗಿರುವದರಿಂದ ಇದನ್ನು ರಘುವಂಶ ಕುಮಾರ ಸಂಭವ, ಮಾಘ, ನೈಷಧ ಕಿರಾತ ಕಾವ್ಯಗಳತರುವಾಯ ಆರನೇ ಮಹಾಕಾವ್ಯವೆಂದು ಎಣಿಸುತ್ತಾರೆ. ಈ ಕಾವ್ಯದ ಮೇಲೆ ಮಲ್ಲಿನಾಥ ಮಹೋಪಾಧ್ಯಾಯನು ಬರೆದ ಸಂಸ್ಕೃತ ಟೀಕೆಯುಂಟು.

A NEW KANARESE GRAMMAR.

ಶ್ರೀ

ಭಾಷಾದರ್ಪಣ.

———000———

ಪೀಠಿಕೆ

|| ಕಂದ || ವ್ಯಾಕರಣದಿಂದೆ ಪದಮಾ
ವ್ಯಾಕರಣದ ಪದದಿನರ್ಥಮರ್ಥದೆ ತತ್ವಾ
ಲೋಕಂ ತತ್ವಾಲೋಕದಿ
ನಾಕಾಂಕ್ಷಿಪ ಮುಕ್ತಿಯಕ್ಕುಮದೆ ಬುಧರ್ಗೆ ಫಲಂ*

ಶಬ್ದಮಣಿದರ್ಪಣ

ಕರ್ಣಾಟ ಭಾಷೆಯಲ್ಲಿ ಹೊಸಗನ್ನಡ ಹಳೆಗನ್ನಡ ಎಂ
ಎರಡು ಭೇದಗಳುಂಟು. ಜನರು ಮಾತಾಡುವ ರಚನೆಯಂ
ರಚಿಸಿದ ಗದ್ಯ ಗ್ರಂಥಗಳೊಳಗಿನ ಭಾಷೆಯೇ ಹೊಸಗನ್ನ
ವು: ಕಾವ್ಯಗಳೊಳಗಿನ ಭಾಷೆಯೇ ಹಳೆಗನ್ನಡವು. ಈ
ವಿದ್ಯಾಶಾಲೆಗಳಲ್ಲಿ ಇವೆರಡೂ ಪ್ರಕಾರದ ಗ್ರಂಥಗಳನ್ನು
ಲಿಸುತ್ತಾರೆ; ಆದದರಿಂದ ಇವೆರಡೂ ತರದ ಭಾಷಾನಿಯಮಗ
ನ್ನು ತಿಳುಕೊಳ್ಳುವದು ವಿದ್ಯಾರ್ಥಿಗಳಿಗೆ ಅವಶ್ಯವದೆ.
ಕಾರಣ ಎರಡೂ ತರದ ನಿಯಮಗಳುಳ್ಳ ವ್ಯಾಕರಣವನ್ನು
ಬರೆಯುತ್ತೇವೆ.

ಈ ವ್ಯಾಕರಣದಲ್ಲಿ ಅಕ್ಷರಖಂಡ, ಶಬ್ದಖಂಡ, ವಾಕ್ಯಖಂಡವೆಂಬ ಮೂರು ಭೇದಗಳುಂಟು.

---

* ವ್ಯಾಕರಣ ತಿಳಿದಿದ್ದರೆ ಪದಚ್ಛೇದ ತಿಳಿಯುವದು; ಆ ಪದಚ್ಛೇ
ದನಿಂದ ಅರ್ಥ ತಿಳಿಯುವದು; ಆ ಅರ್ಥ ಜ್ಞಾನದಿಂದ ತತ್ವ ವಿಚಾ
ಹುಟ್ಟುವದು; ಆ ತತ್ವವಿಚಾರದಿಂದ ಅಜ್ಞಾನದ ಬಿಡುಗಡೆ ಯಾಗು
ವದು; ಇದೇ ವ್ಯಾಕರಣ ಶಾಸ್ತ್ರದ ಫಲವು. ಆ ಕಾರಣ ವ್ಯಾಕರ
ಣ ಕಲಿಯ ತಕ್ಕದ್ದು.

ಅಕ್ಷರಖಂಡ

೧ ಸಂಜ್ಞಾಪ್ರಕರಣ

೨ ಉಚ್ಚಾರಣೆಯೂ ಹಿರಿಯರು ಕಲ್ಪಿಸಿದ ಲಿಪಿ ಸಂಜ್ಞೆಯೂ ಇದ್ದ ಧ್ವನಿಗಳಿಗೆ ಅಕ್ಷರ ಅಥವಾ ವರ್ಣಗಳೆನ್ನುತ್ತಾರೆ; ಡುಗು ಮುಂತಾದ ಧ್ವನಿಗಳಿಗೆ ಉಚ್ಚಾರಣೆ ಇದ್ದಾಗ್ಯೂ ಪಿಸಂಜ್ಞೆ ಇಲ್ಲ. ಇಂಥವು ಬರೆಯಲಿಕ್ಕೆ ಬಂದಾಗ್ಯೂ ಉಚ್ಚ ರ ಬರುವದಿಲ್ಲ. ಆ ಕಾರಣ ಇವುಗಳಿಗೆ ಅಕ್ಷರವೆನ್ನ ಕೂಡ (ಶಬ್ದಮಣಿದರ್ಪಣ ೨ ನೆ ಸೂತ್ರ)

೩ ಧ್ವನಿರೂಪದಿಂದ ಕವಿಗೆ ವಿಷಯವಾಗುವ ಅಕ್ಷರಕ್ಕೆ ವಣ ಎಂತಲು, ಲಿಪಿ ಭೇದದಿಂದ ಹಲವು ಆಕಾರವಾಗಿ ಕ ಗೆ ತೋರುವ ಅಕ್ಷರಕ್ಕೆ ಚಾಕ್ಷುಷ ಎಂತಲು ಹೆಸರುಂಟು.

(ಶ. ಮ. ದ. ೩ ನೆ ಸೂ.)

೪ ವರ್ಣಮಾಲೆ, ಕಾಗುಣಿತಾಕ್ಷರ, ಒತ್ತಕ್ಷರಗಳೆಂದು ಮೂ ವಿಧವು.

೫ ಪ್ರಾಣಿಗಳ ಇಚ್ಛಾಮಾತ್ರದಿಂದ ಗಂಟಲೊಳಗೆ ಅ ರವು ಹುಟ್ಟುತ್ತದೆ; ಅದನ್ನು ಉಚ್ಚರಿಸುವಾಗ ನಾಲಿಗೆಯ ಚಲಿಸುವದರಿಂದಲೂ, ತುಟಿಗಳನ್ನು ಕೂಡಿಸುವದರಿಂಲೂ ಯೊಳಗೆ ಬೇರೆ ಬೇರೆ ವರ್ಣಗಳು ಹುಟ್ಟುತ್ತವೆ; ಆ ವರ್ಣ ಳ ಸಮುದಾಯಕ್ಕೆ ವರ್ಣಮಾಲೆ ಎಂಬ ಹೆಸರು.

೬ ವರ್ಣಮಾಲೆ– ಕನ್ನಡದಲ್ಲಿ ವ್ಯವಹರಿಸುವ ವರ್ಣಮಾ ಯೊಳಗೆ ೫೧ ವರ್ಣಗಳುಂಟು. ಇವುಗಳಲ್ಲಿ ೧೫ ಸ್ವರಗ ೩೪ ವ್ಯಂಜನಗಳು. ೨ ಯೋಗವಾಹಗಳು ಎಂದು ಮೂ ಭೇದಗಳುಂಟು. ಸ್ವರಗಳೆಂದರೆ– ಬೇಕಾದಷ್ಟು ಕಾಲದ ಗೆ ಉಚ್ಚರಿಸಬಹುದಾದ ಸ್ವಾಭಾವಿಕ ಧ್ವನಿಗಳು. ವ್ಯಂಜನ ಳೆಂದರೆ– (ವಿ=ವಿಶೇಷವಾಗಿ, ಅಂಜನ=ಸ್ಪಷ್ಟೀಕರಣ)

ಭಾಷೆಯನ್ನುಂಟು ಮಾಡುವದಕ್ಕೋಸ್ಕರ ಮನುಷ್ಯರು ಬಾಯಿಂದ ಉಚ್ಚರಿಸಿದ ಸ್ಪಷ್ಟ ಧ್ವನಿಗಳು. ಯೋಗವಾಹಗಳೆಂದರೆ ಸ್ವರ ವ್ಯಂಜನಗಳ ಸಂಯೋಗವನ್ನು ವಹಿಸುವ ಧ್ವನಿಗಳು.

ಉದಾಹರಣೆ.

ಸ್ವರಗಳು–ಅ ಆ ಇ ಈ ಉ ಊ * ಋ, * ೠ *ಌ ಏ ಐ, ಒ, ಓ ಔ.

ವ್ಯಂಜನಗಳು–ಕ್, ಖ್ ಗ್, ಘ್ ಙ್, ಚ್, ಛ್, ಜ್ ಝ್, ಞ್, ಟ್, ಠ್, ಡ್, ಢ್, ಣ್ ತ್ ಥ್, ದ್, ಧ್ ನ್ ಪ್, ಫ್, ಬ್, ಭ್, ಮ್, ಯ್, ರ್, ಲ್, ವ್, ಶ್, ಷ್ ಸ್, ಹ್ ಳ್.

ಯೋಗವಾಹಗಳು–ಅಂ ಅಃ. ಇವುಗಳಲ್ಲಿ ಅಂ ಎಂಬದಕ್ಕೆ ಅನುಸ್ವಾರ ಅಃ ಎಂಬುದಕ್ಕೆ ವಿಸರ್ಗವೆನ್ನುತ್ತಾರೆ. ಇವುಗಳಬಗ್ಗೆ ಮುಂದೆ ಹೆಚ್ಚಿಗೆ ಬರೆಯುವೆವು.

ಈ ಕನ್ನಡ ವರ್ಣಮಾಲೆಯಲ್ಲಿ ಎ, ಒ, ಳ, ಈ ಮೂರು ವರ್ಣಗಳು ಹೆಚ್ಚುಂಟು. ಆದರೆ ಋ ೠ ಌ ಙ್ ಞ್ ಶ್ ಷ್, ಅಃ ಈ ವರ್ಣಗಳು ಅಚ್ಚಗನ್ನಡದಲ್ಲಿ ಇಲ್ಲ, ಇವು ತತ್ಸಮ ಶಬ್ದಗಳಲ್ಲಿ ಮಾತ್ರ ಬರುವದರಿಂದ ಕನ್ನಡ ವರ್ಣಮಾಲೆಯಲ್ಲಿ ಗಣಿಸಲ್ಪಟ್ಟಿವೆ. ಙ್, ಞ್, ಇವೆರಡು ವರ್ಣಗಳು ಮುಂದಿನ ಐದನೇ ನಿಯಮದ ಪ್ರಕಾರ ಕನ್ನಡಶಬ್ದಗಳಲ್ಲಿ ಮಾತ್ರ ಬರುತ್ತವೆ; ಅವುಗಳ ಹೊರತು ಬೇರೆ ತರದಿಂದ ಬರುವದಿಲ್ಲ.

(ಅ) ಆದರಿಂದ ಋ, ೠ, ಌ, ಶ್, ಷ್, ಅಃ ಇವು ತತ್ಸಮಶಬ್ದಗಳಲ್ಲಿಯೇ ಬರುವಕಾರಣ ಇವುಗಳಿಗೆ ಕ್ಲಿಷ್ಟವ

---

* ಋ, ೠ, ಌ ಇವು ದೇವನಾಗರೀ (ಸಂಸ್ಕೃತ) ಲಿಪಿಯೊಳಗಿಂದ, ನಮ್ಮ ಕನ್ನಡ ಲಿಪಿಯಲ್ಲಿ ಸೇರಿವೆ. ಇವುಗಳ ಮೂಲ ಸ್ವರೂಪ ನೋಡಿರಿ; ऋ=ಋ, ॠ=ೠ, ऌ ऌ

ರ್ಗಗಳೆಂಬ ಹೆಸರು; ಎ ಒ, ಳ್, ಇವು ಮೂರು ಕನ್ನಡ ಶಬ್ದಗಳಲ್ಲಿಯೇ ಬರುವಕಾರಣ ಇವುಗಳಿಗೆ ದೇಶ್ಯವರ್ಗಗಳೆಂಬ ಹೆಸರು (ಶ. ವ. ದ. ೧ ನೆ ಸೂ.).

(ಮುಂದೆ ಸಾಗುವದು.)

ಗಂಗಾಧರ ಮಡಿವಾಳೇಶ್ವರ ಅ. ಕನ್ನಡ ಟ್ರಾನ್ಸ್ಲೇಟರ್.

CORRESPONDENCE.
ಪತ್ರವ್ಯವಹಾರವು.

ರಾವಸಾಹೇಬ ಕನ್ನಡ ಶಾಲಾಪತ್ರಿಕೆಯ ಎಡಿಟರ ಇವರ ಸನ್ನಿಧಿಗೆ.

ಮಾಹೆ ಮೇ ಸನ್ ೧೮೭೩ ಇಸವಿ ತಿಂಗಳ ಮಾಸಪತ್ರಿಕೆಯ ೩೩ ನೇ ಪಾನಿನಲ್ಲಿ ಭೀವಾಜಿ ನಾರಾಯಣ ಯಾನೆ ಇ. ಸ್ಕೂಲಮಾಸ್ತರ ಗೋಕಾವಿ ಇವರ ಕೊಟ್ಟ ಶ್ಲೋಕದ ಅರ್ಥವನ್ನು ನನ್ನ ಅಲ್ಪ ಬುದ್ಧಿಗೆ ತಿಳಿದಷ್ಟು ಬರೆದಿರುತ್ತೇನೆ ಯೋಗ್ಯ ಕಂಡಲ್ಲಿ ಅಚ್ಚುಹೊಡಿಯಬೇಕು.

ಮೂಲಶ್ಲೋಕ.

ಜಂಭಾರಿಮುಖ್ಯಸುರದಂಭಾಪಹಾರ್ಯಸುರ ಕುಂಭೀನಸಾಂ
ಡಜಗುರೋ।
ಸಂಭಾವಯಾಮ್ಯಸುರಡಿಂಭಾಸುಬೇಬ ಪತಿಕಾಂಭದ್ವಯೋ
ದರ್ನ ಕೃತೆ॥
ಸ್ತಂಭೋದ್ಭವೇತ್ರಿವಿವಿರಂಭಾ ಸ್ತು ತಮುದಂಭಾವತೋವ
ರತರಂ।
ಶಂಭ್ವಾದಿದೇವನುತ ಮಂಭೋಧಿಶಾಯಿನಮುರಂಭಾ ಸಮಾ
ನನ್ಯಹರಿಂ॥ ೧॥

ಸಾನ್ವಯಾರ್ಥವು.

ಜಂಭಾರಿಮುಖ್ಯ ಸುರದಂಭಾಪಹಾರ್ಯಸುರಕುಂಭೀನಸ
ಡಜಗುರೋ। ಜಂಭಾರಿಮುಖ್ಯ=ಇಂದ್ರನೇ ಮೊದಲಾದಂ
ಸುರ=ದೇವತೆಗಳ। ದಂಭಾಪಹಾರಿ=ಕಾಪಟ್ಯವನ್ನು ಹರಣ ಮ
ಡುವಂಥ। ಅಸುರ=ದೈತ್ಯರೆಂಬ। ಕುಂಭೀನಸ=ಸರ್ಪಗಳಿಗ
ಅಂಡಜಗುರೋ=ಗರುಡನಾದಂಥಾತನೆ। ಅಸುರಡಿಂಭಾಸು
ಭಪತಿಕುಂಬದ್ವಯೋರ್ದನಕೃತೇ ಸ್ತಂಭೋದ್ಭವ। ಅಸುರ
ದೈತ್ಯನಾದ ಹಿರಣ್ಯಕಶ್ಯಪನ। ಡಿಂಬ=ವತ್ಸನಾದ ಪ್ರಹ್ಲಾದನ
ಅಸುಖ=ದುಃಖವೆಂಬ। ಇಭಪತಿ=ಗಜೇಂದ್ರನ। ಕುಂಭ
ಯ=ಯೆರಡು ಕುಂಭಸ್ಥಲಗಳ। ಅದನಕೃತೇ=ಮರ್ದನಾ
ವಾಗಿ। ಸ್ತಂಭೋದ್ಭವ=ಕಂಭದದೆಶೆಯಿಂದ ಹುಟ್ಟಿದಂಥಾ
ನೇ। ಇತಿ=ಈ ಪ್ರಕಾರವಾಗಿ। ದಿವಿ=ಸ್ವರ್ಗದಲ್ಲಿ। ರಂಭಾ
ಭಿಃ=ರಂಭಾದಿಗಳಿಂದ। ಸ್ತುತಂ=ನುತಿಸಿಕೊಳ್ಳಲ್ಪಟ್ಟಂಥ। ಶ
ಭಾದಿ ದೇವನುತಂ=ಈಶ ಪ್ರಮುಖರಾದ ದೇವತೆಗಳಿಂದ ಸ್ತು
ತಿಸಿಕೊಳ್ಳಲ್ಪಟ್ಟಂಥ। ಅರಂ=ಚನ್ನಾಗಿ। ಭಾಸಮಾನಂ=ಶೋ
ಭಾಯಮಾನನಾದಂಥ। ವರತರಂ=ಶ್ರೇಷ್ಠನಾದಂಥ। ಅಂಭೋ
ಧಿಶಾಯಿನಂ=ಸಾಗರ ಶಯನನಾದಂಥ। ನೃಹರಿಂ=ನರಸಿಂಹ
ನನ್ನು। ಅಹಂ=ನಾನು। ಭಾವತಃ=ಮನಃಪೂರ್ವಕವಾಗಿ। ಸಂ
ಭಾವಯಾಮಿ=ಭಜಿಸುತ್ತೇನೆ.

ಭಾವಾರ್ಥ.

ದೇವತೆಗಳಿಗೆ ಪ್ರೀತಾಸ್ಪದರಾದ ದೈತ್ಯರೆಂಬ ಸರ್ಪಗಳಿಗೆ ಗರುಡಾಯಮಾನನಾದವನೆ ಪ್ರಹ್ಲಾದನ ಕಷ್ಟಗಳೆಂಬ ಆನೆಯ ಕುಂಭಸ್ಥಲವನ್ನು ಶೀಳುವದಕ್ಕಾಗಿ ಕಂಭದಿಂದ ಹುಟ್ಟಿದಂಥಾತನೇ ಈ ಪ್ರಕಾರವಾಗಿ ರಂಭಾದಿ ಸ್ತ್ರೀಯರಿಂದಲೂ ಈಶ ಪ್ರಮುಖರಾದ ದೇವತೆಗಳಿಂದಲೂ ಸ್ತುತಿಸಿಕೊಳ್ಳಲ್ಪಟ್ಟ ನರಸಿಂ

ಸಂನು ನಾನು ಮನಃಪೂರ್ವಕವಾಗಿ ಭಜಿಸುತ್ತೇನೆ.

ಶ್ರುತವಿರಬೇಕು ಇಂತಿ ವಿನಂತಿ.

ಮು. ಕನ್ನೂರ ತಾ.
೧।೯।೨೬.

ರಾಮಚಂದ್ರ ದುದಾಚಾರ್ಯ ಸ್ಕೂಲ
ಮಾಸ್ತರ ಕನ್ನೂರ ತಾ. ವಿಜಾಪೂರ.

ಮಹಾರಾಜ ರಾಜಶ್ರೀ ಕನ್ನಡ ಶಾಲಾಪತ್ರಕದ ಎಡಿಟರವರ ಸನ್ನಿಧಾನಕ್ಕೆ.

ವಿನಯಪೂರ್ವಕ ವಿಜ್ಞಾಪನಃ ಏನಂದರೆ? ಮಾಹೆ ಅಗಸ್ಟ ಸನ್ ೧ ೨೪ ಇಸವಿಯ ಪಾನು (೧೧೫) ನೇದರಲ್ಲಿ ಶಿಗ್ಲಿ ಸಾಲಿಯ ಹೆಡ್ಡ ಮಾಸ್ತರರಾದ ರಾ. ವಿಷ್ಣು ಪರಶುರಾಮ ಇವರಿಂದ ಬರೆಯಲ್ಪಟ್ಟ ಮೊದಲನೇ ಶ್ಲೋಕದ ಅರ್ಥವನ್ನು ನಂನ ಅಲ್ಪ ಮತಿಗೆ ತಿಳಿದಷ್ಟು ಬರೆದು ಕಳುಹಿಸಿದ್ದೇನೆ. ಇದನ್ನು ತಾತ್ಸರ ಮಾಡದೆ ತಮ್ಮ ಶಾಲಾಪತ್ರಿಕೆಯಲ್ಲಿ ಛಾಪಿಸಿ ಪ್ರಸಿದ್ಧಗೊಳಿಸಬೇಕೆಂದು ಇಚ್ಛಿಸುತ್ತೇನೆ.

ರಾಜಶೇಖರವಿಳಾಸ ಪಂಚಮಾಶ್ವಾಸದ ೨ ನೇ ಪದ್ಯ.

॥ವೃ॥ ಮರುದಾಕೀರ್ಣಲಸತ್ಘನಪ್ರಸವತಾರಾರಾಜಿತಂಹಂಸಬಂ।
ಧುರಸಾಮಾಳಿರುಚಿಪ್ರಧಾನಕವಿರಾಜಾಲಂಕೃತಂದಿವ್ಯಸಿಂ॥
ಧುರಸತ್ವಾವರಮ್ಮ ಯಾತಕಮಲಾಮಾಂಗಪೃಭಾಭಾಸುರಂ।
ಸರದಂತಾಂಬರದಂತೆರಂಜಿಸಿದುದಾರಾಜೇಂದ್ರ ನೊಡ್ಡೋಲಗಂ॥೧॥

(ಈ ಪದ್ಯದಲ್ಲಿ ಸರೋವರ ಆಕಾಶಪರವನ್ನು ಮತ್ತು ರಾಜನಾಒಡ್ಡೋಲಗಪರವನ್ನು, ಬೇರೆ ಬೇರೆಯಾಗಿ (೩) ಅರ್ಥ ಬರೆದಿರುತ್ತೇನೆ.

ಅನ್ವಯಂ.

ಮಹದಾಕೀರ್ಣೋಲ್ಲಸತ್ ಘನಸ ಸನ್ನತಾರಾರಾಜಿತಂ, ಮಹತ್=ವಿಷ್ಣುವಿನಿಂದ ಆಕೀರ್ಣ=ವ್ಯಾಪ್ತವಾದ | ಉಲ್ಲಸತ್=ಒಪ್ಪುತಿರ್ದ | ಘನ=ಅಧಿಕವಾದ | ಸ ಸನ್ನತ=ಕಮ[illegible]ಗಳಿಂದ ಆರಾಜಿತಂ=ಸ್ತುತಿಸಲ್ಪಟ್ಟಂಥ | ಹಂಸಬಂಧುರಸಾಮಾಜಿಕರುಚಿಪ್ರಧಾನ ಕವಿರಾಜಾಲಂಕೃತಂ ಹಂಸಬಂಧು=ಕಮಲಗಳ | ರಸಾ=ಗಂಧರಸವುಳ್ಳ | ಸಾ=ಸಾ[illegible]ಜಾತಿದ | ಅಳಿ=ಭ್ರಮರಗಳ | ರುಚಿ=ಶೋಭೆಯಿಂದ | ಪ್ರಧಾನ=ಮುಖ್ಯವಾದ | ಕವಿರಾಜ=ಜಲಪಕ್ಷಿಶ್ರೇಷ್ಠರಿಂದ | ಅಲಂಕೃತಂ=ಭೂಷಿತವಾದಂಥ | ದಿವ್ಯಸಿಂಧುರಸತ್ಪದರತ್ನಂ. ದಿವ್ಯ=ಎ[illegible]ವ್ಯಾಪಮಾನವಾದ | ಸಿಂಧು=ನದಿಗಳ | ರಸತ್=ಉದಕತರಂಗ | ಪದ=[illegible]ವರಿಂದ | ರತ್ನ=ಸುಂದರವಾದಂಥ | ಆತ್ತಕಮಲಾಪಾಂಗದ ಭಾಭಾಸುರಂ. ಆತ್ತ=ಪಡೆಯಲ್ಪಟ್ಟ | ಕಮಲಾಪಾ=ಸ[illegible]ಯನ | ಅಂಗಪ್ರಭಾ=ದೇಹಪ್ರಭೆಯಿಂದ | ಭಾಸುರಂ=ಮನೋಹರವಾದಂಥ | ಸರದಂತೆ=ಸಾಗರದ ಹಾಗೆ | ರಾಜೇಂದ್ರನೋಲಗಂ=ಆ ಮಹಾರಾಜನ ಸಭೆಯು | ರಂಜಿಸಿದುದು=ಶೋಭಿಸಿತು.

ಮಹದಾಕೀರ್ಣೋಲ್ಲಸತ್ ಘನಸ್ಸನ್ನತತಾರಾರಾಜಿತಂ ಮಹತ್=ದೇವತೆಗಳಿಂದ | ಆಕೀರ್ಣ=ಮುಸುಕಿದ | ಉಲ್ಲಸತ್=ಒಪ್ಪುವ | ಘನ=ಮೇಘಗಳ | ಸ ಸನ್ನ=ಸಮೂಹದಿಂದಲೂ | ತಾರಾ=ನಕ್ಷತ್ರಗಳಿಂದಲೂ | ರಾಜಿತಂ=ಒಪ್ಪುತಂಥ | ಹಂಸಬಂಧುರಸಾಮಾಜಿಕರುಚಿಪ್ರಧಾನಕವಿರಾಜಾಲಂಕೃತಂ. ಹಂಸ=ಸೂರ್ಯನಿಂದ | ಬಂಧುರ=ಮನೋಹರವಾದ | ಸಾಮಾಜ=ಕೇತುವಿನ | ರುಚಿ=ಪ್ರಕಾಶದಿಂದ | ಪ್ರಧಾನ=ಶ್ರೇಷ್ಠವಾದ | ಕವಿ=ಶುಕ್ರ | ರಾಜ=ಚಂದ್ರನಿಂದ | ಅಲಂಕೃತಂ=ಅಲಂಕರಿಸಲ್ಪಟ್ಟಂಥ | ದಿವ್ಯಸಿಂ

ಧುರಸತ್ವವಹರಮ್ಯಂ. ದಿವ್ಯಸಿಂಧು=ದೇವಗಂಗೆಯ। ರಸತ್ವ=ಜಲವನ್ನು। ವಹ=ವಹಿಸುವದರಿಂದ। ರಮ್ಯಂ=ಸುಂದರವಾದಂಥ। ಆತತಕಮಲಾಪಾಂಗಪ್ರಭಾಭಾಸುರಂ. ಆತತ=ಸಂಗ್ರಹಿಸಿದ। ಕಮಲಾಪ=ಕೃಷ್ಣನ। ಅಂಗಪ್ರಭಾ=ದೇಹದ ಕಾಂತಿಯಂತೆ। ಭಾಸುರಂ=ಪ್ರಕಾಶಿಸಲ್ಪಟ್ಟಂಥ। ಅಂಬರದಂತೆ=ಆಕಾಶದ ಹಾಗೆ। ಆರಾಜೇಂದ್ರಸೌಧೋತ್ಸಂಗಂ=ಆ ರಾಜಾಸ್ಥಾನವು। ರಂಜಿಸಿದುದು=ಶೋಭಿಸಿತು।

ಮರುದಾಕೀರ್ಣಂ ಲಸದ್ಘನಪ್ರಸವತಾರಾರಾಜಿತಂ. ಮರುತ=ಧನ್ವಿಗಳಿಂದ। ಆಕೀರ್ಣ=ವ್ಯಾಪಿಸಿದ। ಲಸತ್=[illegible]ಸುವ। ಘನ=ಮಿಗಿಲಾದ। ಪ್ರಸವ=ಪುಷ್ಪಮಾಲಾಧಾರಿಗಳಿಂದಲೂ। ತಾರಾ=ನಕ್ಷತ್ರಮಾಲಾಧಾರಿಗಳಿಂದಲೂ। ರಾಜಿತಂ=ಒಪ್ಪುವಂಥ। ಹಂಸಬಂಧುರಸಾಪಾಳಿರಾಜಿಪ್ರಧಾನಕವಿರಾಜಾಲಂಕೃತಂ. ಹಂಸಬಂಧು=ಸೂರ್ಯಕುಲೋತ್ಪನ್ನರಾದ। ರಸಾಪ=ರಾಜರ। ಆಳಿ=ಸಮೂಹದಲ್ಲಿ। ರಾಜಿ=ಕೀರ್ತಿಯುಳ್ಳ। ಪ್ರಧಾನ=ಮಂತ್ರಿಗಳಿಂದ। ಕವಿರಾಜ=ಕವೀಶ್ವರರಿಂದ। ಅಲಂಕೃತಂ=ಅಲಂಕರಿಸಲ್ಪಟ್ಟಂಥ। ದಿವ್ಯಸಿಂಧುರಸತ್ವವಹರಮ್ಯಂ. ದಿವ್ಯಸಿಂಧುರ=ಐರಾವತದ। ಸತ್ವ=ಸಾಮರ್ಥ್ಯವನ್ನು। ವಹ=ವಹಿಸಿದ ಸುಭಟರಿಂದ। ರಮ್ಯಂ=ಸುಂದರವಾದಂಥ। ಆತತಕಮಲಾಪಾಂಗಪ್ರಭಾಭಾಸುರಂ, ಆತತ=ಸಂಪಾದಿಸಿದ। ಕಮಲಾ=ಲಕ್ಷ್ಮಿಯ। ಅಪಾಂಗಪ್ರಭಾ=ಕೇಕರದಿಂದ। ಭಾಸುರಂ=ಮಿಗೆ ಮನೋಹರವಾದಂಥ। ಆರಾಜೇಂದ್ರಸೌಧೋತ್ಸಂಗಂ=ಆ ನರೇಂದ್ರನ ಸಭಾಮಂಟಪವು। ರಂಜಿಸಿದುದು=ಕಣ್ಗೆ ಶೋಭಿಸಿತು.

ಭಾವಾರ್ಥ.

(ಇದರಲ್ಲಿ ಮೂರೂ ಭಾವಾರ್ಥಗಳನ್ನು ಕೂಡಿಸಿ ಬರೆದಿದ್ದೇನೆ.)

ವಾಯುವಿನಿಂದ (ದೇವತೆನಳಿಂದ) (ಧನ್ವಿಗಳಿಂದ) ವ್ಯಾಪ್ತವಾದಂಥ ಒಳ್ಳೇ ಕಮಲಗಳಿಂದ(ಮೇಘ. ನಕ್ಷತ್ರಗಳಿಂದ) (ಪುಷ್ಪಮಾಲಾ, ಮತ್ತು ನಕ್ಷತ್ರಮಾಲಾಧಾರಿಗಳಿಂದ) ಒಪ್ಪುವಂಥ, ಕಮಲಗಳ ಗಂಧವನ್ನು ಸ್ವೀಕರಿಸುತ್ತಿರ್ದ ಭ್ರಮರಗಳಿಂದಲೂ ಜಲ ಪಕ್ಷಿಗಳಿಂದಲೂ (ಸೂರ್ಯ, ಕೇತು ಶುಕ್ರ ಚಂದ್ರರಿಂದ) (ಸೂರ್ಯ ವಂಶದರಾಜ, ಮಂತ್ರಿ, ಕವೀಶ್ವರರಿಂದ) ಭೂಷಣವಾದಂಥ, ನದಿಗಳಂತೆ ಉದಕ ಪೂರ್ಣತ್ವದಿಂದ(ದೇವಗಂಗೆಯ ಉದಕತ್ವದಿಂದ) (ಐರಾವತದ ಸಾಮರ್ಥ್ಯಯುವನ್ನು ವಹಿಸಿದ ಸುಭಟರಿಂದ) ಸುಂದರವಾದಂಥ. ಸೂರ್ಯನ ಪ್ರತಿಬಿಂಬದಿಂದ (ಕೃಷ್ಣನ ಶರೀರದ ಕಾಂತಿಯಂತೆ) (ಲಕ್ಷ್ಮಿಯ ಕಡೆಗಣ್ಣಿನ ಕಾಂತಿಯಿಂದ) ಮನೋಹರವೆನಿಸಿದ ಆ ರಾಜನ ಒಡ್ಡೋಲಗವು ಸರೋವರದ ಹಾಗೆಯೂ, ಆಕಾಶದ ಹಾಗೆಯೂ, ಕಣ್ಣಿಗೆ ಶೋಭಿಸತು.

ಮುಕ್ಕಾಮ ಕ ಜಗೇರಿ ತಾ·
೮ ನೇ ಮಾಹೆ ಸಪಟಂಬರ
ಸನ್ನ ೧ ೭೬ ಇಸವಿ.

ಸಹಿ ಮಲ್ಲಯ್ಯಾ ಪದ್ದಯ್ಯಾ ಜ
ಗಾಪೂರ ಹೆ· ಮಾ· ಕ ಜಗೇರಿ
ತಾ. ರೋಣ ಜಿ· ಧಾರವಾಡ.

ಮಹಾರಾಜ ರಾಜಮಾನ್ಯರಾಜಶ್ರೀ ದಕ್ಷಿಣಭಾಗದ ಶಾಲಾಪತ್ರದ ಎಡಿಟರರ ಚರಣಾರವಿಂದಗಳಿಗೆ·

ಸೇವಕನು ಮಾಡುವ ಬಿನ್ನಹವೇನಂದರೆ-ಮಹಾರಾಜ ರಾಜಮಾನ್ಯರಾಜಶ್ರೀ ಗಂಗಾಧರ ಮಡಿವಾಳೇಶ್ವರ ಅ. ಟ್ರಾನ್ಸಲೇಟರವರು ಕನ್ನಡ ಕವಿತಾಪದ್ಧತಿಯೆಂಬ ಪುಸ್ತಕದವನ್ನು ಮಾಡಿ ಅದರಲ್ಲಿ ಕೆಲವೃತ್ತಗಳ ನಿಯಮಗಳನ್ನು ಹೇಳಿದ್ದಾರಷ್ಟೆ ಅದೇ ಕ್ರಮವನ್ನು ಅನುಸರಿಸಿ ಈಗ ನಾನು ಮತ್ತೆ ಕೆಲವು ಹೊಸ ವೃತ್ತಗಳ ಗಣನಿಯಮಗಳನ್ನು ಗೊತ್ತು ಮಾಡಿ

ಕವಿತಾರೂಪದಿಂದಾ ಕೂಡಿಸಿ ತಮ್ಮ ಸನ್ನಿಧಿಗೆ ಕಳುಹಿಸಿರುತ್ತೇನೆ ತಮ್ಮ ಕರಕಮಲದಲ್ಲಿ ಹೃಟ್ಟುವ ಪತ್ರಿಕೆಯಲ್ಲಿ ಮುದ್ರಿಸಿ ಪ್ರಕಟ ಮಾಡುವಿರೆಂಬ ಕಾಂಕ್ಷೆಯುಳ್ಳವನಾಗಿದ್ದೇವೆ.

॥ ವಿಭೂತಿವೃತ್ತ ॥

ಪಾವಕಂ ದಿನೇಶಗೌ । ರೀವರಂಬರುತ್ತಿರ ॥
ಲ್ಕೀವಿಭೂತಿ ವೃತ್ತಕೇ । ಳೀವನೇಜಲೋಚನೆ ॥ ೧ ॥

॥ ಧೃತವಿಲಂಬಿತವೃತ್ತ ॥

ನುತಸುರಾಮೃತಕರಾರ್ಕಪಾವಕಂ ।
ಧೃತವಿಲಂಬಿತಮೆನಿಪ್ಪವೃತ್ತಕಂ ॥
ಸತತವೊಪ್ಪುತಿಹವರ್ಕವರ್ಣಮು ।
ವಿರ್ತಳದಲ್ಲಿತಿಳಿಕಂಜಲೋಚನೆ ॥ ೨ ॥

॥ ಕಳಾಭಾಷಣವೃತ್ತ ॥

ಆಶುಗಾಪ ಸುರಶೀತಕರದ್ವಿತಯಾನಲಂ ।
ಕ್ಷೇಪವೇಣಿ ಬಹವೀಗಣಸಂಚಯುತತ್ಕಳಾ ॥
ಭಾಷಣಾಖ್ಯವರವೃತ್ತಕೆ ಧಾತ್ರಿಯೊಳಾವಗಂ ।
ತೋಷಿಕುಂ ಜನಕೆ ಪಂಚದಶಾಕ್ಷರದಿಂದಿದುಂ ॥ ೩ ॥

॥ ಉತ್ಸಾಹವೃತ್ತ ॥

ಲೋಹಿತಾಶ್ವಸೂರ್ಯಪಾವಕಾರ್ಕಪಾವಕಂಗಳು ।
ತ್ಸಾಹವೃತ್ತಕೆಂದುಮೊಪ್ಪುತಿರ್ಕುಮ್ಮೈದೆ ಕೇಳು ಕಾ ॥
ಳಾಹಿವೇಣಿಪಕ್ಷಸಂಖ್ಯೆಯುಳ್ಳ ವರ್ಣಗಳ್ಬರಲ್ ।
ಮೋಹದಿಂದೆ ನೀನು ಕೇಳಲಿಂತುಪೇಳ್ವೆನಾನಿದಂ ॥ ೪ ॥

॥ ಮಂದಾಕ್ರಾಂತಾವೃತ್ತ ॥

ಬಂದಿರ್ಕುಂಭಾಶಶಿವಿಬುಧತಾರಾಧ್ವಯುಗ್ಮಂದ್ವಿಷಗರ್ಣಂ
ಮಂದಾಕ್ರಾಂತಾಖ್ಯವಿಸುತಸುವೃಕ್ಕವಿಂತೀಗಣಂಗಳ್ ॥

ಸಂದಿರ್ದಂದೊಳನಬಮುಕುಳೋತ್ತುಂಗವಕ್ಷೋಜಯು
ಗ್ಮೇ
ಛಂದಂ ಪೆತ್ತಿರ್ದಮೊಲಪದಿನೇಳ್ವರ್ಣಗಳ್ಸ್ವರ್ಗಕಾಲಂ ||೫

|| ಮಲ್ಲಿಕಾಮಾಲಾವೃತ್ತ ||

ರೀತಿಯಿಂದ ನಲಾನಿಲಾಕ್ಷರಯುಗಂಗಳುಂ ಶಶಿಮಾವಕ
ಬಾಪೆಕೇಳ್ಬಹವಿಂತುತಪ್ಪದಲೀಗಣಂಗಳುಮಲ್ಲಿಕಾ ||
ಮಾಲೆಯುಂಬುವವೃತ್ತಕಂ ಯತಿಯಂತ್ಯದಲ್ಲಿ ವಿರಾಜಿಕುಂ
ಮೇಳನಿಪ್ಪ ಸುವರ್ಣಗಳ್ಪದಿನೆಂಟು ಒಪ್ಪುವ ಸಂತತ
|| ೬ ||

|| ಮಣಿಭೂಷಣವೃತ್ತ ||

ಏಂತಿಹೋತ್ರಸುರಶೀತಕರದ್ವಿತಯಾನಲಂ |
ಈತೆರಂ ಮಣಿಭೂಷಣನಾಮದವೃತ್ತಕಂ ||
ಖ್ಯಾತಭಾಗ್ಯದೆಗಣಂಗಳು ಶೋಭಿಸುಗುಂ ಪದೇ |
ಪೂತಲೋಚನೆ ರಜ್ಞಾಕಾಯು ನಾಪಗಂ || ೭ ||

|| ಹರಿಣೀವೃತ್ತ ||

ತ್ರಿದಶಪವಮಾನಂ ಭಾಸ್ವತ್ಸಾನಿಲವೊಂದಿಪ್ಪುಂ |
ಮೊದಲು ಬಳವಾಮಲ್ಲಂ ಜಾಕ್ಷಂ ಶಿವಾಂಬರಲಿಂತಿದ ||
ಕೇದಗಿಪ್ಪುದು ನೀಂ ಕೇಳ್ ಬಾಲ್ತ್ರಾವನೇ ಹರಿಣೀವೃತ್ತಾ |
ಕ್ಷ್ಯದ ಪೆಸರು ಭಾವಿಸಿವಿದ್ವಾಂಸರ್ಕಳಂಬಿದ ದಾವಗಂ || ೮ ||

|| ಛಂದೋವೃತ್ತ ||

ಏಸಕತ್ರಿದಶಶಿಃಕರಕ್ಷೆ ಶೋಣಶಸನ್ನ ಯುವಿಸ್ಸಗಾ |
ರೀವರಂಬರುತಿರಲ್ಕದು ಛಂದೋವೃತ್ತಮೆನಿಪ್ಪುದು ಧಾತ್ರಿ
ಯೊಳ್ ||
ಭಾವಿಸಲ್ಕೆ ಪದವರ್ಣಗಳಿಪ್ಪತ್ತುಂಬರುತಿರ್ದಪ್ಪು ಕೇಳುರಾ |

ಜೀವನೇತ್ರ ವಿಧುಬಿಂಬಸಮಾನಾಸ್ಯಾಂಬುಜೆ ತಪ್ಪದು ಸಂತ
ತಂ ॥ ೯ ॥

॥ ಪೃಥ್ವೀವೃತ್ತ ॥

ದಿವಾಕರನಸಾರಸಂಯರ್ಪವನಾಂಬುಕಂಜಾಂಬಕಂ ।
ಶಿವಾ ಪರವಿವೇದು ವೈನೆಬಳಸೀ ಸುಪೃಥ್ವೀಪಿಸಿ ॥
ಸ್ವವೃತ್ತಕಪಿದಂ ವ್ಯಾಗಾಂಕಸಾಬಿ ನೀಲಕಂಜಾಕ್ಷಿ ಸಲ್ ।
ಪ್ರವಾಳಸಿಧಿತೋಹಿತಾಧರೆ ನಿರಂತರಂ ಕೇಳು ನೀಂ
॥ ೧೦ ॥

॥ ಶಿಖರಿಣೀವೃತ್ತ ॥

ಗಣಂಗಳ್ಸಲ್ಗಂ ಸದ್ವಿಬುಧಸುತದಂಡಂ ನುತಶಿಖಾ ।
ರಿಣೀವೃತ್ತಕ್ಕಂ ವಾರಿಕಸುಸುತಸವಿಲೇಂದುವಿಪುಕಂ ॥
ಕಣಾಭ್ರಾಂತ್ರಾಕ್ಕಂತಪಸುಣಿ ಬಗಕ ನೀಂ ಕೇಳು ಜಲಜೇ ।
ಕ್ಷಣಾಂತವರ್ಣಂಬಕ್ಕುಂ ಕಡೆಗಪದಿನೇಳ್ವರ್ಣತತಿಯೊಳ್
॥ ೧೧ ॥

॥ ತೋಟಕವೃತ್ತ ॥

ಶುಕವಾಣಿಯು ಕೇಳೆಲೆಗಳ್ಗರುತಂ ।
ಸುಕಲಾನಿದಸಂಪುತದಿಂದುರೆ ತೋ ॥
ಟಕವೃತ್ತಮೆನಿಪ್ಪುದು ಕಿಸರವು ಮಾ ।
ನಕವಿತ್ರಗಣಂಗಳು ನಾಲ್ಕಿರೆ । ೧೨ ॥

॥ ಭುಜಂಗಪ್ರಯಾತವೃತ್ತ ॥

ವನಪ್ರಾಂಬುಕಿಲಾಲನೊಂಬಿ ಗಣಂಗಳ್ ।
ದಿನಾಧ್ಯಕ್ಷಸಂಖ್ಯಾಂಕವರ್ಣಂಗಳಿಂ ಸ ॥
ಜ್ಜನಸ್ತುತ್ಯಮಾದೀ ಭುಜಂಗಪ್ರಯಾತ ।
ಕೆ ನಿತ್ಯಂ ಬರುತ್ತಿರ್ಪನಬ್ಜಾಕ್ಷಿ ನೀ ಕೇಳ್ ॥ ೧೩ ॥

॥ ಉಪೇಂದ್ರವಜ್ರವೃತ್ತ ॥

ದಿವಾಕರಪ್ರ್ಯೋಮರವೀಶಯುಗ್ಮಂ ।
ಇವ್ವೈದೆ ಬಂದಿರ್ದೊಡೆ ಕೇಳುಪೇಂದ್ರಾ ॥
ಖ್ಯವೃತ್ತಮಿಂತಿರ್ಪುದಕಕ್ಕರಂಗಳ್ !
ವೇಶಸಂಖ್ಯಾಂಕವು ಕಾಂತೆ ನೀಕೇಳ್ ॥ ೧೪ ॥

॥ ಶುದ್ಧಕೌಮುದೀವೃತ್ತ ॥

ಅನಿಮಿಷಾಗ್ನಿಯುಗ್ಮಂಪದಾಂತ್ಯದೊಳ್ ।
ನಜಲೋಚನಂ ಪಾರ್ವತೀಧವಂ ॥
ನಿಶಮೀಲಸತ್ಶುದ್ಧಕೌಮುದೀ ।
ನುನಿಪವೃತ್ತಕಂನಲ್ಲೆ ಶೋಭಿಕುಂ ॥ ೧೫ ॥

॥ ಕೌಮುದೀವೃತ್ತ ॥

ನೇಮದಿಂಕೃಶಾಸ್ವಂಬುಭಾಸ್ಕರಂ ।
ಮಕೇಶಮಿಂತ್ರದೆಬಕರ್ಣಮೀ ॥
ಮುದಾಖ್ಯವೃತ್ತಕ್ಕೆ ಸಂತತಂ ।
ಮದಿಂಪೆಕೇಳ್ವಾಮನೇತ್ರೆ ನೀಂ ॥ ೧೬ ॥

ಸಹಿ ತಾತ್ಯಾ ಕೃಷ್ಣ ಉಗಾರ ಹೆಡ್ಡ ಮಾಸ್ತರ
ಹಾರು ಬೀಡಿ ಹೊಂಗಲ.

ಶಾಲಾಪತ್ರಕವು.

ಸ್ತಕ ೧೨]   [ಸಂಚಿಕೆ ೭

ತಾರೀಖು, ೨೫ ನೇ ಮಾಹೆ ಆಕ್ಟೋಬರ, ೧೮೭೬.

EDUCATIONAL INTELLIGENCE.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ರಾ. ಎಜ್ಯುಕೇಶನಲ್ ಇನಸ್ಪೇಕ್ಟರ ಸಾಹೇಬ ಬಹಾದ್ದೂರ, ದಕ್ಷಿಣ ಭಾಗ, ದೊರೆಗಳವರು ಈ ತಿಂಗಳಲ್ಲಿ ಧಾರವಾಡ ಟ್ರೇನಿಂಗಕಾಲೇಜ ಹಾಯಿಸ್ಕೂಲಗಳ ಪರೀಕ್ಷೆಗಳನ್ನು ತೀರಿಸಿ ಕೊಂಡು ತಿರಿಗಿ ಬೆಳಗಾವಿಗೆ ಹೊರಟು ಹೋದರು. ದೊರೆಗಳವರವು ಧಾರವಾಡದಲ್ಲಿ ಸುಮಾರು ೧೫ ಮುಕ್ಕಾಮುಗಳಾದವು. ಇಲ್ಲಿಂದ ಹೋದ ಮೇಲೆ ಮುಂದೆ ಕೊಲ್ಹಾಪುರ ಹಾಯಿಸ್ಕೂಲದ ಪರೀಕ್ಷೆಗೆ ಹೋಗತಕ್ಕವರಿದ್ದಾರೆಂದು ತಿಳಿಯುತ್ತದೆ.

ರಾ. ಕಾಯಿಮು ಕನ್ನಡ ತ್ರಾನಸ್ಲೇಟರ, ಎಜ್ಯುಕೇಶನಲ್ ಡಿಪಾರ್ಟಮೆಂಟ್, ಇವರು ಬರುವ ಜಾನೇವಾರಿ ೧೭

ನೇ ತಾರಿಖಿನ ವರೆಗೆ ಹೆಚ್ಚಿಗೆ ರಜೆಯನ್ನು ತಕ್ಕೊಂಡಿರುತ್ತಾರೆ.

ಈ ವರ್ಷದ ಮುಂಬಯಿ ಯುನಿವರ್ಸಿಟಿಯ ಮ್ಯಾಟ್ರಿಕ್ಯುಲೇಶನ ಪರೀಕ್ಷೆಗಾಗಿ, ಧಾರವಾಡದಿಂದ ೨೨, ಬೆಳಗಾವಿಯಿಂದ ೨೨, ಕೊಲ್ಹಾಪುರದಿಂದ ೩೩ ಉಮೇದವಾರರು ಹೋಗತಕ್ಕವರಿದ್ದಾರೆ. ನಾವು ಕೊಟ್ಟ ಸಂಖ್ಯೆ ಸರಕಾರೀ ಸಾಲೆಗಳೊಳಗಿಂದ ಹೋಗತಕ್ಕವರವು, ಇವರಲ್ಲದೆ ಖಾಸಗೀ ಅಭ್ಯಾಸ ಮಾಡಿ ಹೋಗುವ ವಿದ್ಯಾರ್ಥಿಗಳು ಇರಬಹುದು.

ಉತ್ತರ ಅಮೇರಿಕೆಯಲ್ಲಿ ಸ್ವತಂತ್ರ ಸಂಸ್ಥಾನಗಳಲ್ಲಿ ಒಟ್ಟು ೮,೧೨೯ ವರ್ತಮಾನ ಪತ್ರಗಳು ಹೊರಡುತ್ತವೆ. ಇವುಗಳಲ್ಲಿ ೩/೪ ಕ್ಕಿಂತ ಹೆಚ್ಚು ಸಾಪ್ತಾಹಿಕ ಪತ್ರಗಳು ಉಂಟು.

ವಿಲಾಯತಿಯೊಳಗಿನ ಒಬ್ಬ ಪ್ರಸಿದ್ಧ ಕಾಗದ ಮಾಡುವವನು ಹಿಂದುಸ್ಥಾನದ ಸ್ಟೇಟ ಸೇಕ್ರೆಟರಿಗಳಾದ ಲಾರ್ಡ ಸಾಲಿಸ್ಬರಿ ದೊರೆಗಳವರ ಕಡೆಗೆ, ಮದ್ರಾಸ ಇಲಾಖೆಯೊಳಗೆ ಒಂದು ಕಾಗದ ಮಾಡುವ ಹೊಸ ಕಾರಖಾನೆ ಹಾಕುವದಕ್ಕೆ ಅಪ್ಪಣೆ ಕೇಳಿರುತ್ತಾನಂತೆ.

ಹಿಂದುಸ್ಥಾನದೊಳಗಿನ ದೊಡ್ಡ ದೊಡ್ಡ ಸರಕಾರದ ಧಿಕಾರಿಗಳಿಗೆ ಸನ್ ೧೮೨೫ ಇಸವಿಯಲ್ಲಿ ಸುಮಾರು

೬,೪೩೦,೦೦೦ ರೂಪಾಯಿಗಳ ಕಾಗದ ಮಸಿ ಮುಂತಾದ ಸಾಮಾನು ಹತ್ತಿತು. ಈ ಸಾಮಾನು ವಿಲಾಯತಿಯಿಂದ ತರುವದರಿಂದ ಇಲ್ಲಿಯ ದುಡ್ಡು ಅಲ್ಲಿ ಹೋಗುತ್ತದೆ. ಅದಕ್ಕೆ ಇನ್ನು ಮುಂದೆ ಆದಷ್ಟು ಈ ಸಾಮಾನು ಹಿಂದುಸ್ಥಾನದೊಳಗೇ ಕೊಳ್ಳಬೇಕೆಂದು ಗವರ್ನರ ಜನರಲ ಸಾಹೇಬರವರ ಹೇತು ಉಂಟು. ಹೀಗ ಮಾಡುವದರಿಂದ ನಮ್ಮ ದೇಶದ ಕೈಗಾರಿಕೆಗೆ ಬಹಳ ಉತ್ತೇಜನ ಬರುವದು.

ಮದ್ರಾಸ ಯುನಿವರ್ಸಿಟಿಯು ಬರುವ ಮ್ಯಾಟ್ರಿಕ್ಯುಲೇಶನ ಪರೀಕ್ಷೆಗ ೨೫೦೦ ಉಮೇದವಾರರ ಹೆಸರುಗಳು ರಜಿಸ್ಟರ ಆಗಿರುತ್ತವಂತೆ. ನಮ್ಮ ಜನರಲ್ಲಿ ವಿದ್ಯೆ ಕಲಿಯುವ ಹವ್ಯಾಸ ಬೇಗನೆ ಬೆಳದಂತೆ ಬೇರೆ ಬೇರ ತರದ ಉದ್ಯಮಗಳನ್ನು ಮಾಡುವ ಹವ್ಯಾಸ ಇನ್ನು ಹುಟ್ಟಿಲ್ಲ. ಅದು ಹುಟ್ಟದಲೆ ದೇಶದ ಊರ್ಜಿತ ಸ್ಥಿತಿ ಬ ತ್ರೆಂದು ಅನ್ನ ಕೂಡದು.

ಮುಂಬಯಿ ಯುನಿವರ್ಸಿಟಿಯು ಮ್ಯಾಟ್ರಿಕ್ಯುಲೇಶನ ಪರೀಕ್ಷೆಯಲ್ಲಿ ಇಷ್ಟು ದಿವಸ ಇಂಗ್ರಜಿಯಲ್ಲಿಯೂ, ವಿದ್ಯಾರ್ಥಿಯು ತಾನಾಗಿ ಆರಿಸಿ ತಕ್ಕೊಂಡು ಎರಡನೇ ಭಾಷೆಯಲ್ಲಿಯೂ ಬಾಯಿ ಪರೀಕ್ಷೆ ಆಗುತ್ತಿತ್ತು. ಆದ ಇನ್ನು ಮುಂದೆ ಎರಡನೇ ಭಾಷೆಯಲ್ಲೇ ಬಾಯಿ ಪರೀಕ್ಷೆ ತಕ್ಕೊಳ್ಳಬಾರದೆಂದು ಈ ವರ್ಷದಿಂದ ಹೊಸ ನಿಯಮ ಮಾಡಿರುತ್ತಾರೆ.

ಈ ವರ್ಷ ಗ್ರಾಂಟ ವೈದ್ಯ ಶಾಲೆಯೊಳಗಿಂದ ೪ ಉಮೇದವಾರರು ಡಾಕ್ತರ ಕೆಲಸದ ಮೊದಲನೇ ಪರೀಕ್ಷೆಗೆ ಹೋಗಿದ್ದರು; ಅವರಲ್ಲಿ ೩೯ ಮಂದಿ ಪಾಸಾದರು.

NOTICE.

ನೋಟೀಸು.

ಬೆಳಗಾಂವಿ ಜಿಲ್ಲೆಯೊಳಗಿನ ಯಾವತ್ತು ಸ್ಕೂಲಮಾಸ್ತರರಿಗೆ; ಡಿಪೂಟಿ ಎಜ್ಯುಕೇಶನಲ ಇನಸ್ಪೇಕ್ಟರ ಜಿಲ್ಲಾ ಬೆಳಗಾಂವ ಇವರ ಕಡಿಯಿಂದ ಬರದು ತಿಳಿಸುವದೇನಂದರೆ, ಈ ಜಿಲ್ಲೆಯೊಳಗಿನ ಅನೇಕ ಸ್ಕೂಲ ಮಾಸ್ತರರು ತಾವು ಅಥವಾ ತಮ್ಮ ಅಸಿಸ್ಟಂಟರು ರಜೇದ ಮೇಲೆ ಹೋದ ಹಾಂಗು ವರ್ಗದ ಮುಂತಾದ ಪ್ರಸಂಗಗಳಲ್ಲಿ, ತಮ್ಮ ಸಾಲೀ ಚಾರ್ಜವನ್ನು ಕೊಟ್ಟ ಹಾಂಗು ತೆಗೆದುಕೊಂಡ ಮತ್ತು ಅಸಿಸ್ಟಂಟರನ್ನು ಬಿಡುಗಡೆ ಮಾಡಿದ ಅಥವಾ ಪುನಃ ನೇಮಿಸಿ ಕೊಂಡ ಮುಂತಾದ ಪ್ರಸಂಗಗಳಲ್ಲಿ, (ಘಂಟೆ) ವೇಳೆಯನ್ನು ಬರಿಯದೆ ಫಕ್ತ ತಾರೀಖು ಮಾತ್ರ ಬರದು ತಿಳಿಸುತ್ತಾರೆ. ಅದರಿಂದ ನಮ್ಮಲ್ಲಿ ಪಗಾರ ಆಕಾರಿಸುವಾಗ್ಗೆ ಬಹಳೇ ತೊಂದರೆ ಉಂಟಾಗುತ್ತವೆ. ಆದರೆ ಇನ್ನು ಮೇಲೆ ಯಾವತ್ತೂ ಸ್ಕೂಲಮಾಸ್ತರರು ಮೇಲೆ ಬರದ ಪ್ರಸಂಗಗಳಲ್ಲಿ ವೇಳೆಯನ್ನು (ಘಂಟೆ) ನಮೂದ ಮಾಡಿ ಯೋಗ್ಯ ಕಾಲಕ್ಕೆ ರಿಪೋರ್ಟಗಳನ್ನು ಮಾಡುತ್ತಿರಬೇಕು. ತಪ್ಪ ಬಾರದು. ತಿಳಿಯೋದು.

ತಾರೀಖು ೬ ಆಕ್ಟೋಬರ ಸನ್ ೧೮೭೬ ನೇ ಇಸವಿ.

(Signed) K. N. Bhangamkar.

ಡಿ. ಎ. ಇ. ಜಿ. ಬೆಳಗಾಂವ

ಈ ನೋಟೀಸು ದಕ್ಷಿಣ ಭಾಗದೊಳಗಿನ ಯಾವತ್ತೂ ಸ್ಕೂಲಮಾಸ್ತರರಿಗೆ ಲಾಗು ಇರುತ್ತದೆ.

(Signed) W. A. Russell.

ಎ. ಇ. ದಕ್ಷಿಣ ಭಾಗ.

A SHORT ACCOUNT OF CHANDRAGUTTI.

ಚಂದ್ರಗುತ್ತಿಯ ವರ್ಣನೆ.

ಈ ಪ್ರಸಿದ್ಧ ರೇಣುಕಾಸ್ಥಾನವು ಶಿದ್ದಾಪುರದಿಂದ ಉತ್ತರಕ್ಕೆ ಸುಮಾರು ಆರು ಮೈಲಿನಮೇಲೆ ಮೈಸೂರ ಇಲಾಖೆಯೊಳಗೆ ಎರ್ಡುಮೈಲ ಎತ್ತರವಾದ ಗುಡ್ಡದ ಮಧ್ಯದಲ್ಲಿ ಅದೆ. ಈ ದೇವರಿಗೆ ಗುತ್ತೆಮ್ಮ ಅನ್ನುತ್ತಾರೆ. ಈ ಗುತ್ತ್ಯೆಮ್ಮನ ದೇವಸ್ಥಾನವು ಗುಡ್ಡದಲ್ಲಿ ಇರುವ ಒಂದು ಗವಿಯೊಳಗೆ ಇದ್ದು, ಅದರ ಮುಂಬದಿಯಲ್ಲಿ ದೊಡ್ಡ ಶಿಲೆಯು ಮೇಲಿನಿಂದ ಮಾಳಗಿಯಂತೆ ಬಂದದೆ.

ಈ ಗುಡ್ಡದ ತುದಿಯಲ್ಲಿ ಒಂದು ಹಾಳ ಕೋಟೆ ಅದೆ. ಆ ಕೋಟೆಯಲ್ಲಿ ಬಿದ್ದುಹೋದ ಒಂದು ಈಶ್ವರದೇವಸ್ಥಾನ ಉಂಟು. ಆ ದೇವರಿಗೆ ಚಂದ್ರಮೌಳೇಶ್ವರ ಅನ್ನುತ್ತಾರೆ. ಚಂದ್ರಮೌಳೇಶ್ವರನ ದೇವಸ್ಥಾನವೂ ಈ ಕೋಟೆಯೂ ಸುತ್ತಲು ಎಂಟು ಹತ್ತು ಹರದಾರಿವರಿಗೆ ಕಾ

ಣಿಸುತ್ತನೆ. ಈ ಕೋಟೆಯಲ್ಲಿ ಅನೇಕ ಹಾಳ ಮನೆಗಳೂ ನಾಲ್ಕಾರು ಕೆರೆಗಳೂ ಅವೆ. ಅಲ್ಲಿ ಹೋಗಿ ನೋಡುವವರ ಮನಸ್ಸಿಗೆ ಅತಿ ಉಲ್ಹಾಸ ವಾಗುತ್ತದೆ. ಈ ಕೋಟೆಯು ಮೊದಲು ಸೋದಿಯ ಕಂದಬ ರಾಜನ ವಶಲ್ಲಿತ್ತು ಯೆಂತ ಹೇಳುತ್ತಾರೆ.

ಬೆಳಗಾಂವಿ ಜಿಲ್ಲೆಯೊಳಗಿನ ಸಂವದತ್ತಿ ಯೆಲ್ಲಮ್ಮನ ಜಾತ್ರಿ ಆಗುವಂತೆ, ಇಲ್ಲ್ಯಾದರು ಅದೇ ಪ್ರಕಾರ ಜಾತ್ರಿಯು ಚೈತ್ರ ಶುದ್ಧ ೧ ಗೆ ಆಗುತ್ತದೆ. ಜಾತ್ರಿಕಾಲಕ್ಕೆ ಹತ್ತುಸಾವಿರದ ವರಿಗೆ ಜನ ಸಮೂಹ ಕೂಡುತ್ತದೆ.

ಈ ಶಿವೋಯಲ್ಲಿ ಬ್ರಾಹ್ಮಣ ವರ್ಗ ಲಿಂಗಾಯತರು, ಹೊರ್ತಾಗಿ ಬೇರೆ ಕೆಳಗಿನ ಜಾತಿಯವರ ಕಾಲಶೇವರು ಇದೇ ಆಗಿದೆ. ಅವರು ಜಾತ್ರಿಗೆ ಬರುವಾಗ್ಯೆ ಒಂದೊಂದು ಪಾಯಿಕೋಲು ದಿವಟಿಗಿ ತೆಗದುಕೊಂಡು ಬರುತ್ತಾರೆ. ತೇರಿನ ದಿವಸ ರಾತ್ರಿಕಾಲಕ್ಕೆ, ಈ ಯಾವತ್ತು ದಿವಟೆಗಗಳು ಹಚ್ಚಿಕೊಂಡು ತೇರಿನ ಮುಂದೆ ಹೋಗುವಾಗ್ಯೆ ಗುಡ್ಡದ ತಳಗಿನ ಜನರಿಗೆ ಬಹಳ ಚಮತ್ಕಾರವಾಗಿ ಕಾಣಿಸುತ್ತದೆ.

ಈ ಗುಡ್ಡದಲ್ಲಿ ಏಳು ಎಂಟು ವರುಷಕ್ಕೊಂವೆ, ಜೇಟಿಗೇ ಕಾಲದಲ್ಲಿ ಒಮ್ಮಿಂದೊಮ್ಮೆ ಬಿರಕಿನ ಒಳಗಿಂದ ನೀರು ಹರಿಯಲಾರಂಭಿಸುತ್ತದೆ. ಆಗ ಆಸಪಾಸಿನ ಜನರು ಭಾಗಿರಥಿ ಸ್ನಾನಕ್ಕೆಂತ ಹೋಗುತ್ತಾರೆ.

ಈ ಗುತ್ಯೆಂವನ ಗುಡೀ ಮೇಲ್ಭಾಗದಲ್ಲಿ ಯಾವಾಗಲೂ ದೊಡ್ಡ ಹರವಿಯೆಂತ ಜೇನುಗಳು ತೂಗ್ಯಾಡುತ್ತಿರುತ್ತವೆ. ಯಾರಾದರು ಪೈಲಿಗೆಯವರು ಬಂದರೆ ಅವರಿಗೆ. ಈ ಹುಳಗಳು ಕಚ್ಚುತ್ತವೆಯೆಂತ ಹೇಳುತ್ತಾರೆ.

ಅಡಕಿ ತೋಟದ ವರ್ಣನೆ.

ಅಡಿಕೆ ತೋಟಗಳು ಕನಡಾ ಜಿಲ್ಹೆಯ ಶಿದ್ದಾಪುರ, ಯೆಲ್ಲಾಪುರ, ಶಿರ್ಶಿ; ಈ ಮೂರು ತಾಲೂಕಗಳಲ್ಲಿ ಇದ್ದಷ್ಟು ಮುಂಬೈ ಇಲಾಖೆಯೊಳಗ ಮತ್ತೆಲ್ಲೂ ಇಲ್ಲ. ಇದರ ತೈರು ಹ್ಯಾಗಾಗುತ್ತದೆ. ಯೆಂಬುವ ವಿಷಯದಲ್ಲಿ ಮೊದಲಿನಿಂದ ಬರೆಯುತ್ತೇನೆ.

ಅಡಿಕೆ ತೋಟಕ್ಕೆ ಸುತ್ತಮುತ್ತಲು ಗಿಡ ಉಳ್ಳ ಗುಡ್ಡ ಇದ್ದು ಮಧ್ಯದಲ್ಲಿ ನೀರು ಹರಿಯುವಂಥಾ ಸ್ಥಳ ಇರಬೇಕು ಅಂಥಾ ಸ್ಥಳದಲ್ಲಿಯೇ ಸ್ಥಳದ ವಿನಾ ಬೇರೆ ಕಡಿಗೆ ಆಗುವದಿಲ್ಲ.

ಅಡಿಕೆ ಗಿಡಗಳು ಹಚ್ಚಬೇಕಾದರೆ ಮೊದಲು ಭೂಮಿ ಹರಗಿ ಅದರಲ್ಲಿ ಒಂದು ಎರಡು ವರ್ಷಗಳ ಪರಿಯಂತರ ಬಾಳೆಗಿಡಗಳನ್ನು ಹಚ್ಚುತ್ತಾರೆ. ಆ ಮೇಲೆ ಎಂಟು ಹತ್ತು ಮೆಟ್ಟು ಅಂತರದಿಂದ ಒಂದೊಂದು ಅಡ್ಕಿ ಕಣಿಗಳು ಊರುತ್ತಾರೆ. ಆ ಮೇಲೆ ವರುಷ ವರುಷಕ್ಕೆ ಮಳೆಗಾಲದಲ್ಲಿ ಸುತ್ತಮುತ್ತಲಿರುವ ಗುಡ್ಡದಿಂದ ಗಿಡದ ತೊಪ್ಪಲ ತಂದು ಒಂದೊಂದು ದಿವಸ ದನಗಳ ಕಾಲ ಬುಡಕೆ ಹಾಕಿ ಮರುದಿವಸ ಅದನ್ನು ತೆಗೆದು ಒಂದು ಗುಂಪೆಯಾಗಿ ಬಾನುಬದಿಗೆ ಇಡುತ್ತಾರೆ. ಆಮೇಲೆ ಕಾರ್ತಿಕ ಮಾರ್ಗಶೀರ್ಷ ಸುಮಾರಕ್ಕೆ ಗಿಡಗಳ ಬುಡಕೆ ಹಾಕುತ್ತಾರೆ. ಇದರಂತೆ ಪ್ರತಿ ವರುಷದಲ್ಲಿ ಮಾಡುತ್ತಾ ಹೋಗಬೇಕು.

ಅಡಿಕೆ ಕಣಿಗಳು ಊರಿದ ಮೇಲೆ ಸುಮಾರು ಎಂಟು ಹತ್ತು ವರುಷಗಳಲ್ಲಿ ಫಲಫಲಿಸಲಾರಂಭಿಸಿ ಸುಮಾರು

ನಾಲ್ವತ್ತು ಐವತ್ತು ವರುಷಗಳ ಮಟ್ಟಿಗು ಬಾಳುತ್ತವೆ.

ಒಂದೊಂದು ಗಿಡಕ್ಕೆ ಪ್ರತಿ ವರುಷಕ್ಕೆ ಎರ್ಡು ಮೂರು ಗೊನೆಗಳು ಬಿಡುತ್ತವೆ. ಒಂದೊಂದು ಗೊನೆಯಲ್ಲಿ ಐನೂರು ವರಿಗೆ ಅಡ್ಕೆಗಳಿರುತ್ತವೆ. ಆ ಗೊನೆಗೆ ಶ್ರಾವಣ ಮಾಸದಲ್ಲಿ ಉದರಿ ಬಿದ್ದ ಅಡಿಕೆ ಎಲೆಗಳ ಹಿಂದಿನ ಹಾಳೆಗಳನ್ನು ಕಟ್ಟುತ್ತಾರೆ. ಇದಕ್ಕೆ ಕೊಟ್ಟೆಯೆನ್ನುತ್ತಾರೆ ಈ ಕೊಟ್ಟೆ ಕಟ್ಟುವ ಉದ್ದಿಶ್ಯವಾಗಿ, ಉದರಿ ಬಿದ್ದ ಎಲೆಗಳು ಪ್ರತಿದಿವಸ ಆರಿಸ ಇಡಬೇಕಾಗುತ್ತದೆ. ಆ ಕೊಟ್ಟೆಗಳು ಕಟ್ಟಬೇಕಾದರೆ ಒಬ್ಬ ಮನುಷ್ಯನು ಒಂದು ಸಾರಿ ಮರವನ್ನೇರಿ ಸುಮಾರು ನೂರಾರು ಗಿಡಗಳಿಗೆ ಕೊಟ್ಟೆಗಳನ್ನು ಕಟ್ಟುತ್ತಾನೆ. ಅದು ಹ್ಯಾಗೆಂದರೆ ಅವನು ಮರವನ್ನೇರುವಾಗ ಬೆನ್ನಿಗೆ ಒಂದು ದೋಟಿ, ಒಂದು ಮರದ, ತುಂಡು, ಒಂದು ಹಗ್ಗ, ಒಂದು ಕುಡಗೋಲು, ಇಷ್ಟು ಸಾಮಾನು ತೆಗೆದುಕೊಂಡು ಏರುತ್ತಾನೆ. ಮೇಲೆ ಏರಿದನಂತರ ಆ ಮರದ ತುಂಡಂನು ಮರದ ತುದಿಯಲ್ಲಿ ಘಟ್ಟಿಯಾಗಿ ಕಟ್ಟಿ ಅದರ ಮೇಲೆ ಕೂಡ್ರುತ್ತಾನೆ. ಆ ಮೇಲೆ ಏರಿದ ಮರಕ್ಕೆ ಇರುವ ಅಡ್ಕೆ ಗೊನೆಗೆ ಕೊಟ್ಟೆಗಳನ್ನು ಕಟ್ಟಿ ಆ ಮೇಲೆ ಅದರ ಆಸಪಾಸ ಇರುವ ಮರವನ್ನು ಮೇಲೆ ಹೇಳಿದ ದೋಟಿಯಿಂದ ತಂನಕಡಿಗೆ ಎಳದುಕೊಳ್ಳುತ್ತಾನೆ. ಆ ದೋಟಿಗೆ ಮರ ನಿಲಕದೆ ಹೋದರೆ ತಾನು ಕೂತ ಮರಕ್ಕೆ ಜೋಲಿ ಹೊಡದು ಆ ದೋಟಿಯಿಂದ ಮರವಂನು ಎಳದುಕೊಳ್ಳುತ್ತಾನೆ. ತದನಂತರ ಆ ಹಲಗಿ ಬಿಚ್ಚಿ ಮೊದಲಿನಂತೆ ಯೆಲ್ಲಾ ಸಾಮಾನು ಬೆಂನಿಗೆ ಕಟ್ಟಿಕೊಂಡು ತಾನು ಕೂತ ಮರಕ್ಕೆ ಸ್ವಲ್ಪ ಜೋಲಿ ಹೊಡದು ಸಮೀಪಿನ ಮರ ಹಿಡಿದು

ಕೊಂಡು ಮಂಗನಂತೆ ಆ ಮರದ ಮೇಲೆ ಹಾರುತ್ತಾನೆ. ಇದರಂತೆ ಇಡಿ ತೋಟವನ್ನೆಲ್ಲಿ ಮೇಲಿಂದ ಮೇಲೆ ತಿರುಗುತ್ತಾನೆ. ಕೊಟ್ಟೆ ಕಟ್ಟುವ ಕೆಲಸದಷ್ಟು ಕಠಿಣವಾದ ಕೆಲಸವು ಅನ್ಯಾವದೂ ಇಲ್ಲ. ಕೊಟ್ಟೆ ಕಟ್ಟುವ ಕಾರಣವೇನೆಂದರೆ ಅಡಿಕೆಗಳು ಮಳೆಯಿಂದ ಕೊಳೆಯು ಬಾರದು ಎಂಬುವದೆ.

ಅಡ್ಕಿ ಕೊಯ್ಯುವ ಹಂಗಾಮವು ಭಾದ್ರಪದ ಆಶ್ವೀನ ಮಾಸವು ಆಗ ಕೊಯಿದು ಅಡ್ಕಿಗಳನ್ನೆಲಾ ಸುಲಿದು ಬೈಯಿಸಿ ಬಿಸಲಿಗೆ ಹಾಕಿ ಒಣಗಿಸುತ್ತಾರೆ. ಒಣಗಿಸಿದಮೇಲೆ ಅದೇ ಬೈಯಿಸಿದ ನೀರಿನೊಳಗೆ ಬಾಳೆಮರದ ನೀರು ತಾಳೆಮರದ ಚೆಕ್ಕಿ ಸ್ವಲ್ಪ ಹುರಮಂಜು ಸ್ವಲ್ಪ ಸುಂಣಾ ಹಾಕಿ ಒಣಗಿದ ಅಡಿಕೆಗೆ ಹಚ್ಚಿ ಮತ್ತೊಂದು ಸಾರಿ ಬಿಸಲಿಗೆ ಹಾಕಿ ಆ ಮೇಲೆ ಚೀಲದಲ್ಲಿ ತುಂಬಿ ಮಾರಾಟಕ್ಕೆ ವೈಯ್ಯುತ್ತಾರೆ. ತೆಂಗಿನ ಮರದಹಾಗೆ ಇದರಲ್ಯಾದರೂ ಉಪಯೋಗವಿಲ್ಲದ ಪದಾರ್ಥ ಒಂದಾದರೂ ಇಲ್ಲ.

A SHORT ACCOUNT OF SUPA.

ಸುಪೆಯ ವರ್ಣನೆ.

—000—

ಈ ಊರು ಕನಡಾ ಜಿಲ್ಲೆಯ ಪಶ್ಚಿಮ ಭಾಗದ ಕಡಿಗೆ ಅಸಿತಾ (ಕಾಲಿಂದಿ ಅಥವಾ ಕರೆಹೋಳೆ) ಮತ್ತು ಸಿತಾ (ಬಿಳೆ ಹೋಳೆ) ಎಂಬ ಎರಡರ ಸಂಗಮದ ದಕ್ಷಿಣ ಭಾಗಕ್ಕೆ ಇರುತ್ತದೆ. ಈ ವೆರಡು ನದಿಗಳ ಸಂಗಮ ಆದಲ್ಲಿ,

ಶ್ರೀ ರಾಮ ದೇವರು ಸ್ಥಾಪಿತ (ರಾಮಲಿಂಗ) ಎಂಬ ಲಿಂ ಗ ಉಂಟು. ಈ ಸಂಗಮಕ್ಕೆ ಪಶ್ಚಿಮ ಕಡೆಯಿಂದ ಸೇತು (ಪೂಲು) ಅದೆ, ಅದರ ಮೇಲೆ ಮಳಗಾಲಮುಟ್ಟು ನೀ ರು ಇರುತ್ತದೆ. ಬ್ಯಾಸಿಗೆಯಲ್ಲಿ ಈ ರಾಮೇಶ್ವರವು ಜ ಸ್ಥವಾಗಿ ಇರುತ್ತದೆ ಬ್ಯಾಸಿಗೆಯಲ್ಲಿ ಪೂಜೆ ಮಾಡಬಾ ಅಲ್ಲಿ ದೋಣಿಯಿಂದ ಹೋಗಿ ಮಾಡುತ್ತಾರೆ ಈ ದೇವ ತೇರು (ರಥೋತ್ಸವ) ಫಾಲಗುಣ ಶುದ್ಧ ಪಂಚಮಿ ಆಗಿ ಮರದಿವಸ ಅವಭೃತ ಸ್ನಾನ (ಓಕಳಿ) ಆಗಿ ಉ ತ್ಸವ ಪೂರ್ಣವಾಗುತ್ತದೆ. ದಕ್ಷಿಣ ದಡದಲ್ಲಿ ಅದೇ ದೇವರ ದೊಡ್ಡ ಗುಡಿಯು ಹೊಸದಾಗಿ ದುರಸ್ತಿ ಊರವರು ಮಾಡಿದ್ದಾರೆ. ಈ ದೇವರಿಗೆ ಅಜಮಾಸು ಸರಕಾರದಿಂದ ೫೦೦–೬೦೦ ವರೆಗೆ ರುಪಾಯಿಗಳು ದರ ಸಾರಿ ಬರು ತ್ತದೆ. ಅದು ತಾಲೂಕಕಚೇರಿ (ಹಳಿಯಾಳ) ದಿಂದ ತರ ಬೇಕಾಗುವದು. ಇಲ್ಲಿ ಬ್ರಾಹ್ಮಣ (೧೨ ದ್ರಾವಿಡರವು, ೨೦ ಗೌಡರವು) ಮನೆಗಳು ಇರುತ್ತವೆ. ಅವರಿಗೆ ಬೇರೆ ಯಾಗಿ ಕರಾಡೆ, ಶೇಣವಿ, ಸಾಷ್ಟಿಕರ, ಕುಡಾಳ, ಎಂಬ ಹೆಸರು ಇರುತ್ತವೆ. ಊರ, ಅಂಗಡಿ, ಗುಡಿ, ತೇರು ಮೊದಲಾದ ನದಿಯ ದಕ್ಷಿಣ ದಿಕ್ಕಿಗೆ ಈ ಪಶ್ಚಿಮ ಭಾಗಕ್ಕೆ ವಿನಕೆ ಮನೆಗಳೂ, ಕಚೇರಿ ಮೊದಲಾದ ಪೋಲಿಸ ಲೈನ ನದಿಯ ಮಾರ್ಗಕ್ಕೆ ಇರುತ್ತದೆ. ಈ ನದಿಗೆ ಬ್ಯಾಸಿಗೆಯಲ್ಲಿ ಪೂರ್ವದ ಬದಿಯಿಂದ ೧ ಪಶ್ಚಿಮದ ಬದಿಯಿಂದ ೧ ಉತ್ತರದ ಬದಿಯಿಂದ ೧ ಕಾಲದಾರಿ (ಉತಾರ) ಅವೆ.

ಈ ನದಿಗಳಲ್ಲಿ ಕಾಲಿಂದಿ ಎಂಬ ನದಿಯು ಪಶ್ಚಿಮದ ಬದಿಯಿಂದ ೪ ಹರದಾರಿ ಮೇಲಿಂದ ಹರಿದು ಬಂದು ಬಿ

ನದಿಗೆ ಕೂಡುತ್ತಧೆ. ಬಿಳೆ ನದಿಯು ಉತ್ತರದ ಬದಿ
ಂದ ಅಷ್ಟೇ ದೂರಿಂದ ಬಂದು ಉಭಯ ಸಂಗಮವಾಗಿ
ರ್ವಕ್ಕೆ ಹೋಗುತ್ತವೆ. ಈ ನದಿಯು ದೊಡ್ಡ ಪ್ರವಾಹ
ದ ಸದಾಶೀವ ಗಡದ ದಕ್ಷಿಣಕ್ಕೆ ಅರಬಿ ಸಮುದ್ರ (ಪ
ಮ ಸಮುದ್ರ)ಕ್ಕೆ ಕೂಡುತ್ತದೆ. ಈ ದೇವಸ್ಥಾನದ
ರಾಮ ದೇವರ ಪ್ರತಿಮೆಯು ಸೀತೆಯಿಂದ ಸಹಿತವಾ
ಬಹಳ ಪ್ರಾಚೀನ ಕಾಲದ್ದು, ಶ್ರೀರಾಮ ದೇವರು ಕೂಪರ್
ರೆಂಬ ಋಷಿಗಳಿಗೆ ಕೊಟ್ಟರಂತೆ ಹೇಳಿಕೆ (ಪುರಾಣದ
) ಉಂಟು. ಶೂರ್ಪನಖಿ ಎಂಬ ರಾಕ್ಷಸಿಯು ವಾಸಸ್ಥ
ವೆಂತಲೂ ಹೇಳಿಕೆ ಯುಂಟು. ಈ ದೇವಸ್ಥಾನದಲ್ಲಿ
ಭಿಷೇಕ ಮುಂತಾದ ಶ್ರೀ ರಾಮಲಿಂಗಗೆ ಆಗುತ್ತ ಸಿಂಹ
ದ ಆಗುತ್ತ ವೆಂತ ಜನರು ಹೇಳುತ್ತಾರೆ. ಪ್ರತಿ ಸೋ
ಮವಾರಕ್ಕೆ ([illegible] ಶಿವಾಯ) ರಾತ್ರಿ ಕಾಲದಲ್ಲಿ,
ಪಾಲಕಿ ಉತ್ಸಾಹ ಆಗುತ್ತದೆ. ದೇವರ ಎದುರಿಗೆ ಮಾರು
ತಿಯ ಶ್ರೀಮಾರುತಿಯ ದೇವಸ್ಥಾನತನಕಾ ಪಾಲಖಿ ಹೋ
ಗಿ ಉರೊಳಗಾದ ಸ್ವಸ್ಥಾನಕ್ಕೆ ಬರುತ್ತದೆ. ಈ ದೇವ
ಸ್ಥಾನದಲ್ಲಿ ಚರ ಉತ್ಸಾಹ ಶ್ರೀರಾಮ ದೇವರಗೂ, ಸ್ಥಿರ
ಉತ್ಸಾಹ ಲಿಂಗಕ್ಕೆ ಯಾಗುತ್ತ ನಾದದೇ ಇದೆ. ಗ್ರಾಮ
ದೇವತೆಯು ಸರ್ವಾಧಿಕ ಬಳ್ಳತನಕ್ಕೆ ಈ ದೇವರಿಗೆ ಅ
ಭಿಷೇಕ ರುದ್ರಾದಿಗಳಿಂದ ಮಾಡುತ್ತಾರೆ. ಅದನ್ನು ಮಾಡ
ಬೇಕಾದರೆ ಅದಕ್ಕೆ ೧೦ ಮಂದಿ ದೇವರ ಬೇವಾಗಾರ ಬ್ರಾ
ಹ್ಮಣರಿಂದ ಆಗುತ್ತದೆ. ಯಂತ ನಿಬಂಧನೆ ಯುಂಟು. ದೇ
ವಸ್ಥಾನದ ಸುತ್ತಮುತ್ತಲು ಅಗ್ರಶಾಲಿ ಶ್ರೀ ದತ್ತಾತ್ರೆಯ
ದೇವಸ್ಥಾನ ಇರುತ್ತದೆ. ನದಿಯ ದಕ್ಷಿಣ ದಂಡಿಗೆ ವಿಶ್ವೇ

ಶ್ವರ ವೆಂಬ ದೇವಸ್ಥಾನ ಚಿಕ್ಕದ್ದಾಗಿ ಯುಂಟು. ಈ ಊ
ರಹೆಸರೇ ಸೇತಗೆ ಹಾಗು ತಾಲೂಕಕ್ಕೆ ಇದ್ದು ತಾಲೂಕ
ಚೇರಿ ಹಳಿಯಾಳದಲ್ಲಿ, ಮತ್ತು ಸೇಟ್ಟಿ ಕಚೇರಿಯಲ್ಲಿ
ಳೇ ನದಿಯು ಪೂರ್ವಕ್ಕೆಯಿಧೆ. ಮತ್ತು ಕರೇ ನದಿಯ
ದಕ್ಷಣಕ್ಕೆ (ಊರ ಬದಿಗೆ) ಪೋಷ್ಟ ಹಾಪೀಸು ಆಸಪಿತ್ರೆ
ಸಾಲಿ ಮುಂತಾದವುಗಳಿರುತ್ತವೆ. ಈ ಊರಲ್ಲಿ ಹುಡುಗರೇ
ಕಮ್ಮಿ ಇರುವದರಿಂದ ಸಾಲಿಯು ಸ್ಥಿತಿಯು ಸಾಧಾರಣವಾ
ಗಿ ಉಂಟು. ಖಾನಿಸುಮಾರಿ ೨೦೦ ಮೇಲೆ ಇರುವದು ಈ
ಊರ ಪಶ್ಚಿಮಕ್ಕೆ ಡಿಗ್ಗಿ, ಕುವೇಶಿ, ಕುಂಡಲ, ತ್ರಿನ್ಸ್ಯ, ಮೊ
ದಲಾದ ಉಪ್ಪಿರಕಟ್ಟಿ (ಸಾಲಿಯು) ಉಂಟು. ಅಲ್ಯಲ್ಲಿ ಕಾ
ಮಗಾರರು ಇರುತ್ತಾರೆ. ಈ ಊರಲ್ಲಿ ಯಾರದಿ ಎಂಬವ
ರು ಮತ್ತು ಹೆಳಗಡೆಯುಂಬುವರು ಡೊಡ್ಡ ಮನೆತನಸ್ಥರು
ಹಾಗು ಸಾವಕಾರರು ಇರುತ್ತಾರೆ. ಈ ನದಿಗೆ ಪೂರ್ವದಿಕ್ಕಿ
ಗೆ ೧ ಮೈಲ ಮೇಲೆ ಪಾಶಿ ಎಂಬ ೧ ನದಿ ಕೂಡಿದೆ. ಇ
ಲ್ಲಿ ಹವೆಯು ಥಣ್ಣಗಿದ್ದು ಬೇರೆ ಶಿಮೇಯುವರಿಗೆ ಜ್ವರಾ
ದಿ ಉಪದ್ರವಕಾರಕವಿರುವದರಿಂದ ಇಂಥ ಸಣ್ಣ ಊರ
ಲ್ಲಿ ಆಸಪಿತ್ರಳ ಸರಕಾರದಿಂದಿಟ್ಟದ್ಧಾರೆ. ಇದೊಂದು ಸರ
ಕಾರದ್ದು ಸ್ತುತ್ಯ ಕೃತ್ಯವು.

ಈ ಊರದ ದಕ್ಷಣಕ್ಕೆ ಉಳವಿ ಎಂಬ ೧ ಊರ ಇ
ರುತ್ತಧೆ. ಅಲ್ಲಿ ಶ್ರಿ ಬಸವೇಶ್ವರ ದೇವಸ್ಥಾನ ಪ್ರಾಚೀನ
ವಿರುತ್ತಧೆ. ಅಲ್ಲಿ ಯಾದರು ಸರಕಾರದಿಂದ ತಸ್ತಿಕ ವಗೈರೆ
ಇದ್ದು ಮಾಘ ಪೂರ್ಣಿವಿಗೆ ಅಲ್ಲಿ ರಥೋಜ್ಜಾಯ ಆಗುವ
ದು. ಅಲ್ಲಿ ಬಹಳ ಜನರು ಲಿಂಗಾಯತರು ಕೂಡುವರು.
ಆ ಊರ ಇಲ್ಲಿಂದ ೧೦ ಹರದಾರಿ ಇರುವದು. ಕಾರವಾರ

ಲ್ಲಿಂದ ೨೦ ಹರದಾರಿ ಖುಷಕೀಯಿಂದಯಿದೆ. ಮೇರೆ ಳು ಈ ಊರ (ಪೇಟಿಯು) ಉತ್ತರಕ್ಕೆ ಬೆಳಗಾಂವ ಜಿ ಯು ದಕ್ಷಣಕ್ಕೆ ಕಾರವಾರ ತಾಲ್ಕು, ಪಶ್ಚಿಮಕ್ಕೆ ಗೋ ಶೀಮೇಯು, ಪೂರ್ವಕ್ಕೆ ತಾಲೂಕು (ಹಲಿಯಾಳ)ಸರ ದ್ದು. ಹಲಿಯಾಳಕ್ಕೂ ಈ ಊರಗೂ ದರಮ್ಯಾನ ಬಿಕೆ ಂಬ ೧ ಹಳ್ಳಿ, ಮಳೆಗಾಲದಲ್ಲಿ ಮಾರ್ಗ ದುಸ್ತರವು. ಆ ಹವೆಯು ಬಹಳ ಸಾಧಾರಣವಿರುತ್ತಧೆ. ಅದು ಈ ತೆಯಲ್ಲಿ ಬಹಳ ಜನರು ಕುಳಬಿ (ಶುದ್ರರು) ಬಂ ರು ಇರುತ್ತಾರೆ. ಆವರ ನಿರ್ವಾಹ ಕೃಷ ಕೃತ್ಯವೇ ಹೊ ರ್ ಬೇರೆ ಏನು ಇಲ್ಲ. ಈ ಪೇಟ್ಟೆಯಲ್ಲಿ ಅಸೂನಂ ಲ್ಲಿ ೧ ಸರಕಾರಿ ಸಾಲಿ ಹೊಸದಾಗಿ ಆಗಿದೆ. ಮತ್ತು ಮೇಲೆ ಬರೆದ ಉಳವಿಯಲ್ಲಿ ೧ ಸಾಲಿ ಯಾಗಬೇಕಾಗಿದೆ. ಇಲ್ಲಿ ಹೊಲಗಳಿಗೆ ಕೆಲವು ಸ್ಥಳಗಳಲ್ಲಿ ೨ ಸರ್ತಿ ಬೆಳೆ ಯಾಗುತ್ತದೆ ಅದಕ್ಕೆ ವಾಂಯುಗಣ, ಸರ್ದೂ, ಎಂಬ ಹೆಸ ರುಗಳುಂಟು. ಇಲ್ಲಿ ಜನರ ಸ್ಥಿತಿಯು ನಿರ್ವಾಹ ನಡೆಯದಿ ರು ಸ್ವದೇಶ ಬಿಟ್ಟು ಹೋಗಲಾರರು, ಮತ್ತು ಅಂಥ ಮೇಹನತ್ತಾದರು ಮಾಡರು. ಬಡತನವೇ ಇವರ ಪಾಲಿಗೆ ದೇವರು ನಿರ್ಮಿಶಿದ್ಧಾನೆಂಬೋದು ಇವರ ನಿರುದ್ಯೋಗ ತೋರಿಸುತ್ತದೆ. ಈಗ ಸರಕಾರದವರು ದಯಮಾಡಿ ರಸ್ತೇ, ಸರಕಾರಿ ಸಾಲಿ, ಆಸ್ಪತಳ, ಪೋಷ್ಟ ಮೊದಲಾದ ಕಾರಖಾನೆ ಮಾಡಿದ್ದರಿದ ಜನರು ಏನಕೆ ಹುಶಾರರಾಗಿದ್ಧಾರೆ. ಈ ಪ್ರಕಾರಾ ಸಾಧಾರಣವಾಗಿ ಈ ಪೇಟ್ಟೆಯ ವರ್ಣನೆ ಉಂಟು.

ಶ್ವರ ವೆಂಬ ದೇವಸ್ಥಾನ ಚಿಕ್ಕದ್ದಾಗಿ ಯುಂಟು. ಈ ಊರಹೆಸರೇ ಪೇಠಗೆ ಹಾಗು ತಾಲೂಕಕ್ಕೆ ಇದ್ದು ತಾಲೂಕ್ಕಚೇರಿ ಹಲಿಯಾಳದಲ್ಲಿ, ಮತ್ತು ಪೇಟ್ಟೆ ಕಚೇರಿಯಲ್ಲಿ ಜಿಳೇ ನದಿಯು ಪೂರ್ವಕ್ಕೆಯಿಧೆ. ಮತ್ತು ಕರೇ ನದಿಯು ದಕ್ಷಣಕ್ಕೆ (ಊರ ಬದಿಗೆ) ಪೋಷ್ಟ ಹಾಪೀಸು ಆಸಪಿತ್ರಳ ಸಾಲಿ ಮುಂತಾದವುಗಳಿರುತ್ತವೆ. ಈ ಊರಲ್ಲಿ ಸ್ರಜುಗರೇ ಕಮ್ಮಿ ಇರುವದರಿಂದ ಸಾಲಿಯು ಸ್ಥಿತಿಯು ಸಾಧಾರಣವಾಗಿ ಉಂಟು. ಖಾನಿಸುಮಾರಿ ೨00 ಮೇಲೆ ಇರುವದು ಈ ಊರ ಪಶ್ಚಿಮಕ್ಕೆ ಡಿಗ್ಗಿ, ಕುವೇಶಿ, ಕುಂಡಲ, ತ್ರಿನ್ಯ, ಮೊದಲಾದ ಉಪ್ಪಿರಕಟ್ಟೆ (ಸಾಲಿಯು) ಉಂಟು. ಅಲ್ಯಲ್ಲಿ ಕಾಮಗಾರರು ಇರುತ್ತಾರೆ. ಈ ಊರಲ್ಲಿ ಯಾರದಿ ಎಂಬವರು ಮತ್ತು ಹೆಳಗಡೆಯುಂಬುವರು ಡೊಡ್ಡ ಮನೆತನಸ್ಥರು ಹಾಗು ಸಾವಕಾರರು ಇರುತ್ತಾರೆ. ಈ ನದಿಗೆ ಪೂರ್ವದಿಕ್ಕಿಗೆ ೧ ನ್ಯೈಲ ಮೇಲೆ ವಾಶಿ ಎಂಬ ೧ ನದಿ ಕೂಡಿದೆ. ಇಲ್ಲಿ ಹವೆಯು ಥಣ್ಣಗಿದ್ದು ಬೇರೆ ಶಿಮೆಯವರಿಗೆ ಜ್ವರಾದಿ ಉಪದ್ರವಕಾರಕವಿರುವದರಿಂದ ಇಂಥ ಸಣ್ಣ ಊರಲ್ಲಿ ಆಸಪಿತ್ರಳ ಸರಕಾರದಿಂದಿಟ್ಟಿದ್ದಾರೆ. ಇದೊಂದು ಸರಕಾರದ್ದು ಸ್ತುತ್ಯ ಕೃತ್ಯವು.

ಈ ಊರದ ದಕ್ಷಣಕ್ಕೆ ಉಳವಿ ಎಂಬ ೧ ಊರ ಇರುತ್ತಧೆ. ಅಲ್ಲಿ ಶ್ರಿ ಬಸವೇಶ್ವರ ದೇವಸ್ಥಾನ ಪ್ರಾಚೀನವಿರುತ್ತಧೆ. ಅಲ್ಲಿ ಯಾದರು ಸರಕಾರದಿಂದ ತಸ್ತಿಕ ಪಗ್ಯಾರೆ ಇದ್ದು ಮಾಘ ಪೂರ್ಣಿಮೆಗೆ ಅಲ್ಲಿ ರಥೋತ್ಸವ ಆಗುವದು. ಅಲ್ಲಿ ಬಹಳ ಜನರು ಲಿಂಗಾಯತರು ಕೂಡುವರು. ಆ ಊರ ಇಲ್ಲಿಂದ ೧0 ಹರದಾರಿ ಇರುವದು. ಕಾರವಾರ

ಲ್ಲಿಂದ ೨೦ ಹರದಾರಿ ಖುಷಕೀಯಿಂದಯಿದೆ. ಮೇರೆಳು ಈ ಊರ (ಪೇಟೆಯ) ಉತ್ತರಕ್ಕೆ ಬೆಳಗಾಂವ ಜಿಯು ದಕ್ಷಣಕ್ಕೆ ಕಾರವಾರ ತಾಲ್ಕು, ಪಶ್ಚಿಮಕ್ಕೆ ಗೋ ಶೀಮೇಯು, ಪೂರ್ವಕ್ಕೆ ತಾಲೂಕು (ಹಲಿಯಾಳ) ಸರಹದ್ದು. ಹಲಿಯಾಳಕ್ಕೂ ಈ ಊರಗೂ ದರಮ್ಯಾನ ಬರ್ಚಿಂಬ ೧ ಹಳ್ಳಿ, ಮಳೆಗಾಲದಲ್ಲಿ ಮಾರ್ಗ ದುಸ್ತರವು. ಅಲ್ಲಿ ಹವೆಯು ಬಹಳ ಸಾಧಾರಣವಿರುತ್ತಧೆ. ಅದು ಈ ಪೇಠೆಯಲ್ಲಿ ಬಹಳ ಜನರು ಕುಳಬಿ (ಶೂದ್ರರು) ಬಡವರು ಇರುತ್ತಾರೆ. ಅವರ ನಿರ್ವಾಹ ಕೃಷಿ ಕೃತ್ಯವೇ ಹೊರ್ತೂ ಬೇರೆ ಏನು ಇಲ್ಲ. ಈ ಪೇಟ್ಟಿಯಲ್ಲಿ ಅಸೂನಂಟಲ್ಲಿ ೧ ಸರಕಾರಿ ಸಾಲಿ ಹೊಸದಾಗಿ ಆಗಿದೆ. ಮತ್ತು ಮೇಲೆ ಬರೆದ ಉಳವಿಯಲ್ಲಿ ೧ ಸಾಲಿ ಯಾಗಬೇಕಾಗಿದೆ. ಇಲ್ಲಿ ಹೊಲಗಳಿಗೆ ಕೆಲವು ಸ್ಥಳಗಳಲ್ಲಿ ೨ ಸರ್ತಿ ಬೆಳೆಯಾಗುತ್ತದೆ ಅದಕ್ಕೆ ವಾಂಯುಗಣ, ಸರ್ದೂ, ಎಂಬ ಹೆಸರುಗಳುಂಟು. ಇಲ್ಲಿ ಜನರ ಸ್ಥಿತಿಯು ನಿರ್ವಾಹ ನಡೆಯದಿದ್ದರು ಸ್ವದೇಶ ಬಿಟ್ಟು ಹೋಗಲಾರರು, ಮತ್ತು ಅಂಥ ಮೇಹನತ್ತಾದರು ಮಾಡರು. ಬಡತನವೇ ಇವರ ಪಾಲಿಗೆ ದೇವರು ನಿರ್ಮಿಶಿದ್ದಾನೆಂಬೋದು ಇವರ ನಿರುದ್ಯೋಗ ತೋರಿಸುತ್ತದೆ. ಈಗ ಸರಕಾರದವರು ದಯಮಾಡಿ ರಸ್ತೇ, ಸರಕಾರಿ ಸಾಲಿ, ಆಸ್ಪಿತಳ, ಪೋಸ್ಟ ಮೊದಲಾದ ಕಾರಖಾನೆ ಮಾಡಿದ್ದರಿದ ಜನರು ಏನಕೆ ಹುಶಾರರಾಗಿದ್ದಾರೆ. ಈ ಪ್ರಕಾರಾ ಸಾಧಾರಣವಾಗಿ ಈ ಪೇಟ್ಟೆಯ ವರ್ಣನೆಉಂಟು.

DHARWAR TRAINING COLLEGE EXAMINATION QUESTIONS

ಟ್ರೇನಿಂಗ ಕಾಲೇಜ ಸರಟಿಫಿಕೇಟ ಪರೀಕ್ಷೆಯ ಪ್ರಶ್ನಗಳು.

—000—

ಈ ವರ್ಷ ಧಾರವಾಡ ಟ್ರೇನಿಂಗ ಕಾಲೇಜದ ವಾರ್ಷಿಕ ಸರಿಟಿಫಿಕೇಟ ಪರೀಕ್ಷೆಯಲ್ಲಿ ಹಾಕಿದ ಕೇಳೀ ಪ್ರಶ್ನೆಗಳನ್ನು ನಾವು ಈ ಅಂಕಿನಲ್ಲಿ ಛಾಪಿಸಿರುತ್ತೇವೆ. ಈ ಪ್ರಶ್ನಗಳನ್ನು ನೋಡಿ ಕೊಂಡರೆ, ಮುಂದಿನ ವರ್ಷ ಕಾಲೇಜದ ಪರೀಕ್ಷೆಗೆ ಬರುವ ಮಾಸ್ತರರಿಗೂ ವಿದ್ಯಾರ್ಥಿಗಳಿಗೂ, ತಮಗೆ ಸಾಧಾರಣ ಎಂಥ ತರದ ಪ್ರಶ್ನಗಳು ಬರುವವು, ಎಷ್ಟು ಅಭ್ಯಾಸ ಮಾಡಿದರೆ ಪರೀಕ್ಷೆ ಪಾಸಾದ ಬಹುದು, ಎಂಬ ಬಗ್ಗೆ ಕಲ್ಪನೆ ಬಂದು ಸ್ವಲ್ಪ ಸಹಾಯವಾಗುವದು.

೧ ನೇ ವರ್ಗ.

(೧) ಎರಡನೇ ವರ್ಷದ ವಿದ್ಯಾರ್ಥಿಗಳಿಗೆ ಕೊಟ್ಟ ಪಶ್ನಗಳು.

ಅಂಕಗಣಿತ.

(೧) ಒಬ್ಬ ವ್ಯಾಪಾರಿಯು ೧೪ ಕುರಿಗಳನ್ನು ೨೭ ಪೌಂಡ, ೬ ಶಿಲಿಂಗು, ೫$\frac{೧}{೩}$ ಪೇನ್ಸಗಳಿಗೆ ಕೊಂಡು, ಅವುಗಳಲ್ಲಿ ೬ ಕುರಿಗಳನ್ನು, ದರ ಕುರಿಗೆ ೨೩ ಶಿಲಿಂಗದಂತೆ, ಮಾರಿದನು. ಉಳಿದ ಕುರಿಗಳನ್ನು ಎಷ್ಟಕ್ಕೆ ಮಾರಿದರೆ

ಎಲ್ಲ ವ್ಯಾಪಾರದಲ್ಲಿ ಶೇಕಡಾ ೪ ರಂತೆ ಲಾಭವಾದೀತು?

(೨) ಅ ಮತ್ತು ಬ ಇಬ್ಬರೂ ಕೂಡಿ ವ್ಯಾಪಾರ ಮಾಡಲಾರಂಭಿಸಿದರು. ಅವರು ಮೊದಲು ೪:೫ ಈ ಪ್ರಮಾಣದಲ್ಲಿ ಹಣವನ್ನು ಹಾಕಿದ್ದರು. ೩ ತಿಂಗಳಾದ ಬಳಿಕ ಅ ತನ್ನ ಹಣದ $\frac{೧}{೩}$ ವನ್ನೂ, ಬ ತನ್ನ ಹಣದ $\frac{೧}{೪}$ ವನ್ನೂ, ತಕ್ಕೊಂಡರು. ವರ್ಷದ ಕೊನಿಗ ೩೩೫ ಪೌಂಡ ಲಾಭವಾಯಿತು. ಒಬ್ಬೊಬ್ಬರ ಪಾಲಿಗೆ ಎಷ್ಟೆಷ್ಟು ಪೌಂಡ ಬಂದವು?

(೩) ಒಂದು ಕೆಲಸವನ್ನು ಅ, ಬ, ಕ, ಕೂಡಿ ೧೨ ದಿವಸಗಳಲ್ಲಿ ಮಾಡುತ್ತಾರೆ. ಅದೇ ಕೆಲಸವನ್ನು ಬ, ಕ, ಡ, ಕೂಡಿ ೧೪ ದಿವಸಗಳಲ್ಲಿ ಮಾಡುತ್ತಾರೆ. ಕ, ಡ, ಅ, ೧೫ ದಿವಸಗಳಲ್ಲಿ ಮಾಡುತ್ತಾರೆ. ಡ, ಅ, ಬ, ಕೂಡಿ ೧೮ ದಿವಸಗಳಲ್ಲಿ ಮಾಡುತ್ತಾರೆ. ಆದರೆ ಎಲ್ಲರು ಕೂಡಿ ಎಷ್ಟು ದಿವಸಗಳಲ್ಲಿ ಮಾಡುವರು? ಮತ್ತು ಪ್ರತಿ ಒಬ್ಬೊಬ್ಬನು ಎಷ್ಟು ದಿವಸಗಳಲ್ಲಿ ಮಾಡುವನು'

(೪) $\frac{\frac{೧}{೨}+\frac{೧}{೩}+\frac{೧}{೪}}{೨\frac{೧}{೨}+೩\frac{೧}{೨}+೪\frac{೧}{೨}} \div .೦\dot{೦}\dot{೩}$ ಇವರಕಿಂಮತ್ತೇನು?

ಬೀಜಗಣಿತ.

(೧) ಅ, ಬ, ಇಬ್ಬರು ಕೂಲಿಕಾರರು; ಅವರಲ್ಲಿ ಅ ಎಂಬವನು ೧೫ ದಿವಸ, ಬ, ಎಂಬವನು ೧೪ ದಿವಸ ಕೆಲಸ ಮಾಡಲಾಗಿ, ಅವರಿಬ್ಬರಿಗೂ ಕೂಡಿ ೫ ಪೌಂಡ ೧೭ ಶಿಲಿಗು ಸಿಕ್ಕವು. ಅದರಲ್ಲಿ ಬ, ಮೂರು ದಿವಸ ಕೆಲಸ ಮ

ಡದ್ದರಿಂದ ಎಷ್ಟು ಹಣ ಶಿಕ್ಕಿತೋ, ಅದಕ್ಕಿಂತ ೧೧ ಲಿಂಗು ಹೆಚ್ಚು ಅ, ಎಂಬುವನಿಗ ನಾಲ್ಕು ದಿವಸಕ್ಕೆ ಶಿಕ್ಕಿತು. ಆದರೆ ಒಬ್ಬೊಬ್ಬನ ಪ್ರತ್ಯೇಕ ದಿವಸದ ಕೂಲಿ ಎಷ್ಟೆಷ್ಟು?

(೨) $\frac{ಕ್ಷ - \frac{ಕ್ಷ - ಯ}{೧ + ಕ್ಷಯ}}{೧ + \frac{ಕ್ಷ(ಕ್ಷ - ಯ)}{೧ + ಕ್ಷಯ}}$; ಇದಕ್ಕೆ ಸರಳ ರೂಪ ಕೊಟ್ಟು ಬಂದದ್ದರ ವರ್ಗ ಮಾಡರಿ.

(೩) $\left.\begin{array}{l} ಕ್ಷ - ಯ = ೬ \\ ಕ್ಷ^{೩} + ಯ^{೩} = ೭೨ \end{array}\right\}$ $\left\{ \frac{೩ಕ್ಷ^{೨} - ೧೭}{ಕ್ಷ^{೨} + ೩} + \frac{೬೦ + ೪ಕ್ಷ^{೨}}{ಕ್ಷ^{೨} + ೯} = ೭. \right.$

$\left.\begin{array}{l} \frac{ಕ್ಷ}{ಅ} + \frac{ಯ}{ಬ} = ೧ - \frac{ಕ್ಷ}{ಕ} \\ \frac{ಯ}{ಅ} + \frac{ಕ್ಷ}{ಬ} = ೧ + \frac{ಯ}{ಕ} \end{array}\right\}$ ಇವುಗಳಲ್ಲಿ ಯಾವವಾದರೂ ಎರಡು ಸಮೀಕರಣಗಳನ್ನು ಬಿಡಿಸರಿ.

(೪) ಒಬ್ಬ ವ್ಯಾಪಾರಿಯು ೧೪೭ ಪೌಂಡುಗಳಿಗೆ ಕೆಲವು ಯಾರ್ಡ್ ಅರಿವೆಯನ್ನು ಕೊಂಡು, ಅವರಲ್ಲಿ ೧೨ ಯಾರ್ಡ್ ಅರಿವೆಯನ್ನು ಇಟ್ಟುಕೊಂಡು, ಉಳಿದದ್ದನ್ನು ೧೨೦ ಪೌಂಡು, ೫ ಶಿಲಿಂಗುಗಳಿಗೆ ಮಾರಿದನು. ಆದ್ದರಿಂದ ಅವನಿಗೆ ದರ ಯಾರ್ಡಿಗೆ ೫ ಶಿಲಿಂಗು ಲಾಭವಾಯಿತು. ಆದರೆ ಅವನು ಮೊದಲು ಎಷ್ಟು ಯಾರ್ಡ್ ಕೊಂಡಿದ್ದನು? ಮತ್ತು ದರ ಯಾರ್ಡಿನ ಕಿಂಮತ್ತೇನು?

ಸಿದ್ಧಾಂತ.

(೧) ಸೆಕತ್ರೋರ, ವರ್ತುಳವಾದ. ಸಮಾಂತರ ರೇಷೆ, ಕಂಸ ಇವುಗಳ ವ್ಯಾಖ್ಯೆಗಳನ್ನು ಬರೆಯರಿ.

(೨) ೨ ನೇ ಪುಸ್ತಕದ ೧೨ ನೇ ಶಿದ್ಧಾಂತವನ್ನು ಸಿದ್ಧ ಮಾಡರಿ.

(೩) ೩ ನೇ ಪುಸ್ತಕದ ೩೫ ನೇ ಸಿದ್ಧಾಂತವನ್ನು ಸಿ ಮಾಡಿರಿ.

(೪) ಶಿರಕೋನವನ್ನು ಸರಿಯಾಗಿ ದುಭಾಗಿಸುವ ರೇಷೆಯು ಪಾದದ ಎರಡು ಸಮಾನ ಭಾಗ ಮಾಡಿದರೆ, ಆ ತ್ರಿಕೋನವು ಯಾವ ಪ್ರಕಾರದ್ದು ಆಗುವದು?

ಪ್ರಾಕೃತಿಕ ಜ್ಯೋತಿಷ.

(೧) ಅಕ್ಷಾಂಶ ರೇಖಾಂಶಗಳೆಂದರೇನು? ಮುಂಬಯಿಗೂ ಪಾರೀಸಕ್ಕೂ ಅಂತರವೆಷ್ಟು?

(೨) ಪೃಥ್ವಿಯು ಆಕಾರ ಗೋಲವೆಂಬುವದನ್ನು ಸಿದ್ಧ ಮಾಡಿರಿ.

(೩) ನಾಕ್ಷತ್ರ ವರ್ಷವೆಂದರೇನು? ಮತ್ತು ಸೌರ ವರ್ಷಗಳೆಂದರೇನು?

(೪) ಸೂರ್ಯಮಾಲೆಯನ್ನು ತೆಗದು, ಸೂರ್ಯನಿಂದ ಎಲ್ಲ ಗ್ರಹಗಳ ಅಂತರವನ್ನು ಬರೆಯಿರಿ. ಬೋಡರ್ ಸಾಹೇಬನ ಸಿದ್ಧಾಂತವನ್ನು ಬರಿಯಿರಿ.

(೫) ಗ್ರಹಣಗಳು (೧) ಯಾಕೆ (೨) ಹ್ಯಾಗೆ ಆಗುತ್ತಾವೆ?

(೬) ಋತುಗಳು ಹ್ಯಾಗೆ ಆಗುತ್ತಾವೆ.

ಕವಿತಾ.

(೧) ಜೈಮಿನಿ ಭಾರತದ ೮ ನೇ ಸಂಧಿ, ೧೫ ನೇ ಪ ದ ಅರ್ಥ ಬರಯಿರಿ. ಅದರಲ್ಲಿ "ಬಿಡಯಿದಿಂ," ಇದರ

ರ್ಥ, ಹಾಗೂ ವಿಭಕ್ತಿ ಯಾವದು? "ಸಂಚರಿಸುತ್ತಿರ್ದರ್" ಇದು ವ್ಯಾಕರಣದಲ್ಲಿ ಏನು? "ಸೊಕ್ಕಾನೆ" ಯಾವಸಮಾಸ?

(೨) ೧೦ ನೇ ಸಂಧಿ ೨೦ ನೇ ಪದ್ಯದ ಅರ್ಥ ಬರೆಯಿರಿ. ಅದರಲ್ಲಿ "ಕಟ್ಟರಣ್ಯ" ಇದರ ಸಮಾಸ, ಮೂಲ ಶಬ್ದ, ಸಂಧಿಯಾವವು? "ಪ್ರಲಿಯನರಸು," ಇದಂನು ಸಂಧಿ ಬಿಡಿಸಿ ಎರಡೂ ಶಬ್ದಗಳ ವ್ಯಾಕರಣ ಮಾಡಿರಿ.

(೩) ೫ ನೇ ಸಂಧಿ ೨೫ ನೇ ಪದ್ಯದ ಅರ್ಥ ಬರಿಯಿರಿ. "ಕನಲ್ದು" ಇದರ ಧಾತು ಯಾವದು? ಹಾಗೂ ಇದರ ವ್ಯಾಕರಣ ಮಾಡಿರಿ. "ಪರಸಿದರ್ಗಂ," ಇದರ ವ್ಯಾಕರಣ ಹ್ಯಾಗ?

(೪) ೪ ನೇ ಸಂಧಿ ೩೦ ನೇ ಪದ್ಯದ ಅರ್ಥ ಬರೆಯಿರಿ. "ಎಣ್ದೆಸೆಗಳಂ" ಇದರ ಸಮಾಸ? "ತೋಳ್ಮಡಕ್ಕು" ಇದರ ಅರ್ಥ ಹಾಗೂ ಸಮಾನ ಬರೆಯಿರಿ ಕೈದುಡುಕು" ಇದರ ಅರ್ಥ ಏನು?

ವ್ಯಾಕರಣ.

(೧) ೨೦ ತದ್ಭವ ಶಬ್ದಗಳಂನೂ, ಮತ್ತು ಅವು ಯಾ ತತ್ಸಮ ಶಬ್ದಗಳಿಂದ ಆಗಿವೆ ಅವುಗಳಂನೂ ಬರಿಯಿರಿ.

(೨) ಸಕರ್ಮಕ, ಅಕರ್ಮಕ, ಎರಡೂ ಆಗುವಂಥ ಧಾತುಗಳಂನು ಬರಿಯಿರಿ.

(೩) ಬಹುವ್ರೀಹಿ ಸಮಾಸದ ವಿರುದ್ಧ ಲಕ್ಷಣವುಳ್ಳ ಮಾಸ ಯಾವದು? ಅದರ ೩ ಉದಾಹರಣೆಗಳಂನು ಕೊರಿ.

(೪) ಎಷ್ಟು, ಏನು, ಇದು, ಈ, ಕೆಲವು, ಬಹಳ, ಇವು
ಭೇದವನ್ನು ವಾಕ್ಯಗಳಿಂದ ಸ್ಪಷ್ಟವಾಗಿ ತೋರಿಸಿರಿ.

(೫) „ನಾನು ಈಗ ಬಂದೆ, ನೀವು ಮುಂದೆ ನಡೆಯು
ಈ ವಾಕ್ಯದಲ್ಲಿ ಬಂದೆ ಇದರ ವ್ಯಾಕರಣ ಮಾಡಿರಿ.

ನಿಬಂಧ.

„ಇಂಗ್ಲಿಷರು ಈ ದೇಶ ಆಳುವದರಿಂದ ಲಾಭ ಹಾನಿ
ಳ್ಯಾವವು?" ಇದರ ವಿಷಯಕ್ಕೆ ನಿಬಂಧ ಬರಿಯಿರಿ.

ಇತಿಹಾಸ.

(೧) ಜರ್ಮನಿಯ ೫ ನೇ ಚಾರ್ಲಸ, ಅಥವಾ ಸ್ವೀ
ನದ ೧೨ ನೇ ಚಾರ್ಲಸ, ಇವರಲ್ಲಿ ಯಾವನಾದರೊಬ್ಬ
ದು ಸಂಕ್ಷಿಪ್ತ ಚರಿತ್ರ ಕೊಡಿರಿ.

(೨) ಎಲಿಜಬೇಥ, ಅಥವಾ ನೇಪೋಲಿಯನ ಬೋನಾ
ಪಾರ್ಟ, ಇವರ ಸಂಕ್ಷಿಪ್ತ ಚರಿತ್ರವನು ಕೊಡಿರಿ.

(೩) ಕೆಳಗೆ ಬರೆದ ಒಪ್ಪಂದಗಳ ಸೇವುಗಳನ್ನು ಇ
ಷ್ಟಿಗಳನ್ನು ಕೊಡಿರಿ. (೧) ಸಾಲ್ಬಾಯಿ, (೨) ಮಂಗ
ಳೂರ, (೩) ಟ್ರಾಯಿಸ, (೪) ಎಮೀಯನ್ಸ.

(೪) ಕೆಳಗೆ ಬರೆದ ಕಾಳಗಗಳು ಯಾವಾಗ್ಯೆ, ಯಾ
ರ ನಡುವೆ, ಯಾವಪರಿಣಾಮದಿಂದ ಆದವು (೧) ಬಾಸ್ವ
ರ್ಥ (೨) ಬ್ಲೇನಹಿಮ, (೩) ಪ್ರೆಸ್ಟಿಂನಾ, (೪) ನಾಹ್ವೀ
ರಿನೋ, (೫) ಅಸಯಿ.

(೫) (೧) ಅವರಂಗಜೇಬನ ಸಂಕ್ಷಿಪ್ತ ಚರಿತ್ರ ಕೊ

ಡರಿ. (೨) ಅಕ್ಬರ ಮತ್ತು ಅವರಂಗಜೇಬ ಇವರ ಗು
ಗಳ ತುಲನೆ ಮಾಡರಿ.

(೬) ದೊಡ್ಡ ತಿದ್ದುಪಾಟ (ರಿಫಾರ್ಮೇಶನ) ಆಗು
ಕಾರಣಗಳ್ಯಾವವು? ಅದರ ವಿಸ್ತಾರ ಬರಿಯಿರಿ. ಈ
ದ್ದುಪಾಟು ಇಂಗ್ಲಂಡ ಮತ್ತು ಜರ್ಮನಿಯಲ್ಲಿ ಹ್ಯಾ
ಪ್ರಾರಂಭವಾಯಿತು.

ಭೂಗೋಲ.

(೧) ದ್ವೀಪ, ತೀರರೇಷಾ, ಸರೋವರ, ಡೇಲ್ಟಾ
ಪರ್ವತ, ಜಲಧೀರ ಇವುಗಳ ವ್ಯಾಖ್ಯೆಗಳನ್ನು ಬರಿಯಿರಿ.

(೨) ಅಕ್ಷಾಂಶ ರೇಖಾಂಶಗಳಸಹಿತ ಹಿಂದುಸ್ಥಾನದ
ನಕಾಶೆಯಂನು ತೆಗದು, ಅದರಲ್ಲಿ ಬ್ರಿಟಿಷ ರಾಜಕೀಯ
ವಿಭಾಗಗಳಂನೂ ದೊಡ್ಡ ದೊಡ್ಡ ನದಿಗಳಂನು ಬರಿಯಿರಿ.

(೩) ಕೆಳಗೆ ಬರದವುಗಳು ಏನು? ಎಲ್ಲಿ ಅವೆ? ಪ್ಲಾಸಿ,
ವಾಟರ್ಲೂ, ಪೇಹ್ವಿಯಾ, ರಿವ್ಹೋಜಾನಿರೋ, ಅಲಿಯಾ
ಸ್ಕಾ, ಹೆಕ್ಲಾ, ಟಿಬುಂಕಟೂ, ಫಿಲಾಡೆಲ್ಫಿಯಾ, ಏದನ, ಡೋ
ಹ್ವರ.

(೪) (ಅ) ನೂತನ ಮಹಾದ್ವೀಪದಲ್ಲಿ ಪ್ರಾಚೀನ
ಮಹಾದ್ವೀಪಕ್ಕಿಂತ ನದಿಗಳು ದೊಡ್ಡವ್ಯಾಕೆ?

(ಬ) ಪೃಥ್ವಿಯಮೇಲೆ ದ್ವೀಪಕಲ್ಪಗಳ ಮೋರೆ ಎ
ತ್ತಕಡೆ? ಅಪವಾದಗಳ್ಯಾವವು?

(ಕ) ಇಂಗ್ಲಂಡ ಇಂಡಿಯಾಗಳ ಇತಿಹಾಸಗಳಮೇಲೆ
ಅವುಗಳ ಪ್ರಾಕೃತಿಕ ಸಂಬಂಧದ ಪರಿಣಾಮಗಳನ್ನು
ಹೇಳರಿ?

(೫) (ಅ) ಏಸಿಯಾದಲ್ಲಿಯೂ, ಆಫ್ರಿಕದಲ್ಲಿಯೂ ಂಗ್ಲಿಷರ ವಸಹಾತಗಳ್ಯಾವವು?

(ಬ) ಇಂಗ್ಲಂಡ ಅರಬಸ್ಥಾನಗಳ ಬಂದರಗಳ್ಯಾವವು?

(ಕ) ಹ್ರೈನ ನದಿ ಎಲ್ಲಿ ಹುಟ್ಟಿ, ಯಾವ ಯಾವ ದೇಶಗ ಲ್ಲಿ ಹರಿದು, ಎಲ್ಲಿ ಕೂಡುತ್ತದೆ?

(ಡಿ) ಹಿಂದುಸ್ಥಾನದ ರಾಜ್ಯಕಾರಭಾರವು ಹ್ಯಾಗ ಡದದೆ?

ಸಂಸ್ಕೃತ.

